ನೌಕಾಪಡೆ ಸೇರಿದ 'ಉದಯಗಿರಿ'

ಮುಂಬೈನ ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಕಂಪನಿ ನಿರ್ಮಿಸಿರುವ ಅತ್ಯಾಧುನಿಕ 'ಉದಯಗಿರಿ' ಯುದ್ಧ ನೌಕೆಯನ್ನು ನೌಕಾಪಡೆಗೆ ಮಂಗಳವಾರ ಹಸ್ತಾಂತರಿಸಲಾಯಿತು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮೂರನೇ ಸ್ಥಾನಕ್ಕೆ ಸ್ಮೃತಿ

ಭಾರತ ತಂಡದ ಬ್ಯಾಟರ್ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಟಿ20 ಕ್ರಿಕೆಟ್ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನಕ್ಕೆ ಏರಿದ್ದಾರೆ

ಸೆನ್ಸೆಕ್ಸ್ 83,697 | ನಿಫ್ಟಿ 25,541 | $/₹ 85.59 | ಚಿನ್ನ (Std. 10g) ₹1.01 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.12 ಲಕ್ಷ (ಬೆಂಗಳೂರು)

ವಿಕಾಸ್ ಅಮಾನತು ರದ್ದು

ನಾಲ್ವರು ಅಧಿಕಾರಿಗಳಿಗೂ ಇದೇ ಆದೇಶದ ಪ್ರಯೋಜನ ಸಿಗಲಿ– ಸಿಎಟಿ

ಪ್ರಜಾವಾಣಿ ವಾರ್ತೆ

ವಿಕಾಸ್ ಕುಮಾರ್

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟಿರುವುದಕ್ಕೆ ಸಂಬಂಧಿಸಿದಂತೆ, ಕರ್ತವ್ಯಲೋಪದ ಅಡಿಯಲ್ಲಿ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಅಮಾನತು ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ರದ್ದುಗೊಳಿಸಿದೆ.

'ಅಮಾನತು ಆದೇಶ ರದ್ದುಪಡಿಸಬೇಕು' ಎಂದು ಕೋರಿ, ಅಂದು ಬೆಂಗಳೂರು ಪಶ್ಚಿಮ ವಲಯದ ಹೆಚ್ಚುವರಿ ಪೊಲೀಸ್ ಕಮಿಷನರ್ ಆಗಿದ್ದ ವಿಕಾಸ್ ಕುಮಾರ್ ವಿಕಾಸ್ ಸಲ್ಲಿಸಿದ್ದ ಮೂಲ ಅರ್ಜಿಯ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಾಂಗ ಸದಸ್ಯರಾದ ನ್ಯಾಯಮೂರ್ತಿ ಬಿ.ಕೆ. ಶ್ರೀವಾಸ್ತವ ಮತ್ತು ಆಡಳಿತಾತ್ಮಕ ಸದಸ್ಯ ಸಂತೋಷ್ ಮೆಹ್ರಾ ಅವರಿದ್ದ ವಿಭಾಗೀಯ ಪೀಠವು ಮಂಗಳವಾರ ಪ್ರಕಟಿಸಿದೆ.

ಅರ್ಜಿದಾರರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮರು ನಿಯೋಜನೆ ಮಾಡಿಕೊಳ್ಳಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಆದೇಶಿಸಿದೆ. ಅಮಾನತು ಅವಧಿಯನ್ನು ಪೂರ್ಣ ವೇತನ ಮತ್ತು ಭತ್ಯೆಗೆ ಒಳಪಡುವ ಕರ್ತವ್ಯ ಎಂದು ಪರಿಗಣಿಸುವಂತೆಯೂ ನಿರ್ದೇಶಿಸಿದೆ.

'ಈ ಪ್ರಕರಣದಲ್ಲಿ ಅಮಾನತುಗೊಂಡ ಇತರ ಅಧಿಕಾರಿಗಳಿಗೂ ಸರ್ಕಾರ ಈ ಆದೇಶದ ಪ್ರಯೋಜನವನ್ನು ನೀಡಲಿದೆ ಎಂಬ ವಿಶ್ವಾಸ ಹೊಂದಿದ್ದೇವೆ' ಎಂದು ಪೀಠವು ಇದೇ ವೇಳೆ ಸ್ಪಷ್ಟಪಡಿಸಿದೆ. ವಿಕಾಸ್ ಕುಮಾರ್ ವಿಕಾಸ್ ಪರ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ವಾದ ಮಂಡಿಸಿದ್ದರು.

7

ಕಾಲ್ತುಳಿತ ಪ್ರಕರಣ

ಕಾಲ್ತುಳಿತಕ್ಕೆ ಆರ್‌ಸಿಬಿ ನೇರ ಕಾರಣ

'ಕಾಲ್ತುಳಿತ ಘಟನೆಗೆ ಪೊಲೀಸ್ ಅಧಿಕಾರಿಗಳ ಕರ್ತವ್ಯ ಲೋಪವೇ ಕಾರಣ' ಎಂಬ ಸರ್ಕಾರದ ವಾದವನ್ನು ಸಾರಾಸಗಟಾಗಿ ತಿರಸ್ಕರಿಸಿರುವ ಪೀಠ, 'ಇಡೀ ಘಟನೆಗೆ ಆರ್‌ಸಿಬಿ ನೇರ ಹೊಣೆ' ಎಂದು ಖಚಿತ ಪದಗಳಲ್ಲಿ ನುಡಿದಿದೆ.

ವಿಜಯೋತ್ಸವ ಆಚರಿಸಲು ಆರ್‌ಸಿಬಿ ಪೊಲೀಸರಿಂದ ಅನುಮತಿ ಪಡೆದಿರಲಿಲ್ಲ. ಕಾರ್ಯಕ್ರಮ ನಡೆಸುವ ಬಗ್ಗೆ ದಿಢೀರ್ ಆಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿತು. ಈ ಮಾಹಿತಿಯ ಕಾರಣದಿಂದಲೇ ಮೂರು ಲಕ್ಷದಿಂದ ಐದು ಲಕ್ಷ ಜನ ಸೇರಿದ್ದು ವೇದ್ಯವಾಗುತ್ತದೆ. ಮೇಲ್ನೋಟಕ್ಕೆ ಆರ್‌ಸಿಬಿ ಬೇಜವಾಬ್ದಾರಿ ಎದ್ದು ಕಾಣುತ್ತಿದೆ' ಎಂದು ಹೇಳಿದೆ.

'ವಿಜಯೋತ್ಸವಕ್ಕೆ ಸಮರ್ಪಕ ಸಿದ್ಧತೆ ನಡೆಸಲು ಪೊಲೀಸರಿಗೆ ಸೂಕ್ತ ಕಾಲಾವಕಾಶ ನೀಡಿಲ್ಲ. ಜೂನ್ 3-4ರ ಇಡೀ ರಾತ್ರಿ ಸಾರ್ವಜನಿಕರು ಬೀದಿಯಲ್ಲಿ ವಿಜಯೋತ್ಸವ ನಡೆಸಿದ್ದರು. ಸಾರ್ವಜನಿಕರ ನಿರ್ವಹಣೆಯಲ್ಲಿ ಪೊಲೀಸ್ ವ್ಯವಸ್ಥೆ ನಿರತವಾಗಿತ್ತು. ಇದೇ ವೇಳೆ ವಿಧಾನಸೌಧದ ಆವರಣದಲ್ಲಿ ರಾಜ್ಯ ಸರ್ಕಾರ ಮತ್ತೊಂದು ಕಾರ್ಯಕ್ರಮ ಆಯೋಜಿಸಿತ್ತು. ವಿಧಾನಸೌಧಕ್ಕೂ ಪೊಲೀಸರನ್ನು ನಿಯೋಜಿಸಲಾಗಿತ್ತು. ಇಂತಹ ಸನ್ನಿವೇಶದಲ್ಲಿ ಆರ್‌ಸಿಬಿ ಉಪದ್ರವ ಸೃಷ್ಟಿಸಿದೆ' ಎಂದು ಪೀಠ ವಿವರಿಸಿದೆ.

7

'ಅಮಾನತು ರದ್ದು ಪ್ರಶ್ನಿಸಿ ಮೇಲ್ಮನವಿ'

ಐಪಿಎಸ್ ಅಧಿಕಾರಿಗಳ ಅಮಾನತು ರದ್ದು ಮಾಡಿರುವ ಕೇಂದ್ರೀಯ ಆಡಳಿತ ನ್ಯಾಯಮಂಡಳಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಅವಕಾಶವಿದ್ದು, ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸ್ಫೋಟ: ಮೃತರ ಸಂಖ್ಯೆ 36ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಸಂಗಾರೆಡ್ಡಿ (ತೆಲಂಗಾಣ): ಇಲ್ಲಿನ ಸಂಗಾರೆಡ್ಡಿ ಜಿಲ್ಲೆಯ ಔಷಧ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 36ಕ್ಕೆ ಏರಿಕೆಯಾಗಿದೆ.

ಪಾಶಮೈಲಾರಂ ಕೈಗಾರಿಕಾ ಪ್ರದೇಶದಲ್ಲಿರುವ ಸಿಗಾಚಿ ಫಾರ್ಮಾ ಕಂಪನಿಯ ರಿಯಾಕ್ಟರ್‌ನಲ್ಲಿ ಸೋಮವಾರ ಸ್ಫೋಟ ಸಂಭವಿಸಿ ಬೆಂಕಿ ಕಾಣಿಸಿಕೊಂಡಿತ್ತು. ಸ್ಫೋಟದಿಂದ ಕುಸಿದ ಕಟ್ಟಡದ ಅವಶೇಷಗಳಡಿ ಮಂಗಳವಾರ ಇನ್ನಷ್ಟು ಮೃತದೇಹಗಳು ಪತ್ತೆಯಾಗಿವೆ.

'ಅವಶೇಷಗಳ ತೆರವು ಕಾರ್ಯಾಚರಣೆ ವೇಳೆ ಮತ್ತಷ್ಟು ಮೃತದೇಹಗಳು ದೊರೆತಿವೆ. ಒಟ್ಟು 33 ಶವಗಳನ್ನು ಹೊರತೆಗೆಯಲಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಮೂವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಸಂಗಾರೆಡ್ಡಿ ಎಸ್‌ಪಿ ಪಾರಿತೋಷ್ ಪಂಕಜ್ ಮಂಗಳವಾರ ತಿಳಿಸಿದ್ದಾರೆ.

ದುರಂತದ ಸಮಯದಲ್ಲಿ ಅಂದಾಜು 143 ಮಂದಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರಲ್ಲಿ 57 ಮಂದಿ ಸುರಕ್ಷಿತರಾಗಿದ್ದಾರೆ. 34 ಗಾಯಾಳುಗಳು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಪತ್ತೆಯಾದವರಿಗಾಗಿ ಅವಶೇಷಗಳಡಿ ಶೋಧ ಕಾರ್ಯ ಮುಂದುವರಿದಿದೆ.

7

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಕೈ' ಬಣ ಸಮರ ಮತ್ತೆ ಬಹಿರಂಗ

ಬೆಂಗಳೂರು: ಪಕ್ಷ ಸಂಘಟನೆ, ಕ್ಷೇತ್ರದ ಅಭಿವೃದ್ಧಿ ಕುರಿತು ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲು ರಾಜ್ಯಕ್ಕೆ ಬಂದಿರುವ 'ಕೈ' ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮುಂದೆ, ನಾಯಕತ್ವದ ಬಗ್ಗೆ ಕಾಂಗ್ರೆಸ್‌ನಲ್ಲಿ ಬಿರುಸುಗೊಂಡಿರುವ 'ಬಣ ರಾಜಕೀಯ' ಬಹಿರಂಗವಾಗಿದೆ. ಸಚಿವರ ಕಾರ್ಯವೈಖರಿ, ವರ್ತನೆ, ಅನುದಾನ ಕೊರತೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕೆಲವು ಶಾಸಕರು, ನಾಯಕತ್ವ ಬದಲಾವಣೆ ಪರ ಧ್ವನಿ ಎತ್ತಿದ್ದಾರೆ.

ಇನ್ನಷ್ಟು ವಿವರ 5

ವಾಲ್ಮೀಕಿ ನಿಗಮದ ಅಕ್ರಮ ಕೋರ್ಟ್ ಆದೇಶ ಲಭ್ಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಣ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ಸಿಬಿಐ ತನಿಖೆಯನ್ನು ಹೈಕೋರ್ಟ್ ನಿಗಾದಲ್ಲಿಯೇ ನಡೆಸಬೇಕು' ಎಂದು ಕೋರಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಯ ಮೇಲಿನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಬುಧವಾರ (ಜುಲೈ 2) ಬೆಳಿಗ್ಗೆ ಪ್ರಕಟಿಸಲಿದೆ.

ಈ ಕುರಿತಂತೆ ಬಿಜೆಪಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯಲ್ಲಿನ ಮಧ್ಯಂತರ ಅರ್ಜಿಗಳ ವಿಚಾರಣೆ ಪೂರೈಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮಂಗಳವಾರದ ಕಾರ್ಯಸೂಚಿಯ ಪಟ್ಟಿಯಲ್ಲಿ, ಆದೇಶ ಪ್ರಕಟಿಸುವ ಪ್ರಕರಣವೆಂದು ನಮೂದು ಮಾಡಿದ್ದರು.

ಮಧ್ಯಾಹ್ನ ಈ ಕುರಿತಂತೆ ಮುಕ್ತ ನ್ಯಾಯಾಲಯದಲ್ಲಿ ವಿವರಿಸಿದ ನ್ಯಾಯಮೂರ್ತಿಯವರು, 'ಆದೇಶ ಬುಧವಾರ (ಜುಲೈ 2) ಬೆಳಿಗ್ಗೆ ವೆಬ್‌ಸೈಟ್‌ನಲ್ಲಿ ದೊರೆಯಲಿದೆ' ಎಂದು ಅರ್ಜಿದಾರರ ಪರ ಮತ್ತು ಸಿಬಿಐ ವಕೀಲರಿಗೆ ತಿಳಿಸಿದರು.

ರೇಲ್ ಒನ್ ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): ರೈಲು ಟಿಕೆಟ್ ಕಾಯ್ದಿರಿಸುವುದು, ರೈಲು ಮತ್ತು ಪಿಎನ್‌ಆರ್ ವಿಚಾರಣೆ, ಪ್ರಯಾಣ ಯೋಜನೆ, ಆಹಾರ ಮುಂಗಡ ಕಾಯ್ದಿರಿಸುವುದು ಸೇರಿದಂತೆ ವಿವಿಧ ಅನುಕೂಲಗಳುಳ್ಳ 'ರೇಲ್ ಒನ್' ಆ್ಯಪ್ ಅನ್ನು ಮಂಗಳವಾರ ಬಿಡುಗಡೆಗೊಳಿಸಲಾಗಿದೆ.

ಉದ್ಯೋಗ ಸೃಷ್ಟಿ ಕೇಂದ್ರ ಯೋಜನೆ

ನವದೆಹಲಿ: ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ನಡೆಸುವ ಸಾಮಾಜಿಕ ಭದ್ರತಾ ಯೋಜನೆಗಳ ಮೂಲಕ ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗ ಸೃಷ್ಟಿಸಲು ₹99,446 ಕೋಟಿ ಮೊತ್ತದ ಉದ್ಯೋಗ ಆಧಾರಿತ ಪ್ರೋತ್ಸಾಹಧನ ಯೋಜನೆಗೆ (ಇಎಲ್‌ಐ) ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ. ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ತಿಳಿಸಿದರು.

ಇನ್ನಷ್ಟು ವಿವರ 13

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

‘ಭಾಷಾ ಹೇರಿಕೆ ಪ್ರಶ್ನಿಸದ ಮಾಧ್ಯಮ’

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಪತ್ರಕರ್ತ ಪಿ. ಸಾಯಿನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಪೊರೇಟ್ ಸಂಸ್ಥೆಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ರಾಷ್ಟ್ರೀಯ ಮಾಧ್ಯಮಗಳು ಭಾಷಾ ಹೇರಿಕೆಯ ವಿರುದ್ಧ ತುಟಿ ಬಿಚ್ಚುತ್ತಿಲ್ಲ ಎಂದು ಪತ್ರಕರ್ತ ಪಿ. ಸಾಯಿನಾಥ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಇಲಾಖೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ‘ನಿಜ ಸುದ್ದಿಗಾಗಿ ಸಮರ’ ವಿಷಯ ಕುರಿತು ಅವರು ಮಾತನಾಡಿದರು.

ಕಾರ್ಪೊರೇಟ್ ಹಿಡಿತದಲ್ಲಿರುವ ಮಾಧ್ಯಮಗಳಿಗೆ ಪ್ರಜಾಪ್ರಭುತ್ವ ಉಳಿಸುವ ಉದ್ದೇಶವಿಲ್ಲ. ಲಾಭ ಗಳಿಕೆಗಷ್ಟೇ ಅವುಗಳ ಚಿತ್ತ ಇರುತ್ತದೆ. ವೈವಿಧ್ಯತೆಯನ್ನೂ ವಿರೋಧಿಸುವ ಪರಿಪಾಟ ಆರಂಭವಾಗಿದೆ. ಅದಕ್ಕಾಗಿಯೇ ಏಕರೀತಿಯ ಚಿಂತನೆ ಬಿತ್ತುವ ಕೆಲಸವನ್ನು ಮಾಧ್ಯಮಗಳು ವ್ಯವಸ್ಥಿತವಾಗಿ ಮಾಡುತ್ತಿವೆ. ಇಂತಹ ನಡೆಯೂ ಕಾರ್ಪೊರೇಟ್ ಸಂಸ್ಕೃತಿಯ ಒಂದು ಭಾಗವಾಗಿದೆ ಎಂದರು.

ದೇಶದ ಶೇ 25ರಷ್ಟು ಜಿಡಿಪಿ 211 ಶ್ರೀಮಂತರ ಬಳಿ ಇದೆ. ಇವರು ಮಾಧ್ಯಮಗಳನ್ನೂ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಮಾಧ್ಯಮ ಸಂಸ್ಥೆಗಳು ಶ್ರೀಮಂತವಾದಷ್ಟು ವರದಿಗಳು ಬಡವಾಗುತ್ತಿವೆ. ಅಧಿಕಾರಸ್ಥರಿಗೆ ಈ ಎಲ್ಲ ಸತ್ಯವೂ ಗೊತ್ತಿದೆ. ಮಾಧ್ಯಮಗಳು ಅವರಿಗೆ ಸತ್ಯ ಹೇಳಬೇಕಿಲ್ಲ. ಮಾಧ್ಯಮಗಳಿಗೇ ಅಧಿಕಾರ ಶಕ್ತಿಯ ಅರಿವು ಮೂಡಿಸುವ ತುರ್ತು ಅಗತ್ಯವಿದೆ ಎಂದರು.

ಲೇಖಕ ರಹಮತ್ ತರೀಕೆರೆ ಮಾತನಾಡಿ, ಮಾಧ್ಯಮಗಳು ಈಚಿನ ದಿನಗಳಲ್ಲಿ ಕೊಲೆಗಡುಕ ಭಾಷೆಯನ್ನು ಹೆಚ್ಚಾಗಿ ಬಳಕೆ ಮಾಡುತ್ತಿರುವುದು ಅತ್ಯಂತ ಕಳವಳಕಾರಿ ವಿಚಾರ. ಭಾಷೆಯನ್ನು ದ್ವೇಷಕ್ಕಾಗಿ ಬಳಕೆ ಮಾಡಬಾರದು, ಅದು ಕ್ರೌರ್ಯಕ್ಕೆ ಸಮಾನ. ಭಾಷಾ ಶುದ್ಧತೆಗೆ ಮಾಧ್ಯಮಗಳು ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು.

ಭಾರತ ಸೇರಿದಂತೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಪತ್ರಕರ್ತರು, ಬರಹಗಾರರ ಮೇಲಿನ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ. ಆಡಳಿತ ನಡೆಸುವ ಸರ್ಕಾರಗಳೇ ಬಹುತ್ವದ ವಿರೋಧಿ ನೀತಿ ಪ್ರದರ್ಶಿಸುತ್ತಿವೆ. ಇಂತಹ ನಡೆಯನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಿದಾಗ ಪ್ರಜಾಪ್ರಭುತ್ವದ ಉಳಿವು ಸಾಧ್ಯ ಎಂದು ಅವರು ಹೇಳಿದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ ಪ್ರಾಸ್ತಾವಿಕ ಮಾತನಾಡಿದರು. ಮುಖ್ಯಮಂತ್ರಿ ಕಾರ್ಯದರ್ಶಿ ಬಿ.ಬಿ. ಕಾವೇರಿ, ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ಉಪಸ್ಥಿತರಿದ್ದರು.

ವಾರ್ತಾ ಇಲಾಖೆ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಪತ್ರಕರ್ತ ಪಿ. ಸಾಯಿನಾಥ್, ಸಿದ್ದರಾಮಯ್ಯ ಮತ್ತು ಲೇಖಕ ರಹಮತ್ ತರೀಕೆರೆ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

‘ಸುಳ್ಳು ಸುದ್ದಿಗಳು ವಿಜೃಂಭಿಸುತ್ತಿವೆ’

ನೈಜ ಸುದ್ದಿಗಾಗಿ ಹೋರಾಟ ನಡೆಸುವ ಸ್ಥಿತಿ ಎದುರಾಗಿದೆ. ಸುಳ್ಳು ಸುದ್ದಿಗಳು ವಿಜೃಂಭಿಸುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ‘ನಿಜ ಸುದ್ದಿಗಾಗಿ ಸಮರ’ ಸಂವಾದಕ್ಕೆ ಚಾಲನೆ, ಆರೋಗ್ಯ ಸಂಜೀವಿನಿ ಯೋಜನೆ ಉದ್ಘಾಟಿಸಿ, ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ವಿತರಿಸಿ ಅವರು ಮಾತನಾಡಿದರು.

‘ಮಾಧ್ಯಮ ಸ್ವತಂತ್ರವಾಗಿ, ನಿರ್ಭೀತಿಯಿಂದ ಸುದ್ದಿ ಮಾಡಬೇಕು. ‘ಸಂವಿಧಾನದ ಮೌಲ್ಯಗಳು ಮತ್ತು ಸತ್ಯವನ್ನು ಮರೆಮಾಚುವ ಕೆಲಸ ಆಗಬಾರದು’ ಎಂದರು. ‘ನನ್ನ ಬಗ್ಗೆ ಎಷ್ಟು ಸುಳ್ಳು ಹೇಳಿದರೂ, ಬರೆದರೂ ನಾನು ಯಾರಿಗೂ ಫೋನ್ ಮಾಡಿ ಕೇಳುವುದಿಲ್ಲ’ ಎಂದು ಹೇಳಿದರು.

ನಾಗರಿಕ ಸಹಾಯ ಕೇಂದ್ರ ಶುರು

ಸಾರ್ವಜನಿಕರ ಕುಂದುಕೊರತೆ ಆಲಿಸಲು ಬಿಡಿಎ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸಾರ್ವಜನಿಕರ ಅನುಕೂಲಕ್ಕಾಗಿ ನಾಗರಿಕ ಸಹಾಯ ಕೇಂದ್ರ (ಸಿಎಸಿ) ತೆರೆದಿದ್ದು, ಕುಂದು ಕೊರತೆಗಳು ಅಥವಾ ಮನವಿಗಳ ಕುರಿತು 94831-66622 ಸಂಖ್ಯೆಗೆ ಕರೆ ಮಾಡಿ ತಿಳಿಸಬಹುದು.

ಈ ಕೇಂದ್ರವು ನಿತ್ಯ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಕಾರ್ಯ ನಿರ್ವಹಿಸಲಿದ್ದು, ಕರೆಗಳನ್ನು ಸ್ವೀಕರಿಸಿ ಕೇಂದ್ರದ ಇ ಗರ್ವನೆನ್ಸ್ ಇಲಾಖೆ ಅಭಿವೃದ್ಧಿ ಪಡಿಸಿರುವ ಐಪಿಜಿಆರ್‌ಎಸ್ ಲಾಗಿನ್ ಅನ್ನು ಬಳಸಿ ತಂತ್ರಾಂಶದಲ್ಲಿ ಅಳವಡಿಸಿ, ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಧಿಕಾರದ ಆಯುಕ್ತರು ತಿಳಿಸಿದ್ದಾರೆ.

ಕುಂದು ಕೊರತೆ ನಿವಾರಣೆಗಾಗಿ ಸಾರ್ವಜನಿಕರು, ಹಿರಿಯರು, ಅಂಗವಿಕಲರು ಹಾಗೂ ಮಾಜಿ ಸೈನಿಕರು ನಿತ್ಯ ಕಚೇರಿ ಹಾಗೂ ವಿಭಾಗೀಯ ಕಚೇರಿಗಳಿಗೆ ಭೇಟಿ ನೀಡುವುದನ್ನು ಮನಗಂಡು ಈ ಕ್ರಮ ಕೈಗೊಳ್ಳಲಾಗಿದೆ.

ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸರ್ಕಾರದ ಏಕೀಕೃತ ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಐಪಿಜಿಆರ್‌ಎಸ್ ವೆಬ್ ಆ್ಯಪ್) ಅಥವಾ ನಾಗರಿಕ ಸಹಾಯ ಕೇಂದ್ರಕ್ಕೆ ಕರೆ ಮಾಡುವ ಮೂಲಕ ಅಥವಾ ನೇರವಾಗಿ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಕುಂದು ಕೊರತೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ಜವಾಬ್ದಾರಿಯನ್ನು ಕಾರ್ಯದರ್ಶಿಗೆ ವಹಿಸಿ, ಸಿಎಸಿ ಕಾರ್ಯಾಚರಣೆ ಮತ್ತು ನಿರ್ವಹಣೆಯ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ತಂಡದಲ್ಲಿ ಕಾರ್ಯದರ್ಶಿಗೆ ಸಹಾಯಕ ನೋಡಲ್ ಅಧಿಕಾರಿಗಳಾಗಿ ವಿಶೇಷ ಭೂಸ್ವಾಧೀನಾಧಿಕಾರಿ (ಡಿಎಸ್‌ಕೆಎಲ್-6) ಹಾಗೂ ಸಂಚಾಲಕರಾಗಿ ಸಾರ್ವಜನಿಕ ಸಂಪರ್ಕಾಧಿಕಾರಿ ಅವರನ್ನು ನೇಮಿಸಲಾಗಿದೆ. ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳನ್ನು ಪರಿಶೀಲಿಸಿ 30 ದಿನದೊಳಗೆ ಪರಿಹಾರ (ಎಲ್1, ಎಲ್2, ಎಲ್3 ಪ್ರತಿ ಹಂತಗಳಿಗೆ ಗರಿಷ್ಠ ಹತ್ತು ದಿನಗಳು) ಒದಗಿಸಲಾಗುವುದು. ಪ್ರಾಧಿಕಾರದ ನಿಯಮಗಳ ಅನುಸಾರ ಕ್ರಮವಹಿಸಲು ಸಾಧ್ಯವಿಲ್ಲದಿದ್ದಲ್ಲಿ ಸೂಕ್ತ ಹಿಂಬರಹ ನೀಡಿ ಮುಕ್ತಾಯ ಮಾಡಲಾಗುತ್ತದೆ.

ಪ್ರತಿ ಗುರುವಾರ ಸಭೆಗೆ ಅವಕಾಶ

ಪ್ರಾಧಿಕಾರವು ಕೈಗೊಂಡಿರುವ ಪರಿಹಾರ ಕ್ರಮವು ತೃಪ್ತಿಕರವಾಗದೇ ಇದ್ದಲ್ಲಿ ಅಥವಾ ಸಾರ್ವಜನಿಕರ ಅಹವಾಲನ್ನು ಪರಿಗಣಿಸಲು ಪ್ರಾಧಿಕಾರದ ನಿಯಮಗಳಲ್ಲಿ ಅವಕಾಶ ಇಲ್ಲದಿದ್ದಲ್ಲಿ ಅಂತಹ ಪ್ರಕರಣಗಳನ್ನು ಪ್ರತಿ ಗುರುವಾರ ಮಧ್ಯಾಹ್ನ ವಲಯವಾರು ಸಾರ್ವಜನಿಕರ ಸಮಕ್ಷಮದಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾನೂನು ಪ್ರಕಾರ ಸಭೆ ನಡೆಸಲಾಗುವುದು ಎಂದು ಪ್ರಾಧಿಕಾರವು ಮಾಹಿತಿ ನೀಡಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನಗರದ ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ಎಂಜಿನಿಯರಿಂಗ್ ಪ್ರಾಜೆಕ್ಟ್ ಎಕ್ಸ್‌ಪೊ ಕಾರ್ಯಕ್ರಮವನ್ನು ಕುಲಸಚಿವ(ಮೌಲ್ಯಮಾಪನ) ಡಾ.ಎಂ.ನಾಗರಾಜ್ ಉದ್ಘಾಟಿಸಿದರು. ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಡೀನ್ ಎನ್‌.ಸಿ.ಮಹೇಂದ್ರ ಬಾಬು ಹಾಜರಿದ್ದರು.

ಕಸಾಪ ಆರ್ಥಿಕ ಅಶಿಸ್ತು: ತನಿಖೆಗೆ ಮನವಿ

ಬೆಂಗಳೂರು: ‘ಬಳ್ಳಾರಿಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವ ಕಾರಣ, ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆರ್ಥಿಕ ಅಶಿಸ್ತಿನ ಬಗ್ಗೆ ತನಿಖೆ ನಡೆಸಬೇಕು’ ಎಂದು ಸಾಹಿತಿಗಳನ್ನೊಳಗೊಂಡ ನಿಯೋಗವು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಅವರಿಗೆ ಮನವಿ ಮಾಡಿದೆ.

ಈ ನಿಯೋಗವು ಸಚಿವರನ್ನು ನಗರದಲ್ಲಿ ಮಂಗಳವಾರ ಭೇಟಿ ಮಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ನಡೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತು. ಲೆಕ್ಕ ಪತ್ರಗಳ ಲೋಪ ಸೇರಿ ವಿವಿಧ ವಿಚಾರಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹಿಸಿತು.

ನಿಯೋಗದಲ್ಲಿ ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಬಂಜಗೆರೆ ಜಯಪ್ರಕಾಶ್, ಜಯಪ್ರಕಾಶ್ ಗೌಡ, ಡಾ. ವಸುಂಧರಾ ಭೂಪತಿ, ಸುನಂದಾ ಜಯರಾಮ್, ಆರ್.ಜಿ. ಹಳ್ಳಿ ನಾಗರಾಜ್, ಡಿ.ಪಿ. ಸ್ವಾಮಿ, ಮೀರಾ ಶಿವಲಿಂಗಯ್ಯ, ಸಿ.ಕೆ. ರಾಮೇಗೌಡ, ಪ್ರಕಾಶಮೂರ್ತಿ ಮೊದಲಾದವರು ಇದ್ದರು.

ಬೈಕ್ ಟ್ಯಾಕ್ಸಿ: ಮಾರ್ಗಸೂಚಿ ಪ್ರಕಟ

ಬೆಂಗಳೂರು: ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯು ಮೋಟಾರು ವಾಹನಗಳ ಅಗ್ರಿಗೇಟರ್ ಮಾರ್ಗಸೂಚಿ ಪ್ರಕಟಿಸಿದೆ. ಈ ಮಾರ್ಗಸೂಚಿಯನ್ನು ಎಲ್ಲ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಲಾಗಿದೆ.

ಮಾರ್ಗಸೂಚಿಯ 23ನೇ ಅಂಶದಲ್ಲಿ ಸಾಮಾನ್ಯ ಬೈಕ್‌ಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವುದರಿಂದ ಆಗುವ ಅನುಕೂಲಗಳ ಬಗ್ಗೆ ವಿವರಿಸಲಾಗಿದೆ. ಬೈಕ್ ಟ್ಯಾಕ್ಸಿಗಳಿಗೆ ಅವಕಾಶ ನೀಡುವುದರಿಂದ ವಾಯು ಮಾಲಿನ್ಯ ತಗ್ಗಲಿದೆ. ದಟ್ಟಣೆ ಕಡಿಮೆ ಆಗಲಿದೆ ಎಂದು ವಿವರಿಸಲಾಗಿದೆ.

ರಾಜ್ಯ ಸರ್ಕಾರವು ತನಗಿರುವ ಅಧಿಕಾರ ಚಲಾಯಿಸಿ ಸಂಬಂಧಿಸಿದ ಸೆಕ್ಷನ್‌ಗಳ ಅಡಿ ಸಾಮಾನ್ಯ ಬೈಕ್‌ಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಅವಕಾಶ ಕಲ್ಪಿಸಬಹುದು. ಅಲ್ಲದೇ, ಪ್ರಯಾಣಿಕರು, ಪ್ರತಿನಿತ್ಯ, ವಾರಕ್ಕೆ ಒಮ್ಮೆ ಅಥವಾ ಹದಿನೈದು ದಿನಕ್ಕೊಮ್ಮೆ ಪ್ರಯಾಣದ ದರ ಪಡೆದುಕೊಳ್ಳಬಹುದು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಬಸ್‌ಗಳು ಅಥವಾ ಇತರೆ ಸಾರ್ವಜನಿಕ ಸಾರಿಗೆ ವ್ಯವಸ್ಥೆ ತಲುಪದ ಸ್ಥಳಗಳಿಗೆ ಈ ಬೈಕ್ ಟ್ಯಾಕ್ಸಿಗಳು ತಲುಪಲಿವೆ. ಕಡಿಮೆ ದೂರದ ಪ್ರಯಾಣಕ್ಕೆ ಸಹಾಯ ಆಗಲಿದೆ. ಗಿಗ್ ಕೆಲಸಗಾರರಿಗೆ ಹೊಸ ಕೆಲಸ ಸಿಗಲಿದೆ ಎಂದು ಸಂಘದ ಪ್ರತಿನಿಧಿಗಳು ತಿಳಿಸಿದ್ದಾರೆ.

ಮಹಾರಾಣಿ ಕ್ಲಸ್ಟರ್ ವಿವಿ: ಮಂಜುನಾಥ ಪ್ರಭಾರ ಕುಲಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಮಾನವಿಕ ಮತ್ತು ಮುಕ್ತ ಕಲೆಗಳ ವಿಭಾಗದ ನಿರ್ದೇಶಕ ಟಿ.ಎಂ. ಮಂಜುನಾಥ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.

ವಿಶ್ವವಿದ್ಯಾಲಯದ ಪ್ರಥಮ ಕುಲಪತಿ ಎಲ್. ಗೋಮತಿದೇವಿ ಅವರ ಅವಧಿ ನವೆಂಬರ್ 2024ಕ್ಕೆ ಮುಕ್ತಾಯವಾಗಿತ್ತು. ನಂತರ ಗೃಹ ವಿಜ್ಞಾನ ವಿಭಾಗದ (ಸ್ಕೂಲ್) ನಿರ್ದೇಶಕರಾಗಿದ್ದ ಸಿ. ಉಷಾದೇವಿ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಕ ಮಾಡಲಾಗಿತ್ತು. ಉಷಾದೇವಿ ಅವರ ಅವಧಿ ಈ ವರ್ಷದ ಮಾರ್ಚ್‌ಗೆ ಮುಗಿದಿತ್ತು. ಆ ಸಮಯದಲ್ಲಿ ನಿಯಮದಂತೆ ಮಂಜುನಾಥ್ ಅವರನ್ನು ನೇಮಕ ಮಾಡದೇ ಪ್ರಾಧ್ಯಾಪಕಿ ಡಾ. ಮೀರಾ ಬಿ.ಕೆ. ಅವರನ್ನು ನೇಮಿಸಲಾಗಿತ್ತು.

ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾಲಯ ಕಳುಹಿಸಿದ ಸೇವಾ ಹಿರಿತನದ ಪಟ್ಟಿ ತಿರಸ್ಕರಿಸಿ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯಕ್ಕೆ ಪ್ರಭಾರ ಕುಲಪತಿ ನೇಮಕ ಮಾಡಿದನ್ನು ಪ್ರಶ್ನಿಸಿ, ರಾಜ್ಯಪಾಲರಿಗೆ ಹಲವು ದೂರುಗಳು ಸಲ್ಲಿಕೆಯಾಗಿದ್ದವು. ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರ ಕಾನೂನು ಅಭಿಪ್ರಾಯ ಪಡೆದು ಮಂಜುನಾಥ್ ಅವರಿಗೆ ಪ್ರಭಾರ ವಹಿಸಲಾಗಿದೆ ಎಂದು ರಾಜ್ಯಪಾಲರು ವಿವರಿಸಿದ್ದಾರೆ.

ನಗರದಲ್ಲಿ ಇಂದು

‘ದಿ ಫ್ರೆಂಡ್ಲಿ ಬ್ರಶ್ ಸ್ಟ್ರೋಕ್ಸ್’ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ಎಸ್.ಎನ್. ಶಶಿಧರ, ಮೊನ್ಸಿ ನೆಲ್ಲಿಕುನ್ನೆಲ್ ಎಸ್‌ಡಿಬಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

ಸರ್ಕಾರಿ ಶಾಲೆಯ ಮಕ್ಕಳಿಗೆ ಪೆನ್, ಪುಸ್ತಕಗಳ ವಿತರಣೆ: ಸಂಜೀವರತ್ನ ಶೇಷಶಾಸ್ತ್ರಿ, ಉಪಸ್ಥಿತಿ: ರಾ.ನಂ. ಚಂದ್ರಶೇಖರ, ಮಂಜುನಾಥ ಆರ್., ಭಾರತಿ ಬಿ.ವಿ., ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಅಂಬೇಡ್ಕರ್‌ನಗರ, ರಾಮಮೂರ್ತಿನಗರ, ಬೆಳಿಗ್ಗೆ 10.30

ಡಾ.ಫ.ಗು. ಹಳಕಟ್ಟಿಯವರ ಜನ್ಮದಿನ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿಯವರ ಜನ್ಮ ದಿನಾಚರಣೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ, ಡಾ.ಫ.ಗು. ಹಳ್ಳಕಟ್ಟಿ ಜೀವನ, ಸಾಧನೆ, ಸಾಕ್ಷ್ಯಚಿತ್ರ ಬಿಡುಗಡೆ: ಎಚ್.ಕೆ. ಪಾಟೀಲ, ಪುಸ್ತಕ ಬಿಡುಗಡೆ: ಶಂಕರ ಬಿದರಿ, ಅತಿಥಿಗಳು: ಚಂದ್ರಕಾಂತ ಬೆಲ್ಲದ, ಮಹಾಂತೇಶ ಬಿರಾದಾರ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಸಿ. ಸೋಮಶೇಖರ್, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 6

‘ಮೃಚ್ಛಕಟಿಕಂ’ ನಾಟಕ ಪ್ರದರ್ಶನ: ನಿರ್ದೇಶನ: ಜಿ. ವೇಣು, ಆಯೋಜನೆ: ಭೂಮಿಜಾ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform General Public that our client is intending to purchase property bearing new Municipal No. 34, PID No.: 98-11-34, situated at 2nd Cross, Dinnuru, within the jurisdiction of BBMP authorities, Ward No. 46, morefully described hereunder from Smt. Lakshmi Shoba V, W/o. Mahesh N. The said Smt. Lakshmi Shoba V, has purchased the property from Sri. Venkateshaiah, S/o. Late Hanumanthaiah, vide Document No. HBB-1-03135-2022-23, stored in CD No. HBBD1221 dated: 05-01-2023, registered in the office of Sub-registrar, Gandhinagar (Hebbal), Bengaluru. Further the khata concerning said property stands in her name. She has desired to sell the same to our clients. Any person/persons or individuals having any objections, claims or any rights over the said property shall notify to the undersigned with relevant documents in support of their claim within the period of 7 days from the date of this notice. Thereafter, our clients shall proceed to complete the said transaction.

SCHEDULE

All that piece and parcel of Eastern Portion of Property bearing Municipal Site No. 34, Vide PID No. 98-11-34, situated 2nd Cross, Dinnuru, within jurisdiction of BBMP, Ward No. 46, Measuring East to West : 30 ft. and North to South : 40 ft. in all measuring 1200 Square Feet and bounded on the East by : Site No. 33, West by : Western portion of Site No. 34, North by: Road and South by: Private Property, Together with 2 floor RCC building measuring around 8 squares.

Shakeel Ahmed, Advocate
Shakeel Ahmed and Associates
Ph: 9845371800
No. 14, I Floor, R.T. Nagar Main Road, R.T. Nagar Post, Bengaluru-560032.

INDIRANAGAR CLUB
9th Main, 4th Cross, HAL 2nd Stage, Bangalore – 560 008
Ph: 2528 0323 – 4115 3378
E-mail :indiranagarclub@gmail.com

TENDER NOTICE

Invite to bid for the following works under taken for construction of Guest Rooms at Indiranagar Club, Bangalore:
Scope of Work:
1) Interior Works, **2)** Plumbing Works **3)** Electrical Works, **4)** Steel Structure Works, **5)** Sewage Treatment Plant
Interested parties may collect the detailed tender documents separately on payment of Rs. 2,000/- each at the Club Office from **3rd July to 12th July 2025 - 11.00 AM to 7.00 PM**.
Sealed Tender documents should be submitted on or before 14th July 2025 at the Club Office addressed to: The Hon. Secretary-Indiranagar Club, Bangalore – 560 008.
Hon. Secretary
Indiranagar Club

PUBLIC NOTICE
To Place your Classified Ads Contact
9731810277

DH Classifieds ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
9845114560 | 9886213331
*Conditions apply

EDUCATIONAL

Correspondence Courses

STUDY AT HOME SSLC DIRECT 2nd PUC BA, B.Com, BBA/B.Sc, BCA, BSW, B.LISc, B.Ed/M.Ed, M.LISc, MA/M.Com/M.Sc MBA, MSW/MCA, PG-Diploma Courses. Contact: Manasa Correspondence College. Malleshwaram Circle Bangalore 9880498484/ 9738761169/ 9663555154.

JOB OPPORTUNITIES

HRD & Admin

FEMALE HRD cum Account executive is required for a reputed company located at Rajajinagar with minimum 3-5 years experience in HRD/ Accounts field. Salary based upon experience and calibre. Please apply to sinewave@sinewavegenerators.com Or contact: 9845026794

General

V&V GROUP, Bannergatta Road, Wanted MANAGERS, LADY RECEPTIONIST, TELECALLERS, MARKETING EXECUTIVES. Good Salary. Call 99000-54462

Teachers/ Professors

WANTED TEACHERS. B.E.T Sadathunnisa Degree College for women, Bismillahnagar, Bangalore- 560029, is in need of Lecturers to teach students of BCA, BBA & BCom. QR: MCA, MBA, MCom. Preference: K-Preference:'>SET/ NET with experience, lady candidates. Apply: bismillah.wc@gmail.com Phone: 9980340172

LAWRENCE HIGH School ICSE HSR, require well_trained and experienced Geography, English teacher Call: 080-40903777, 8971485310, 9080479986. lawrence.school.icse@gmail.com

REQUIRED HIGHSCHOOL Science and Mathematics Teachers, Academic Co-Ordinator for Vallabha International School, Somanahalli, Kanakapura Road, Bangalore-82 9880439138/ 9591865641

ELITE PUBLIC SCHOOL Kempegowda Layout Laggere Bengaluru requires BSc/MSc, BEd (Physics) Qualified Teachers: 9447727526/ 9980200444

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

KNS INSTITUTE OF TECHNOLOGY
Approved by AICTE & Govt. of Karnataka. Affiliated to VTU
FACULTY / STAFF REQUIREMENT
PROFESSORS, ASSOCIATE PROFESSORS & ASST.PROF IN THE FOLLOWING DEPARTMENTS
CSE, ISE, ECE, AI&ML, Data Science, IOT, Cyber Security, Mechanical, Mathematics, Physics, Chemistry
INSTRUCTOR / ASSISTANT INSTRUCTOR: Diploma in CSE, ISE, AI&ML, ECE
Qualification & Salary as per AICTE norms & State Govt.Higher Salary may be considered for deserving candidates
Apply within 7 days with detailed CV and copies of Testimonials to:
Principal, **KNS INSTITUTE OF TECHNOLOGY**
Hegde Nagar, Kogilu Road, Thirumenahalli, Bangalore-560064, knsit.hr@gmail.com, career@knsit.com,www.knsit.com,
Ph: 080-28567958 Sd/- Chairman

Marketing & Sales

FEMALE MARKETING executive required for a reputed company located at Rajajinagar with marketing background and good computer knowledge in preparing quotations, good knowledge of English/ Hindi/ Kannada/ Tamil/ Telugu will be an added advantage. Attractive remuneration with sales incentive will be offered. Please apply to sinewave@sinewavegenerators.com Or Contact: 9845026794

BTM Layout

DOLLERS COLONY BTM Layout, Near Register Office 50x80, Semi- commercial Sale Price 27000/-Sqft Contact :8884501767

Mysore

SALE SITE 30x40 Muda Alloted 3rd Stage, Vijayanagar with 2Floors Building Clear-Tittle Price 1.60 Cr Negotiable: 9925137672/ 9886019240

Novel Pioneers in End of Line Packaging Solutions looking for Result Oriented Marketing Line Managers.
MARKETING EXECUTIVES
Good commercial skills, inclination to learn, pref. 2-3 yrs. Field Exp. In selling CG. Extra ordinary Freshers can be considered age <30
SALES CUM SERVICE ENG.
Mim Dip. in Mech.Engg. with 2 to 3 yrs. exp. of Selling /Serv. Indl. CG. Extensive Traveling. Inclination to learn for BLR., Che./ Hyd., age is <30
Attractive Package Performance Linked Incentives
rpc@novelautomation.com

REQUIRED SALES Manager and Sales Executives, Any Degree, 2 years of Experience. Contact: SOLAR TVS 9449754069/ 9513310618.Send CV: solarhr0425@gmail.com

Accounts & Finance

LEADING TIMBER Industry Kumbalgodu Near Mysore Road; Requires: Lady Accountant, Sales Man, above 5 years experience, Minimum Degree; Mob: 9886465289

REAL ESTATE SELLING

Sites

Banashankari

BDA RESIDENTIAL Plot for Sale in BSK 2nd Stage, west facing 36x85 ft- 3060sqft, Price 7.6Cr. Verna Developers MG Road 9353128035/ 9916310226 (Brokers Excuse)

FUTURE FOCUS

Astrology

INDIAN FAMOUS ASTROLOGER:we solved your problems like:Job,Health, Property,Family, Husband & wife, Love,Business, Finance and other problems solved through phone. Pandith:-Suresh Bhatt. 9900305071

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Finance

LOANS AVAILABLE @5% YEARLY INTEREST BUSINESS PROJECT TAKEOVER PERSONAL MORTGAGE BUILDERS HOMELOAN 8787091647 AGENTS WELCOME

Business Offers

Finance

MSME LOANS Available for any startup companies,any existing companies NOTE:Also one approved loan available contact-7204995189

PERSONAL

Change of Name

CHANGE OF NAME
I, **Lakshmi,** residing at No. 3940, Flat No. 203, Karanji Apts, 2nd Cross, Bannimantappa, Unnathi Nagar, Shivaraathreeswar Nagar, Mysore-570015, have changed my name to **CHANDRAKALA** vide affidavit dated 01.07.2026 before notary M Narendran, Bengaluru.

CHANGE OF NAME
I, **S. PRAKASH,** Residing at No. 4, 7th Cross, Omshivashakthi Nagar, Konankunte Cross, Kanakapura Main Road, Bengaluru South, Bengaluru-560062 have changed my son's name from **P. NETHISH** to **S.P. NITHISH KUMAR** vide affidavit dated 30.06.2025 before notary B.R Shashikala, Bengaluru.

I, SHWETHA D/o.Sanjeeva R/a#1/28,Near Water Tank, Gulvadi Post Kundapura Taluk, Udupi District, Karnataka 576283 have changed my Name to SHWETHA PRASHANTHA vide`affidavit dated:27.6.2025 before`Notary T.V.Bhadravijaya Bangalore.

CHANGE OF NAME
We, **Narayanaswamy K & Vandana S,** R/at Sri. Shivarudra Nilaya, 2nd Cross, Near Reddy Kalyana Mantap, Maruthi Layout, Kolar District, Malur - 563130, have changed our minor daughter's name from **KRITHIKA N** to **VARNITHA N** vide affidavit dated 17-05-2025 before notary R.C. Appaji Gowda, Malur.

I, BEENAMMA EBENZER W/O Ebenezer Joseph, Residing at No.92,3rd Cross, Sundernagar Layout, Gokula,Bangalore-560054. Have Changed my Name BEENAMMA EBENEZER to BEENAMMA KURIAN vide affidavit Dated: 01.07.2025 before Notary JALANDHARA, Bangalore

CHANGE OF NAME
I, **ASHA M.T,** aged about 42 Years **W/o Vishwanatha M** Residing at No 7/3, 5th Main Road, Sameerapura, Chamarajpet, Bengaluru-560018. further declare that, both the names **ASHA.M.T** and **PUSHPA.T** belongs to one and the same person i.e., me only. vide affidavit dated 19.06.2025 before notary Mamatha.N.K , Bengaluru

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಹಾರೋಹಳ್ಳಿ
ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ-562112
Phone: 080-29760055 | e-mail : tp.harohalli.tp@gmail.com
ಸಂ: ಪ.ಪಂ.ಹಾ./ಆ.ಶಾ/ಪೇ.ನೋ/ಸಿ.ಆರ್/26/2025-26 ದಿನಾಂಕ: 30.06.2025

ಪ್ರಕಟಣೆ

ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಬಡ ಜನರು ಮತ್ತು ವಿಕಲಚೇತನ ವರ್ಗಕ್ಕೆ ಸೇರಿದ ಅರ್ಹ ಫಲಾನುಭವಿಗಳಿಗೆ ಕಲ್ಯಾಣ ಕಾರ್ಯಕ್ರಮಗಳಲ್ಲಿ ಕಾಯ್ದಿರಿಸಲಾಗಿರುವ ಅನುದಾನಕ್ಕೆ ಸರ್ಕಾರ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ-4ರಡಿ ಶೇ.24.10, ಶೇ.7.25 ಹಾಗೂ ಶೇ.5ರ ಘಟಕಗಳನ್ನು ಅನುಷ್ಠಾನಗೊಳಿಸುವ ಸಂಬಂಧ ವೈಯುಕ್ತಿಕ (ವ್ಯಕ್ತಿಗಳ) ಸೌಲಭ್ಯಗಳನ್ನು ಒದಗಿಸಲು ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಮಾಹಿತಿಯನ್ನು ಪಡೆಯಲು ಹಾರೋಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸುವಂತೆ ಕೋರಿದೆ.

ಸಹಿ/-
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಹಾರೋಹಳ್ಳಿ
DIPR/BSD/206/SA/2025-26

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ದೇವನಹಳ್ಳಿ ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂರವಾಣಿ : 080-27682221, Email : itstaff_ulb_devanahalli@yahoo.co.in
ನಂ.ದೇಪು/ತಾ.ಶಾ/ಟೆ.ಪ್ರ/ಸಿಆರ್/06/2025-26 ದಿನಾಂಕ: 01.07.2025

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯುಮೆಂಟ್ KW-1 & KW-2 ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದೇವನಹಳ್ಳಿ ಪುರಸಭೆಗೆ 2025-26ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನ ಮತ್ತು 2024-25 & 2025-26 ಪುರಸಭಾ ನಿಧಿಯಡಿ ಸಿ.ಸಿ & ಡಾಂಬರ್ ರಸ್ತೆ, ಬೋರ್ ಕೊರೆಯುವುದು, ಪಂಪು ಮೋಟಾರ್ ಅಳವಡಿಸುವುದು, ವಾಹನಗಳ ಶೆಡ್ ನಿರ್ಮಾಣ ಕಾಮಗಾರಿ, ಪೈಪ್‌ಲೈನ್ ಕಾಮಗಾರಿ, ಹೈಮಾಸ್ಟ್ ಲೈಟ್ ಅಳವಡಿಸುವುದು, ಬಿಲ್ಡಿಂಗ್ ಕಾಮಗಾರಿ ಮತ್ತು ಇತ್ಯಾದಿ ಕಾಮಗಾರಿಗಳ ಒಟ್ಟು ಮೊತ್ತ **ರೂ: 384.06** ಲಕ್ಷಗಳ ಒಟ್ಟು 29 ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆ ಮತ್ತು **19.07 ಲಕ್ಷಗಳ** 01 ಕಾಮಗಾರಿಯನ್ನು ಮರು ಟೆಂಡರ್ ಪ್ರಕಟಣೆಯನ್ನು ಇ-ಪ್ರಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.
ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/-	ಸಹಿ/-	ಸಹಿ/-	ಸಹಿ/-
ಮುನಿಕೃಷ್ಣ ಡಿ.ಎಂ.	ರವೀಂದ್ರ ಜಿ.ಎ.	ವಿ.ಕೋಮಲ	ಸಿ.ದೊಡ್ಡಮಳವಯ್ಯ (ಕೆ.ಎಂ.ಎ.ಎಸ್)
ಅಧ್ಯಕ್ಷರು	ಉಪಾಧ್ಯಕ್ಷರು	ಸ್ಥಾಯಿಸಮಿತಿ ಅಧ್ಯಕ್ಷರು	ಮುಖ್ಯಾಧಿಕಾರಿ
ಪುರಸಭೆ, ದೇವನಹಳ್ಳಿ	ಪುರಸಭೆ, ದೇವನಹಳ್ಳಿ	ಪುರಸಭೆ, ದೇವನಹಳ್ಳಿ	ಪುರಸಭೆ, ದೇವನಹಳ್ಳಿ

ವಾಸಾಸಂಇ/ವಾಪ್ರ/1559/ಎಸ್‌ಎಸ್‌ಸಿ/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಪ್ರ(ಕಾ)ವಬೆಂ/ಅಇಂವಿ(ಕ)/ಸಇಂ-1/2025-26/2867-68 ದಿನಾಂಕ: 30.06.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಕೆಳಕಂಡ ವಿಚಾರಣೆಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ;

1) ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇವಿ/ಪ್ರ(ಕಾ)ವ/ಬೆಂ.ವ/ಭಾ.ಟಿ.ಕೆ-07 ರ ಅನ್ವಯ **ಭಾಗಶಃ ಗುತ್ತಿಗೆ ಆಧಾರದ ಮೇಲೆ** ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆಗೆ ಸೇರಿದ 66/11ಕೆವಿ ಅಕ್ಕೂರುಮೊಳೆ ವಿದ್ಯುತ್ ಉಪಕೇಂದ್ರದಲ್ಲಿ ಹಾಲಿ ಇರುವ 1X12.5 ಎಂ.ವಿ.ಎ ಪರಿವರ್ತಕವನ್ನು 1X20 ಎಂ.ವಿ.ಎ ಪರಿವರ್ತಕಕ್ಕೆ ಬದಲಾಯಿಸುವ ಕಾರ್ಯಕ್ಕೆ ಸಂಬಂಧಿತದ ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸರಬರಾಜು (20ಎಂ.ವಿ.ಎ ವಿದ್ಯುತ್ ಪರಿವರ್ತಕ, NIFPS system ಹಾಗೂ 11ಕೆವಿ ಛೇದಕಗಳನ್ನು ಹೊರತುಪಡಿಸಿ) ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ) (20 ಎಂ.ವಿ.ಎ ವಿದ್ಯುತ್ ಪರಿವರ್ತಕ, NIFPS system ಹೊರತುಪಡಿಸಿ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

2) ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಮುಇವಿ/ಪ್ರ(ಕಾ)ವ/ಬೆಂ.ವ/ಟಿ.ಕೆ-08 ರನ್ವಯ **ಅ) ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ** ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆಗೆ ಸೇರಿದ 66/11ಕೆವಿ ಅಕ್ಕೂರುಮೊಳೆ ವಿದ್ಯುತ್ ಉಪಕೇಂದ್ರದಲ್ಲಿ ಹಾಲಿ ಇರುವ 66ಕೆವಿ Coyote ACSR Bus ಅನ್ನು ಸೂಕ್ತವಾದ ಹಾರ್ಡ್‌ವೇರ್‌ನೊಂದಿಗೆ Drake Bus ಗೆ ನವೀಕರಿಸುವುದಕ್ಕೆ ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸರಬರಾಜು ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವ ಬಗ್ಗೆ.

ಆ) ಭಾಗಶಃ ಗುತ್ತಿಗೆ ಆಧಾರದ ಮೇಲೆ ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆಗೆ ಸೇರಿದ 66/11ಕೆವಿ ಅಕ್ಕೂರುಮೊಳೆ ವಿದ್ಯುತ್ ಉಪಕೇಂದ್ರದಲ್ಲಿ ಹಾಲಿ ಇರುವ 02 ಸಂಖ್ಯೆಯ 11ಕೆವಿ PCVCB ಛೇದಕಗಳನ್ನು MCVCB ಛೇದಕಗಳಿಗೆ ಬದಲಾಯಿಸುವುದಕ್ಕೆ ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸರಬರಾಜು **(11ಕೆವಿ ಛೇದಕಗಳನ್ನು ಹೊರತುಪಡಿಸಿ)** ಮತ್ತು ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸ್ಥಾಪನೆ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವ ಬಗ್ಗೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ವಿಚಾರಣೆಯ ಸಂಪೂರ್ಣ ವಿವರಗಳನ್ನು ಸಾರ್ವಜನಿಕ ಸಂಗ್ರಹಣಾ ತಂತ್ರಾಂಶ ವೆಬ್‌ಸೈಟ್ **www.kppp.karnataka.gov.in** ನಲ್ಲಿ ದಿನಾಂಕ: **10.07.2025** ರಂದು ಅಥವಾ ತದನಂತರ ಲಾಗಿನ್ ಆಗಿ ಪಡೆಯಬಹುದು. ಇನ್ನಿತರೆ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/- **ಮುಖ್ಯ ಇಂಜಿನಿಯರ್ (ವಿದ್ಯುತ್), ಪ್ರಸರಣ (ಕಾರ್ಯಾಚರಣೆಗಳು) ವಲಯ, ಕವಿಪ್ರನಿನಿ, ಆನಂದ್ ರಾವ್ ವೃತ್ತ, ಬೆಂಗಳೂರು-560009. ಫೋನ್: 080-22282601.**

ಸುರಂಗ ರಸ್ತೆ: ಕಿ.ಮೀ.ಗೆ ₹19 ನಿಗದಿ

ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್‌ವರೆಗಿನ ಸಂಚಾರಕ್ಕೆ 45 ನಿಮಿಷ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ 2030ರ ವೇಳೆಗೆ ನಿರ್ಮಾಣವಾಗಲಿರುವ ಸುರಂಗ ರಸ್ತೆಯಿಂದಾಗಿ ಹೆಬ್ಬಾಳ–ಸಿಲ್ಕ್‌ಬೋರ್ಡ್ ನಡುವಿನ ಸಂಚಾರ ಸಮಯ ಅರ್ಧದಷ್ಟು ಕಡಿಮೆಯಾಗಲಿದೆ. ಆದರೆ, ಈ ರಸ್ತೆಯಲ್ಲಿ ಸಂಚರಿಸಬೇಕಾದರೆ ಪ್ರತಿ ಕಿ.ಮೀಗೆ ₹19 ಪಾವತಿಸಬೇಕಾಗುತ್ತದೆ.

ಸುಮಾರು ₹18 ಸಾವಿರ ಕೋಟಿ ವೆಚ್ಚದಲ್ಲಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ನಡುವಿನ ಸುರಂಗ ರಸ್ತೆ ಬೂಟ್ (ಅಭಿವೃದ್ಧಿ, ಕಾರ್ಯಾಚರಣೆ, ವರ್ಗಾವಣೆ) ಆಧಾರದಲ್ಲಿ ನಿರ್ಮಾಣವಾಗಲಿದೆ. ಸುರಂಗ ರಸ್ತೆಯಲ್ಲಿ ಪೂರ್ಣವಾಗಿ ಒಂದು ಬಾರಿ ಸಂಚರಿಸಲು ಸುಮಾರು ₹317 ಶುಲ್ಕ ಪಾವತಿಸಬೇಕಾಗುತ್ತದೆ.

ಮೂಲಸೌಕರ್ಯಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಪ್ರತಿ ವರ್ಷ ಒದಗಿಸಲಿರುವ ₹7 ಸಾವಿರ ಕೋಟಿ ಅನುದಾನದಲ್ಲಿ ಬೃಹತ್ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಶೇಷ ಉದ್ದೇಶದ ಸಂಸ್ಥೆ (ಎಸ್‌ಪಿವಿ)– 'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆ' (ಬಿ–ಸ್ಮೈಲ್) ಅನ್ನು ಸ್ಥಾಪಿಸಲಾಗಿದೆ. ಬಿ–ಸ್ಮೈಲ್ ಮೂಲಕವೇ ಸುರಂಗ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ.

ಯೋಜನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಿದ್ದು, ಹಣಕಾಸು ಇಲಾಖೆಯ ಸಮ್ಮತಿಗಾಗಿ ಕಾಯಲಾಗುತ್ತಿದೆ. ಒಪ್ಪಿಗೆ ದೊರೆತ ನಂತರ ಜಾಗತಿಕ ಟೆಂಡರ್ ಆಹ್ವಾನಿಸಿ, ಮೂರು ವರ್ಷದೊಳಗೆ ಸುರಂಗ ರಸ್ತೆ ನಿರ್ಮಿಸುವ ಗುರಿ ಹೊಂದಲಾಗಿದೆ.

ಮುಖ್ಯಾಂಶಗಳು

- ಬೂಟ್ ವ್ಯವಸ್ಥೆಯಡಿ ನಿರ್ಮಾಣಕ್ಕೆ ನಿರ್ಧಾರ
- ಹಣಕಾಸು ಇಲಾಖೆಯ ಅನುಮತಿ ನಂತರ ಟೆಂಡರ್
- 3 ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ

ಸುರಂಗ: ಅಂತರಂಗ

ಸುರಂಗ ರಸ್ತೆಯ ಎರಡೂ ಬದಿಯ ಉದ್ದ 33.49 ಕಿ.ಮೀ. ಇದನ್ನು 26 ತಿಂಗಳಲ್ಲಿ ಕೊರೆಯಲಾಗುತ್ತದೆ. ನಂತರ 12 ತಿಂಗಳಲ್ಲಿ ನಿರ್ಮಾಣ ಕಾಮಗಾರಿ ನಡೆಯಲಿದೆ ಎಂದು ಸಚಿವ ಸಂಪುಟದ ಟಿಪ್ಪಣಿಯಲ್ಲಿ ವಿವರಿಸಿದ್ದು, ಅದಕ್ಕೆ ಸಮ್ಮತಿಯೂ ದೊರೆತಿದೆ.

ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಹೆಬ್ಬಾಳದಿಂದ ರೇಷ್ಮೆ ಮಂಡಳಿಯವರೆಗಿನ 'ಸುರಂಗ ರಸ್ತೆ' ಯೋಜನೆಗೆ 2024ರ ಸೆಪ್ಟೆಂಬರ್, ಡಿಸೆಂಬರ್ ಹಾಗೂ 2025ರ ಫೆಬ್ರುವರಿ ಅಂತ್ಯದೊಳಗೆ ಟೆಂಡರ್ ಕರೆಯಲಾಗುತ್ತದೆ ಎಂದು ಹಲವು ಬಾರಿ ಹೇಳಿಕೆ ನೀಡಿದ್ದರು. ಡಿಪಿಆರ್ ಸಿದ್ಧಪಡಿಸಿದ್ದ ಸಂಸ್ಥೆಯೊಂದು ಮುಂಬೈ ಯೋಜನೆಯೊಂದಕ್ಕೆ ಸಿದ್ಧಪಡಿಸಿದ್ದ ಹಾಳೆಗಳನ್ನೂ ಸೇರಿಸಿ, ಪಾಲಿಕೆಗೆ ನೀಡಿತ್ತು. ಅದು 'ಒಂದು ಹಾಳೆ ಅಷ್ಟೆ' ಎಂದು ಎಂಜಿನಿಯರ್‌ಗಳು ಸಮಜಾಯಿಷಿಯನ್ನೂ ನೀಡಿದ್ದರು. ನಂತರ ಡಿಪಿಆರ್‌ನಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ, ಆಗುತ್ತಲೂ ಇವೆ. ಆದರೆ, ಹಲವು ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಆಹ್ವಾನಿಸಲು ಇನ್ನೂ ಸಾಧ್ಯವಾಗಿಲ್ಲ ಎಂಬುವುದು ಬಿಬಿಎಂಪಿ ಎಂಜಿನಿಯರ್‌ಗಳ ಸಬೂಬು.



ಮಾರ್ಗ: ಹೆಬ್ಬಾಳ ಕೆರೆಯ ಮುಂಭಾಗ ವಾಹನಗಳ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶವಿರುತ್ತದೆ. ಹೆಬ್ಬಾಳ ಪಶುವೈದ್ಯ ಆಸ್ಪತ್ರೆ ಬಳಿ ವಾಹನಗಳ ನಿರ್ಗಮನ ಮತ್ತು ಪ್ರವೇಶಕ್ಕಾಗಿ 'ಪಾಯಿಂಟ್' ನಿರ್ಮಿಸಲಾಗುತ್ತದೆ. ಮೇಖ್ರಿ ವೃತ್ತದ ಅರಮನೆ ಮೈದಾನ, ಗಾಲ್ಫ್ ಮೈದಾನ ಮತ್ತು ಮಹಾರಾಣಿ ಕಾಲೇಜು, ಲಾಲ್‌ಬಾಗ್ ಬಳಿಯಲ್ಲಿ (ಅಶೋಕ ಪಿಲ್ಲರ್) 'ಪಾಯಿಂಟ್'. ಸರ್ಜಾಪುರ ರಸ್ತೆ ಹಾಗೂ ಹೊರ ವರ್ತುಲ ರಸ್ತೆ ಕಡೆಯಲ್ಲೂ ಪ್ರವೇಶ, ನಿರ್ಗಮನ.



ಮಾರ್ಗ: ಕೆ.ಆರ್. ಪುರದಿಂದ ಜವಾಹರಲಾಲ್ ನೆಹರೂ ಉದ್ಯಾನ, ಸಿ.ವಿ. ರಾಮನ್ ಆಸ್ಪತ್ರೆ, ಇಂದಿರಾನಗರ, ದೊಮ್ಮಲೂರು, ಲಾಲ್‌ಬಾಗ್, ನ್ಯಾಷನಲ್ ಕಾಲೇಜ್, ಚಾಮರಾಜಪೇಟೆ, ಕಾರ್ಯಸಿದ್ಧಿ ಆಂಜನೇಯ ದೇವಸ್ಥಾನದ ಮೂಲಕ ನಾಯಂಡಹಳ್ಳಿ ಬಳಿಯ ನೈಸ್ ರಸ್ತೆ ಜಂಕ್ಷನ್

80 ಕಿ.ಮೀ 'ವಿನ್ಯಾಸ ವೇಗ': ಪ್ರಹ್ಲಾದ್

'ಪ್ರತಿ ಗಂಟೆಗೆ 80 ಕಿ.ಮೀ ವೇಗದಲ್ಲಿ ಸಂಚರಿಸಬಹುದಾದ 'ವಿನ್ಯಾಸ ವೇಗ' ವ್ಯವಸ್ಥೆಯಲ್ಲಿ ಸುರಂಗ ರಸ್ತೆಯನ್ನು ನಿರ್ಮಿಸಲಾಗುತ್ತದೆ. ಹಾಗೆಂದು 80 ಕಿ.ಮೀ ವೇಗದಲ್ಲೇ ಸಂಚರಿಸಬಹುದು ಎಂದೇನೂ ಇಲ್ಲ. ನಗರಗಳಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಚಾಲನೆ ಮಾಡುತ್ತಾರೆ. ಮುಂದಿನ ವಾಹನ 30 ಕಿ.ಮೀ.ನಲ್ಲಿ ಚಲಿಸಿದರೆ ನೀವು 60 ಕಿ.ಮೀ ವೇಗದಲ್ಲಿ ಹೋಗಲು ಸಾಧ್ಯವಿಲ್ಲ. ವೃದ್ಧರು, ಮಹಿಳೆಯರು ಸೇರಿದಂತೆ ಹಲವರು ಭಿನ್ನವಾಗಿ ವಾಹನ ಚಾಲನೆ ಮಾಡುತ್ತಾರೆ. ಹೀಗಾಗಿ, 16 ಕಿ.ಮೀ ದೂರವನ್ನು ಸುರಂಗ ರಸ್ತೆಯಲ್ಲಿ ಇಷ್ಟೇ ಸಮಯದಲ್ಲಿ ಕ್ರಮಿಸಬಹುದು ಎಂದು ಹೇಳಲು ಸಾಧ್ಯವಿಲ್ಲ. ಒಂದೇ ರೀತಿಯ ವೇಗದಲ್ಲಿ ಹೋಗಲು ಇದೇನು ರಾಷ್ಟ್ರೀಯ ಹೆದ್ದಾರಿ ಅಲ್ಲ. ಈಗ, ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ರಸ್ತೆಯಲ್ಲಿ ಸರಾಸರಿ ಗಂಟೆಗೆ 8 ಕಿ.ಮೀ ವೇಗದಲ್ಲಿ ವಾಹನಗಳು ಸಂಚರಿಸುತ್ತಿವೆ. ಇದನ್ನು ಪರಿಗಣಿಸಿ, ಈಗಿನ 90 ನಿಮಿಷದ ಅವಧಿ 45 ನಿಮಿಷವಾಗಲಿದೆ ಎಂದು ಹೇಳುತ್ತಿದ್ದೇವೆ. ಸುರಂಗ ರಸ್ತೆಯಲ್ಲಿ 2030ರಿಂದ ಪ್ರತಿ ಕಿ.ಮೀಗೆ ₹19 ಶುಲ್ಕವನ್ನು ಸಂಗ್ರಹಿಸಲು ಅಂದಾಜಿಸಲಾಗಿದೆ' ಎಂದು ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ಮಾಹಿತಿ ನೀಡಿದರು.

ಬೆಂಕಿಯಿಂದ ಹಾನಿಯಾಗಿದ್ದ ಪೀಠೋಪಕರಣಗಳನ್ನು ಆಸ್ಪತ್ರೆಯ ಕಟ್ಟಡದ ಹೊರಗೆ ಸಿಬ್ಬಂದಿ ಜೋಡಿಸಿ ಇಡುತ್ತಿರುವುದು ಪ್ರಜಾವಾಣಿ ಚಿತ್ರ

ಆಸ್ಪತ್ರೆಯಲ್ಲಿ ಬೆಂಕಿ ಅವಘಡ ರೋಗಿಗಳ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಕ್ಟೋರಿಯಾ ಆಸ್ಪತ್ರೆಯ ಮಹಾಬೋಧಿ ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರದ ಸೆಮಿನಾರ್ ಕೊಠಡಿಯಲ್ಲಿ ಮಂಗಳವಾರ ಮುಂಜಾನೆ 3 ಗಂಟೆಗೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ರೋಗಿಗಳನ್ನು ಆಸ್ಪತ್ರೆಯ 'ಎಚ್ ಬ್ಲಾಕ್'ಗೆ ಸ್ಥಳಾಂತರ ಮಾಡಲಾಗಿದೆ.

ಕೊಠಡಿಯಲ್ಲಿ ಹೊಗೆ ಕಾಣಿಸಿಕೊಂಡಿದ್ದನ್ನು ಗಮನಿಸಿದ ರಾತ್ರಿ ಪಾಳಿಯ ವೈದ್ಯರು ಹಾಗೂ ಸಿಬ್ಬಂದಿ, ವೈದ್ಯಾಧಿಕಾರಿಗಳು ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿಗೆ ಕೂಡಲೇ ಮಾಹಿತಿ ನೀಡಿದ್ದರು. ಸ್ವಿಚ್ ಬೋರ್ಡ್‌ನಲ್ಲಿ ಸಂಭವಿಸಿದ ಶಾರ್ಟ್ ಸರ್ಕ್ಯೂಟ್‌ನಿಂದ ಈ ಅವಘಡ ಸಂಭವಿಸಿತ್ತು. ನೋಂದಣಿ ಪುಸ್ತಕ, ಪಿಠೋಪಕರಣ, ರೆಫ್ರಿಜರೇಟರ್‌ಗೆ ಹಾನಿಯಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಈ ವಾರ್ಡ್‌ನಲ್ಲಿ ಐವರು ಮಹಿಳೆಯರು ಹಾಗೂ ಏಳು ಮಕ್ಕಳು ಸೇರಿ ಒಟ್ಟು 26 ರೋಗಿಗಳಿದ್ದರು. ಐದು ರೋಗಿಗಳಿಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಒದಗಿಸಲಾಗುತ್ತಿತ್ತು. ಎಲ್ಲ ರೋಗಿಗಳನ್ನು ಸುರಕ್ಷಿತವಾಗಿ ಇನ್ನೊಂದು ಕಟ್ಟಡಕ್ಕೆ ಸ್ಥಳಾಂತರಿಸಿ, ಚಿಕಿತ್ಸೆ ಮುಂದುವರಿಸಲಾಯಿತು.

'ಎಲ್ಲ ರೋಗಿಗಳು, ಅವರ ಸಹಾಯಕರು, ವೈದ್ಯರು ಮತ್ತು ಆಸ್ಪತ್ರೆ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ' ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ರಮೇಶ್ ಕೃಷ್ಣ.ಕೆ ತಿಳಿಸಿದ್ದಾರೆ.

ಹೆಚ್ಚು ವಸೂಲಿ: 56 ಆಟೊಗಳ ಜಪ್ತಿ

ಬೆಂಗಳೂರು: ಸರ್ಕಾರ ನಿಗದಿಪಡಿಸಿದ ಪ್ರಯಾಣ ದರಕ್ಕಿಂತ ಅಧಿಕ ದರ ವಸೂಲಿ ಮಾಡುತ್ತಿರುವ ಆಟೊಗಳನ್ನು ಪತ್ತೆ ಹಚ್ಚುವ ಕಾರ್ಯಾಚರಣೆಯನ್ನು ಮಂಗಳವಾರವೂ ಮುಂದುವರೆಸಿರುವ ಸಾರಿಗೆ ಕಚೇರಿ ಅಧಿಕಾರಿಗಳು 183 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ. ಅಲ್ಲದೆ 56 ಆಟೊಗಳನ್ನು ಜಪ್ತಿ ಮಾಡಿದ್ದಾರೆ.

ಬೆಂಗಳೂರು ಕೇಂದ್ರ, ಬೆಂಗಳೂರು ಪಶ್ಚಿಮ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಜ್ಞಾನಭಾರತಿ, ದೇವನಹಳ್ಳಿ, ಯಲಹಂಕ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಚಂದಾಪುರ, ನೆಲಮಂಗಲ, ರಾಮನಗರ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಲಾಡು ಪ್ರಸಾದದಲ್ಲಿ ಕೀಟ: ಆರೋಪ ನಿರಾಕರಣೆ

ಶ್ರೀಶೈಲ (ಆಂಧ್ರಪ್ರದೇಶ) (ಪಿಟಿಐ): ದೇವಸ್ಥಾನದಲ್ಲಿ ವಿತರಿಸುವ ಲಾಡು ಪ್ರಸಾದದಲ್ಲಿ ಕೀಟ ಬಂದಿದೆ ಎಂಬ ಆರೋಪಗಳನ್ನು ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಶ್ರೀಶೈಲದ ಶ್ರೀ ಭ್ರಮರಾಂಬ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಮಂಡಳಿ ಮಂಗಳವಾರ ತಳ್ಳಿ ಹಾಕಿದೆ.

'ಜೂನ್ 29ರಂದು ದೇವಸ್ಥಾನದ ಕೌಂಟರ್‌ವೊಂದರಲ್ಲಿ ಪಡೆದಿದ್ದ ಲಾಡು ಪ್ರಸಾದದಲ್ಲಿ ಕೀಟ ಕಂಡುಬಂದಿತ್ತು' ಎಂದು ಕೆಲ ಭಕ್ತರು ಆರೋಪಿಸಿದ್ದರು. ಈ ಸುದ್ದಿ ಹಬ್ಬಿದ ನಂತರ ಭಕ್ತರು ಆತಂಕ ವ್ಯಕ್ತಪಡಿಸಿದ್ದರಿಂದ ದೇವಸ್ಥಾನದಿಂದ ಈ ಪ್ರತಿಕ್ರಿಯೆ ಹೊರಬಿದ್ದಿದೆ.

'ಲಾಡು ಪ್ರಸಾದದಲ್ಲಿ ಇದ್ದದ್ದು ಮಿಡತೆಯೇ ಹೊರತು ಜಿರಲೆ ಅಲ್ಲ ಎಂಬುದು ಪರೀಕ್ಷೆಯಿಂದ ತಿಳಿದುಬಂದಿದೆ. ಅದಾಗಲೇ ಚೂರಾಗಿದ್ದ ಲಾಡುವಿನಲ್ಲಿ ಮಿಡತೆಯನ್ನು ಉದ್ದೇಶಪೂರ್ವಕವಾಗಿ ಸೇರಿಸಿರುವಂತಿದೆ' ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎಂ.ಶ್ರೀನಿವಾಸರಾವ್ ಹೇಳಿದ್ದಾರೆ.

ಎತ್ತಿನಭುಜ ಚಾರಣ ತಾತ್ಕಾಲಿಕ ನಿರ್ಬಂಧ

ಮೂಡಿಗೆರೆ: ತಾಲ್ಲೂಕಿನ ಪ್ರವಾಸಿ ತಾಣವಾದ ಎತ್ತಿನಭುಜ ಚಾರಣವನ್ನು ಜುಲೈ 31ರವರೆಗೆ ನಿರ್ಬಂಧಿಸಿ ಆದೇಶ ಹೊರಡಿಸಲಾಗಿದೆ.

ಮಳೆಯಾಗುತ್ತಿರುವುದರಿಂದ ಹಾಗೂ ದಟ್ಟವಾಗಿ ಮಂಜು ಕವಿಯುತ್ತಿರುವುದರಿಂದ ಪ್ರವಾಸಿಗರು ಅಪಾಯಕ್ಕೆ ಒಳಗಾಗುವ ಸಾಧ್ಯತೆಗಳು ಇರುತ್ತವೆ. ಎಂದು ಅರಣ್ಯ ಇಲಾಖೆ ತಿಳಿಸಿದೆ.

ವೈದ್ಯರ ದಿನ ಕಾರ್ಯಕ್ರಮದಲ್ಲಿ ಸಚಿವ ದಿನೇಶ್ ಗುಂಡೂರಾವ್ ಭರವಸೆ

'ಪರವಾನಗಿ ವಿಳಂಬ: ಹೊಸ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ವೈದ್ಯಕೀಯ ಸಂಸ್ಥೆಗಳ ಆರಂಭಕ್ಕೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯಡಿ (ಕೆಪಿಎಂಇ) ಪರವಾನಗಿ ವಿಳಂಬ ತಪ್ಪಿಸಲು ಹೊಸ ವ್ಯವಸ್ಥೆ ಜಾರಿ ಮಾಡಲಾಗುತ್ತಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವೈದ್ಯರ ದಿನ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

'ಸದ್ಯ ಜಾರಿಯಲ್ಲಿರುವ ವ್ಯವಸ್ಥೆಯಡಿ ಕೆಪಿಎಂಇ ನೋಂದಣಿ ಆಗದೆ ಹೊಸ ವೈದ್ಯಕೀಯ ಸಂಸ್ಥೆ, ನರ್ಸಿಂಗ್ ಹೋಂ, ಆಸ್ಪತ್ರೆ ಪ್ರಾರಂಭಿಸಲು ಸಾಧ್ಯವಿಲ್ಲ. ಕೆಪಿಎಂಇ ಅಡಿ ಪರಿಶೀಲನೆ ನಡೆಸಿ, ಪರವಾನಗಿ ಒದಗಿಸುವುದು ವಿಳಂಬವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರವಾಗಿ, ಇಲಾಖೆಯಿಂದ ಮೊದಲೇ ನೋಂದಣಿ ನೀಡಲಾಗುವುದು. ಬಳಿಕ ಆರು ತಿಂಗಳಿಂದ ಒಂದು ವರ್ಷದವರೆಗೆ ಪರವಾನಗಿ ಪಡೆಯಲು ಅವಕಾಶ ನೀಡಲಾಗುವುದು. ಈ ಪ್ರಕ್ರಿಯೆ ನಡುವೆ ಸಂಸ್ಥೆ ಆರಂಭಿಸಬಹುದು. ಬಳಿಕ ಶಾಶ್ವತ ನೋಂದಣಿ ಮಾಡಿಕೊಡುತ್ತೇವೆ. ಈ ಬಗ್ಗೆ ಕ್ರಮವಹಿಸಲಾಗಿದೆ' ಎಂದರು.

'ಆಸ್ಪತ್ರೆಗಳಲ್ಲಿ ಅಗ್ನಿ ಸುರಕ್ಷತಾ ವಿಚಾರದಲ್ಲಿರುವ ಕಠಿಣ ನಿಯಮಾವಳಿಯನ್ನು ಸರಳೀಕರಿಸಲು ಸರ್ಕಾರ ಕ್ರಮ ವಹಿಸಲಿದೆ. ವೈದ್ಯಕೀಯ ದೌರ್ಜನ್ಯ ತಡೆಗೆ, ಸಾಮಾಜಿಕ ಜಾಲತಾಣದ ಮೂಲಕ ವೈದ್ಯರ ನಿಂದನೆ ತಡೆಗೆ ಈಗಾಗಲೇ ಜೈಲು ಶಿಕ್ಷೆ, ದಂಡ ಹೆಚ್ಚಿಸಲಾಗಿದೆ' ಎಂದು ಹೇಳಿದರು.

ರಾಜ್ಯ ಕಾನೂನು ಆಯೋಗ ಅಧ್ಯಕ್ಷ ನ್ಯಾ. ಅಶೋಕ್ ಬಿ. ಹಿಂಚಿಗೇರಿ, 'ವೈದ್ಯಕೀಯ ವೃತ್ತಿಯು ವೈಯಕ್ತಿಕ ಬದುಕನ್ನು ಸಾಕಷ್ಟು ತ್ಯಾಗ ಮಾಡಿಸುವ ವೃತ್ತಿಯಾಗಿದೆ. ದೈಹಿಕ, ಮಾನಸಿಕ ಒತ್ತಡಗಳಿಂದ ವೈದ್ಯರ ಆಯಸ್ಸು ಕಡಿಮೆ ಆಗುತ್ತಿದೆ. ಭಾರತೀಯ ವೈದ್ಯಕೀಯ ಸಂಸ್ಥೆಯ ಸಮೀಕ್ಷೆ ಪ್ರಕಾರ ಶೇ 75 ರಷ್ಟು ವೈದ್ಯರು ತಮ್ಮ ವೃತ್ತಿ ಜೀವನದಲ್ಲಿ ದೌರ್ಜನ್ಯಕ್ಕೆ ಒಳಗಾಗಿರುತ್ತಾರೆ. ಇದನ್ನು ಸರ್ಕಾರ ತಡೆಯಬೇಕು' ಎಂದು ಹೇಳಿದರು.

ಐಎಂಎ ರಾಜ್ಯ ಶಾಖೆ ಅಧ್ಯಕ್ಷ ಡಾ.ವಿ.ವಿ.ಚಿನಿವಾಲರ, 'ರಾಜ್ಯದಲ್ಲಿ ವೈದ್ಯರ ಮೇಲಿನ ದೌರ್ಜನ್ಯಗಳು ಕಡಿಮೆ ಆಗಿಲ್ಲ. ನಕಲಿ ವೈದ್ಯರ ಹಾವಳಿಯೂ ಹೆಚ್ಚಾಗಿದೆ. ಇವುಗಳ ನಿಯಂತ್ರಣಕ್ಕೆ ಸರ್ಕಾರ ಮುಂದಾಗಬೇಕು. ಸರ್ಕಾರ ಸಣ್ಣ, ಮಧ್ಯಮ ಚಿಕಿತ್ಸಾಲಯಗಳಿಗೆ ಪ್ರತ್ಯೇಕವಾದ ನಿಯಮಾವಳಿ ರೂಪಿಸಬೇಕು' ಎಂದು ಆಗ್ರಹಿಸಿದರು.

ಸಮಾರಂಭದಲ್ಲಿ 14 ವೈದ್ಯರಿಗೆ 'ವೈದ್ಯರ ದಿನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಐಎಂಎ ಕರ್ನಾಟಕ ಶಾಖೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

14 ವೈದ್ಯರಿಗೆ ಪ್ರಶಸ್ತಿ

ಸಮಾರಂಭದಲ್ಲಿ ಡಾ. ಅನುಪಮಾ ಎಚ್.ಎಸ್. (ಹೊನ್ನಾವರ), ಡಾ. ಬಸವರಾಜ್ ವಿ. ಕಂಬಲ್ಯಾಳ್ (ರೋಣ), ಡಾ. ಚನ್ನಬಸಪ್ಪ ಬವಲಿಂಗಪ್ಪ ನಾವಡಗಿ (ಸವದತ್ತಿ), ಡಾ. ಗೋಪಾಲಕೃಷ್ಣ ಗುಪ್ತ (ಮಂಡ್ಯ), ಡಾ.ಎಚ್. ಆರ್. ಮಹೇಶ್ವರಪ್ಪ (ಬೆಂಗಳೂರು), ಡಾ.ಕೆ.ಎಂ. ನಾಯಕ್ (ರಾಯಚೂರು), ಡಾ.ಕೆ. ರಾಮಚಂದ್ರ ಕಾಮತ್ (ಮಂಗಳೂರು), ಡಾ.ಎಚ್. ನಾಗರಾಜ್ (ಶಿವಮೊಗ್ಗ), ಡಾ.ಎಚ್.ಎಲ್. ಪ್ರೇಮಲತಾ (ಹಾಸನ), ಡಾ. ರಾಜೇಂದ್ರ ಕುಮಾರ್ (ಕೆಜಿಎಫ್), ಡಾ.ಜೆ. ಶರಣಪ್ಪ (ಬೆಂಗಳೂರು), ಡಾ. ವನಮಾಲಾ ವಿ. ಹೆಸರೂರು (ಲಿಂಗಸುಗೂರು), ಡಾ. ವೀಣಾ ಭಟ್ (ಭದ್ರಾವತಿ) ಹಾಗೂ ಡಾ.ವೈ. ಪರ್ವತ ರೆಡ್ಡಿ (ಬಳ್ಳಾರಿ) ಅವರಿಗೆ ಐಎಂಎ ಕರ್ನಾಟಕ ಶಾಖೆ ವತಿಯಿಂದ 'ವೈದ್ಯರ ದಿನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಿನಬಳಕೆ ವಸ್ತುಗಳಿಗೆ 'ಝಡ್ ಪ್ಲಸ್'

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿ ವಿರುದ್ಧ ಕಾಂಗ್ರೆಸ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದ ಬೆಲೆ ಏರಿಕೆ ನೀತಿಯಿಂದಾಗಿ ಅಡುಗೆ ಅನಿಲ ಸಿಲಿಂಡರ್ ಸೇರಿದಂತೆ ದಿನಬಳಕೆ ವಸ್ತುಗಳಿಗೆ ಕೆಲವೇ ದಿನಗಳಲ್ಲಿ 'ಝಡ್ ಪ್ಲಸ್' ಭದ್ರತೆ ನೀಡಬೇಕಾದ ಪರಿಸ್ಥಿತಿ ಎದುರಾಗಲಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಹೆದ್ದಾರಿಗಳ ಟೋಲ್ ಶುಲ್ಕದಿಂದ ರೈಲು ಪ್ರಯಾಣ ದರದವರೆಗೆ, ಅಡುಗೆ ಅನಿಲ ಸಿಲಿಂಡರ್‌ನಿಂದ ದಿನಬಳಕೆ ವಸ್ತುಗಳವರೆಗೆ ಬೆಲೆ ಏರಿಕೆ ಮಾಡಿ ಜನಸಾಮಾನ್ಯನ ಪರಿಸ್ಥಿತಿಯನ್ನು ಮೋದಿ ಸರ್ಕಾರ ಜರ್ಜರಿತಗೊಳಿಸಿದೆ. ಇದು ಒಂದು ರೀತಿಯ ಕ್ರೂರ ನೀತಿ' ಎಂದರು.

'ರೈಲ್ವೆ ಹಳಿಗಳು, ಹೆದ್ದಾರಿಗಳ ಮೂಲಕ ಮೋದಿ ಸರ್ಕಾರ ದರೋಡೆ ನಡೆಸುತ್ತಿದೆ. ಜನರನ್ನು ಪಿಕ್ ಪಾಕೆಟ್ ಮಾಡುವ ಷಡ್ಯಂತ್ರವಿದು. ಈ ಕಾರಣಕ್ಕೆ ಬಿಜೆಪಿಯನ್ನು 'ಭಾರತೀಯರ ಜೇಬು ಕತ್ತರಿಸುವ ಪಕ್ಷ' ಎಂದು ವ್ಯಾಖ್ಯಾನಿಸಬಹುದು' ಎಂದ ಅವರು, 'ರೈಲು ಟಿಕೆಟ್ ಏರಿಕೆಯನ್ನು ತಕ್ಷಣ ವಾಪಸ್ ಪಡೆಯಬೇಕು' ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

> ಗ್ಯಾರಂಟಿ ಯೋಜನೆಗಳನ್ನೂ ಬಿಜೆಪಿ ವಿರೋಧಿಸುತ್ತಲೇ ಬಂದಿದೆ. ಯಾವುದೇ ರೀತಿಯ ಕೊಡುಗೆಗಳನ್ನು ಜನರಿಗೆ ನೀಡುವುದನ್ನು ಬಿಜೆಪಿ ಒಪ್ಪುವುದಿಲ್ಲ
> **ರಣದೀಪ್ ಸಿಂಗ್ ಸುರ್ಜೇವಾಲಾ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

'ಕೇಂದ್ರ ಸರ್ಕಾರ ಏಪ್ರಿಲ್ 1ರಿಂದ ಟೋಲ್ ಶುಲ್ಕ ಹೆಚ್ಚಿಸಿತ್ತು. ಜುಲೈ 1ರಿಂದ ರೈಲು ಟಿಕೆಟ್ ದರಗಳನ್ನು ಹೆಚ್ಚಿಸಿ ಸುಮಾರು ₹700 ಕೋಟಿಯಷ್ಟು ಹೊರೆಯನ್ನು ಜನರ ಮೇಲೆ ಹಾಕಲಾಗುತ್ತಿದೆ. ಈಗ ಬೆಂಗಳೂರು ಎಲಿವೇಟೆಡ್ ಕಾರಿಡಾರ್ ಟೋಲ್ ಶುಲ್ಕವನ್ನು ಹೆಚ್ಚಿಸಿ ಬರೆ ಹಾಕಿದೆ. ಬುಲೆಟ್ ಟ್ರೈನ್ ನೀಡುತ್ತೇವೆ ಎಂದಿದ್ದ ಮೋದಿ, ರೈಲುಗಳನ್ನೇ ಮಾಯ ಮಾಡಿದ್ದಾರೆ. ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ' ಎಂದರು.

'2024ರ ಏಪ್ರಿಲ್ 1ರಿಂದ 2025ರ ಮಾರ್ಚ್31ರವರೆಗೆ ರೈಲಿನಲ್ಲಿ ಪ್ರಯಾಣಿಸಿದವರ ಅಂಕಿಅಂಶಗಳನ್ನು ತೆಗೆದುಕೊಂಡರೆ, ಈ ಒಂದು ವರ್ಷದಲ್ಲಿ 715 ಕೋಟಿ ಪ್ರಯಾಣ ದಾಖಲಾಗಿದೆ. 2023-24ರಲ್ಲಿ ನೈರುತ್ಯ ರೈಲ್ವೆಯಲ್ಲಿ 2.48 ಕೋಟಿ ಜನರು ಪ್ರಯಾಣಿಸಿದ್ದಾರೆ. 2023-24ರ ಸಾಲಿನಲ್ಲಿ ₹2.56 ಲಕ್ಷ ಕೋಟಿ ವಹಿವಾಟು ನಡೆಸಿದ್ದು ₹3 ಸಾವಿರ ಕೋಟಿ ನಿವ್ವಳ ಲಾಭ ಮಾಡಿದೆ. ರೈಲು ಅಪಘಾತದಿಂದ ದೇಶದಲ್ಲಿ 2.60 ಲಕ್ಷ ಜನರು ಸಾವಿಗೀಡಾಗಿದ್ದಾರೆ. ಹಿರಿಯ ನಾಗರಿಕರಿಗಿದ್ದ ರೈಲು ಟಿಕೆಟ್ ರಿಯಾಯಿತಿಯನ್ನು ಕಿತ್ತುಕೊಳ್ಳಲಾಗಿದೆ. ಬ್ಲಾಂಕೆಟ್ ನೀಡುವುದಕ್ಕೆ ಹೆಚ್ಚುವರಿ ಹಣ ನೀಡಬೇಕಾಗಿದೆ' ಎಂದರು.

'ಕರ್ನಾಟಕದ ಜನರಿಂದ ಕಳೆದ ಐದು ವರ್ಷಗಳಲ್ಲಿ ಟೋಲ್ ಮೂಲಕ ₹10 ಸಾವಿರ ಕೋಟಿಯನ್ನು ಕೇಂದ್ರ ಸಂಗ್ರಹಿಸಿದೆ. 2024ರಲ್ಲಿ ₹4.86 ಸಾವಿರ ಕೋಟಿ ಟೋಲ್ ಅನ್ನು ಕರ್ನಾಟಕದ ಜನ ತೆತ್ತಿದ್ದಾರೆ. ಹೊಸೂರು ಟೋಲ್ ಪ್ಲಾಜಾದಲ್ಲಿ ಮತ್ತೆ ಕೇಂದ್ರ ಸರ್ಕಾರ ಟೋಲ್ ಬೆಲೆ ಹೆಚ್ಚಳ ಮಾಡಿದೆ' ಎಂದರು.

700 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಬೆಂಗಳೂರು: ಶ್ರೀಮತಿ ರಂಗಮ್ಮ ಮತ್ತು ಮುನಿರಂಗಪ್ಪ (ಆರ್.ಎಂ.ಆರ್) ಹಳ್ಳಿಕಾರ್ ಫೌಂಡೇಷನ್‌ನಿಂದ ಹಳ್ಳಿಕಾರ್ ಜನಾಂಗದ 700ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿವೇತನ ನೀಡಲಾಗುವುದು ಎಂದು ಆರ್.ಎಂ.ಆರ್ ಹಳ್ಳಿಕಾರ್ ಟ್ರಸ್ಟ್‌ನ ಅಧ್ಯಕ್ಷ ಕೆ.ಎಂ. ನಾಗರಾಜ್ ತಿಳಿಸಿದ್ದಾರೆ.

ಜುಲೈ 20ರಂದು ಬೆಂಗಳೂರಿನ ಜಯನಗರದ ಪೂರ್ಣಿಮಾ ಪ್ಯಾಲೆಸ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬೆಂಗಳೂರು, ರಾಮನಗರ, ಕೋಲಾರ ಜಿಲ್ಲೆಯ ವಿದ್ಯಾರ್ಥಿಗಳಿಗೆ, ಜುಲೈ 26ರಂದು ತುಮಕೂರಿನ ಶ್ರೀಕೃಷ್ಣ ಪ್ಯಾಲೆಸ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ತುಮಕೂರು, ಚಿತ್ರದುರ್ಗ ಜಿಲ್ಲೆಯ ವಿದ್ಯಾರ್ಥಿಗಳಿಗೆ ಹಾಗೂ ಜುಲೈ 27ರಂದು ಹಾಸನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಪದವಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ್ಯಾಯಯುತವಲ್ಲದ ವೈದ್ಯಕೀಯ ಪ್ರಯೋಗ: ತನಿಖೆಗೆ ಮನವಿ

ಬೆಂಗಳೂರು: ಇಲ್ಲಿನ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್‌ನಲ್ಲಿ (ಎಚ್‌ಸಿಜಿ) ನ್ಯಾಯಯುತವಲ್ಲದ ವೈದ್ಯಕೀಯ ಪ್ರಯೋಗ ನಡೆಯುತ್ತಿರುವ ಬಗ್ಗೆ ಆರೋಪಗಳು ಕೇಳಿ ಬಂದಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಆರೋಗ್ಯ ಇಲಾಖೆ ಆಯುಕ್ತರು ಭಾರತೀಯ ಪ್ರಧಾನ ಔಷಧ ನಿಯಂತ್ರಕರಿಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. ಎಚ್‌ಸಿಜಿಯ ಸಾಂಸ್ಥಿಕ ನೀತಿ ಸಮಿತಿಯ ಮಾಜಿ ಮುಖ್ಯಸ್ಥರಾಗಿದ್ದ ನಿವೃತ್ತ ನ್ಯಾಯಮೂರ್ತಿ ಪಿ.ಕೃಷ್ಣ ಭಟ್ ಅವರು, ಎಚ್‌ಸಿಜಿ ಸಂಸ್ಥೆಯಲ್ಲಿ ನಡೆಯುತ್ತಿರುವ ವೈದ್ಯಕೀಯ ಪ್ರಯೋಗಕ್ಕೆ ಸಂಬಂಧಿಸಿದಂತೆ ಆರೋಪಿಸಿದ್ದಾರೆ.

ಎಚ್‌ಸಿಜಿಯಲ್ಲಿ ರೋಗಿಗಳ ಸುರಕ್ಷತೆ, ದಾಖಲಾತಿ, ವೈದ್ಯಕೀಯ ಪ್ರಯೋಗ ಸೇರಿ ವಿವಿಧ ವ್ಯವಸ್ಥೆಯ ಬಗ್ಗೆ ಕಳವಳ ವ್ಯಕ್ತವಾಗಿದೆ. ಅಲ್ಲಿನ ಸಾಂಸ್ಥಿಕ ನೀತಿ ಸಮಿತಿ ಅಧ್ಯಕ್ಷರಾಗಿದ್ದವರೇ ಈ ಬಗ್ಗೆ ಆರೋಪಿಸಿ, ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಈ ವಿಷಯವು ಗಂಭೀರ ಹಾಗೂ ಕಳವಳಕಾರಿಯಾಗಿದೆ. ಆಸ್ಪತ್ರೆಯಲ್ಲಿ ನಡೆಸಲಾಗುತ್ತಿರುವ ನ್ಯಾಯಯುತವಲ್ಲದ, ವೈದ್ಯಕೀಯ ಪ್ರಯೋಗಗಳ ಆರೋಪಗಳ ಬಗ್ಗೆ ತನಿಖೆಗೆ ಆದೇಶಿಸಬೇಕು ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಅಗ್ನಿಸುರಕ್ಷತಾ ಕ್ರಮಗಳನ್ನು ಪಾಲಿಸದ ಕೆಎಸ್‌ಸಿಎ

ಕ್ರೀಡಾಂಗಣಕ್ಕೆ ವಿದ್ಯುತ್ ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ನಿಸುರಕ್ಷತಾ ಕ್ರಮಗಳನ್ನು ಪಾಲಿಸಲು ವಿಫಲವಾದ ಕಾರಣ, ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ನೀಡಿದ್ದ ವಿದ್ಯುತ್ ಸಂಪರ್ಕವನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಕಡಿತಗೊಳಿಸಿದೆ.

ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಮಹಾನಿರ್ದೇಶಕರು ಕಳೆದ ತಿಂಗಳು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದ್ದರು. ಅದನ್ನು ಆಧರಿಸಿ ಈ ಕ್ರಮಕೈಗೊಳ್ಳಲಾಗಿದೆ.

ಮಹಾನಿರ್ದೇಶಕರ ಸೂಚನೆ ಮೇರೆಗೆ ಬೆಸ್ಕಾಂ, ಜೂನ್ 12ರಂದು ಚಿನ್ನಸ್ವಾಮಿ ಕ್ರೀಡಾಂಗಣ ನಿರ್ವಹಿಸುವ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ (ಕೆಎಸ್‌ಸಿಎ) ನೋಟಿಸ್ ಜಾರಿಗೊಳಿಸಿ, ಮೂರು ದಿನಗಳ ಕಾಲಾವಕಾಶವನ್ನೂ ನೀಡಿತ್ತು. ನಂತರ, ಬೆಸ್ಕಾಂ ಜೂನ್ 15ರಂದು ವಿದ್ಯುತ್ ಕಡಿತಗೊಳಿಸಿತ್ತು. ಈ ನಡುವೆ ಕೆಎಸ್‌ಸಿಎ 15 ದಿನ ಕಾಲಾವಕಾಶ ನೀಡುವಂತೆ ಬೆಸ್ಕಾಂಗೆ ಮನವಿ ಮಾಡಿತ್ತು ಎಂದು ಮೂಲಗಳು ತಿಳಿಸಿವೆ.

ಇದನ್ನು ಪರಿಗಣಿಸಿದ ಬೆಸ್ಕಾಂ, ಜೂನ್ 20ರಂದು ಪುನಃ ಕೆಎಸ್‌ಸಿಎಗೆ ನೋಟಿಸ್ ಜಾರಿಗೊಳಿಸಿ, ಏಳು ದಿನಗಳ ಕಾಲಾವಕಾಶ ನೀಡಿತ್ತು. ಆ ಗಡುವು ಜೂನ್ 27ಕ್ಕೆ ಮುಗಿದಿತ್ತು. ಕೆಎಸ್‌ಸಿಎ ಕಡೆಯಿಂದ ಕ್ರಮ ಕೈಗೊಂಡಿರುವ ಬಗ್ಗೆ ಪ್ರತಿಕ್ರಿಯೆ ಬಾರದ ಕಾರಣ, ಜೂನ್ 30ರಂದು ಕ್ರೀಡಾಂಗಣದ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಾಗಿ ಬೆಸ್ಕಾಂ ಮೂಲಗಳು ತಿಳಿಸಿವೆ.

ಈ ಮಧ್ಯೆ ಬೆಸ್ಕಾಂ ನೀಡಿರುವ ನೋಟಿಸ್ ಪ್ರಶ್ನಿಸಿ ಕೆಎಸ್‌ಸಿಎ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು. ಸೋಮವಾರ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಪೀಠ, 'ಅಗ್ನಿ ಸುರಕ್ಷತೆಯ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಂಡಿಲ್ಲ ಎಂದು ಗೊತ್ತಿದ್ದರೂ ವಿದ್ಯುತ್ ಸಂಪರ್ಕ ಕೊಟ್ಟಿದ್ದು ಹೇಗೆ? ಸರ್ಕಾರವನ್ನು ಕೇಳದೇ ನಿಮ್ಮಷ್ಟಕ್ಕೆ ನೀವೇ ವಿದ್ಯುತ್ ಸಂಪರ್ಕ ಕೊಟ್ಟುಬಿಟ್ಟರೆ ನ್ಯಾಯಾಲಯ ಸುಮ್ಮನಿರುವುದಿಲ್ಲ' ಎಂದು ಬೆಸ್ಕಾಂ ಅನ್ನು ತರಾಟೆಗೆ ತೆಗೆದುಕೊಂಡಿತು.'ಈ ತಪ್ಪಿಗೆ ಬೆಸ್ಕಾಂ ಅನ್ನೇ ಸಂಪೂರ್ಣವಾಗಿ ಹೊಣೆ ಮಾಡಲಾಗುವುದು' ಎಂದು ಕಟುವಾಗಿ ಎಚ್ಚರಿಸಿತು.

ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮಹಾ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆಯನ್ನು ಜುಲೈ 15ಕ್ಕೆ ಮುಂದೂಡಿದೆ.

ಮುಖ್ಯಾಂಶಗಳು

- ಕಾಲಾವಕಾಶದ ನಂತರ ವಿದ್ಯುತ್ ಕಡಿತ
- ನ್ಯಾಯಾಲಯದ ಮೊರೆ ಹೋದ ಬೆಸ್ಕಾಂ
- ಜುಲೈ 15ಕ್ಕೆ ವಿಚಾರಣೆ ಮುಂದೂಡಿಕೆ

ಎಂ ಚಿನ್ನಸ್ವಾಮಿ ಕ್ರೀಡಾಂಗಣದ ನೋಟ

‘ಹೊಲದ ಒಡೆಯರನ್ನು ಕೂಲಿಯಾಳಾಗಿಸಬೇಡಿ’

ದೇವನಹಳ್ಳಿ: ಚನ್ನರಾಯಪಟ್ಟಣ ಭೂಸ್ವಾಧೀನಕ್ಕೆ ರೈತರ ವಿರೋಧ ಭೂಮಿ ಕಸಿದುಕೊಂಡರೆ ಹೋಗುವುದಾದರೂ ಎಲ್ಲಿಗೆ?

• ಜಯಸಿಂಹ ಆರ್.

‘ಮುಂದಿನ ತಲೆಮಾರಿಗೆ ಉಳಿಯುವುದೇ ಭೂಮಿ?’: ಪೋಲನಹಳ್ಳಿಯ ತಮ್ಮ ತೋಟದಲ್ಲಿ ಮಗನೊಂದಿಗೆ ಹೂಬಿಡಿಸುತ್ತಿರುವ ಶ್ರುತಿ ಅವರ ಪ್ರಶ್ನೆಯಿದು —ಪ್ರಜಾವಾಣಿ ಚಿತ್ರ: ರಂಜು ಪಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ನಮ್ಮ ಹೊಲಗಳಿಗೆ ನಾವೇ ಒಡೆಯರು. ಅಲ್ಲಿ ದಿನವೂ ದುಡಿದು ಹೊಟ್ಟೆ ತುಂಬ ತಿನ್ನುತ್ತಿದ್ದೇವೆ. ನೆಮ್ಮದಿಯಿಂದ ಇದ್ದೇವೆ. ನಮ್ಮ ಭೂಮಿಯನ್ನು ಕಿತ್ತುಕೊಂಡು, ಬೇರೆಯವರ ಬಳಿ ಕೂಲಿಗೆ ಹೋಗುವಂತೆ ಮಾಡಬೇಡಿ...’

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ಪೋಲನಹಳ್ಳಿಯ ಯುವರೈತ ಪ್ರಮೋದ್ ಅವರ ಮಾತಿದು.

ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಂತೆಯೇ ವೈಮಾನಿಕ ಮತ್ತು ರಕ್ಷಣಾ ಪಾರ್ಕ್ ನಿರ್ಮಾಣಕ್ಕಾಗಿ, ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ಒಟ್ಟು 1,777 ಎಕರೆ ಭೂಸ್ವಾಧೀನಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಮುಂದಾಗಿದೆ.

ಇದರಲ್ಲಿ 1,289 ಎಕರೆ ಭೂಸ್ವಾಧೀನಕ್ಕೆ ಮಂಡಳಿಯು ಈಚೆಗೆ ಅಂತಿಮ ಅಧಿಸೂಚನೆ ಹೊರಡಿಸಿದೆ. 2022ರಲ್ಲಿ ರಾಜ್ಯ ಸರ್ಕಾರವು ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗಿನಿಂದಲೂ ಭೂಸ್ವಾಧೀನವನ್ನು ವಿರೋಧಿಸಿ ಇಲ್ಲಿನ ರೈತರು ನಡೆಸುತ್ತಿರುವ ಧರಣಿ, ಮಂಗಳವಾರ 1,184ನೇ ದಿನ ಪೂರೈಸಿದೆ. ಈ ಹೋರಾಟದಲ್ಲಿ ನಿರತರಾದ ರೈತರನ್ನು ಎದುರುಗೊಂಡಾಗ, ಅವರ ಮಾತು ಪ್ರಮೋದ್ ಅವರ ಮನದಾಳಕ್ಕಿಂತ ಭಿನ್ನವಾಗೇನೂ ಇರಲಿಲ್ಲ.

‘ನಮ್ಮದು ಫಲವತ್ತಾದ ಭೂಮಿ. ವಿಧವಿಧದ ತರಕಾರಿಗಳು, ಹೂವು, ದಾಳಿಂಬೆ– ದ್ರಾಕ್ಷಿ, ಸೊಪ್ಪು ಬೆಳೆಯುತ್ತೇವೆ. ಅವುಗಳ ಪೈಕಿ ಬಹುತೇಕ ರಫ್ತಾಗುತ್ತದೆ. ನಮ್ಮ ಬದುಕಿಗೆ ಚಿನ್ನ ನೀಡುತ್ತಿರುವ ಈ ಭೂಮಿಯನ್ನು ಕಸಿದುಕೊಂಡರೆ, ನಾವು ಹೋಗುವುದಾದರೂ ಎಲ್ಲಿಗೆ’ ಎಂಬುದು ಪೋಲನಹಳ್ಳಿಯ ವೀರಣ್ಣ ಅವರ ಪ್ರಶ್ನೆ.

ಹೋರಾಟದ ಮುಂಚೂಣಿಯಲ್ಲಿ ಗುರುತಿಸಿಕೊಂಡಿರುವ ಚೀಮಾಚನಹಳ್ಳಿಯ ರೈತ ಮುಖಂಡ ರಮೇಶ್, ‘ವೈಮಾನಿಕ ಪಾರ್ಕ್‌ಗೆ ಮೊದಲ ಹಂತದಲ್ಲಿ 1,282 ಎಕರೆ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಆಗ ಭೂಮಿ ಕಳೆದುಕೊಂಡವರಲ್ಲಿ ಹಲವರಿಗೆ ಇನ್ನೂ ಪರಿಹಾರ ದೊರೆತಿಲ್ಲ. ಇದನ್ನೆಲ್ಲಾ ರೈತರು ನೋಡಿದ್ದಾರೆ. ಭೂಸ್ವಾಧೀನವನ್ನು ವಿರೋಧಿಸಲು ಇದೂ ಒಂದು ಕಾರಣ’ ಎಂದರು.

ಪೋಲನಹಳ್ಳಿಯ ಕೃಷಿ ಕಾರ್ಮಿಕ ಜಗದೀಶ, ‘ನಮ್ಮದೂ ನಾಲ್ಕು ಎಕರೆ ಜಮೀನು ಇತ್ತು. ಅಣ್ಣತಮ್ಮಂದಿರು ಸೇರಿ 25 ಜನರ ಕುಟುಂಬ ಅದನ್ನೇ ನಂಬಿಕೊಂಡು ಬದುಕುತ್ತಿದ್ದೆವು. 10–12 ಜನಕ್ಕೆ ಕೆಲಸವನ್ನೂ ಕೊಟ್ಟಿದ್ದೆವು. 2018ರಲ್ಲಿ ನಮ್ಮ 2 ಎಕರೆ ಹೋಯಿತು’ ಎಂದು ಮಾತಿಗಿಳಿದರು.

ಜಗದೀಶ

‘ಚಾಣಕ್ಯ ವಿಶ್ವವಿದ್ಯಾಲಯದ ಜಾಗದಲ್ಲೇ ನಮ್ಮ ಜಮೀನಿತ್ತು, ಅಲ್ಲಿ ಕೊಳವೆ ಬಾವಿಯೂ ಇತ್ತು. ಆ ಭೂಮಿಯೂ ಹೋಯಿತು. ಉಳಿದ ಜಮೀನಿನಲ್ಲಿ ನೀರಿಲ್ಲ. 25 ಜನರ ಕುಟುಂಬ ಸಲಹಲೂ ಆಗುವುದಿಲ್ಲ. ಚಾಣಕ್ಯ ವಿಶ್ವವಿದ್ಯಾಲಯದಲ್ಲಿ ಕೆಲಸ ಕೇಳಲು ಹೋದರೆ, ‘ಶೌಚಾಲಯ ತೊಳೆಯಿರಿ. ಓದಿದ್ದವರಿಗಷ್ಟೇ ಬೇರೆ ಕೆಲಸ’ ಎನ್ನುತ್ತಾರೆ. ದ್ರಾಕ್ಷಿ ಬಳ್ಳಿ ಕಟ್ಟುವುದು, ತೋಟ ನಿರ್ವಹಿಸುವುದರಲ್ಲೇ ನಮ್ಮವರ ಕೈಪಳಗಿತ್ತು. ಮೊದಲು ನಮ್ಮ ತೋಟದಲ್ಲಿ ಬಳ್ಳಿ ಕಟ್ಟುತ್ತಿದ್ದವನು, ಈಗ ಬೇರೆಯವರ ತೋಟದಲ್ಲಿ ಕೂಲಿ ಹಣ ಪಡೆದು ಬಳ್ಳಿ ಹಬ್ಬಿಸುತ್ತಿದ್ದೇನೆ. ಈಗ ಉಳಿದಿರುವ ಭೂಮಿಗೂ ಸರ್ಕಾರ ಕಣ್ಣುಹಾಕಿದೆ. ಜೀವಬಿಟ್ಟರೂ, ಭೂಮಿ ಬಿಡುವುದಿಲ್ಲ’ ಎಂದು ನುಡಿದರು.

‘ಸ್ವಾಮಿ ನಮಗಿರೋದೇ 24 ಗುಂಟೆ ಭೂಮಿ. ಅದನ್ನೂ ಕಿತ್ತುಕೊಂಡುಬಿಟ್ಟರೆ, ನಮ್ಮನ್ನು ಮಣ್ಣುಮಾಡಲೂ ಜಾಗ ಇರೋದಿಲ್ಲ. ನಾವು ಧರಣಿ ನಡೆಸುತ್ತಿದ್ದಾಗ ಇದೇ ಸಿದ್ದರಾಮಯ್ಯ ಬಂದು, ನಿಮ್ಮ ಭೂಮಿ ಮುಟ್ಟುವುದಿಲ್ಲ ಎಂದಿದ್ದರು. ಈಗ ಅದೇ ಮನುಷ್ಯ ನಮ್ಮ ಭೂಮಿಗೆ ಕೈಹಾಕಿದ್ದಾರೆ. ಅವರು ನಮ್ಮ ಭೂಮಿ ಮುಟ್ಟಿದರೆ, ನಾವು ಅವರ ಸರ್ಕಾರ ಮುಟ್ಟುತ್ತೇವೆ’ ಎಂಬುದು ಮುಟ್ಟಬಾರ್ಲುವಿನ ಪಾರ್ವತಮ್ಮನವರ ಎಚ್ಚರಿಕೆ.

‘ಕೊಟ್ಟು, ಕಿತ್ತುಕೊಳ್ಳುವುದು ನ್ಯಾಯವೇ’

ಪಿಳ್ಳಪ್ಪ

‘ನಮಗೆ ಜಮೀನೇ ಇರಲಿಲ್ಲ. ಕೂಲಿ ಮಾಡಿಕೊಂಡು ಬದುಕುತ್ತಿದ್ದೆವು. ದೇವರಾಜು ಅರಸು ಕಾಲದಲ್ಲಿ ಕಾಂಗ್ರೆಸ್ ಸರ್ಕಾರ ಭೂಮಿ ಕೊಟ್ಟಿತು. ಅದೂ ನಮ್ಮ ಹೆಸರಿಗಾಗಿದ್ದು, 20 ವರ್ಷಗಳ ಹೋರಾಟದ ನಂತರ. ಕಾಂಗ್ರೆಸ್ ಸರ್ಕಾರವೇ ಕೊಟ್ಟಿದ್ದ ಜಮೀನನ್ನು ಈಗ ಕಾಂಗ್ರೆಸ್ ಸರ್ಕಾರವೇ ಕಿತ್ತುಕೊಳ್ಳುತ್ತಿದೆ. ಇದು ಯಾವ ನ್ಯಾಯ’ ಎಂಬುದು ಚನ್ನರಾಯಪಟ್ಟಣದ 75ರ ವಯಸ್ಸಿನ ಪಿಳ್ಳಪ್ಪ ಅವರ ಪ್ರಶ್ನೆ.

‘ಆ ಜಮೀನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ತಾಲ್ಲೂಕು ಕಚೇರಿ ಎದುರಿಗೆ ತಿಂಗಳುಗಟ್ಟಲೆ ಧರಣಿ ನಡೆಸಿದ್ದೆ. ದನ–ಕುರಿ ಮಾರಾಟ ಮಾಡಿ, ಹಣ ಹೊಂದಿಸಿ ಜಮೀನು ಮಾಡಿಸಿಕೊಂಡೆ. ಇದೇ ಊರಿನ ಉಳ್ಳವರ ಬೆದರಿಕೆಗೆ ಜಗ್ಗದೆ, ಇಲ್ಲಿಯೇ ತಳವೂರಿದೆ. ನನ್ನ ನೆಲದಲ್ಲೇ ಜೀವ ಬಿಡಬೇಕು ಎಂದು ಆಸೆಪಡುವ ಹೊತ್ತಿನಲ್ಲಿ, ಸರ್ಕಾರ ಅದಕ್ಕೂ ಕಲ್ಲು ಹಾಕುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ನಮ್ಮೂರಿನಲ್ಲೇ 30 ದಲಿತ ಕುಟುಂಬಗಳಿಗೆ ತಲಾ ಎರಡು ಎಕರೆ ಜಮೀನು ಮಂಜೂರಾಗಿತ್ತು. ಈಗ ಅಷ್ಟೂ ಜಮೀನನ್ನು ಕಸಿದುಕೊಳ್ಳಲಾಗುತ್ತಿದೆ. ಸುತ್ತ ಮುತ್ತ ಹಳ್ಳಿಗಳಲ್ಲಿ ಅಂತಹ 500 ಎಕರೆಯಷ್ಟು ಜಮೀನಿದೆ. ಆ ಎಲ್ಲರೂ ಮತ್ತೆ ಭೂರಹಿತರಾಗುವುದಕ್ಕೆ ನಾವು ಅವಕಾಶಕೊಡುವುದಿಲ್ಲ’ ಎಂಬುದು ಅದೇ ಊರಿನ ಸೌಮ್ಯ ಅವರ ದೃಢಮಾತು.

‘ಭೂಸ್ವಾಧೀನ ಕೈಬಿಡಲು ಸರ್ಕಾರಕ್ಕೆ ತಿಳಿಸಿ’

ದೇವನಹಳ್ಳಿಯಲ್ಲಿ ಕೃಷಿ ಭೂಮಿ ಸ್ವಾಧೀನಪಡಿಸಿಕೊಳ್ಳುವುದನ್ನು ಕೈಬಿಡುವಂತೆ ಸರ್ಕಾರದ ಮೇಲೆ ಒತ್ತಡ ತರುವಂತೆ ಇತಿಹಾಸಕಾರ ರಾಮಚಂದ್ರ ಗುಹಾ ಸೇರಿ, 30 ಮಂದಿ, ವಿಜ್ಞಾನಿಗಳು, ವಿವಿಧ ಕ್ಷೇತ್ರಗಳ ತಜ್ಞರು, ನೀತಿ ನಿರೂಪಕರು ಕೈಗಾರಿಕೆ ಹಾಗೂ ತಂತ್ರಜ್ಞಾನ ಕ್ಷೇತ್ರದ ಮುಖಂಡರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ನಗರಕ್ಕೆ ತರಕಾರಿ, ಹಾಲು, ಹಣ್ಣುಗಳನ್ನು ಪೂರೈಸುತ್ತಿರುವ ಕೃಷಿ ಭೂಮಿಯಲ್ಲಿ ಕೈಗಾರಿಕೆ ಸ್ಥಾಪಿಸುವ ಪ್ರಯತ್ನದ ವಿರುದ್ಧ ‘ಕೈಗಾರಿಕೆಗಾಗಿ ನಮ್ಮ ಭೂಮಿ ಕಸಿದುಕೊಳ್ಳಬೇಡಿ’ ಎಂದು ಆಗ್ರಹಿಸಿ ಅನ್ನದಾತರು ಮೂರು ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ.

‘ಕೆಐಎಡಿಬಿ ಈಗಾಗಲೇ ರೈತರಿಂದ ಸಾವಿರಾರು ಎಕರೆ ಭೂಮಿ ವಶಪಡಿಸಿಕೊಂಡಿದೆ. ಆದರೆ, ಅವರಿಗೆ ಸೂಕ್ತ ಪರಿಹಾರ ಸಿಕ್ಕಿಲ್ಲ. ಮಂಡಳಿಯ ಸಮೀಕ್ಷೆ ಪ್ರಕಾರ ಶೇಕಡ 80ಕ್ಕೂ ಅಧಿಕ ರೈತರು ಇಲ್ಲಿ ಭೂಮಿ ಕೊಡಲು ಒಪ್ಪಿಲ್ಲ. ಈ ರೈತರಲ್ಲಿ ಹಲವು ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ್ದಾರೆ. ಅವರಿಂದ ಭೂಮಿ ಪಡೆಯುವುದು ಭೂ ಕಾಯ್ದೆಯ ಉಲ್ಲಂಘನೆಯಾಗುತ್ತದೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

‘ತಜ್ಞರ ಅನುಮೋದನೆಯೊಂದಿಗೆ ಬಹಿರಂಗ ಪತ್ರವನ್ನು ಕರ್ನಾಟಕದ ಉದ್ದಿಮೆ ಕೈಗಾರಿಕೆ ಹಾಗೂ ತಂತ್ರಜ್ಞಾನ ಮುಖಂಡರಿಗೆ ಮತ್ತು ಸಂಬಂಧಿಸಿದ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವುದಾಗಿ ಕೃಷಿ ವಿಜ್ಞಾನಿ ಪ್ರಕಾಶ್ ಕಮ್ಮರಡಿ ಮತ್ತು ಸಂಶೋಧಕರಾದ ಎ.ಆರ್ ವಾಸವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

30 ಲ್ಯಾಪ್‌ಟಾಪ್, ಐ–ಫೋನ್ ಜಪ್ತಿ

ಬೆಂಗಳೂರು: ಕಂಪನಿ ದಾಸ್ತಾನು ಕೊಠಡಿಯಲ್ಲಿದ್ದ ಲ್ಯಾಪ್‌ಟಾಪ್ ಹಾಗೂ ಐ–ಫೋನ್‌ಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಆರೋಪಿಯಿಂದ 30 ಲ್ಯಾಪ್‌ಟಾಪ್, ಐದು ಐ–ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹19 ಲಕ್ಷ ಎಂದು ಅಂದಾಜಿಸಲಾಗಿದೆ. ಆರೋಪಿಯ ವಿಚಾರಣೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಎಲೆಕ್ಟ್ರಾನಿಕ್ ಸಿಟಿ ಎರಡನೇ ಹಂತದಲ್ಲಿರುವ ಕಂಪನಿಯ ಹಿರಿಯ ವ್ಯವಸ್ಥಾಪಕ ನೀಡಿದ ದೂರು ಆಧರಿಸಿ, ತನಿಖೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ವಶಕ್ಕೆ ಪಡೆದುಕೊಂಡ ಆರೋಪಿ ಕಂಪನಿಯ ದಾಸ್ತಾನು ಕೊಠಡಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ. ಆ ಕೊಠಡಿಯಲ್ಲಿದ್ದ 56 ಲ್ಯಾಪ್‌ಟಾಪ್ ಹಾಗೂ 16 ಐ–ಫೋನ್ ಕಳ್ಳತನ ಮಾಡಿದ್ದ.

‘ವಶಕ್ಕೆ ಪಡೆದುಕೊಂಡಿರುವ ಆರೋಪಿಯು ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ಹಣ ಕಳೆದುಕೊಂಡು ಆರ್ಥಿಕ ಸಂಕಷ್ಟದಲ್ಲಿದ್ದ. ಹೀಗಾಗಿ. ಸಾಲ ತೀರಿಸಲು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕಳ್ಳತನ ಮಾಡಿದ್ದ’ ಎಂದರು.

ಏಳು ಕೆ.ಜಿ ಬೆಳ್ಳಿ ವಸ್ತುಗಳ ವಶ

ಬೆಂಗಳೂರು: ಮನೆಗಳಿಗೆ ನುಗ್ಗಿ ಚಿನ್ನದ ಆಭರಣ ಹಾಗೂ ಬೆಳ್ಳಿಯ ವಸ್ತುಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಜರಾಜೇಶ್ವರಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಜಿಲ್ಲೆ ನಂಜನಗೂಡಿನ ರವಿಕುಮಾರ್ ಹಾಗೂ ತಮಿಳುನಾಡಿನ ಮಣಿ ಅಲಿಯಾಸ್ ನಾಗಮಣಿ ಬಂಧಿತ ಆರೋಪಿ.

ಬಂಧಿತರಿಂದ ₹ 58.60 ಲಕ್ಷ ಮೌಲ್ಯದ 537 ಗ್ರಾಂ ಚಿನ್ನಾಭರಣ, ಏಳು ಕೆ.ಜಿ. 840 ಗ್ರಾಂ ಬೆಳ್ಳಿಯ ಸಾಮಗ್ರಿ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಬಿಇಎಂಎಲ್‌ನ ಐದನೇ ಹಂತದ ನಿವಾಸಿ ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಆರೋಪಿಗಳ ಬಂಧನದಿಂದ ರಾಜರಾಜೇಶ್ವರಿ ನಗರ ಠಾಣೆಯಲ್ಲಿ ದಾಖಲಾಗಿದ್ದ ಆರು, ವಿಜಯನಗರ ಠಾಣೆಯಲ್ಲಿ ದಾಖಲಾಗಿದ್ದ ಒಂದು ಪ್ರಕರಣಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಸೈಬರ್ ವಂಚಕರಿಗೆ ‘ನಕಲಿ ಖಾತೆ’ ಮಾರಾಟ

ಸೈಬರ್ ಠಾಣೆ ಪೊಲೀಸರ ಕಾರ್ಯಾಚರಣೆ: ನಾಲ್ವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಪುಟ್ಟಸ್ವಾಮಿ

ಪ್ರಕಾಶ್

ಲಕ್ಷ್ಮೀಶ್



ಸುನಿಲ್

ಬೆಂಗಳೂರು: ಸಾರ್ವಜನಿಕರಿಗೆ ಹಣದ ಆಮಿಷವೊಡ್ಡಿ ಅವರ ಹೆಸರಿನಲ್ಲಿ ನಕಲಿ ಕಂಪನಿ ಹಾಗೂ ಬ್ಯಾಂಕ್ ಖಾತೆ ತೆರೆದು ಮಾರಾಟ ಮಾಡುತ್ತಿದ್ದ ನಾಲ್ವರನ್ನು ಸೈಬರ್ ಅಪರಾಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಾಗದೇವನಹಳ್ಳಿಯ ನಿವಾಸಿ, ಸಾಲ ವಸೂಲಾತಿ ಏಜೆಂಟ್ ಎನ್. ಲಕ್ಷ್ಮೀಶ್ (33), ಕನಕಪುರ ರಸ್ತೆಯ ತಾತಗುಣಿಯ ನಿವಾಸಿ, ಶಾಂಪು ಕಂಪನಿಯ ಸಿಬ್ಬಂದಿ ಎಚ್. ಪ್ರಕಾಶ್ (43), ಜೆ.ಪಿ. ನಗರದ ಏಳನೇ ಹಂತದ ನಿವಾಸಿ, ಸಿವಿಲ್ ಎಂಜಿನಿಯರ್ ಸುನಿಲ್ ಕುಮಾರ್ (45), ಬೆಂಗಳೂರು ದಕ್ಷಿಣ ಜಿಲ್ಲೆಯ ಅರ್ಚಕರ ಹಳ್ಳಿಯ ನಿವಾಸಿ, ಕಾರು ಚಾಲಕ ಪುಟ್ಟಸ್ವಾಮಯ್ಯ (54) ಬಂಧಿತರು.

ಅವರಿಂದ ಒಂದು ಲ್ಯಾಪ್‌ಟಾಪ್, ವಿವಿಧ ಕಂಪನಿಯ 4 ಮೊಬೈಲ್‌ಗಳು, ವಿವಿಧ ಬ್ಯಾಂಕ್ ಚೆಕ್ ಬುಕ್‌ಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಉತ್ತರ ಸೈಬರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಕಾರ್ಮಿಕರಿಗೆ ಕಮಿಷನ್ ಆಸೆ ತೋರಿಸಿ ಅವರ ಆಧಾರ್ ಹಾಗೂ ಪಾನ್ ಕಾರ್ಡ್ ಪಡೆದುಕೊಳ್ಳುತ್ತಿದ್ದ ಆರೋಪಿಗಳು, ಅವರ ಹೆಸರಿನಲ್ಲಿ ನಕಲಿ ಕಂಪನಿ ಸೃಷ್ಟಿಸುತ್ತಿದ್ದರು. ಬಳಿಕ ಅದೇ ಕಂಪನಿಯ ಹೆಸರಿನಲ್ಲಿ ನೂರಾರು ಬ್ಯಾಂಕ್ ಖಾತೆಗಳನ್ನು ತೆರೆದು ಅವುಗಳನ್ನು ಸೈಬರ್ ವಂಚಕರಿಗೆ ಆರೋಪಿಗಳು ಮಾರಾಟ ಮಾಡುತ್ತಿದ್ದರು. ನಾಲ್ವರ ಬಂಧನದಿಂದ ದೇಶದಾದ್ಯಂತ ತೆರೆದಿದ್ದ 357 ನಕಲಿ ಬ್ಯಾಂಕ್ ಖಾತೆಗಳನ್ನು ಪತ್ತೆ ಮಾಡಲಾಗಿದೆ’ ಎಂದು ಸೈಬರ್ ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಕೋಟ್ಯಂತರ ವಹಿವಾಟು: ‘ನಕಲಿ ದಾಖಲೆ ನೀಡಿ ತೆರೆದಿದ್ದ ಬ್ಯಾಂಕ್ ಖಾತೆಗಳಲ್ಲಿ ಕೋಟ್ಯಂತರ ರೂಪಾಯಿ ವಹಿವಾಟು ನಡೆದಿರುವುದು ಪತ್ತೆಯಾಗಿದೆ. ದೇಶದಾದ್ಯಂತ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲಿ 100 ಪ್ರಕರಣಗಳು ದಾಖಲಾಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಾರ್ಮಿಕರ ದಾಖಲೆಗಳನ್ನು ಆರೋಪಿಗಳು ಪಡೆದುಕೊಂಡು ಪ್ರತಿ ದಾಖಲೆಗೆ ₹4ರಿಂದ ₹5 ಸಾವಿರ ನೀಡುತ್ತಿದ್ದರು. ಬ್ಯಾಂಕ್ ಖಾತೆಗಳನ್ನು ಸೈಬರ್ ಕಳ್ಳರಿಗೆ ಮಾರಾಟ ಮಾಡುತ್ತಿದ್ದ ಆರೋಪಿಗಳು ಅವರಿಂದ ದೊಡ್ಡ ಮೊತ್ತದ ಹಣ ಪಡೆದುಕೊಳ್ಳುತ್ತಿದ್ದರು. ಈ ಖಾತೆಗಳನ್ನು ಸೈಬರ್ ಕಳ್ಳರು ವಂಚನೆಗೆ ಬಳಸಿಕೊಳ್ಳುತ್ತಿದ್ದರು. ಡಿಜಿಟಲ್ ಅರೆಸ್ಟ್, ಹೂಡಿಕೆ ಹೆಸರಿನಲ್ಲಿ ಈ ಖಾತೆಗಳಿಗೆ ಹಣ ಹಾಕಿಸಿಕೊಂಡು ಮೋಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

₹ 150 ಕೋಟಿ ವಂಚನೆ

ಬೆಂಗಳೂರು ಸೇರಿ ವಿವಿಧೆಡೆ ನಾಗರಿಕರಿಗೆ ಹಣದ ಆಮಿಷವೊಡ್ಡಿ ಅವರಿಂದ ದಾಖಲೆಗಳನ್ನು ಪಡೆಯುತ್ತಿದ್ದ ಆರೋಪಿಗಳು, ಅವುಗಳನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಸಲ್ಲಿಸಿ ನಕಲಿ ಕಂಪನಿ ಹೆಸರನ್ನು ನೋಂದಣಿ ಮಾಡಿಕೊಳ್ಳುತ್ತಿದ್ದರು. ಆ ದಾಖಲೆಯೊಂದಿಗೆ ಖಾಸಗಿ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ಸಾಲ, ಸಣ್ಣ ಉದ್ಯಮ ತೆರೆಯಲು ಅರ್ಜಿ ಸಲ್ಲಿಸುತ್ತಿದ್ದರು. ಆನ್‌ಲೈನ್, ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಕಂಪನಿ ಜಾಹೀರಾತು ಹಾಗೂ ಉದ್ಯೋಗ ಕಲ್ಪಿಸುವುದಾಗಿ ಜನಸಾಮಾನ್ಯರಿಗೆ ವಂಚನೆ ಮಾಡುತ್ತಿದ್ದರು. ನಕಲಿ ಖಾತೆಗಳಲ್ಲಿ 150 ಕೋಟಿಗೂ ಹೆಚ್ಚು ಹಣದ ವ್ಯವಹಾರ ನಡೆಸಿದ್ದಾರೆ. ನಕಲಿ ಖಾತೆಗಳಲ್ಲಿ ಬಹುತೇಕ ಚಾಲ್ತಿಯಲ್ಲಿ ಇವೆ ಎಂದು ಸೈಬರ್ ಪೊಲೀಸರು ತಿಳಿಸಿದರು.

ಬ್ಯಾಂಕ್ ಸಿಬ್ಬಂದಿ ಶಾಮೀಲು

‘ಇದುವರೆಗೂ ನಡೆದ ತನಿಖೆಯಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಇನ್ನೂ ಹಲವರು ಶಾಮೀಲಾಗಿರುವ ಶಂಕೆಯಿದೆ. ನಕಲಿ ಖಾತೆ ತೆರೆಯಲು ಆರೋಪಿಗಳ ಜತೆಗೆ ಬ್ಯಾಂಕ್ ಅಧಿಕಾರಿಗಳೂ ಶಾಮೀಲಾಗಿರುವುದು ಕಂಡುಬಂದಿದೆ. ಬ್ಯಾಂಕ್ ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

₹50 ಕೋಟಿ ವಂಚನೆ ಆರೋಪ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ಮಹಿಳೆಯರಿಗೆ ₹50 ಕೋಟಿ ವಂಚಿಸಿರುವ ಆರೋಪದಡಿ ಬ್ಯೂಟಿ ಪಾರ್ಲರ್‌ವೊಂದರ ಮಾಲೀಕರ ವಿರುದ್ಧ ಸಿಸಿಬಿಗೆ ದೂರು ನೀಡಲಾಗಿದೆ.

ದೂರು ಆಧರಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ. ನಗರವೂ ಸೇರಿದಂತೆ ವಿವಿಧೆಡೆ ಶಾಖೆಗಳನ್ನು ಹೊಂದಿರುವ ಬ್ಯೂಟಿ ಪಾರ್ಲರ್ ಮಾಲೀಕರು, ಶ್ರೀಮಂತ ಮಹಿಳೆಯರನ್ನೇ ಗುರಿಯಾಗಿಸಿ ವಂಚನೆ ನಡೆಸಿದ್ದಾರೆ ಎಂದು ದೂರು ನೀಡಲಾಗಿದೆ.

‘ಹೂಡಿಕೆ ಮಾಡಿದರೆ ಲಕ್ಷಾಂತರ ರೂಪಾಯಿ ಲಾಭ ಮಾಡಬಹುದು ಎಂದು ಬ್ಯೂಟಿ ಪಾರ್ಲರ್ ಮಾಲೀಕರು ನಂಬಿಸಿದ್ದರು. ಮಹಿಳೆಯರು, ₹10 ಲಕ್ಷದಿಂದ ₹ 50 ಲಕ್ಷದ ವರೆಗೂ ಹೂಡಿಕೆ ಮಾಡಿದ್ದರು. ಹಲವು ತಿಂಗಳು ಕಳೆದರೂ ಲಾಭಾಂಶ ಸಿಗದ ಕಾರಣ ದೂರು ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಚಿನ್ನಾಭರಣ ದೋಚಿದ್ದ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಮಹೀಂದ್ರ

ಕೀರ್ತರಾಮ್



ಪುಷ್ಪೇಂದ್ರ

ನಾರಾಯಣ್

ಬೆಂಗಳೂರು: ಚಿನ್ನಾಭರಣ ಅಂಗಡಿಯ ಕೆಲಸಗಾರರನ್ನು ಬೆದರಿಸಿ ಚಿನ್ನಾಭರಣ ದೋಚಿದ್ದ ರಾಜಸ್ಥಾನದ ನಾಲ್ವರನ್ನು ಕೆ.ಆರ್. ಪುರ ಠಾಣೆ ಪೊಲೀಸರು ಬಂಧಿಸಿ, 50 ಲಕ್ಷ ಮೌಲ್ಯದ 478 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

ಮಹೀಂದ್ರ ಗೆಹಲೋತ್, ಕೀರ್ತರಾಮ್, ಪುಷ್ಪೇಂದ್ರ ಸಿಂಗ್, ನಾರಾಯಣ್ ಲಾಲ್ ಬಂಧಿತರು.

ಕೆ.ಆರ್. ಪುರ ಮುಖ್ಯರಸ್ತೆಯ ಚಿನ್ನಾಭರಣ ಅಂಗಡಿಗೆ ಮೇ 9ರಂದು ಆರೋಪಿಗಳು ನುಗ್ಗಿ ಕೆಲಸಗಾರರಿಗೆ ಚಾಕು ತೋರಿಸಿ 600 ಗ್ರಾಂ ತೂಕದ ಚಿನ್ನದ ಆಭರಣಗಳನ್ನು ದೋಚಿ ಪರಾರಿ ಆಗಿದ್ದರು. ಅಂಗಡಿ ಮಾಲೀಕರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಅಂದು ಮಧ್ಯಾಹ್ನ ಅಂಗಡಿ ಮಾಲೀಕರು ಊಟಕ್ಕೆ ತೆರಳಿದ್ದಾಗ ಕೆಲಸಗಾರರು ಮಾತ್ರ ಅಂಗಡಿಯಲ್ಲಿ ಇದ್ದರು. ಆಗ ಆರೋಪಿಗಳು ಕೃತ್ಯ ಎಸಗಿದ್ದರು’ ಎಂದು ಪೊಲೀಸರು ಹೇಳಿದರು.

‘ರಾಜಸ್ಥಾನ ಜೋಧಪುರ ಜಿಲ್ಲೆಯ ಬೋರುಂಡ ಗ್ರಾಮದಲ್ಲಿ ಪ್ರಮುಖ ಆರೋಪಿ ಮಹೀಂದ್ರನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಆತ ನೀಡಿದ ಸುಳಿವು ಆಧರಿಸಿ ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರದ ಮೂಡಲಪಾಳ್ಯದಲ್ಲಿ ಇಬ್ಬರು ಹಾಗೂ ರಾಜಸ್ಥಾನದ ಪಾಲಿ ಜಿಲ್ಲೆಯ ಡೋಲಾಕ ಗ್ರಾಮದಲ್ಲಿ ಮತ್ತಿಬ್ಬರನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಕಾರು ಪಲ್ಟಿ: ಐವರ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಗೌರಿಬಿದನೂರು ರಾಜ್ಯ ಹೆದ್ದಾರಿಯ ನಾಯಕರಂಡನಹಳ್ಳಿ ಬಳಿ ಮಂಗಳವಾರ ಬೆಳಿಗ್ಗೆ ಕಾರು ಪಲ್ಟಿಯಾಗಿ ಐವರು ಮೃತಪಟ್ಟರು.

ದೊಡ್ಡಬಳ್ಳಾಪುರದ ಕರೇನಹಳ್ಳಿ ನಿವಾಸಿಗಳಾದ ಡಿ.ಎಂ.ಈಶ್ವರಪ್ಪ ಮಾನಕೂರ್ (75), ಪುರುಷೋತ್ತಮ (62), ಕಾಳಪ್ಪ (69), ಗೋಪಿನಾಥ್ (52), ಕಾರಿನ ಚಾಲಕ ನರಸಿಂಹಮೂರ್ತಿ (50) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಕಾರಿನಲ್ಲಿದ್ದ ಮೂವರು ಗಾಯ ಗೊಂಡಿದ್ದಾರೆ. ಗಾಯಾಳುಗಳ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ.

ಎಚ್‌ಎಎಲ್ ಠಾಣೆ ಪೊಲೀಸರ ಕಾರ್ಯಾಚರಣೆ

ನಗರದಲ್ಲಿ ಕದ್ದ 32 ದ್ವಿಚಕ್ರ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಬದಿ ಹಾಗೂ ಮನೆಯ ಎದುರು ಸಾರ್ವಜನಿಕರು ನಿಲುಗಡೆ ಮಾಡುತ್ತಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ಮದನಪಲ್ಲಿ ತಾಲ್ಲೂಕಿನ ಇಸ್ಕೋನಾಥಪಲ್ಲಿ ನಿವಾಸಿ ಪಿ.ಹೇಮಂತ್ ಕುಮಾರ್ (23) ಬಂಧಿತ ಆರೋಪಿ.

ಆರೋಪಿಯಿಂದ ₹40 ಲಕ್ಷ ಮೌಲ್ಯದ 32 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ವಿಭೂತಿಪುರದಲ್ಲಿ ನೆಲಸಿರುವ ವ್ಯಕ್ತಿ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ದೂರುದಾರ ಫೆಬ್ರುವರಿ 2ರಂದು ಮನೆಯ ಎದುರು ದ್ವಿಚಕ್ರ ವಾಹನವನ್ನು ನಿಲುಗಡೆ ಮಾಡಿದ್ದರು. ಮರು ದಿನ ಬೆಳಿಗ್ಗೆ ನೋಡಿದಾಗ ಆ ಸ್ಥಳದಲ್ಲಿ ವಾಹನ ಇರಲಿಲ್ಲ. ಅವರು ಎಚ್‌ಎಎಲ್ ಠಾಣೆಗೆ ದೂರು ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಖಚಿತ ಸುಳಿವು ಆಧರಿಸಿ ಮದನಪಲ್ಲಿಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಯಿತು. ಆತನನ್ನು ವಿಚಾರಣೆಗೆ ಒಳಪಡಿಸಿದಾಗ ದ್ವಿಚಕ್ರ ವಾಹನ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

‘ಆಂಧ್ರಪ್ರದೇಶದಿಂದ ಬಸ್‌ನಲ್ಲಿ ನಗರಕ್ಕೆ ಬರುತ್ತಿದ್ದ ಆರೋಪಿ, ನಕಲಿ ಕೀಗಳನ್ನು ಬಳಸಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ. ಕದ್ದ ವಾಹನಗಳನ್ನು ಮದನಪಲ್ಲಿಗೆ ಕೊಂಡೊಯ್ದು, ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ. ಸ್ನೇಹಿತನಿಗೆ ಮಾರಾಟ ಮಾಡಿದ್ದ 20 ದ್ವಿಚಕ್ರ ವಾಹನ ಹಾಗೂ ಮದನಪಲ್ಲಿಯ ಖಾಲಿ ಪ್ರದೇಶದಲ್ಲಿ ನಿಲುಗಡೆ ಮಾಡಿದ್ದ 12 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಆರೋಪಿಯ ಬಂಧನದಿಂದ ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಏಳು, ಆವಲಹಳ್ಳಿಯಲ್ಲಿ ಐದು, ಎಚ್‌ಎಎಲ್‌ನಲ್ಲಿ ಎರಡು, ಹೊಸಕೋಟೆ ಹಾಗೂ ವಿಜಯಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ಪ್ರಕರಣ ಪತ್ತೆಯಾಗಿವೆ. ಆರೋಪಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಆರೋಪಿಯನ್ನು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಮೂಲಗಳು ತಿಳಿಸಿವೆ.

133 ಪ್ರಕರಣ ದಾಖಲಾಗಿದ್ದ ಮನೆಗಳ್ಳನ ಸೆರೆ

779 ಗ್ರಾಂ ಚಿನ್ನಾಭರಣ ವಶ, 2001ರಿಂದಲೇ ಕೃತ್ಯ, ಚಿಂದಿ ಆಯುವ ಜತೆ ಕಳ್ಳತನ

ಪ್ರಜಾವಾಣಿ ವಾರ್ತೆ



ಪ್ರಕಾಶ್

ರಾಜೀವ್

ಬೆಂಗಳೂರು: ನಕಲಿ ಕೀ ಬಳಸಿ ನಗರದ ವಿವಿಧೆಡೆ ಮನೆಗಳಲ್ಲಿ ಕಳ್ಳತನ ಮಾಡಿದ್ದ ಕುಖ್ಯಾತ ಕಳ್ಳನನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಹಳ್ಳಿ ನಿವಾಸಿ, ಆರೋಪಿ ಪ್ರಕಾಶ್ ಅಲಿಯಾಸ್ ಬಾಲಾಜಿ (43) ಎಂಬಾತನನ್ನು ಅತ್ತಿಬೆಲೆಯ ನಿವಾಸದಲ್ಲಿ ಬಂಧಿಸಿ, ₹75 ಲಕ್ಷ ಮೌಲ್ಯದ 779 ಗ್ರಾಂ ಚಿನ್ನಾಭರಣ, 100 ಗ್ರಾಂ ಬೆಳ್ಳಿ, ನಕಲಿ ಕೀಗಳನ್ನು ತಯಾರಿಸುವ ಉಪಕರಣ, 138 ನಕಲಿ ಕೀಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿ ಅಪ್ರಾಪ್ತ ವಯಸ್ಸಿನಿಂದಲೇ ಕಳ್ಳತನ ಆರಂಭಿಸಿರುವುದು ತನಿಖೆಯಿಂದ ಗೊತ್ತಾಗಿದ್ದು, ಈತನ ವಿರುದ್ಧ 133 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

2001ರಿಂದಲೇ ಅಪರಾಧ ಕೃತ್ಯಗಳನ್ನು ಆರಂಭಿಸಿದ್ದ ಆರೋಪಿ, ಚಿಂದಿ ಆಯುವ ಕೆಲಸದ ಜೊತೆಗೆ ಮನೆಗಳ್ಳತನ ಆರಂಭಿಸಿದ್ದ. ಮಾರಾಟಕ್ಕೆ ಸಿದ್ಧವಾಗಿರುವ ಮನೆ, ಅಪಾರ್ಟ್‌ಮೆಂಟ್‌ಗಳಿಗೆ ಖರೀದಿದಾರನಂತೆ ವಿಚಾರಿಸುವ ನೆಪದಲ್ಲಿ ಹೋಗುತ್ತಿದ್ದ. ಬೀಗದ ಕೀಗಳ ಮಾಡ್ಯೂಲ್ ಅನ್ನು ನಕಲು ಮಾಡಿಕೊಳ್ಳುತ್ತಿದ್ದ. ಐದಾರು ತಿಂಗಳ ಬಳಿಕ ಸುಲಭವಾಗಿ ಕಳ್ಳತನ ಮಾಡುತ್ತಿದ್ದ.

ಮನೆಯ ಮುಂದೆ ಹೆಚ್ಚಾಗಿ ಮಹಿಳೆಯರ ಪಾದರಕ್ಷೆಗಳು ಇರುವುದನ್ನು ಆರೋಪಿ ಗಮನಿಸುತ್ತಿದ್ದ. ಚಿನ್ನಾಭರಣ ಹೆಚ್ಚಾಗಿರುತ್ತವೆ ಎಂದು ಭಾವಿಸಿ, ಅಂತಹ ಮನೆಗಳನ್ನು ಗುರಿಯಾಗಿಸಿ ಕಳ್ಳತನ ಮಾಡುತ್ತಿದ್ದ. ಕಳವು ಮಾಡಿದ ಮನೆಗಳ ಕೀಗಳನ್ನು ಒಂದೊಂದು ಕವರ್‌ನಲ್ಲಿ ಹಾಕಿ, ಅದರ ಮೇಲೆ ಮನೆಯ ಮಾಲೀಕರ ಹೆಸರು ಬರೆಯುತ್ತಿದ್ದ ಎಂದು ಪೊಲೀಸರು ವಿವರಿಸಿದ್ದಾರೆ.

ಯೂಟ್ಯೂಬ್ ನಲ್ಲಿ ಕಳ್ಳತನದ ವಿಡಿಯೊ ನೋಡಿ ಕೃತ್ಯವೆಸಗುತ್ತಿದ್ದ. ಅನುಮಾನ ಬಾರದಿರಲೆಂದು ಆರೋಪಿ, ಕಳ್ಳತನ ಮಾಡಲು ಹೋಗುವಾಗ ಇ-ಕಾಮರ್ಸ್ ಕಂಪನಿಗಳ ಸಮವಸ್ತ್ರ, ಬ್ಯಾಗ್‌ಗಳನ್ನು ಧರಿಸುತ್ತಿದ್ದ. ಕಳವು ವಸ್ತುಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಬೆಟ್ಟಿಂಗ್, ಮದ್ಯಪಾನ, ಮಾದಕ ವಸ್ತು ಸೇವನೆಗೆ ಬಳಸಿಕೊಳ್ಳುತ್ತಿದ್ದ.

ಪದೇ ಪದೇ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗುತ್ತಿದ್ದ ಕಾರಣ, ಆರೋಪಿಯನ್ನು ಕಪ್ಪು ಪಟ್ಟಿಗೆ ಸೇರಿಸಿದ್ದರು. ಹಾಗಾಗಿ ಆಭರಣಗಳನ್ನು ಗಿರವಿ ಇಡಲು ಸಾಧ್ಯವಾಗದಿದ್ದಾಗ, ಪರಿಚಿತ ರಾಜೀವ್ ಗಾಂಧಿ ಮೂಲಕ ಕದ್ದ ಸ್ವತ್ತನ್ನು ಮಾರಾಟ ಮಾಡಿಸುತ್ತಿದ್ದ. ಹಾಗಾಗಿ ರಾಜೀವ್‌ನನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ.

ಆರೋಪಿ ಬಂಧನದಿಂದ ಮಡಿವಾಳ ಹಾಗೂ ಹುಳಿಮಾವು ಠಾಣೆಗಳ ತಲಾ 3 ಪ್ರಕರಣ, ಮೈಕೋ ಲೇಔಟ್, ಬಂಡೆಪಾಳ್ಯ, ಸುಬ್ರಹ್ಮಣ್ಯಪುರ, ಎಚ್‌ಎಸ್‌ಆರ್ ಲೇಔಟ್, ಆರ್. ಆರ್ ನಗರ ಮತ್ತು ಬೇಗೂರು ಠಾಣೆಗಳಲ್ಲಿ ತಲಾ ಒಂದೊಂದು ಪ್ರಕರಣಗಳು ಪತ್ತೆಯಾಗಿವೆ. ಆರೋಪಿಗಳ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಬೈಲ್ ಬಳಸದ ಆರೋಪಿ

2024ರ ಮೇ 16 ರಂದು ಸಿಸಿಬಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಬಿಡುಗಡೆಯಾದ ಬಳಿಕ 13 ಕಡೆಗಳಲ್ಲಿ ಮನೆಗಳ್ಳತನ ಮಾಡಿದ್ದ. ಆರೋಪಿಗಾಗಿ ನಗರದ ಹತ್ತಕ್ಕೂ ಅಧಿಕ ಠಾಣೆಗಳ ಪೊಲೀಸರು ಹುಡುಕಾಟ ನಡೆಸುತ್ತಿದ್ದರು. ಪೊಲೀಸರ ಕಣ್ತಪ್ಪಿಸಲು ಆರೋಪಿಯು ಮೊಬೈಲ್ ಫೋನ್ ಬಳಕೆ ಮಾಡುತ್ತಿರಲಿಲ್ಲ. ಆತನ ಪತ್ನಿ ಮತ್ತು ಪರಿಚಿತರ ಫೋನ್ ಕರೆ ವಿವರಗಳ ಮೇಲೆ ಪೊಲೀಸರು ನಿಗಾ ವಹಿಸಿದ್ದರು. ಅತ್ತಿಬೆಲೆಯಲ್ಲಿ ವಾಸವಿರುವ ಮಾಹಿತಿ ಪಡೆದ ಪೊಲೀಸರು, ಅಲ್ಲಿಗೆ ತೆರಳಿ ಆರೋಪಿಯನ್ನು ಬಂಧಿಸಿದರು.

ಗೋವಿಂದರಾಜನಗರ ಠಾಣೆ ಪೊಲೀಸರ ಕಾರ್ಯಾಚರಣೆ

₹29.55 ಲಕ್ಷ ಮೌಲ್ಯದ 305 ಗ್ರಾಂ ಚಿನ್ನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ನಿಲುಗಡೆ ಮಾಡಿದ್ದ ಬೈಕ್ ಹಾಗೂ ಬೀಗ ಹಾಕಿರುವ ಮನೆಗಳ ಬಾಗಿಲು ಒಡೆದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಲಾರ ಜಿಲ್ಲೆಯ ಬಂಗಾರಪೇಟೆ ನಿವಾಸಿ ಸೈಯದ್ ಅಹ್ಮದ್ (32) ಬಂಧಿತ. ಆರೋಪಿಯಿಂದ ₹29.55 ಲಕ್ಷ ಮೌಲ್ಯದ 305 ಗ್ರಾಂ ಚಿನ್ನಾಭರಣ, ಒಂದು ಬೈಕ್ ವಶಕ್ಕೆ ಪಡೆಯಲಾಗಿದೆ.

ಆರೋಪಿ ಕಳವು ಮಾಡಿದ್ದ ಬೈಕ್‌ನಲ್ಲಿ ನಗರದಲ್ಲಿ ಸುತ್ತಾಟ ನಡೆಸುತ್ತಿದ್ದ. ಬೀಗ ಹಾಕಿರುವ ಮನೆಗಳನ್ನು ಗುರುತಿಸುತ್ತಿದ್ದ. ರಾತ್ರಿ ವೇಳೆ ಆ ಮನೆಗೆ ಬಂದು ಕಬ್ಬಿಣದ ರಾಡ್‌ನಿಂದ ಬಾಗಿಲು ಒಡೆದು ಮನೆಯೊಳಗೆ ನುಗ್ಗಿ ಚಿನ್ನಾಭರಣ, ನಗದು ದೋಚಿ ಪರಾರಿಯಾಗುತ್ತಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿಯಿಂದ ಜಪ್ತಿ ಮಾಡಲಾದ ಚಿನ್ನಾಭರಣ

ಠಾಣಾ ವ್ಯಾಪ್ತಿಯ ಮನೆಯೊಂದರ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನ ಕಳವು ಮಾಡಿದ್ದ. ದ್ವಿಚಕ್ರ ವಾಹನ ಮಾಲೀಕರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ಪಟ್ಟೇಗಾರ ಪಾಳ್ಯದಲ್ಲಿ ಪೊಲೀಸರು ಗಸ್ತು ನಡೆಸುವಾಗ ಆರೋಪಿ ಬೈಕ್‌ನಲ್ಲಿ ತೆರಳುತ್ತಿದ್ದ. ಆತನನ್ನು ತಡೆದು ಪ್ರಶ್ನಿಸಿದಾಗ ಗೊಂದಲದ ಹೇಳಿಕೆ ನೀಡಿದ್ದ. ಬಳಿಕ ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದಾಗ ಮನೆ ಕಳ್ಳತನ ಮತ್ತು ಬೈಕ್ ಕಳವು ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದರು.

ಆರೋಪಿಯ ಮಾಹಿತಿಯ ಮೇರೆಗೆ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಚಿನ್ನಾಭರಣ ಅಂಗಡಿಗಳಲ್ಲಿ ಮಾರಾಟ ಮಾಡಿದ್ದ 305 ಗ್ರಾಂ ಚಿನ್ನಾಭರಣ ಮತ್ತು ಆತನ ಬಳಿಯಿದ್ದ ಒಂದು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ಆರೋಪಿ ಬಂಧನದಿಂದ ನಗರದ ವಿವಿಧ ಠಾಣೆಯಲ್ಲಿ ದಾಖಲಾಗಿದ್ದ ಏಳು ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರ ಜಲಾಶಯ ಭರ್ತಿಯಾದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಬಾಗಿನ ಅರ್ಪಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್‌.ಚಲುವರಾಯಸ್ವಾಮಿ, ಶಾಸಕ ತನ್ವೀರ್ ಸೇಠ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಮೈಸೂರು ರೇಸ್

ಶೈನ್ ಗೆಲ್ಲುವ ನಿರೀಕ್ಷೆ

ಮೈಸೂರು ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶೈನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸಾಯ್ಯಾನ್ 2 , ಸರ್ವೋತ್ತಮ್ 4, ಬ್ರಾಕ್ಸ್ಟನ್ 1
2ನೇ ರೇಸ್: ಐ ದಿ ಮೈಂಡ್ 5, ಡಾಲೀಸ್ ಗೋಲ್ಡ್ 1, ಆರ್ಮಮೆಂಟ್ 7
3ನೇ ರೇಸ್: ಕೋಡ್ ಆಫ್ ಹಾನರ್ 9, ಬ್ರೇಕ್ ಅವೇ 7, ಡಿವೈನ್ ರೇ 4
4ನೇ ರೇಸ್: ಶೈನ್ 1, ಸೀ ದಿ ಲೈಟ್ 2, ಪ್ರೆಟ್ಟಿ ಮೂವ್ 5
5ನೇ ರೇಸ್: ಸ್ಟೆಲ್ಲಾಂಟಿಸ್ 11, ಆಬ್ಸೊಲ್ಯೂಟ್ ಚಾಲೆಂಜರ್ 2, ರೈಸ್ ಎಗೈನ್ 5
6ನೇ ರೇಸ್: ಡೆಕಾಕಾರ್ನ್ 1, ಸ್ಟ್ರೀಟ್ ಸೆನ್ಸ್ 2, ರೆಡ್ ಹಿಲ್ಸ್ 10

ಉತ್ತಮ ಬೆಟ್: ಸ್ಟೆಲ್ಲಾಂಟಿಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

‘ಕೈ’ ಬಣ ರಾಜಕೀಯ ಬಹಿರಂಗ

‘ಉಸ್ತುವಾರಿ’ ರಣದೀಪ್ ಸಿಂಗ್ ಸುರ್ಜೇವಾಲಾ ಮುಂದೆ ನಾಯಕತ್ವ ವಿಚಾರ ಪ್ರಸ್ತಾಪಿಸಿದ ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಮಂಗಳವಾರ ಮಾತನಾಡಿದರು. ಡಿಸಿಎಂ ಡಿ.ಕೆ.ಶಿವಕುಮಾರ್ ಇದ್ದರು.

ಬೆಂಗಳೂರು: ಪಕ್ಷ ಸಂಘಟನೆ, ಕ್ಷೇತ್ರದ ಅಭಿವೃದ್ಧಿ ಕುರಿತು ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲು ರಾಜ್ಯಕ್ಕೆ ಬಂದಿರುವ ‘ಕೈ’ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮುಂದೆ, ನಾಯಕತ್ವದ ಬಗ್ಗೆ ಕಾಂಗ್ರೆಸ್‌ನಲ್ಲಿ ಬಿರುಸುಗೊಂಡಿರುವ ‘ಬಣ ರಾಜಕೀಯ’ ಬಹಿರಂಗವಾಗಿದೆ.

ಸಚಿವರ ಕಾರ್ಯವೈಖರಿ, ವರ್ತನೆ, ಅನುದಾನ ಕೊರತೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕೆಲವು ಶಾಸಕರು, ನಾಯಕತ್ವ ಬದಲಾವಣೆ ಪರ ಧ್ವನಿ ಎತ್ತಿದ್ದಾರೆ. ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಒಲವು ವ್ಯಕ್ತಪಡಿಸಿರುವುದು ಗೊತ್ತಾಗಿದೆ.

ಕೆಪಿಸಿಸಿ ಕಚೇರಿಯ ‘ಭಾರತ್ ಜೋಡೊ’ ಭವನದಲ್ಲಿ ಮಂಗಳವಾರ ಇಡೀ ದಿನ ಪಕ್ಷದ ಶಾಸಕರ ಜೊತೆ ಸುರ್ಜೇವಾಲಾ ಅವರು ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದರು. ಕೆ.ವೈ. ನಂಜೇಗೌಡ, ಎನ್.ಎ. ಹ್ಯಾರಿಸ್, ಪ್ರಿಯ ಕೃಷ್ಣ, ಎ.ಸಿ. ಶ್ರೀನಿವಾಸ್, ರಾಜು ಕಾಗೆ ಸೇರಿ ಹಲವು ಶಾಸಕರು ಸುರ್ಜೇವಾಲಾ ಅವರನ್ನು ಭೇಟಿ ಮಾಡಿದರು.

ಜೊತೆಯಾಗಿ ಭೇಟಿ ಮಾಡಿ ತಮ್ಮ ಅಭಿಪ್ರಾಯವನ್ನು ಹೇಳಲು ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಸಕರಾದ ಎಚ್.ಸಿ. ಬಾಲಕೃಷ್ಣ, ಎಚ್.ಎ. ಇಕ್ಬಾಲ್ ಹುಸೇನ್ ಮತ್ತು ಸಿ.ಪಿ. ಯೋಗೇಶ್ವರ್ ಮುಂದಾಗಿದ್ದರು. ಒಂದೇ ಜಿಲ್ಲೆಯವರು ಒಂದೇ ಅಭಿಪ್ರಾಯ ವ್ಯಕ್ತಪಡಿಸಲು ಡಿ.ಕೆ. ಶಿವಕುಮಾರ್ ಆಪ್ತರಾದ ಈ ಶಾಸಕರು ಮನಸ್ಸು ಮಾಡಿದ್ದರು. ಆದರೆ, ಅದಕ್ಕೆ ಅವಕಾಶ ನೀಡಲಿಲ್ಲ. ಭೇಟಿಯ ವೇಳೆ ನಾಯಕತ್ವ ಬದಲಾವಣೆ ವಿಚಾರ ಪ್ರಸ್ತಾಪಿಸಿದ ಇಕ್ಬಾಲ್ ಹುಸೇನ್, ಡಿ.ಕೆ ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಕೊಡಬೇಕೆಂದು ಒತ್ತಾಯಿಸಿದ್ದಾರೆ. ಅದಕ್ಕೆ ಸುರ್ಜೇವಾಲಾ, ‘ಬಹಿರಂಗ ಹೇಳಿಕೆ ಬೇಡ. ಹೈಕಮಾಂಡ್ ಏನು ಮಾಡಬೇಕೊ ಅದನ್ನು ಮಾಡಲಿದೆ’ ಎಂದಿದ್ದಾರೆ ಎಂದು ಗೊತ್ತಾಗಿದೆ.

ಕೆ.ವೈ. ನಂಜೇಗೌಡ, ಕೃಷ್ಣಪ್ಪ, ಪ್ರಿಯ ಕೃಷ್ಣ, ರಾಜು ಕಾಗೆ ಸೇರಿದಂತೆ ಕೆಲವು ಶಾಸಕರು, ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವ ಜೊತೆಗೆ ಸಿದ್ದರಾಮಯ್ಯ ಪರ ಒಲವು ವ್ಯಕ್ತಪಡಿಸಿದ್ದಾರೆ. ‘ಸಿದ್ದರಾಮಯ್ಯ ಅವರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಈ ಶಾಸಕರು, ‘ಮುಖ್ಯಮಂತ್ರಿ ಸ್ಥಾನದಲ್ಲಿ ಅವರೇ ಮುಂದುವರಿಯಬೇಕು. ಸಿದ್ದರಾಮಯ್ಯ ಇದ್ದರೆ ಮಾತ್ರ ಸರ್ಕಾರ ಉಳಿಯಲಿದೆ’ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಚಾರವಾಗಿ ಹೈಕಮಾಂಡ್ ತೀರ್ಮಾನಿಸಲಿದೆ ಎಂದು ಸುರ್ಜೇವಾಲಾ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

ಏನು ಹೇಳಬೇಕೊ ಎಲ್ಲವನ್ನೂ ಹೇಳಿದ್ದೇನೆ: ‘ವಸತಿ ಇಲಾಖೆಯಲ್ಲಿ ಲಂಚ ಪಡೆಯಲಾಗುತ್ತಿದೆ’ ಎಂದು ಶಾಸಕ ಬಿ.ಆರ್. ಪಾಟೀಲ ಧ್ವನಿ ಎತ್ತಿದ ಬೆನ್ನಲ್ಲೆ, ಸರ್ಕಾರದ ಕಾರ್ಯವೈಖರಿ ವಿರುದ್ಧ ಅಪಸ್ವರ ಎತ್ತಿದ್ದ ರಾಜು ಕಾಗೆ, ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿದರು. ‘ಕೆಲವು ಸಚಿವರು ತಮಗೆ ಬೇಕಾದವರಿಗೆ ಮಾತ್ರ ಅನುದಾನ ನೀಡುತ್ತಿದ್ದಾರೆ’ ಎಂದು ಅವರು ದೂರಿದ್ದಾರೆ. ರಾಜು ಕಾಗೆ ಅವರ ಮಾತನ್ನು ಸಮಾಧಾನದಿಂದ ಆಲಿಸಿದ ಸುರ್ಜೇವಾಲಾ, ಎಲ್ಲವನ್ನೂ ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ. ‘ಪಕ್ಷದ ಉಸ್ತುವಾರಿ ಕರೆದಿದ್ದರು. ಅವರಿಗೆ ಏನು ಹೇಳಬೇಕೊ ಎಲ್ಲವನ್ನೂ ಹೇಳಿದ್ದೇನೆ’ ಎಂದು ರಾಜು ಕಾಗೆ ತಿಳಿಸಿದರು.

ಕೋಲಾರ ಬಣ ರಾಜಕೀಯ: ಮಾಲೂರು ಶಾಸಕ ಕೆ.ವೈ. ನಂಜೇಗೌಡ ವಿರುದ್ಧ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರು ಸೋಮವಾರ ಕೆರಳಿದ್ದರು. ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿದ ನಂಜೇಗೌಡ ಅವರು ಕೋಲಾರ ಜಿಲ್ಲಾ ಬಣ ರಾಜಕೀಯದ ಬಗ್ಗೆ ಹೇಳಿಕೊಂಡಿದ್ದಾರೆ. ‘ಕೋಮುಲ್’ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆದಿದೆ ಎಂದು ದೂರು ನೀಡಿರುವ ನಂಜೇಗೌಡ, ನಾರಾಯಣಸ್ವಾಮಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ನಂಜೇಗೌಡ, ‘ನಾರಾಯಣಸ್ವಾಮಿ ಯಾವ ಪಾರ್ಟಿಯಲ್ಲಿದ್ದಾರೆಂದು ಗೊತ್ತಿಲ್ಲ. ನಮ್ಮ ತಾತ ಕಾಂಗ್ರೆಸ್ ಪಕ್ಷದಲ್ಲಿ ಇದ್ದವರು. ನಾನು ಮಂಡಲ ಪಂಚಾಯಿತಿಯಲ್ಲಿ ಕೆಲಸ ಮಾಡಿದ್ದೆ. ಮೂಲತಃ ಕಾಂಗ್ರೆಸಿಗ’ ಎಂದರು.

‘ಸಿದ್ದರಾಮಯ್ಯ ಕೈ ಬಲಪಡಿಸಬೇಕಿದೆ’

‘ನಾಯಕತ್ವ ಬದಲಾವಣೆ, ಸಚಿವ ಸಂಪುಟ ವಿಸ್ತರಣೆ ಕುರಿತು ಯಾವುದೇ ಚರ್ಚೆ ಇಲ್ಲ. ನಾವು ಯಾರೂ ಈಗ ಆತುರದಲ್ಲಿ ಇಲ್ಲ. ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಅವರಿದ್ದು, ನಾವೆಲ್ಲರೂ ಅವರ ಕೈ ಬಲಪಡಿಸಬೇಕಿದೆ’ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು ‘ಪಕ್ಷದ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರು ಪಕ್ಷ ಸಂಘಟನೆ ವಿಚಾರ ಹಾಗೂ ಶಾಸಕರ ಅಹವಾಲು ಸ್ವೀಕರಿಸಲು ಸಭೆ ಮಾಡುತ್ತಿದ್ದಾರೆಯೇ ಹೊರತು, ಮುಖ್ಯಮಂತ್ರಿ ಬದಲಾವಣೆ ಕುರಿತು ಚರ್ಚೆ ಮಾಡುತ್ತಿಲ್ಲ. ಈ ಸಭೆಯ ಬಗ್ಗೆ ಯಾರಿಗೂ ಆತಂಕ ಬೇಡ’ ಎಂದರು.

ನೋಟಿಸ್ ನೀಡುತ್ತೇನೆ: ‘ನೀವು ಮುಖ್ಯಮಂತ್ರಿ ಆಗಲಿದ್ದಾರೆಂದು ಶಾಸಕ ಇಕ್ಬಾಲ್ ಹುಸೇನ್ ಹೇಳುತ್ತಿದ್ದಾರೆ’ ಎಂದಾಗ, ‘ನಾನು ಮುಖ್ಯಮಂತ್ರಿ ಆಗುತ್ತೇನೆಂದು ಯಾರೂ ಹೇಳುವ ಅಗತ್ಯವಿಲ್ಲ. ಯಾರೊಬ್ಬರೂ ಮಾಧ್ಯಮಗಳ ಮುಂದೆ ಮಾತನಾಡುವಂತಿಲ್ಲ. ಈ ವಿಚಾರವಾಗಿ ಮಾಧ್ಯಮಗಳ ಮುಂದೆ ಇಕ್ಬಾಲ್ ಹುಸೇನ್, ಬಿ.ಆರ್. ಪಾಟೀಲ, ಎಚ್.ಸಿ. ಬಾಲಕೃಷ್ಣ ಯಾರೇ ಆಗಲಿ ಮಾತನಾಡಬಾರದು’ ಎಂದು ಎಚ್ಚರಿಕೆ ನೀಡಿದರು.

‘ಜಿಲ್ಲಾ ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಮಾಡುತ್ತಿದ್ದು, ಪಕ್ಷ ಸಂಘಟನೆ ಕುರಿತು ಶಾಸಕರಿಗೆ ಮಾರ್ಗದರ್ಶನ ನೀಡಲು ಸುರ್ಜೇವಾಲಾ ಬಂದಿದ್ದಾರೆ. ಶಾಸಕರ ಅಹವಾಲುಗಳನ್ನೂ ಸ್ವೀಕರಿಸಲಾಗುತ್ತಿದೆ. ಕೆಲವು ಶಾಸಕರ ಹೇಳಿಕೆಗಳ ಮಧ್ಯೆ ಪಕ್ಷದಲ್ಲಿ ಶಿಸ್ತು ತರಲು ಅವರು ಪ್ರಯತ್ನಿಸುತ್ತಿದ್ದಾರೆ. ನಮಗೆ 2028 ಬಹಳ ಮುಖ್ಯ’ ಎಂದರು.

ಅಭಿವೃದ್ಧಿಗೆ ₹1 ಲಕ್ಷ ಕೋಟಿ: ‘ಅನುದಾನ ವಿಚಾರವಾಗಿ ಬಿ.ಆರ್. ಪಾಟೀಲ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ’ ಎಂದಾಗ, ‘ಅಭಿವೃದ್ಧಿ ಕೆಲಸಗಳಿಗಾಗಿ ಬಜೆಟ್‌ನಲ್ಲಿ ₹1 ಲಕ್ಷ ಕೋಟಿ ಅನುದಾನ ಮೀಸಲಿಡಲಾಗಿದೆ. ₹54 ಸಾವಿರ ಕೋಟಿ ಗ್ಯಾರಂಟಿಗಳಿಗೆ, ₹19 ಸಾವಿರ ಕೋಟಿ ರೈತರಿಗೆ ವಿದ್ಯುತ್ ನೀಡಲು ವೆಚ್ಚ ಮಾಡಲಾಗುತ್ತಿದೆ. ಸಮಾಜ ಕಲ್ಯಾಣ ಯೋಜನೆ ಸೇರಿದಂತೆ ಇತರೆ ಅಭಿವೃದ್ಧಿ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ. ಇದು ಜನರು ಹಾಗೂ ಕ್ಷೇತ್ರಗಳ ಅಭಿವೃದ್ಧಿಗಳಿಗೆ ಅಲ್ಲವೇ’ ಎಂದು ಅವರು ಪ್ರಶ್ನಿಸಿದರು.

‘ನಾಯಕತ್ವ ವಿಚಾರ ಚರ್ಚಿಸುತ್ತಿಲ್ಲ’

‘ನಾಯಕತ್ವ ಬದಲಾವಣೆ ಸಂಬಂಧ ಶಾಸಕರ ಜೊತೆ ನಾನು ಚರ್ಚೆ ಮಾಡುತ್ತಿಲ್ಲ. ಆ ಕುರಿತು ಶಾಸಕರಿಂದ ಅಭಿಪ್ರಾಯ ಸಂಗ್ರಹಿಸುತ್ತಿಲ್ಲ’ ಎಂದು ರಣದೀಪ್ ಸಿಂಗ್ ಸುರ್ಜೇವಾಲಾ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಪಕ್ಷ ಸಂಘಟನೆ ಕುರಿತು ಅಭಿಪ್ರಾಯ ಪಡೆಯುವ ಜೊತೆಗೆ, ಶಾಸಕರ ಆಕಾಂಕ್ಷೆಗಳು, ಬೇಡಿಕೆಗಳು, ಈವರೆಗಿನ ಸಾಧನೆಗಳ ಕುರಿತು ಮಾಹಿತಿ ಪಡೆಯುತ್ತಿದ್ದೇನೆ’ ಎಂದರು. ‘ಬ್ಲಾಕ್ ಕಾಂಗ್ರೆಸ್ ಸೇರಿದಂತೆ ಇತರ ವಿಭಾಗಗಳು ಮತ್ತು ಪಕ್ಷದ ಮುಂಚೂಣಿ ಘಟಕಗಳ ಬಗ್ಗೆ ಶಾಸಕರಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದೇನೆ. ಪಂಚ ಗ್ಯಾರಂಟಿಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತೇನೆ. ಶಾಸಕರ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ’ ಎಂದರು.

‘ಮೈಸೂರು ಮತ್ತು ಬೆಂಗಳೂರು ವಿಭಾಗದ ಶಾಸಕರನ್ನು ಭೇಟಿ ಮಾಡಿದ್ದೇನೆ. ಮುಂದಿನ ಸೋಮವಾರದಿಂದ ಇತರ ವಿಭಾಗಗಳ ಶಾಸಕರನ್ನೂ ಭೇಟಿ ಮಾಡುತ್ತೇನೆ. ನಂತರ ಹಾಲಿ, ಮಾಜಿ ಸಂಸದರನ್ನು ಭೇಟಿ ಮಾಡುತ್ತೇನೆ’ ಎಂದರು.

ಎರಡೂವರೆ ವರ್ಷ ಶಿವಕುಮಾರ್‌ಗೆ ಬಿಟ್ಟುಕೊಡಲಿ: ಇಕ್ಬಾಲ್ ಹುಸೇನ್

ಸಿದ್ದರಾಮಯ್ಯ ಹಿಂದೆ ಐದು ವರ್ಷ, ಮತ್ತೆ ಈಗ ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿದ್ದಾರೆ. ಮುಂದಿನ ಎರಡೂವರೆ ವರ್ಷ ಮುಖ್ಯಮಂತ್ರಿ ಸ್ಥಾನವನ್ನು ಶಿವಕುಮಾರ್ ಅವರಿಗೆ ಬಿಟ್ಟು ಕೊಡಲಿ. ಶಿವಕುಮಾರ್ ಅವರಿಗೆ ಸಾಕಷ್ಟು ಶಾಸಕರ ಬೆಂಬಲ ಇದೆ. ಹೈಕಮಾಂಡ್ ಬೆಂಬಲವೂ ಇದೆ’ ಎಂದು ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾನು ಈಗಾಗಲೇ ನೀಡಿರುವ ಹೇಳಿಕೆಗೆ ಬದ್ಧನಾಗಿದ್ದೇನೆ. ನಮಗೆಲ್ಲ ಬದಲಾವಣೆ ಬೇಕು. ಮುಂದೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಡಿ.ಕೆ. ಶಿವಕುಮಾರ್ ಅವರು ಪಕ್ಷ ಸಂಘಟನೆ ಮಾಡಿದ್ದಾರೆ. ಅವರನ್ನು ಮುಖ್ಯಮಂತ್ರಿ ಮಾಡಿದರೆ 2028ರಲ್ಲಿಯೂ ಸರ್ಕಾರ ಬರಲು ಸುಗಮ ಆಗಲಿದೆ. ಎಂದರು.

ಇಕ್ಬಾಲ್ ಹುಸೇನ್‌ಗೆ ನೋಟಿಸ್

ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಮಾಧ್ಯಮಗಳ ಮುಂದೆ ಹೇಳಿಕೆಗಳನ್ನು ನೀಡುವ ಮೂಲಕ ಪಕ್ಷದಲ್ಲಿ ಗೊಂದಲ ಮತ್ತು ಮುಜುಗರ ಉಂಟು ಮಾಡಿದ್ದಾರೆಂಬ ಕಾರಣಕ್ಕೆ ರಾಮನಗರ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅವರಿಗೆ ಡಿ.ಕೆ. ಶಿವಕುಮಾರ್ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ. ‘ತಮ್ಮ ಬಹಿರಂಗ ಹೇಳಿಕೆ ಪಕ್ಷದ ಶಿಸ್ತು ಉಲ್ಲಂಘನೆಯಾಗಿದೆ. ಈ ಅಶಿಸ್ತಿನ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ನೋಟಿಸ್ ತಲುಪಿದ ವಾರದೊಳಗೆ ತಮ್ಮ ಹೇಳಿಕೆಗಳ ಬಗ್ಗೆ ಸಮಜಾಯಿಷಿ ನೀಡಬೇಕು’ ಎಂದು ಶಿವಕುಮಾರ್ ಸೂಚಿಸಿದ್ದಾರೆ.

> **ಪಕ್ಷ ಅಧಿಕಾರಕ್ಕೆ ಬರಲು ಡಿ.ಕೆ. ಶಿವಕುಮಾರ್ ಕೊಡುಗೆ ಇದೆ. ಅವರಿಗೂ ಅವಕಾಶ ಕೊಡಬೇಕು ಎಂದಿದ್ದೇನೆ. ನಾಳೆಯೇ ಅವಕಾಶ ಕೊಡಬೇಕು ಎಂದು ಹೇಳಿಲ್ಲ**
> **ಎಚ್.ಸಿ. ಬಾಲಕೃಷ್ಣ,** ಮಾಗಡಿ ಶಾಸಕ

ಧ್ವನಿ ಬಳಸಿ ತಂತ್ರಜ್ಞಾನದೊಂದಿಗೆ ಸಂವಾದದ ಸಾಧನ

200 ಗ್ರಾ.ಪಂ.ಗಳಿಗೆ ‘ಅಲೆಕ್ಸಾ’

ಪ್ರಜಾವಾಣಿ ವಾರ್ತೆ

‘ತರಂಗಿಣಿ’ ಕಾರ್ಯಕ್ರಮದಡಿ ಗ್ರಾಮಪಂಚಾಯಿತಿಗಳಿಗೆ ‘ಅಲೆಕ್ಸಾ’ ಸಾಧನವನ್ನು ಪ್ರಿಯಾಂಕ್ ಖರ್ಗೆ ವಿತರಿಸಿದರು. ಹೆಚ್ಚುವರಿ ಮುಖ್ಯಕಾರ್ಯದರ್ಶಿ ಉಮಾ ಮಹಾದೇವನ್, ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಅರುಂಧತಿ ಚಂದ್ರಶೇಖರ್ ಇದ್ದರು.

ಬೆಂಗಳೂರು: ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಹಿರಿಯ ನಾಗರಿಕರು ಮತ್ತು ವಿಶೇಷ ಚೇತನ ವ್ಯಕ್ತಿಗಳು ತಮ್ಮ ಧ್ವನಿಯನ್ನು ಬಳಸಿ ತಂತ್ರಜ್ಞಾನದೊಂದಿಗೆ ಸಂವಾದ ನಡೆಸಬಹುದಾದ ‘ಅಲೆಕ್ಸಾ’ ಸಹಾಯಕ ಸಾಧನವನ್ನು ರಾಜ್ಯದ ಆಯ್ದ 200 ಗ್ರಾಮಪಂಚಾಯಿತಿಗಳ ‘ಅರಿವು ಕೇಂದ್ರ’ಗಳಿಗೆ ವಿತರಣೆಗೆ ಚಾಲನೆ ನೀಡಲಾಯಿತು.

ವಿಕಾಸಸೌಧದಲ್ಲಿ ಮಂಗಳವಾರ ನಡೆದ ‘ಅಲೆಕ್ಸಾ’ ವಿತರಣೆಯ ‘ತರಂಗಿಣಿ’ ಕಾರ್ಯಕ್ರಮಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಪ್ರಿಯಾಂಕ್ ಖರ್ಗೆ, ಮಕ್ಕಳಲ್ಲಿ ಕುತೂಹಲ ಮೂಡಿಸುವ ಮತ್ತು ಆಸಕ್ತಿಯನ್ನು ಬೆಳೆಸುವ ಕೆಲಸವಾಗಬೇಕು. ಅವರ ಕುತೂಹಲವನ್ನು ತಣಿಸುವ ಕೆಲಸ ಗ್ರಂಥ ಪಾಲಕರಿಂದ ನಡೆಯಬೇಕು ಎಂದರು.

‘ಇಡೀ ದೇಶದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅರಿವು ಕೇಂದ್ರಗಳು ವಿಭಿನ್ನ ಮತ್ತು ಪ್ರಾಮಾಣಿಕ ಪ್ರಯತ್ನವಾಗಿದೆ. ಈಗ ಮಕ್ಕಳಲ್ಲಿ ಕುತೂಹಲ, ಆಸಕ್ತಿ ಕಾಣಿಸುವುದಿಲ್ಲ. ಆದ್ದರಿಂದ ಅವರಲ್ಲಿ ಕುತೂಹಲ ಮೂಡಿಸುವ ಅವಶ್ಯ ಇದೆ. ಕಲಿಕೆಗೆ ಯಾವುದೇ ಭೌಗೋಳಿಕ ಚೌಕಟ್ಟು ಕೂಡ ಇರುವುದಿಲ್ಲ. ದೃಷ್ಟಿ ಸವಾಲಿರುವವರಿಗೆ ಅಲೆಕ್ಸಾ ಸಾಧನವು ಕಲಿಕೆಗೆ ಸಹಾಯಕವಾಗಲಿದೆ. ಮುಂದೆ ಚಾಟ್‌ಬಾಟ್‌ಗಳನ್ನು ಕೂಡ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಮೊದಲ ಹಂತದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಯ ಆಯ್ದ 200 ಗ್ರಾಮ ಪಂಚಾಯಿತಿಗಳ ಅರಿವು ಕೇಂದ್ರಗಳಿಗೆ ಅಲೆಕ್ಸಾ ಸಾಧನಗಳನ್ನು ವಿತರಿಸಲಾಗುತ್ತದೆ ಎಂದು ಹೇಳಿದರು.

ಸಿಎಸ್‌ಆರ್ ನಿಧಿ ಬಳಕೆ: ಅಲೆಕ್ಸಾ ಮೂಲಕ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿ ಮುಂಬರುವ ಕಾರ್ಯಕ್ರಮಗಳನ್ನು ಗುರುತಿಸಬಹುದು. ಅಧ್ಯಯನಕ್ಕಾಗಿ ಸಂಪನ್ಮೂಲಗಳನ್ನು ಪಡೆಯುವುದರ ಜತೆಗೆ ಮಾರ್ಗದರ್ಶಕರು ಮತ್ತು ಸಲಹೆಗಾರರ ಭೇಟಿಗೂ ಸಮಯವನ್ನೂ ನಿಗದಿಪಡಿಸಿಕೊಳ್ಳಬಹುದಾಗಿದೆ. ಕಂಪ್ಯೂಟರ್ ತೆರೆಯದೇ ಅಲೆಕ್ಸಾ ಮೂಲಕ ಈ ಎಲ್ಲ ಕೆಲಸಗಳನ್ನು ಮಾಡಬಹುದು. ಬೆಂಗಳೂರಿನ ಯುನೈಟೆಡ್ ವೇ ಸಂಸ್ಥೆಯು ಅರಿವು ಕೇಂದ್ರಗಳ ಮೇಲ್ವಿಚಾರಕರಿಗೆ ಈ ಸಾಧನ ಬಳಸುವುದಕ್ಕಾಗಿ ಸೂಕ್ತ ತರಬೇತಿಯನ್ನು ನೀಡಲಿದೆ. ಸ್ಟೇಟ್ ಸ್ಟ್ರೀಟ್ ಕಂಪನಿಯ ಸಿಎಸ್‌ಆರ್ ನಿಧಿಯನ್ನು ಬಳಸಿ ಈ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ.

ಬಿಜೆಪಿಯ ಸಂವಿಧಾನದಿಂದ ಪದಗಳನ್ನು ಅಳಿಸಲಿ: ಪ್ರಿಯಾಂಕ್ ಖರ್ಗೆ

‘ಬಿಜೆಪಿ ತನ್ನ ಪಕ್ಷದ ಸಂವಿಧಾನದಲ್ಲಿ ಸಮಾಜವಾದ ಮತ್ತು ಜಾತ್ಯತೀತ ತತ್ವಗಳಿಗೆ ಬದ್ಧವಾಗಿದೆ ಎಂದು ಹೇಳಿಕೊಂಡಿದೆ. ಮೊದಲು ಅದನ್ನು ಅಳಿಸಲಿ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕೇಂದ್ರದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆರ್‌ಎಸ್‌ಎಸ್ ಅನ್ನು ನಿಷೇಧಿಸುವುದಾಗಿ ಹೇಳಿದ್ದ ಪ್ರಿಯಾಂಕ್ ಅವರು, ಸಾಂವಿಧಾನಿಕ ತಿದ್ದುಪಡಿಗಳನ್ನು ಬೋಧಿಸುವ ಮೊದಲು ಆರ್‌ಎಸ್‌ಎಸ್ ಬಿಜೆಪಿ ಪಕ್ಷದ ಸಂವಿಧಾನವನ್ನು ದೀರ್ಘವಾಗಿ ಮತ್ತು ಕಠಿಣವಾಗಿ ಪರಿಶೀಲಿಸಬೇಕು ಎಂದು ‘ಎಕ್ಸ್’ ಮೂಲಕ ಒತ್ತಾಯಿಸಿದ್ದಾರೆ.

ಆರ್‌ಎಸ್‌ಎಸ್ ನಾಯಕರು ನಮ್ಮ ಸಂವಿಧಾನದಿಂದ ಸಮಾಜವಾದಿ ಮತ್ತು ಜಾತ್ಯತೀತ ಪದಗಳನ್ನು ಅಳಿಸಿ ಹಾಕಲು ಬಹಳ ಹಿಂದಿನಿಂದಲೂ ಒತ್ತಾಯಿಸುತ್ತಿದ್ದಾರೆ. ಈಗ, ಬಿಜೆಪಿ ನಾಯಕರು ಅದೇ ಬೇಡಿಕೆಯನ್ನು ಗಿಣಿಯಂತೆ ಹೇಳಲು ಆರಂಭಿಸಿದ್ದಾರೆ. ಸುಪ್ರೀಂ ಕೋರ್ಟ್ ಪದೇ ಪದೇ ಅವುಗಳ ಸೇರ್ಪಡೆಯನ್ನು ಸಂವಿಧಾನದ ಆತ್ಮದ ಅವಿಭಾಜ್ಯವೆಂದು ಎತ್ತಿ ಹಿಡಿದಿದೆ ಎಂಬ ಅಂಶವನ್ನು ತಮ್ಮ ಅನುಕೂಲಕ್ಕಾಗಿ ನಿರ್ಲಕ್ಷಿಸಿದ್ದಾರೆ ಎಂದು ಹೇಳಿದ್ದಾರೆ.

‘ಮಾತೃಪಕ್ಷಕ್ಕೆ ಮೋಸ ಮಾಡಿದ ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಸಿದ್ದರಾಮಯ್ಯನವರೇ ನೀವು ಮಾತೃಪಕ್ಷಕ್ಕೆ (ಜೆಡಿಎಸ್) ಮೋಸ ಮಾಡಿ ಹೋಗಿದ್ದೀರಾ? ಇದು ಹೆತ್ತ ತಾಯಿಗೆ ಮಾಡಿದ ದ್ರೋಹಕ್ಕೆ ಸಮ. ಇಲ್ಲಿ ಉಂಡು, ತಿಂದು ಹೋಗಿ ನಮ್ಮ ಪಕ್ಷದ ವಿರುದ್ಧ ಮಾತನಾಡುತ್ತೀರಾ? ನಾವು ಧೃತಿಗೆಡುವುದಿಲ್ಲ’ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

‘ಜೆಡಿಎಸ್ ಬೇರೆಯವರ ಹೆಗಲ ಮೇಲೆ ಕೈ ಹಾಕಿಯೇ ಅಧಿಕಾರಕ್ಕೆ ಬರಬೇಕು’ ಎಂಬ ಸಿ.ಎಂ ಸಿದ್ದರಾಮಯ್ಯ ಹೇಳಿಕೆಗೆ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ಮಂಗಳವಾರ ಹೀಗೆ ಪ್ರತಿಕ್ರಿಯಿಸಿದರು.‘ಯಾರೋ ಕಟ್ಟಿದ ಪಕ್ಷ ಸೇರಿದ ನೀವು ಆ ಪಕ್ಷದ ಮುಖಂಡರಿಗೆ ಅಧಿಕಾರ ತಪ್ಪಿಸಿದಿರಿ. ಅಧಿಕಾರಕ್ಕಾಗಿ ಹಲವು ದಲಿತ ನಾಯಕರನ್ನು ತುಳಿದ ನೀವು ಜೆಡಿಎಸ್ ಬಗ್ಗೆ ಹಗುರವಾಗಿ ಮಾತನಾಡುತ್ತೀರಾ?’ ಎಂದು ಪ್ರಶ್ನಿಸಿದರು.

‘ನಾನು ಅಧಿಕಾರಕ್ಕಾಗಿ ಬಂದಿಲ್ಲ. ಜನ ಮತ್ತು ಕಾರ್ಯಕರ್ತರ ಸೇವೆಗೆ ಬಂದಿದ್ದೇನೆ. ಮೂರು ಬಾರಿ ಸೋತಿದ್ದರೂ ಧೃತಿಗೆಟ್ಟಿಲ್ಲ, ಪಕ್ಷ ಸಂಘಟನೆ ಮಾಡುತ್ತಿದ್ದೇನೆ’ ಎಂದು ಹೇಳಿದರು.

‘ಕಾಂಗ್ರೆಸ್– ಜೆಡಿಎಸ್ ಮೈತ್ರಿ ಸರ್ಕಾರ ಬೀಳಲು ಕಾರಣ ಸಿದ್ದರಾಮಯ್ಯ. ಅವರದ್ದೇ ಪಕ್ಷದ ಶಾಸಕರನ್ನು ಬಿಜೆಪಿಗೆ ಕಳುಹಿಸಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ’ ಎಂದರು.

ಲಾಟರಿ ಹೊಡೆದು ಮುಖ್ಯಮಂತ್ರಿ ಆದ: ಪಾಟೀಲ

ಪ್ರಜಾವಾಣಿ ವಾರ್ತೆ

ಬಿ.ಆರ್. ಪಾಟೀಲ

ಮಂಡ್ಯ: ‘ಜೆಡಿಎಸ್‌ನಿಂದ ಬಂದ 8 ಶಾಸಕರಲ್ಲಿ ನಾನೂ ಒಬ್ಬ. ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದೇವೆ. ಕೆಲವರು ಮಂತ್ರಿಗಳಾಗಿದ್ದಾರೆ. ಸಿದ್ದರಾಮಯ್ಯ ಲಕ್ಕಿ. ಲಾಟರಿ ಹೊಡೆದು ಮುಖ್ಯಮಂತ್ರಿಯಾದ’ ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಹೇಳಿದರು.

ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಅಪಸ್ವರ ಎದ್ದಿದೆ ಎಂಬ ಕಾರಣಕ್ಕೆ ಪಕ್ಷದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಬಂದಿದ್ದರು. ಶಾಸಕರ ನೋವು ಏನಿದೆ ಎಂದು ತಿಳಿದುಕೊಳ್ಳಲು ನಮ್ಮನ್ನೆಲ್ಲ ಕರೆಸಿದ್ದರು. ನಾನು 45 ನಿಮಿಷ ಮಾತನಾಡಿ ಎಲ್ಲ ಮಾಹಿತಿ ನೀಡಿದ್ದೇನೆ. ಗಂಭೀರವಾಗಿ ಪರಿಗಣಿಸಿದ್ದಾರೆ. ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದು ಅವರಿಗೆ ಬಿಟ್ಟದ್ದು’ ಎಂದರು.

‘ನನಗೆ ಸಿದ್ಧಾಂತವೇ ಗಾಡ್‌ಫಾದರ್. ನಾನು ಹಾಗೂ ಸಿದ್ದರಾಮಯ್ಯ ರೈತ ಚಳವಳಿಯಿಂದ ಬಂದಿದ್ದೇವೆ. ರೈತ ನಾಯಕ ನಂಜುಂಡಸ್ವಾಮಿ ಹುರಿದುಂಬಿಸಲಿಲ್ಲ ಎಂದರೆ ಸಿದ್ದರಾಮಯ್ಯ ರಾಜಕೀಯಕ್ಕೆ ಬರುತ್ತಿರಲಿಲ್ಲ. ಕೆಲವರಿಗೆ ಗಾಡೂ ಇದ್ದಾರೆ, ಗಾಡ್‌ಫಾದರೂ ಇದ್ದಾರೆ’ಎಂದರು.

‘ಸಿಎಂ ಬದಲಾವಣೆ ಬಗ್ಗೆ ಮಾತನಾಡುವ ಶಕ್ತಿ ನನಗೆ ಇಲ್ಲ. ಅದೆಲ್ಲವೂ ಹೈಕಮಾಂಡ್‌ಗೆ ಬಿಟ್ಟಿದ್ದು. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವ ವಿಷಯ ನನಗೆ ಗೊತ್ತಿಲ್ಲ ’ ಎಂದರು.

ಹರಿದಾಡಿದ ವಿಡಿಯೊ: ‘ಸಿಎಂ ಸಿದ್ದರಾಮಯ್ಯ ಲಕ್ಕಿ ಲಾಟರಿ ಹೊಡೆದು ಬಿಟ್ಟ. ಸಿಎಂ ಸಿದ್ದರಾಮಯ್ಯಗೆ ಸೋನಿಯಾ ಗಾಂಧಿ ಮೊದಲು ಭೇಟಿ ಮಾಡಿಸಿದವನು ನಾನು. ಅವನ ಗ್ರಹಚಾರ ಚೆನ್ನಾಗಿತ್ತು ಸಿಎಂ ಆದ’ ಎಂದು ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಮೊಬೈಲ್ ಫೋನ್‌ನಲ್ಲಿ ಆಪ್ತರೊಂದಿಗೆ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬೆಂಗಳೂರು ಗ್ರಾಮಾಂತರ ಇನ್ನು ‘ಉತ್ತರ ಜಿಲ್ಲೆ’?

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡಿದ ಸರ್ಕಾರ ಇದೀಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ‘ಬೆಂಗಳೂರು ಉತ್ತರ’ ಜಿಲ್ಲೆ ಎಂದು ಮರು ನಾಮಕರಣ ಮಾಡಲು ಮುಂದಾಗಿದೆ.

ತಾಲ್ಲೂಕಿನ ನಂದಿಗಿರಿಧಾಮದಲ್ಲಿ ಬುಧವಾರ (ಜುಲೈ 2) ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ಪ್ರಸ್ತಾಪ ಮಂಡನೆಯಾಗುವ ಮತ್ತು ಸಭೆ ಈ ಪ್ರಸ್ತಾಪಕ್ಕೆ ಅನುಮೋದನೆ ನೀಡುವ ಸಾಧ್ಯತೆ ಇದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಭಾಗವನ್ನು ರಿಯಲ್ ಎಸ್ಟೇಟ್ ಪರಿಭಾಷೆಯಲ್ಲಿ ಬೆಂಗಳೂರು ಉತ್ತರ ಎಂದೇ ಕರೆಯಲಾಗುತ್ತದೆ.

‘ಬ್ರ್ಯಾಂಡ್ ಬೆಂಗಳೂರು’ ಮೌಲ್ಯ ಮತ್ತು ಲಾಭವನ್ನು ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಿಗೂ ವಿಸ್ತರಿಸಲು ಈ ನಿರ್ಣಯ ಕೈಗೊಳ್ಳುತ್ತಿರುವುದಾಗಿ ಸರ್ಕಾರ ಸಮರ್ಥಿಸಿಕೊಂಡಿದೆ.

1986ರಲ್ಲಿ ಬೆಂಗಳೂರು ನಗರ ಜಿಲ್ಲೆಯಿಂದ ಪ್ರತ್ಯೇಕಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ರಚಿಸಲಾಯಿತು. ಆ ಸಮಯದಲ್ಲಿ ರಾಮನಗರ ಜಿಲ್ಲೆಯ ತಾಲ್ಲೂಕುಗಳೂ ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದ್ದವು.

ನಂತರ 2007ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ವಿಭಜಿಸಿ ರಾಮನಗರ ಜಿಲ್ಲೆ ರಚಿಸಲಾಯಿತು. ಈಚೆಗೆ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರು ನಾಮಕರಣ ಮಾಡಲಾಗಿದೆ. ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು ಉತ್ತರ ಜಿಲ್ಲೆ ಎಂದು ಬದಲಾಗುವ ನಿರೀಕ್ಷೆ ಇದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯ ಹೆಸರನ್ನು ‘ಭಾಗ್ಯನಗರ’ ಎಂದು ಬದಲಿಸುವಂತೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ.

ಸಚಿವ ಸಂಪುಟ ಸಭೆಯಲ್ಲಿ ಇದಕ್ಕೂ ಅನುಮೋದನೆ ದೊರೆಯುವ ಸಾಧ್ಯತೆ ಇದೆ.

ನಿಧನ ವಾರ್ತೆ

ಜಯಾನಂದ ದೇವಾಡಿಗ



ಮಂಗಳೂರು: ಸ್ವಾತಂತ್ರ್ಯ ಹೋರಾಟಗಾರ, ಸಾಮಾಜಿಕ ಕಾರ್ಯಕರ್ತ ಮೂಲ್ಕಿಯ ಜಯಾನಂದ ದೇವಾಡಿಗ (92) ಅವರು ನಗರದ ಬಜಾಲ್ ಆದರ್ಶ ನಗರದಲ್ಲಿ ಮಂಗಳವಾರ ನಿಧನರಾದರು. ಸಂಜೆ ಅಂತ್ಯಕ್ರಿಯೆ ನಡೆಯಿತು.

ಅವರು ದೇವರಾಜ ಅರಸು ಪ್ರಶಸ್ತಿ ಪುರಸ್ಕೃತರಾಗಿದ್ದರು. ಮೃತರಿಗೆ ಅವರಿಗೆ ಪತ್ನಿ ಸರೋಜಿನಿ ದೇವಾಡಿಗ, ಮಕ್ಕಳು, ಮೊಮ್ಮಕ್ಕಳು ಇದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ಜಾತಿಗಳನ್ನು ಸಂಘಟಿಸಿ ಅಭಿವೃದ್ಧಿಗೆ ಶ್ರಮಿಸಿದ್ದರು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದ ಅವರು ಭೂ ಸುಧಾರಣೆ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ದೇವಾಡಿಗ ಸುಧಾರಕ ಸಂಘವನ್ನು ಸ್ಥಾಪಿಸಿ, ಸಮುದಾಯದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಪ್ರಗತಿಗೆ ಶ್ರಮಿಸಿದ್ದರು.

ಉದ್ಯೋಗ ವಾಣಿ

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ,
ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427

ಪ್ರೊಬೆಷನರಿ ಅಧಿಕಾರಿಗಳ ನೇಮಕಾತಿ

ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ಪ್ರೊಬೆಷನರಿ ಅಧಿಕಾರಿಗಳ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಖಾಲಿ ಹುದ್ದೆಗಳ ಸಂಖ್ಯೆ : 541

ಅರ್ಹತೆಯ ಮಾನದಂಡಗಳು (ವಯಸ್ಸು ಅರ್ಹತೆ ಇತ್ಯಾದಿ) ಆವಶ್ಯಕ ಶುಲ್ಕ ಹಾಗೂ ಇನ್ನಿತರ ವಿವರಗಳು ಜಾಹೀರಾತು ಸಂ. **CPRD/PO/2025-26/04** ಬ್ಯಾಂಕಿನ ವೆಬ್ ಸೈಟ್ **https://bank.sbi/careers/current-openings** ನಲ್ಲಿ ಲಭ್ಯವಿದೆ, ಇದರೊಂದಿಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಹಾಗೂ ಅರ್ಜಿಯ ಶುಲ್ಕದ ಆನ್ ಲೈನ್ ಪಾವತಿಗಾಗಿ ಲಿಂಕ್ ಸಹ ಲಭ್ಯವಿದೆ. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಹಾಗೂ ಶುಲ್ಕವನ್ನು ಪಾವತಿಸುವ ಮೊದಲು ಜಾಹೀರಾತನ್ನು ವಿವರವಾಗಿ ಪರಿಶೀಲಿಸಿ ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಳ್ಳುವಂತೆ ಕೋರಲಾಗಿದೆ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ದಿನಾಂಕ: 24.06.2025 ರಿಂದ 14.07.2025**

ಸಂದೇಹಗಳೇನಾದರೂ ಇದ್ದಲ್ಲಿ ದಯವಿಟ್ಟು ಮೇಲೆ ತಿಳಿಸಿರುವ ಬ್ಯಾಂಕಿನ ಅಧಿಕೃತ ವೆಬ್ ಸೈಟ್ ನಲ್ಲಿ ಲಭ್ಯವಿರುವ **"CONTACT US"** ಈ ಲಿಂಕ್ ಮೂಲಕ ನಮಗೆ ಬರೆಯಿರಿ.

ಸ್ಥಳ : ಮುಂಬೈ
ದಿನಾಂಕ : 24.06.2025
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಂ)

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಮುಖ್ಯ ಇಂಜಿನಿಯರ್‌ರವರ ಕಛೇರಿ,ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ),ಕೆ.ಆರ್ ವೃತ್ತ, –560001.

ಸಂ:ಮು.ಇಂ.:ಸಂಕದ:ಲೋ.ಇ. ಪ್ರ.ಕಾ.ಸ.ನೇ..ಇಎಸ್‌ಹೆಚ್:2024–25: ದಿನಾಂಕ:30–06–2025

–: ಅರ್ಜಿಆಹ್ವಾನ :–

(ಎ)ಹುದ್ದೆಯ ಹೆಸರು: ಪ್ರಧಾನ ಕಾನೂನು ಸಲಹೆಗಾರರು, ಹುದ್ದೆಯ ಸಂಖ್ಯೆ: 01,

ಅರ್ಹತೆ: ಕರ್ನಾಟಕ ನ್ಯಾಯಾಂಗ ಸೇವೆಯಲ್ಲಿ ಕಾರ್ಯನಿರ್ವಹಿಸಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ವೇತನ: ಮಾಹೆಯಾನ ರೂ.60,000/– (ರೂಪಾಯಿ ಅರವತ್ತು ಸಾವಿರಗಳು ಮಾತ್ರ) ಇತರೆ ಸೌಲಭ್ಯಗಳು: ಕಛೇರಿ ಕೆಲಸಕ್ಕಾಗಿ ಸಹಾಯಕ ಸಿಬ್ಬಂದಿಗಳನ್ನು ಒದಗಿಸಲಾಗುವುದು. ಮೇಲ್ಕಂಡ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 15.07.2025

(ಬಿ) ಹುದ್ದೆಯ ಹೆಸರು: ಕಾನೂನು ಸಲಹೆಗಾರರು, ಹುದ್ದೆಯ ಸಂಖ್ಯೆ: 01

ಅರ್ಹತೆ: ಕರ್ನಾಟಕ ನ್ಯಾಯಾಂಗ ಸೇವೆಯಲ್ಲಿ ಕಾರ್ಯನಿರ್ವಹಿಸಿದ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಅಥವಾ ಕಾನೂನು ಇಲಾಖೆ ಅಥವಾ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿರುವ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಿಲ್ಲದ ನಿವೃತ್ತ ಅಧಿಕಾರಿಗಳು ವೇತನ: ಮಾಹೆಯಾನ ರೂ.50.000/– (ರೂಪಾಯಿ ಐವತ್ತು ಸಾವಿರಗಳು ಮಾತ್ರ) ಇತರೆ ಸೌಲಭ್ಯಗಳು: ಕಛೇರಿ ಕೆಲಸಕ್ಕಾಗಿ ಸಹಾಯಕ ಸಿಬ್ಬಂದಿಗಳನ್ನು ಒದಗಿಸಲಾಗುವುದು. ಮೇಲ್ಕಂಡ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 15.07.2025

ಹೆಚ್ಚಿನ ವಿವರಗಳಿಗಾಗಿ ಲಾಗಿನ್ ಮಾಡಿ : www.kpwd.gov.in

ಸಹಿ/–
ಮುಖ್ಯ ಇಂಜಿನಿಯರ್,
ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ)
ಬೆಂಗಳೂರು



ಸಮರ್ಥವಾಗಿ ಸಿದ್ಧವಾದ ಮೇಲ್ದರ್ಜೆಯ
ತಂತ್ರಜ್ಞಾನ ದಿಟವಾಗಿಯೂ
ಪವಾಡಕ್ಕೆ ಸಮನಾದುದು
ಆರ್ಥರ್ ಸಿ. ಕ್ಲಾರ್ಕ್

ಪ್ಲಾಸ್ಟಿಕ್‌ನಿಂದ ಪ್ಯಾರಾಸಿಟಮಾಲ್

ಪ್ಲಾಸ್ಟಿಕ್ ಎಂಬ ನೈಸರ್ಗಿಕವಲ್ಲದ ಕೃತಕ ವಸ್ತು ಈಗ ಬ್ಯಾಕ್ಟೀರಿಯಾವೊಂದರ ಸಹವಾಸಕ್ಕೆ ಒಲಿದು ಔಷಧದ ರೂಪದಲ್ಲಿ ಮನುಷ್ಯನಿಗೆ ಪ್ರಯೋಜನಕ್ಕೆ ಒದಗೀತು

• ಕೊಳ್ಳೇಗಾಲ ಶರ್ಮ

ಪ್ಲಾಸ್ಟಿಕ್ – ನೈಸರ್ಗಿಕವಲ್ಲದ ಕೃತಕ ವಸ್ತು. ಕೃತಕವಾದ ರಾಸಾಯನಿಕ ಕ್ರಿಯೆಗಳಿಂದ ಹುಟ್ಟಿದ ಭೂತ ಎಂದೆಲ್ಲ ಕೇಳಿದ್ದೀವಿ. ಈಗ ಇಂತಹುದೇ ಕೃತಕವಾದೊಂದು, ನಿಸರ್ಗದಲ್ಲಿ ಇಲ್ಲವೇ ಇಲ್ಲದಂತಹ ರಾಸಾಯನಿಕ ಕ್ರಿಯೆ ಪ್ಲಾಸ್ಟಿಕ್ಕನ್ನು ನಾವೆಲ್ಲ ನಿತ್ಯ ಬಳಸುವ ಮದ್ದನ್ನಾಗಿ ಪರಿವರ್ತಿಸುತ್ತದೆಯಂತೆ. ಇಂಗ್ಲೆಂಡಿನ ಎಡಿನ್‌ಬರೋ ವಿಶ್ವವಿದ್ಯಾಲಯದ ರಸಾಯನ ವಿಜ್ಞಾನಿ ಸ್ಟೀಫನ್ ವ್ಯಾಲೇಸ್ ಮತ್ತು ತಂಡ, ಪ್ಲಾಸ್ಟಿಕ್ಕಿನಲ್ಲಿರುವ ವಸ್ತುಗಳನ್ನು ಬ್ಯಾಕ್ಟೀರಿಯಾದ ನೆರವಿನಿಂದ ನಾವು ಜ್ವರ, ನೋವಿಗೆ ಬಳಸುವ 'ಪ್ಯಾರಾಸಿಟಮಾಲ್' ಔಷಧವನ್ನಾಗಿ ಬದಲಾಯಿಸಿದ್ದಾರಂತೆ. ಇದಕ್ಕಾಗಿ ಇವರು 'ಎಶ್ಚೆರಿಶಿಯಾ ಕೋಲಿ' ಎನ್ನುವ ಬ್ಯಾಕ್ಟೀರಿಯಾದ ಮೂಲಕ, ಅದುವರೆವಿಗೂ ಯಾವುದೇ ಜೀವಿಯಲ್ಲಿಯೂ ನಡೆಯದಂತಹ ರಾಸಾಯನಿಕ ಕ್ರಿಯೆಯು ನಡೆಯುವಂತೆ ಮಾಡಿದ್ದಾರೆ.

ಜೀವಿಗಳು ಅಸಂಖ್ಯವಾಗಿದ್ದರೂ, ಅವುಗಳಲ್ಲಿ ನಡೆಯುವ ರಾಸಾಯನಿಕ ಕ್ರಿಯೆಗಳು ಸೀಮಿತ. ಇದಕ್ಕೆ ಕಾರಣ ಸರಳ. ನೈಸರ್ಗಿಕವಾಗಿ ಹುಟ್ಟುವ ಯಾವುದೇ ವಸ್ತುವೂ ಇನ್ನೊಂದು ಜೀವಿಗೆ ಆಹಾರವಾಗುವುದರಿಂದ, ವಿಶಿಷ್ಟವಾದ, ಬೇರೆಲ್ಲಿಯೂ ಜರುಗದ ರಾಸಾಯನಿಕ ಕ್ರಿಯೆಗಳಿವೆ ಅವಕಾಶವಿಲ್ಲ. ಇದೇ ಕಾರಣದಿಂದಾಗಿಯೇ, ನೈಸರ್ಗಿಕವಾಗಿ ಹುಟ್ಟದ ಪ್ಲಾಸ್ಟಿಕ್ಕಿನಂತಹ ವಸ್ತುಗಳನ್ನು ಜೀವಿಗಳು ಬಳಸಲಾಗದು. ಪರಿಣಾಮ: ಎಲ್ಲೆಡೆ ಕೊಳೆಯದೆ ಉಳಿದ ಪ್ಲಾಸ್ಟಿಕ್ ತ್ಯಾಜ್ಯಗಳು. ಇದೀಗ, ಜೀವರಾಸಾಯನಿಕ ತತ್ವಗಳ ಜೊತೆಗೆ, ಕೃತಕ ರಾಸಾಯನಿಕ ಕ್ರಿಯೆಯೊಂದನ್ನು ಬೆಸೆಯುವ ಮೂಲಕ ಪ್ಲಾಸ್ಟಿಕ್ಕನ್ನು ಬ್ಯಾಕ್ಟೀರಿಯಾಗಳು ಬಳಸುವಂತೆ ಹಾಗೂ ಆ ಮೂಲಕ ಲಾಭದಾಯಕವಾದ ಪ್ಯಾರಾಸಿಟಮಾಲ್ ತಯಾರಾಗುವಂತೆ ಸ್ಟೀಫನ್ ವ್ಯಾಲೇಸ್ ತಂಡ ಮಾಡಿದೆ.

ಪ್ಯಾರಾಸಿಟಮಾಲ್ ನೋವು, ಜ್ವರಕ್ಕೆ ನೀಡುವ ಔಷಧ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಇದರ ಬಳಕೆ ಮೇರುಮಟ್ಟವನ್ನು ತಲುಪಿ, ಕೊರತೆಯನ್ನು ಅನುಭವಿಸಿದ್ದೆವಷ್ಟೆ. ಡೋಲೋ ಎನ್ನುವ ಗುಳಿಗೆಯ ಪ್ರಮುಖ ಅಂಶ ಇದು. ರಸಾಯನಿಕ ವಿಜ್ಞಾನಿಗಳು ಇದನ್ನು ಅಸಿಟಮಿನೋಫೆನ್ ಅಥವಾ ಎನ್-ಅಸಿಟೈಲ್ ಪ್ಯಾರಾ ಅಮೈನೊ ಫೇನಾಲ್ (n-acetyl-para-aminophenol) ಎಂದು ಕರೆಯುತ್ತಾರೆ. ಈ ಔಷಧವನ್ನು ರಾಸಾಯನಿಕ ತಂತ್ರಗಳಿಂದ ತಯಾರಿಸಲಾಗುತ್ತಿದೆ. ಯಾವುದೇ ಜೀವಿಯಲ್ಲಿಯೂ ಇದು ತಯಾರಾಗುವುದಿಲ್ಲ.

ಇದಕ್ಕೆ ಕಾರಣ ಪ್ಯಾರಾಸಿಟಮಾಲ್‌ನ ರಚನೆ. 'ಬೆಂಜೀನ್' ಎನ್ನುವ ಬಳೆಯಾಕಾರಾದ ಕಾರ್ಬನ್ ಸಂಯುಕ್ತಕ್ಕೆ ಎರಡು ಬದಿಯಲ್ಲಿ, ಬಾಣಲೆಗೆ ಹಿಡಿ ಹಾಕಿದ ಹಾಗೆ ಇನ್ನೆರಡು ಅಣುಗಳನ್ನು ಜೋಡಿಸಿದ ಆಕಾರ. ಪೆಟ್ರೋಲ್ ತಯಾರಿಸುವ ವೇಳೆ ಪಡೆಯುವ ಫೀನಾಲ್ ಎನ್ನುವ ರಾಸಾಯನಿಕದಿಂದ, ಕೆಟಲಿಸ್ಟುಗಳೆನ್ನುವ ಲೋಹದ ವಸ್ತುವಿನ ಜೊತೆಗೆ ಅಸೆಟಿಕ್ ಆಮ್ಲವನ್ನು ಸೇರಿಸಿ ಬಿಸಿ ಮಾಡುವ ಮೂಲಕ ಪ್ಯಾರಾಸಿಟಮಾಲನ್ನು ತಯಾರಿಸುತ್ತಾರೆ. ಸ್ಟೀಫನ್ ವ್ಯಾಲೇಸ್ ತಂಡ ಈ ಬಳೆಯಾಕಾರದ ರಾಸಾಯನಿಕವನ್ನು ಜೈವಿಕ ಕ್ರಿಯೆಯೊಂದನ್ನು ರೂಪಿಸುವ ಮೂಲಕ ತಯಾರಿಸಿದೆ.

ಜೀವಿಗಳಲ್ಲಿ ರಾಸಾಯನಿಕ ಕ್ರಿಯೆಗಳು ಸಾಮಾನ್ಯ ಉಷ್ಣತೆಯಲ್ಲಿ ಹಾಗೂ ಕಿಣ್ವಗಳು ಅಥವಾ ಎಂಜೈಮುಗಳ ನೆರವಿನಿಂದ ನಡೆಯುತ್ತದೆ. ಪ್ರತಿಯೊಂದು ಕ್ರಿಯೆಗೂ ಒಂದು ಎಂಜೈಮು ಇರುತ್ತದೆ. ಉದಾಹರಣೆಗೆ, ಗ್ಲುಕೋಸು ಸಕ್ಕರೆಯನ್ನು ಈಥೈಲ್ ಅಲ್ಕೊಹಾಲ್ ಎನ್ನುವ ಮದ್ಯವನ್ನಾಗಿ ಹುದುಗಿಸುವಾಗ, ಯೀಸ್ಟ್ ಜೀವಿಗಳು ಕಿಣ್ವಗಳನ್ನು ಬಳಸುತ್ತವೆ. ನಾವು ತಿನ್ನುವ ಪ್ರತಿಯೊಂದು ಆಹಾರವೂ ದೇಹದಲ್ಲಿ ಪಚನವಾಗುವುದಕ್ಕೆ ಒಂದಲ್ಲ ಒಂದು ಕಿಣ್ವ ಕಾರಣ. ಆದರೆ ಜೀವಿಗಳಲ್ಲಿ ಇಲ್ಲದೇ ಇರುವ ಕ್ರಿಯೆಗೆ ಕಿಣ್ವ ಎಲ್ಲಿಂದ ಸಿಗಬೇಕು? ಇಂತಹ ಕಿಣ್ವವನ್ನು ತಯಾರಿಸುವುದು ವ್ಯಾಲೇಸ್ ತಂಡದ ಉದ್ದೇಶವಾಗಿತ್ತು.

ಸ್ಟೀಫನ್ ವ್ಯಾಲೇಸ್ ತಂಡ ಇದಕ್ಕಾಗಿ ಇದೀಗ ರಸಾಯನ ವಿಜ್ಞಾನದಲ್ಲಿ ಸುದ್ದಿ ಮಾಡುತ್ತಿರುವ ಕೃತಕಕಿಣ್ವಗಳು ಅಥವಾ ಲೋಹದ ಕಿಣ್ವಗಳನ್ನು ಬಳಸಿದ್ದಾರೆ. ಲೋಹದ ಕಿಣ್ವಗಳು ಎಂದರೆ ಇನ್ನೇನಲ್ಲ. ಕೆಟಲಿಸ್ಟುಗಳಾಗಿ ಕಾರ್ಯ ನಿರ್ವಹಿಸುವ ಕೆಲವು ಲೋಹದ ಅಣುಗಳನ್ನು ಕೆಲವು ಜೈವಿಕ ವಸ್ತುಗಳೊಂದಿಗೆ ಬೆಸೆದು ಕೃತಕಕಿಣ್ವಗಳು ಅಥವಾ ಲೋಹದ ಕಿಣ್ವಗಳನ್ನು ತಯಾರಿಸಬಹುದು. ಈ ಕಿಣ್ವಗಳು ಸಾಮಾನ್ಯ ಉಷ್ಣತೆಯಲ್ಲಿ ಜಟಿಲವಾದ ರಾಸಾಯನಿಕಗಳನ್ನು ತಯಾರಿಸುತ್ತವೆ. ಇಂತಹ ಲೋಹದ ಕಿಣ್ವವನ್ನು ಬಳಸಿಕೊಂಡು, ಪ್ಯಾರಾ ಅಮೈನೊ ಬೆಂಜೋಯಿಕ್ ಆಮ್ಲ ಅಥವಾ ಪಾಬಾ ಎನ್ನುವ ರಾಸಾಯನಿಕವನ್ನು ತಯಾರಿಸಲು ಇವರು ಯೋಜಿಸಿದ್ದರು. ಅದರ ಫಲವಾಗಿ, ಸಂಪೂರ್ಣ ನೈಸರ್ಗಿಕವಾಗಿ ಪ್ಯಾರಾಸಿಟಮಾಲನ್ನು ತಯಾರಿಸಬಹುದು ಎಂದು ಇವರು ಕಂಡುಕೊಂಡಿದ್ದಾರೆ.

ಹೊಸದಾಗಿ ತಯಾರಿಸಿದ ಕಬ್ಬಿಣದ ಅಣುವಿರುವ ಲೋಹದಕಿಣ್ವದ ಪರೀಕ್ಷೆಯನ್ನು ಸ್ಟೀಫನ್ ವ್ಯಾಲೇಸ್ ತಂಡ ನಡೆಸಿತ್ತು. ಈ ಕಿಣ್ವವು ಲೌಸೆನ್ ಕ್ರಿಯೆ ಎನ್ನುವ ರಾಸಾಯನಿಕ ಕ್ರಿಯೆಯ ಮೂಲಕ ಸ್ಟೈರೀನನ್ನು ಜೀರ್ಣಗೊಳಿಸುತ್ತದೆ ಈ ಕ್ರಿಯೆಯ ಕೊನೆಯಲ್ಲಿ 'ಪಾಬಾ' ಎನ್ನುವ ಪೋಷಕಾಂಶ ಉತ್ಪತ್ತಿ ಆಗುತ್ತದೆ. ಪಾಬಾ ತಯಾರಿಕೆಯನ್ನು ಖಚಿತಪಡಿಸಿಕೊಳ್ಳಲು ಸಹಜವಾಗಿ ಪಾಬಾ ಉತ್ಪಾದನೆಯಾಗದ 'ಎಶ್ಚೆರಿಶಿಯಾ ಕೋಲಿ' ಬ್ಯಾಕ್ಟೀರಿಯಾದ ವಿಶೇಷ ತಳಿಗಳನ್ನು ಬಳಸಿದ್ದರು.

ವಿಚಿತ್ರ ಎಂದರೆ ಪಾಬಾ ಇಲ್ಲದ ಪ್ರನಾಳಗಳಲ್ಲಿಯೂ ಕೂಡ ಬ್ಯಾಕ್ಟೀರಿಯಾ ಬೆಳೆಯುತ್ತಿತ್ತು. ಬಹುಶಃ ತಾವು ತಯಾರಿಸಿದ ಲೋಹಕಿಣ್ವ ಈ ಅವಶ್ಯಕ ಪೋಷಕಾಂಶವನ್ನು ಒದಗಿಸುತ್ತಿರಬೇಕು ಎಂದು ವ್ಯಾಲೇಸ್ ತಂಡ ಊಹಿಸಿತು. ಹಾಗಿದ್ದರೆ ಪಾಬಾವನ್ನು ತಯಾರಿಸಲು ಬೇಕಾದ ಮೂಲವಸ್ತು ಲೋಹದ ಕಿಣ್ವಗಳ ಜೊತೆಗೆ ಒದಗಿಸಿದರೆ ಸಾಕಲ್ಲ. ಪಾಬಾ ತಯಾರಿಕೆ ಸಾಧ್ಯ ಎಂದು ತರ್ಕಿಸಿ, ಈ ಕ್ರಿಯೆಯನ್ನು ಲಾಭಕರವಾಗಿ ಬಳಸಲು ಯೋಚಿಸಿತು.

ಆದರೆ ಪಾಬಾದಿಂದ ನೇರವಾಗಿ ಪ್ಯಾರಾಸಿಟಮಾಲನ್ನು ತಯಾರಿಸುವ ಯಾವುದೇ ಕ್ರಿಯೆ ಇಲ್ಲ. ಇದನ್ನು ಎರಡು ಹಂತದಲ್ಲಿ ಮಾಡಬೇಕು. ಅವಕ್ಕೆ ಬೇಕಾದ ಎರಡೂ ಕಿಣ್ವಗಳನ್ನೂ ಎಶ್ಚೆರಿಶಿಯಾ ಕೋಲಿ ತಯಾರಿಸುವುದಿಲ್ಲ. ಹೀಗಾಗಿ, ವ್ಯಾಲೇಸ್ ತಂಡ, ಬೇರೆ ಮೂಲಗಳಿಂದ ಈ ಕಿಣ್ವಗಳನ್ನು ತಯಾರಿಸುವ ಜೀನ್‌ಗಳನ್ನು ಎಶ್ಚೆರಿಶಿಯಾ ಕೋಲಿ ಬ್ಯಾಕ್ಟೀರಿಯಾದೊಳಗೆ ಸೇರಿಸಿ, ಕುಲಾಂತರಿ ತಳಿಗಳನ್ನು ಸೃಷ್ಟಿಸಿತು. ಈ ಕುಲಾಂತರಿಗಳನ್ನು, ಲೋಹಕಿಣ್ವದ ಜೊತೆಗೆ ಕೂಡಿಸಿ, ಟೆರೆಪ್ತಾಲಿಕ್ ಆಮ್ಲವನ್ನು ನೀಡಿದಾಗ, ಅವು ಪ್ಯಾರಾಸಿಟಮಾಲನ್ನು ತಯಾರಿಸಿವೆ. ಪ್ರತಿ ಲೀಟರಿನಲ್ಲಿಯೂ ಹನ್ನೆರಡರಿಂದ ಹತ್ತೊಂಬತ್ತು ಮಿಲಿಗ್ರಾಂ ಪ್ಯಾರಾಸಿಟಮಾಲನ್ನು ಇವರು ಹೀಗೆ ಉತ್ಪಾದಿಸಿದ್ದಾರೆ.

ಪ್ಯಾರಾಸಿಟಮಾಲನ್ನು ನೈಸರ್ಗಿಕವಾಗಿ ತಯಾರಿಸಿದ ಸಾಧನೆ ಇದು. ಅಷ್ಟೇ ಅಲ್ಲ. ಜೀವಿಲೋಕದಲ್ಲಿಯೇ ಇಲ್ಲದ ಹೊಸದೊಂದು ಕ್ರಿಯೆಯನ್ನು ರೂಪಿಸಬಹುದು ಎಂದು ಈ ಮೂಲಕ ನಿರೂಪಿಸಿರುವ ವ್ಯಾಲೇಸ್, ತ್ಯಾಜ್ಯವೊಂದನ್ನು ವಿಲೇವಾರಿ ಮಾಡಲು ಹೊಸ ಉಪಾಯವನ್ನೂ ಸೂಚಿಸಿದೆ. ವ್ಯಾಲೇಸ್ ತಂಡದ ಶೋಧದ ವಿವರಗಳನ್ನು 'ನೇಚರ್ ಕೆಮಿಸ್ಟ್ರಿ' ಪತ್ರಿಕೆ ಇತ್ತೀಚೆಗೆ ಪ್ರಕಟಿಸಿದೆ.

ಸೂಪರ್ ಡ್ರೋನ್ ಪಕ್ಷಿ!

• ನೇಸರ ಕಾಡನಕುಪ್ಪೆ

ಡ್ರೋನ್‌ಗಳ ಅನ್ವೇಷಣೆಯ ಬಳಿಕ ಛಾಯಾಗ್ರಹಣದ ಚಿತ್ರಣವೇ ಬದಲಾಗಿರುವುದು ನಿಮಗೆ ತಿಳಿದೇ ಇದೆ ಅಲ್ಲವೇ? ಮನರಂಜನೆ ಕ್ಷೇತ್ರವಂತೂ ಸಾಕಷ್ಟು ಬೆಳೆದಿದೆ. ಇದಿಷ್ಟೇ ಅಲ್ಲದೇ, ನೂರಾರು ಕಿಲೋಮೀಟರ್ ಸಾಗಬಲ್ಲ, ಯುದ್ಧಕ್ಕೆ ಬಳಕೆಯಾಗುವ ಡ್ರೋನ್‌ಗಳು, ವೈಜ್ಞಾನಿಕ ಡ್ರೋನ್‌ಗಳು, ಸರಕು ಸಾಗಣೆಯ ಡ್ರೋನ್‌ಗಳು – ಹೀಗೆ, ಡ್ರೋನ್‌ಗಳ ವಿಕಸನ ವೇಗಗತಿಯಲ್ಲಿ ಸಾಗುತ್ತಿದೆ. ಈ ವಿಕಸನದ ಹಾದಿಗೆ ಈಗ ಹೊಸ ಸೇರ್ಪಡೆಯಾಗಿದೆ. ಅದೇ, 'ಸೂಪರ್' ಡ್ರೋನ್ ಪಕ್ಷಿಯ ಅನ್ವೇಷಣೆ.

ಡ್ರೋನ್‌ಗಳ ಕಾರ್ಯನಿರ್ವಹಣೆಗೆ ಅತಿ ಪ್ರಮುಖವಾಗಿ ಕಾರ್ಯನಿರ್ವಹಿಸುವುದೇ 'ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ' (ಜಿಪಿಎಸ್). ಅಂದರೆ, ಭೂಮಿಯ ಮೇಲಿರುವ ನಿಯಂತ್ರಕದ ಸಹಾಯದಿಂದ ರೇಡಿಯೊ ಸಂಜ್ಞೆಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುವ ಡ್ರೋನ್ ತನ್ನ ದಿಕ್ಕು ದಾರಿಗಳನ್ನು ಸೂಕ್ತರೀತಿಯಲ್ಲಿ ಕಂಡುಕೊಳ್ಳುತ್ತದೆ. ಒಂದು ಇಂಚು ವ್ಯತ್ಯಾಸವಿಲ್ಲದಂತೆ ನಿಗದಿತ ಸ್ಥಳಗಳಿಗೆ ತಲುಪಬಹುದಾದ ಸಾಧ್ಯತೆ ಅವಕ್ಕೆ ಸಿಕ್ಕಿರುವುದೇ ಈ ಜಿಪಿಎಸ್ ವ್ಯವಸ್ಥೆಯಿಂದ. ಇದೇ ಜಿಪಿಎಸ್ ವ್ಯವಸ್ಥೆಯನ್ನು ಬಳಸಿಕೊಂಡು ಡ್ರೋನ್‌ಗಳನ್ನು ಕೆಲವು ಪ್ರದೇಶಗಳ ಒಳ ಪ್ರವೇಶಿಸದಂತೆ ನಿರ್ಬಂಧಿಸಬಹುದಾದ ಅವಕಾಶವೂ ಇದೆ. ಇದು ಸುರಕ್ಷೆಯ ದೃಷ್ಟಿಯಿಂದ ಅಗತ್ಯವಾದುದು.

ಇದೀಗ ಜಿಪಿಎಸ್ ಸಂಜ್ಞೆಗಳೇ ಬೇಕಿಲ್ಲದ, ತನಗೆ ತಾನೇ ತನ್ನ ಸ್ವಂತ ಬುದ್ಧಿಯಿಂದ ಲೆಕ್ಕಾಚಾರಗಳನ್ನು ಹಾಕಿಕೊಂಡು ತನಗೆ ಬೇಕಾದ ಅಥವಾ ಪೂರ್ವನಿಗದಿತ ಜಾಗಗಳಿಗೆ ತಲುಪುವ ಡ್ರೋನ್‌ಗಳನ್ನು ಹಾಂಗ್‌ಕಾಂಗ್ ವಿಶ್ವವಿದ್ಯಾಲಯದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಹಾಗೂ ವಿಜ್ಞಾನಿ ಪ್ರೊ. ಫೂ ಝೂಂಗ್ ಅವರ ತಂಡವು ಅನ್ವೇಷಿಸಿದೆ. ಇದಕ್ಕೆ ಅವರ ತಂಡವು 'ಸೂಪರ್' ಡ್ರೋನ್ ಪಕ್ಷಿ ಎಂಬ ಹೆಸರನ್ನೂ ಇಟ್ಟಿದ್ದಾರೆ.

ಈ ಡ್ರೋನ್‌ಗೆ ಅವರು ಪಕ್ಷಿ ಎಂದು ಕರೆದಿರುವುದಕ್ಕೆ ಕೆಲವು ಕಾರಣಗಳಿವೆ. ಮೊದಲನೆಯ ಕಾರಣ ಪಕ್ಷಿಗಳ ಸಂಚಾರಕ್ಕೆ ಇತರರ ಆಜ್ಞೆ ಬೇಕಿಲ್ಲ. ಅವಕ್ಕೆ ಸ್ವಂತ ಬುದ್ಧಿ ಇರುತ್ತದೆ. ಎರಡನೇ ಕಾರಣ ಬಹುತೇಕ ಪಕ್ಷಿಗಳು ಕತ್ತಲಾದ ಮೇಲೇ ವಿರಾಮ ಪಡೆಯುವುದು ನಿಜವಾದರೂ ಕೆಲವು ಪಕ್ಷಿಗಳು ನಿರಂತರವಾಗಿ ಸಾವಿರಾರು ಕಿಲೋಮೀಟರ್ ಗುಳೆ ಹೋಗುವ ಶಕ್ತಿಯನ್ನು ಹೊಂದಿರುತ್ತವೆ. ಇದೇ ಕಾರಣಕ್ಕಾಗಿ ಈ ಡ್ರೋನ್ ಅನ್ನು ಪಕ್ಷಿ ಎಂದು ಈ ವಿಜ್ಞಾನಿಗಳು ಕರೆದಿದ್ದಾರೆ.

ಏನಿದು ತಂತ್ರಜ್ಞಾನ?

ಡ್ರೋನ್ ತಂತ್ರಜ್ಞಾನಕ್ಕೆ ಇದು ಖಂಡಿತವಾಗಿಯೂ ಹೊಸ ಸೇರ್ಪಡೆಯೇ. ಸಾಮಾನ್ಯವಾಗಿ ಅಂತರದೇಶೀಯ ಸಂಚಾರದ ಡ್ರೋನ್‌ಗಳು ಹಗಲಿನ ಸಮಯದಲ್ಲೇ ಸಂಚರಿಸಬೇಕು. ಜೊತೆಗೆ, ಅವುಗಳಿಗೆ ನಿರಂತರವಾಗಿ ಜಿಪಿಎಸ್ ವ್ಯವಸ್ಥೆ ಇರಬೇಕು. ಹಾಗಾಗಿ, ಡ್ರೋನ್‌ಗಳನ್ನು ಅರಣ್ಯ ಪ್ರದೇಶಗಳ ಮೂಲಕ ಸಂಚರಿಸದಂತೆ ಸಾಮಾನ್ಯವಾಗಿ ನೋಡಿಕೊಳ್ಳಲಾಗುತ್ತದೆ. ಏಕೆಂದರೆ, ಅರಣ್ಯ ಪ್ರದೇಶದಲ್ಲಿ ಜಿಪಿಎಸ್ ಕೆಲವೊಮ್ಮೆ ಸಿಗದೇ ಇರುವುದು, ಜೊತೆಗೆ, ಜಿಪಿಎಸ್ ಮೂಲಕ ಡ್ರೋನ್ ನಿಯಂತ್ರಿಸುವ ಭೂಮಿಯ ಮೇಲಿನ ಸಾಧನಗಳಿಗೆ ಅಂತರಜಾಲ ಹಾಗೂ ಇತರ ಸಂಪರ್ಕ ತಂತ್ರಜ್ಞಾನಗಳು ಲಭ್ಯವಾಗದೇ ಇರುವುದು. ನೆನಪಿರಲಿ, ಜಿಪಿಎಸ್‌ಗೆ ಮೊಬೈಲ್ ಸೇವಾ ಜಾಲ ಬೇಕಿಲ್ಲ. ಅದು ನೇರವಾಗಿ ಉಪಗ್ರಹಗಳಿಂದ ಸಂಪರ್ಕ ಪಡೆಯುತ್ತದೆ. ನಮ್ಮ ಕೃತಕ ಉಪಗ್ರಹಗಳು ಎಷ್ಟೇ ಸುಧಾರಿಸಿದ್ದರೂ ನಮ್ಮ ಭೂಖಂಡದ ಬಹುತೇಕ ಪ್ರಮಾಣವನ್ನು ಆವರಿಸುವ ಶಕ್ತಿ ಇದೆ ಎಂದು ನಾವು ಹೇಳಿಕೊಂಡರೂ ಪರಿಪೂರ್ಣ ಜಾಲವ್ಯಾಪ್ತಿ ಜಿಪಿಎಸ್‌ಗೆ ಸಹ ಇಲ್ಲ. ಹಾಗಾಗಿ, ಅರಣ್ಯಭಾಗದ ಕೆಲವು ಭಾಗಗಳಲ್ಲಿ ಜಾಲವ್ಯಾಪ್ತಿಯ ಕೊರತೆಯಿಂದಾಗಿ ಡ್ರೋನ್ ದಾರಿ ತಪ್ಪುವ ಹಾಗೂ ಹಾಳಾಗುವ ಸಾಧ್ಯತೆ ಇರುತ್ತದೆ.

ಹಾಗಾಗಿ, ಇಲ್ಲಿ ಹೊಸ ತಂತ್ರಜ್ಞಾನದ ಸೇರ್ಪಡೆಯಾಗಿದೆ. ಡ್ರೋನ್‌ಗಳಲ್ಲಿ ಜಿಪಿಎಸ್, ಮೊಬೈಲ್ ನೆಟ್‌ವರ್ಕ್ ವ್ಯವಸ್ಥೆ, ಅಂತರಜಾಲ ಮಾತ್ರವೇ ಅಲ್ಲದೇ ಕೆಲವು ಇತರ ಸೂಕ್ಷ್ಮ ಸಂವಹನ ಸಾಧನಗಳಿರುತ್ತವೆ. ಅಂದರೆ, ಅಡೆ ತಡೆ ಗುರುತಿಸುವ ಸಂವೇದನಾ ಸಾಧನಗಳು. ಇವು ಸಣ್ಣಪುಟ್ಟ ದೂಳಿನ ಕಣಗಳಿಂದ ಹಿಡಿದು, ರೆಂಬೆ ಕೊಂಬೆ, ಕಡಿದಾದ ಕೊರಕಲು, ಕಲ್ಲು ಇತ್ಯಾದಿ ಅಡೆತಡೆಗಳನ್ನು ಗುರುತಿಸಿ ಡ್ರೋನ್‌ಗೆ ದಾರಿ ತೋರುತ್ತವೆ. ಕೆಲವು ಸುಧಾರಿತ ಯುದ್ಧ ಡ್ರೋನ್‌ಗಳಲ್ಲಿ ರೇಡಾರ್ ವ್ಯವಸ್ಥೆ ಸಹ ಇರುತ್ತದೆ.

ಜಿಪಿಎಸ್ ಇಲ್ಲದೆಯೂ ದಾರಿ ಹುಡುಕುವಂಥ ಕೃತಕ ಬುದ್ಧಿಮತ್ತೆಯ ಮಿದುಳನ್ನು ಈ 'ಸೂಪರ್' ಡ್ರೋನ್ ಪಕ್ಷಿಯಲ್ಲಿ ಇರಿಸಲಾಗಿದೆ. ಈ ಮಿದುಳಲ್ಲಿ ಡ್ರೋನ್ ಸಂಚರಿಸಬೇಕಾದ ಮಾರ್ಗ, ನಕ್ಷೆ, ಗುರಿ, ವಾಪಸ್ ಬರಬೇಕಾದ ಮಾರ್ಗ, ಸಮಯ ಇತ್ಯಾದಿ ಸಂಕೀರ್ಣ ದತ್ತಾಂಶಗಳನ್ನು ಅಡಕಗೊಳಿಸಲಾಗಿರುತ್ತದೆ. ಅವಗೆಂಪು ಬೆಳಕನ್ನು ಬಳಸಿಕೊಂಡು ಪರಿಸರದ ಬದಲಾವಣೆಗಳನ್ನೂ ಗುರುತಿಸುವ ಶಕ್ತಿಯನ್ನು ಈ ಡ್ರೋನ್‌ನಲ್ಲಿ ತುಂಬಲಾಗಿದೆ. ಹಾಗಾಗಿ, ಈ ಡ್ರೋನ್ ಕತ್ತಲಲ್ಲೂ ಸುಲಭವಾಗಿ ಸಂಚರಿಸಬಲ್ಲದು. ಹಾಗಾಗಿ, ಡ್ರೋನ್‌ಗಳಿಗೆ ಇರುವ ಅತಿ ಮುಖ್ಯ ದೌರ್ಬಲ್ಯಗಳಾದ ಜಿಪಿಎಸ್ ಲಭ್ಯತೆ ಹಾಗೂ ಬೆಳಕಿನ ಮೂಲಗಳನ್ನೂ ಪಕ್ಕಕ್ಕಿಟ್ಟು ಸ್ವಯಂಚಾಲಿತವಾಗಿ ಹಾಗೂ ಸ್ವಶಕ್ತಿಯ ಸಹಾಯದಿಂದ ತನ್ನ ಗುರಿ ತಲುಪಬಲ್ಲ ಸಾಮರ್ಥ್ಯವನ್ನು ಈ ಡ್ರೋನ್ ಹೊಂದಿದೆ.

ಅತಿ ವೇಗದ ಚಾಲನೆ

ಜೊತೆಗೆ ಅತಿ ವೇಗದ ಚಾಲನೆಗೂ ಇದು ಸೈ ಎಂದಿದೆ. ಸದ್ಯಕ್ಕೆ ಕೇವಲ ಹಗುರ ಡ್ರೋನ್‌ಗಳ ತಯಾರಿಯಾಗಿದೆ. ಇದು ಗರಿಷ್ಠ ಗಂಟೆಗೆ 45 ಮೈಲು (ಸುಮಾರು 73 ಕಿಲೋಮೀಟರ್) ವೇಗದಲ್ಲಿ ಸಂಚರಿಸುವ ಶಕ್ತಿ ಹೊಂದಿದೆ. ಕೇವಲ ಒಂದು ಅಡಿ ಗಾತ್ರದ ಈ ಡ್ರೋನ್ ಒಂದೂವರೆ ಕಿಲೋಗ್ರಾಂ ತೂಕದ ಹೊರೆ ಹೊರವ ಶಕ್ತಿ ಹೊಂದಿದೆ. ಅಂದಾಜು 230 ಅಡಿಗಳಷ್ಟು ದೂರದಲ್ಲಿನ ಅಡೆತಡೆಗಳನ್ನು ಗುರುತಿಸುವ ಡ್ರೋನ್ ಯಾವುದೇ ಕಾರಣಕ್ಕೂ ಎಲ್ಲಿಗೂ ಡಿಕ್ಕಿ ಹೊಡೆಯದಂತೆ ಸುರಕ್ಷಿತವಾಗಿ ಚಲಿಸಬಲ್ಲದು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ವಿಜ್ಞಾನ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

34) ಚಲುವೆ ಪುಡಿಯನ್ನು ಎಲ್ಲೆಲ್ಲಿ ಬಳಸಲಾಗುತ್ತದೆ.?
ಉತ್ತರ:–(ಎ) ಬಟ್ಟೆ ಕಾರ್ಖಾನೆಯಲ್ಲಿ ಹತ್ತಿ ಮತ್ತು ನಾರನ್ನು ಚೆಲುವೆ ಮಾಡಲು, ಕಾಗದ ಕಾರ್ಖಾನೆಯಲ್ಲಿ ಮರದ ತಿರುಳನ್ನು ಚೆಲುವೆ ಮಾಡಲು ಮತ್ತು ಲಾಂಡ್ರಿಯಲ್ಲಿ ತೊಳೆದ ಬಟ್ಟೆಯನ್ನು ಚೆಲುವೆ ಮಾಡಲು ಬಳಸುವರು
(ಬಿ) ಅನೇಕ ರಾಸಾಯನಿಕ ಕಾರ್ಖಾನೆಗಳಲ್ಲಿ ಉತ್ಕರ್ಷಣಕಾರಿಯಾಗಿ; ಮತ್ತು
(ಸಿ) ಕುಡಿಯುವ ನೀರನ್ನು ಕ್ರಿಮಿಮುಕ್ತಗೊಳಿಸಲು ಸೋಂಕುನಾಶಕವಾಗಿ. ಬಳಸುವರು

35) ಸ್ಫಟಿಕೀಕರಣದ ನೀರನ್ನು ಹೊರತೆಗೆಯುವಿಕೆ ಚಿತ್ರವನ್ನು ಬರೆಯಿರಿ
ಉತ್ತರ:–



36) ಅಡುಗೆ ಸೋಡಾದ ರಾಸಾಯನಿಕ ಹೆಸರು ಏನು?
ಉತ್ತರ:– ಅಡುಗೆ ಸೋಡಾದ ರಾಸಾಯನಿಕ ಹೆಸರು ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್($NaHCO_3$).

37) ಅಡುಗೆ ಸೋಡಾದ ತಯಾರಿಕೆಯಲ್ಲಿ ಯಾವ ಕಚ್ಚಾವಸ್ತುವನ್ನು ಉಪಯೋಗಿಸುತ್ತಾರೆ?
ಉತ್ತರ:– ಅಡುಗೆ ಸೋಡಾದ ತಯಾರಿಕೆಯಲ್ಲಿ ಸೋಡಿಯಂ ಕ್ಲೋರೈಡನ್ನೂ ಒಂದು ಕಚ್ಚಾವಸ್ತುವಾಗಿ ಉಪಯೋಗಿಸುತ್ತಾರೆ.

38) ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್‌ನ ಉಪಯೋಗಗಳನ್ನು ತಿಳಿಸಿ
ಉತ್ತರ:– ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್‌ನ ಉಪಯೋಗಗಳು (ಅ) ಕಾರ್ಬನ್ ಡೈಆಕ್ಸೈಡ್ ಬ್ರೆಡ್ ಅಥವಾ ಕೇಕ್‌ಅನ್ನು ಉಬ್ಬಿಸಿ ಮೃದು ಮತ್ತು ರಂಧ್ರಯುಕ್ತಗೊಳಿಸುತ್ತದೆ. ಹೀಗಾಗಿ ಇದರ ತಯಾರಿಕೆಯಲ್ಲಿ ಬಳಸುತ್ತಾರೆ.
(ಬ) ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ ಆಮ್ಲಶಾಮಕಗಳಲ್ಲೂ ಒಂದು ಪ್ರಮುಖ ಘಟಕವಾಗಿ ಬಳಸುವರು
(ಕ). ಇದು ಕ್ಷಾರೀಯವಾಗಿರುವುದರಿಂದ ಜಠರದಲ್ಲಿನ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸುತ್ತದೆ ಮತ್ತು ಉಪಶಮನ ನೀಡುತ್ತದೆ ಹೀಗಾಗಿ ಮದ್ದಿನ ರೂಪದಲ್ಲಿ ಬಳಸುವರು.
(ಡ) ಇದನ್ನು ಬೆಂಕಿ ಆರಿಸುವ ಸೋಡಾ–ಆ್ಯಸಿಡ್ ಉಪಕರಣಗಳಲ್ಲಿ ಬಳಸುವರು.

39) ಕಾರಣ ಕೊಡಿ
*** ಕಾರ್ಬನ್ ಡೈಆಕ್ಸೈಡ್ ಬ್ರೆಡ್ ಅಥವಾ ಕೇಕ್ ಅನ್ನು ಉಬ್ಬಿಸಿ ಮೃದು ಮತ್ತು ರಂಧ್ರಯುಕ್ತಗೊಳಿಸುತ್ತದೆ**
ಉತ್ತರ:– ಅಡುಗೆ ಸೋಡಾ (ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್) ಅಥವಾ ಬೇಕಿಂಗ್ ಪುಡಿಯನ್ನು ಕಾಸಿದಾಗ ಅಥವಾ ನೀರಿನೊಂದಿಗೆ ಮಿಶ್ರಗೊಳಿಸಿದಾಗ ಈ ಕೆಳಗಿನ ಕ್ರಿಯೆ ನಡೆಯುತ್ತದೆ.
$NaHCO_3+H^+\rightarrow CO_2+H_2O+$ಆಮ್ಲದ ಸೋಡಿಯಂ ಲವಣ (ಯಾವುದೇ ಆಮ್ಲದಿಂದ)
ಈ ಕ್ರಿಯೆಯಲ್ಲಿ ಉತ್ಪತ್ತಿಯಾದ **ಕಾರ್ಬನ್ ಡೈ ಆಕ್ಸೈಡ್** ಬ್ರೆಡ್ ಅಥವಾ ಕೇಕ್‌ಅನ್ನು ಉಬ್ಬಿಸಿ ಮೃದು ಮತ್ತು ರಂಧ್ರಯುಕ್ತಗೊಳಿಸುತ್ತದೆ.

39) ವಾಷಿಂಗ್ ಸೋಡಾದ ರಾಸಾಯನಿಕ ಸೂತ್ರ ಬರೆಯಿರಿ
ಉತ್ತರ:– $Na_2CO_3.10H_2O$

40) ವಾಷಿಂಗ್ ಸೋಡಾದ ಉಪಯೋಗಗಳು ಯಾವುವು?
ಉತ್ತರ:– ವಾಷಿಂಗ್ ಸೋಡಾದ ಉಪಯೋಗಗಳು
(ಅ) ಸೋಡಿಯಂ ಕಾರ್ಬೋನೇಟ್ (ವಾಷಿಂಗ್ ಸೋಡಾ)ಅನ್ನು ಗಾಜು, ಸಾಬೂನು ಮತ್ತು ಕಾಗದ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ.
(ಆ) ಇದನ್ನು ಬೋರಾಕ್ಸ್‌ನಂತಹ ಸೋಡಿಯಂ ಸಂಯುಕ್ತಗಳ ಉತ್ಪಾದನೆಯಲ್ಲಿ ಉಪಯೋಗಿಸುತ್ತಾರೆ.
(ಇ) ಸೋಡಿಯಂ ಕಾರ್ಬೋನೇಟ್‌ಅನ್ನು ಗೃಹಬಳಕೆಯ ಸ್ವಚ್ಛಕಾರಿಯಾಗಿ ಉಪಯೋಗಿಸಬಹುದು.
(ಈ) ಇದನ್ನು ನೀರಿನ ಶಾಶ್ವತ ಗಡಸುತನ ನಿವಾರಣೆಗೆ ಉಪಯೋಗಿಸುತ್ತಾರೆ.

41) ಯಾವುದನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ ಎನ್ನುತ್ತಾರೆ?
ಉತ್ತರ:– ಜಿಪ್ಸಂಅನ್ನು 373K ಗೆ ಕಾಸಿದಾಗ, ಇದು ನೀರಿನ ಅಣುವನ್ನು ಕಳೆದುಕೊಳ್ಳುತ್ತದೆ ಮತ್ತು ಕ್ಯಾಲ್ಸಿಯಂ ಸಲ್ಫೇಟ್ ಹೆಮಿಹೈಡ್ರೇಟ್($CaSO_4.\frac{1}{2}H_2O$) ಆಗುತ್ತದೆ. ಇದನ್ನೇ ಪ್ಲಾಸ್ಟರ್ ಆಫ್ ಪ್ಯಾರಿಸ್ ಎನ್ನುತ್ತಾರೆ.

42) ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಉಪಯೋಗ ಏನು? ಮತ್ತು ಏಕೆ?
ಉತ್ತರ:– ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ವೈದ್ಯರು ಮುರಿದ ಮೂಳೆಗಳಿಗೆ ಸರಿಯಾದ ಸ್ಥಳದಲ್ಲಿ ಆಧಾರವಾಗಿ ಲೇಪನ ಮಾಡಲು ಬಳಸುವರು
ಇದೊಂದು ಬಿಳಿ ಪುಡಿಯಾಗಿದ್ದು ನೀರಿನೊಂದಿಗೆ ಮಿಶ್ರಗೊಳಿಸಿದಾಗ ಪುನಃ ಗಟ್ಟಿಯಾದ ಘನ ರೂಪದ ಜಿಪ್ಸಂ ಆಗಿ ಬದಲಾಗುತ್ತದೆ ಹೀಗಾಗಿಯೇ ವೈದ್ಯರು ಇದನ್ನು ಮುರಿದ ಮೂಳೆಗಳಿಗೆ ಸರಿಯಾದ ಸ್ಥಳದಲ್ಲಿ ಆಧಾರವಾಗಿ ಇಡಲು ಬಳಸುತ್ತಾರೆ.

43) ಬಿಟ್ಟ ಸ್ಥಳ ತುಂಬಿ
1) ಆಮ್ಲ–ಪ್ರತ್ಯಾಮ್ಲ ಸೂಚಕಗಳು ರಂಗುಗಳು ಅಥವಾ ರಂಗುಗಳ ಮಿಶ್ರಣಗಳಾಗಿದ್ದು ಇವುಗಳನ್ನು ....ಮತ್ತು ....ಗಳ ಇರುವಿಕೆಯನ್ನು ಸೂಚಿಸಲು ಬಳಸುತ್ತಾರೆ.
ಉತ್ತರ:– ಆಮ್ಲ ಪ್ರತ್ಯಾಮ್ಲ
2) ವಸ್ತುವಿನ ಆಮ್ಲೀಯ ಗುಣಕ್ಕೆ ಕಾರಣ ದ್ರಾವಣದಲ್ಲಿ ....ಅಯಾನುಗಳ ಉಂಟಾಗುವಿಕೆ. ದ್ರಾವಣದಲ್ಲಿ ....ಅಯಾನುಗಳ ಉಂಟಾಗುವಿಕೆ, ವಸ್ತುವಿನ ಪ್ರತ್ಯಾಮ್ಲೀಯ ಗುಣಕ್ಕೆ ಕಾರಣವಾಗಿದೆ.
ಉತ್ತರ:– H^+ OH^-

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

ELECTROCHEMISTRY

51. A galvanic cell has electrical potential of 1.1 V. If an opposing potential of 1.1 V is applied to this cell, what will happen to the cell reaction and current flowing through the cell?
Ans:- The cell reaction will stop and no current will flow through the cell.

52. How will the pH of bring (aq. NaCl solution) be affected when it is electrolysed?
Ans:- The pH of aqueous NaCl solution (brine solution) is 7. Upon electrolysis, NaOH is formed as one of the products. Since it is a strong base, the pH of the solution will rise.

53. Unlike dry cell, the mercury cell has a constant cell potential throughout its useful life. Why?
Ans:- In the mercury cell, ions are not involved in the overall cell reaction. Therefore, it generates a constant cell potential of 1.35 V throughout. On the other hand, in a dry cell, ions participate in the overall cell reaction. As the concentration of the ions changes, the cell potential which is initially 1.25 V is also likely to change. It does not remain constant.

54. What advantage do the fuel cells have over primary and secondary batteries?
Ans:- Primary batteries contain a limited amount of reactants and are discharged when the reactants are consumed. Secondary batteries or cells can be recharged but the process takes a long time. Fuel cells work continuously as long the reactants (i.e. fuel) are supplied.

55. Articles of iron are generally coated with zinc. Explain.
Ans:- Iron gets easily rusted in the presence of moist air. Formation of rust ($Fe_2O_3.xH_2O$) is a redox reaction in which Fe is oxidized to Fe^{3+} ions. Since zinc is more reactive than iron (placed below iron in the activity series), it is oxidized to Zn^{2+} ions instead of iron when coated over the surface of iron. Thus, zinc takes part in the redox reaction while surface of iron remains intact.

56. Why is anode negatively charged in an electrochemical cell?
Ans:- Because electrons are released at this electrode.

57. Why is standard hydrogen electrode called reversible electrode?
Ans:- Because it can act both as anode as well as cathode in an electrochemical cell.

58. Corrosion of copper, silver and rusting of iron are very common. Both cause enormous damage. Rusting of iron in particular results in the loss of crores of rupees every year. Major accidents occur because of this.
(a) What is the chemical formula of rust?
(b) Why do silver articles become black when exposed to air for a long time?
(c) How is copper affected by corrosion?
(d) Suggest three ways to check rusting of iron so as to check national wastage of money?

Ans:- (a) The chemical formula of rust is –

$$Fe_2O_3.xH_2O$$

(b) Air contains in it traces of H_2S gas. It reacts with silver to form silver sulphide (Ag_2S). It is black and its coating gets deposited on silver articles.

(c) Corrosion of copper leads to the formation of basic copper carbonate which is green in colour.

$$2Cu+\underbrace{H_2O+CO_2+O_2}_{\text{(Present in air)}}\rightarrow \underbrace{Cu(OH)_2\ CuCO_3}_{\text{Basic copper carbonate}}$$

(d) The rusting of iron can be checked of prevented by –
(i) coating the surface of the metal with some rust proof paints.
(ii) electroplating articles of iron with metals like nickel, chromium etc. which resist corrosion.
(iii) galvanizing or tinning the surface of iron with zinc or tin respectively.

59. Manu and his father went a shop to purchase a battery for their inverter. Shopkeeper showed them two types of batteries, one with lead plates and the other with cadmium plates. The battery with cadmium plates was more expensive than the lead battery. Manu's father wanted to purchase lead battery as it was cheaper.
After reading the above passage, answer the following questions:
(a) What would a student of chemistry, suggest to Manu's father?
(b) What are the values associated with the above decision?

Ans:- (a) A student of chemistry would suggest Manu's father to buy more expensive cadmium plate battery as compared to lead storage battery which is commonly used in inverters due to following reasons
i) Lead is a highly poisonous substance. The vapours of lead as well as of sulphuric acid which acts as the electrolyte are very harmful to the human body. They can lead to serious health problems.
ii) The vapors released from chemical reactions pollute the atmosphere.
(c) Less dependence of lead storage batteries and lead free petrol cause less pollution and keeps the environment healthy.

60. In the dry cell
(a) Which substance acts as anode and which as cathode?
(b) Which electrolyte is used in the cell?
(c) What is the cell potential of the cell?
(d) Why does the cell voltage not change during operation?

Ans:- (a) Zinc container acts as anode while carbon rod behaves as cathode.
(b) A paste of HgO and KOH acts as the electrolyte.
(c) The cell potential is 1.35 V *(Contd....)*

ಚಿಟಿಕೆ ಸುದ್ದಿ

ಜಾತಿ ಗಣತಿಯ ಅಧಿಕಾರ ರಾಜ್ಯಕ್ಕಿಲ್ಲ

ದಾವಣಗೆರೆ: ಜಾತಿ ಗಣತಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆಯೇ ಹೊರತು ರಾಜ್ಯ ಸರ್ಕಾರಕ್ಕೆ ಅಲ್ಲ. ರಾಜಕೀಯ ಹಿತಾಸಕ್ತಿಗೆ ವೀರಶೈವ ಲಿಂಗಾಯತ ಧರ್ಮದ ಒಳಪಂಗಡಗಳನ್ನು ಛಿದ್ರಗೊಳಿಸಿ ಗೊಂದಲ ಸೃಷ್ಟಿಸುವುದಕ್ಕೆ ಪಂಚಪೀಠಗಳು ಅವಕಾಶ ನೀಡುವುದಿಲ್ಲ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದರು.

'ಕೇಂದ್ರ ಸರ್ಕಾರ ಜನಗಣತಿಯ ಜೊತೆಗೆ ಜಾತಿಗಣತಿ ನಿರ್ಧಾರ ಕೈಗೊಂಡ ಮರುಗಳಿಗೆಯಲ್ಲೇ ರಾಜ್ಯ ಸರ್ಕಾರ ಜಾತಿಗಣತಿ ಜೊತೆಗೆ ಸಾಮಾಜಿಕ ಸಮೀಕ್ಷೆಗೆ ಮುಂದಾಗಿದೆ. ಜನರ ದಾರಿ ತಪ್ಪಿಸುವ ಈ ಪ್ರಯತ್ನವನ್ನು ವಿರೋಧಿಸುತ್ತೇವೆ' ಎಂದು ಹೇಳಿದರು.

ಮಂಗಳವಾರ ಇಲ್ಲಿ ನಡೆದ ಪಂಚಪೀಠಾಧೀಶರ ಪೂರ್ವಭಾವಿ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಚಲೋ ಇಂಗಳಿ' ಹೋರಾಟ ನಾಳೆ

ಬೆಳಗಾವಿ: 'ಹುಕ್ಕೇರಿ ತಾಲ್ಲೂಕಿನ ಇಂಗಳಿಯಲ್ಲಿ ಶ್ರೀರಾಮ ಸೇನೆ ಸಂಘಟನೆಯ ಐವರು ಕಾರ್ಯಕರ್ತರನ್ನು ಮರಕ್ಕೆ ಕಟ್ಟಿ ಥಳಿಸಿದ ಎಲ್ಲ ಆರೋಪಿಗಳನ್ನು ಬಂಧಿಸಬೇಕು. ಇಲ್ಲದಿದ್ದರೆ, ಜುಲೈ 3ರಂದು 'ಚಲೋ ಇಂಗಳಿ' ಹೋರಾಟ ಕೈಗೊಳ್ಳುತ್ತೇವೆ' ಎಂದು ಶ್ರೀರಾಮ ಸೇನೆ ರಾಜ್ಯ ಘಟಕದ ಅಧ್ಯಕ್ಷ ಗಂಗಾಧರ ಕುಲಕರ್ಣಿ ಎಚ್ಚರಿಕೆ ನೀಡಿದರು.

'ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಅವರು ಘಟನೆಗೆ ಸಂಬಂಧಿಸಿ ಸುಳ್ಳಿನ ಕಂತೆ ಸೃಷ್ಟಿಸಿದ್ದಾರೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಇಂಧನ ಮೇಲಿನ ಸೆಸ್ ಹಣಕ್ಕೆ ಪ್ರಸ್ತಾವ

ಸಚಿವ ಲಾಡ್ ಹೇಳಿಕೆ : ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪೆಟ್ರೋಲ್, ಡೀಸೆಲ್ ಮೇಲಿನ ಸೆಸ್‌ನಲ್ಲಿ ಶೇ 1 ಅಥವಾ ಶೇ 2ರಷ್ಟು ಹಣವನ್ನು ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕೆ ನೀಡಲು ಮುಖ್ಯಮಂತ್ರಿಯವರನ್ನು ಕೋರಲಾಗಿದೆ' ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಇಲ್ಲಿ ಹೇಳಿದರು.

ಕಾರ್ಮಿಕ ಇಲಾಖೆ ಮಂಗಳವಾರ ಏರ್ಪಡಿಸಿದ್ದ, ಧಾರವಾಡ ಜಿಲ್ಲೆಯ ವಿವಿಧ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸೆಸ್ ಹಣ ನೀಡುವ ಪ್ರಸ್ತಾವ ಕಾರ್ಯರೂಪಕ್ಕೆ ಬಂದರೆ, ₹2 ಸಾವಿರ ಕೋಟಿ ಸಿಗುತ್ತದೆ' ಎಂದರು.

'ಕರ್ನಾಟಕದ ಜಿಎಸ್‌ಟಿ ಪಾಲಿನಲ್ಲಿ ಶೇ 0.01ರಷ್ಟು ಹಣ ನೀಡಲು ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ. ಅದರ ಮೊತ್ತ ₹1 ಸಾವಿರ ಕೋಟಿ ಆಗಲಿದೆ. ಈ ಎರಡೂ ಯೋಜನೆ ಜಾರಿಯಾದರೆ, ಅಸಂಘಟಿತ ವಲಯದ ಕಾರ್ಮಿಕರಿಗೆ ಉತ್ತಮ ಸೌಲಭ್ಯ ಸಿಗಲಿದೆ' ಎಂದರು.

'ರಾಜ್ಯದಲ್ಲಿ ಶೇ 90ರಷ್ಟು ಕಾರ್ಮಿಕರು ಅಸಂಘಟಿತರು. ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕ ಇಲಾಖೆಯಲ್ಲಿ 1.08 ಕೋಟಿ ಕಾರ್ಮಿಕರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ 35 ಲಕ್ಷ ಮಂದಿ ಕಟ್ಟಡ ನಿರ್ಮಾಣ ಕಾರ್ಮಿಕರು' ಎಂದು ಅವರು ಹೇಳಿದರು.

ಹುಬ್ಬಳ್ಳಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ ಲಾಡ್ ಅವರು ಅಸಂಘಟಿತ ವಲಯದ ಕಾರ್ಮಿಕ ಮಹಿಳೆಗೆ ಸ್ಮಾರ್ಟ್ ಕಾರ್ಡ್ ವಿತರಿಸಿದರು. ಜಿಲ್ಲಾಧಿಕಾರಿ ದಿವ್ಯಪ್ರಭು, ಶಾಸಕ ಮಹೇಶ ಟೆಂಗಿನಕಾಯಿ ಮತ್ತಿತರರು ಉಪಸ್ಥಿತರಿದ್ದರು

ಸ್ಫೋಟ: ಮೃತರ ಸಂಖ್ಯೆ 36ಕ್ಕೆ ಏರಿಕೆ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಭೇಟಿ: ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರು ಕೆಲ ಸಚಿವರ ಜತೆ ದುರಂತ ನಡೆದ ಸ್ಥಳಕ್ಕೆ ಭೇಟಿ ನೀಡಿದರು. ಘಟನೆ ಬಗ್ಗೆ ಸಮಗ್ರ ವರದಿ ನೀಡುವಂತೆ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ದೊಡ್ಡ ದುರಂತ ನಡೆದರೂ ಕಂಪನಿಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದ್ದಕ್ಕೆ ಮುಖ್ಯಮಂತ್ರಿ ಅವರು ಕಂಪನಿಯ ಆಡಳಿತ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡರು.

'ಇದುವರೆಗೆ 9 ಮೃತದೇಹಗಳ ಗುರುತು ಪತ್ತೆ ಹಚ್ಚಲಾಗಿದೆ. ಡಿಎನ್‌ಎ ಪರೀಕ್ಷೆ ಬಳಿಕ ಇತರ ಮೃತದೇಹಗಳ ಗುರುತು ಪತ್ತೆ ಮಾಡಲಾಗುವುದು' ಎಂದು ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೃತರಲ್ಲಿ ಹೆಚ್ಚಿನವರು ಒಡಿಶಾ, ಪಶ್ಚಿಮ ಬಂಗಾಳ ಮತ್ತು ಬಿಹಾರ ರಾಜ್ಯಗಳಿಗೆ ಸೇರಿದವರಾಗಿದ್ದಾರೆ. ಕಾರ್ಖಾನೆಯ ರಿಯಾಕ್ಟರ್‌ನಲ್ಲಿ ಸೋಮವಾರ ಬೆಳಿಗ್ಗೆ ಸ್ಫೋಟ ಸಂಭವಿಸಿದ ಬಳಿಕ ಬೆಂಕಿ ಹೊತ್ತಿಕೊಂಡಿತ್ತು. ಸ್ಫೋಟದ ತೀವ್ರತೆಗೆ ಮೂರು ಅಂತಸ್ತಿನ ಕಟ್ಟಡದ ಒಂದು ಭಾಗ ಕುಸಿದು ಬಿದ್ದಿತ್ತು.

ಮೃತಪಟ್ಟವರೊಬ್ಬರ ಕುಟುಂಬದ ಸದಸ್ಯರು ರೋದಿಸಿದರು –ಪಿಟಿಐ ಚಿತ್ರ

ಎಫ್‌ಐಆರ್ ದಾಖಲು ತನಿಖೆ ಶುರು

ಸಂತ್ರಸ್ತರೊಬ್ಬರ ಕುಟುಂಬದ ಸದಸ್ಯರು ನೀಡಿದ ದೂರಿನಂತೆ ಪೊಲೀಸರು ಕಾರ್ಖಾನೆಯ ಆಡಳಿತ ಮಂಡಳಿ ವಿರುದ್ಧ ಮಂಗಳವಾರ ಪ್ರಕರಣ ದಾಖಲಿಸಿದ್ದು, ತನಿಖೆ ಆರಂಭಿಸಿದ್ದಾರೆ. 'ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 105, 110 ಮತ್ತು 117ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

₹1 ಕೋಟಿ ಪರಿಹಾರ: ಸಿ.ಎಂ ಭರವಸೆ

ಮೃತರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ನೀಡಲು ಕ್ರಮವಹಿಸಲಾಗುವುದು ಎಂದು ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ತಿಳಿಸಿದ್ದಾರೆ.

'ತಲಾ ₹1 ಕೋಟಿ ಪರಿಹಾರ ಸಿಗುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಕಂಪನಿಯ ಆಡಳಿತ ಮಂಡಳಿ ಜತೆ ಮಾತುಕತೆ ನಡೆಸಲಿದೆ' ಎಂದಿದ್ದಾರೆ.

ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹10 ಲಕ್ಷ ಹಾಗೂ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾದವರಿಗೆ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಅವರು ಪ್ರಕಟಿಸಿದರು. ಗಾಯಾಳುಗಳ ಚಿಕಿತ್ಸೆಯ ವೆಚ್ಚವನ್ನು ಸರ್ಕಾರ ಮತ್ತು ಕಂಪನಿ ಭರಿಸಲಿವೆ ಎಂದರು.

ವಿಕಾಸ್ ಅಮಾನತು ರದ್ದು

ಒಂದನೇ ಪುಟದಿಂದ...

ಆಕ್ಷೇಪ ಏನಿತ್ತು?: 'ಭಾರಿ ದುರ್ನಡತೆ, ಭ್ರಷ್ಟಾಚಾರ, ಕ್ರಿಮಿನಲ್ ನಿರ್ಲಕ್ಷ್ಯದಂತಹ ಸಂಗತಿಗಳು ಎದುರಾದಾಗ ಮಾತ್ರವೇ ಅಮಾನತು ಮಾಡುವಂತಹ ತೀವ್ರ ಕ್ರಮಕ್ಕೆ ಮುಂದಾಗಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರರಿಗೆ ಯಾವುದೇ ಪೂರ್ವಭಾವಿ ನೋಟಿಸ್ ನೀಡದೆ, ಪ್ರಾಥಮಿಕ ವಿಚಾರಣೆಯನ್ನೂ ನಡೆಸದೆ ಹಾಗೂ ಅವರ ವಿರುದ್ದದ ಆರೋಪಗಳನ್ನು ಅಲ್ಲಗಳೆದು ಸಮರ್ಥನೆ ಮಾಡಿಕೊಳ್ಳಲಿಕ್ಕೂ ಕಿಂಚಿತ್ ಅವಕಾಶ ಕಲ್ಪಿಸದೆ, ನಿಂತ ಗಳಿಗೆಯಲ್ಲೇ ಅಮಾನತು ಆದೇಶ ಹೊರಡಿಸಿರುವುದು ಸುಪ್ರೀಂ ಕೋರ್ಟ್ ತೀರ್ಪುಗಳಿಗೆ ವಿರುದ್ಧವಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಅಮಾನತು: ವಿಕಾಸ್ ಕುಮಾರ್ ವಿಕಾಸ್ ಸೇರಿದಂತೆ ಐಪಿಎಸ್ ಅಧಿಕಾರಿಗಳಾದ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಬೆಂಗಳೂರು ನಗರ ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಎಚ್. ತೆಕ್ಕಣ್ಣವರ್ ಹಾಗೂ ರಾಜ್ಯ ಪೊಲೀಸ್ ಅಧಿಕಾರಿಗಳಾದ ಕಬ್ಬನ್ ಪಾರ್ಕ್ ಠಾಣೆಯ ಎಸಿಪಿ ಸಿ.ಬಾಲಕೃಷ್ಣ ಮತ್ತು ಇನ್‌ಸ್ಪೆಕ್ಟರ್ ಎ.ಕೆ.ಗಿರೀಶ್ ಅವರನ್ನು ರಾಜ್ಯ ಸರ್ಕಾರ 2025ರ ಜೂನ್ 4ರಂದು ಅಮಾನತು ಮಾಡಿ ರಾಜ್ಯ ಸರ್ಕಾರ ಆದೇಶಿಸಿತ್ತು.

ಮೇಲ್ಮನವಿಗೆ ಸಿದ್ಧತೆ: 'ಸಿಎಟಿ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಿದ್ಧತೆ ನಡೆಸಿದೆ. ಈಗಾಗಲೇ ಅಡ್ವೊಕೇಟ್ ಜನರಲ್ ಕಚೇರಿಯು ಮೇಲ್ಮನವಿಯ ಕರಡು ಸಿದ್ಧಪಡಿಸಿ ರಾಜ್ಯ ಗೃಹ ಇಲಾಖೆ, ಸಿಬ್ಬಂದಿ ಹಾಗೂ ಆಡಳಿತ ಇಲಾಖೆಗೆ ಕಳುಹಿಸಿದೆ. ಸರ್ಕಾರದಿಂದ ಅನುಮೋದನೆ ದೊರೆತ ಕೂಡಲೇ ಮೇಲ್ಮನವಿ ಸಲ್ಲಿಸಿ, ಸಿಎಟಿ ಆದೇಶಕ್ಕೆ ಮಧ್ಯಂತರ ತಡೆ ನೀಡುವಂತೆ ಕೋರಲಿದೆ' ಎಂದು ಮೂಲಗಳು ತಿಳಿಸಿವೆ.

ಕಾಲ್ತುಳಿತಕ್ಕೆ ಆರ್‌ಸಿಬಿ ನೇರ ಕಾರಣ

ಒಂದನೇ ಪುಟದಿಂದ...

ದೇವರಲ್ಲ: 'ಪೊಲೀಸರು ತಮಗಿದ್ದ 12 ಗಂಟೆಗಳಲ್ಲಿ ಎಲ್ಲಾ ಸಿದ್ಧತೆಗಳನ್ನೂ ಮಾಡಬಲ್ಲರು ಎಂದು ನಿರೀಕ್ಷಿಸಲು ಸಾಧ್ಯವಿಲ್ಲ. ಪೊಲೀಸರೂ ಮನುಷ್ಯರೇ. ಅವರೇನು ದೇವರು ಅಥವಾ ಜಾದೂಗಾರರಲ್ಲ. ಅಲ್ಲಾವುದ್ದೀನ್ ಅದ್ಭುತ ದೀಪದಂತೆ ಜಾದೂ ಮಾಡುವ ಶಕ್ತಿಯನ್ನು ಅವರು ಹೊಂದಿಲ್ಲ' ಎಂದು ಪೀಠ ಆದೇಶದಲ್ಲಿ ವಿವರಿಸಿದೆ.

'ಕೆಎಸ್‌ಸಿಎ ಪೊಲೀಸರಿಗೆ ಬರೆದಿರುವ ಪತ್ರದಲ್ಲಿ ಅನುಮತಿ ಮಂಜೂರು ಮಾಡಿದ ಅಥವಾ ಸಿದ್ಧತೆ ನಡೆಸುವುದಕ್ಕೆ ಮನವಿ ಮಾಡಿದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪತ್ರವು ಕೇವಲ ವಿಜಯೋತ್ಸವ ನಡೆಸುವ ಉದ್ದೇಶವನ್ನು ಸಾದರ ಪಡಿಸುತ್ತದೆ. ಪೊಲೀಸ್ ಠಾಣಾಧಿಕಾರಿಗೆ ಪತ್ರ ಸಲ್ಲಿಸಿದ ಮಾತ್ರಕ್ಕೆ ಪೊಲೀಸರು ದಿಢೀರ್ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಾರೆ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ' ಎಂದು ಹೇಳಿದೆ.

'ಕರ್ತವ್ಯಲೋಪ ಆಧಾರದಡಿ ಅಮಾನತು ಆದೇಶವನ್ನು ಹೊರಡಿಸುವಾಗ ಸೂಕ್ತ ದಾಖಲೆ, ಆಧಾರಗಳು ಇರಲಿಲ್ಲ ಎಂಬುದು ಕಂಡಬರುತ್ತದೆ. ಆದ್ದರಿಂದ, ಸರ್ಕಾರದ ಆದೇಶವು ಸಮಂಜಸವಾಗಿಲ್ಲ. ಮತ್ತೊಂದೆಡೆ ಬೃಹತ್ ಸಭೆಯನ್ನು ಆಯೋಜಿಸಲು ಪೊಲೀಸರು ಬೇರೆ ಯಾವುದೇ ಕ್ರಮ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಹಾಗಾಗಿ, ಅರ್ಜಿದಾರರನ್ನು ಸೇವೆಯಿಂದ ಅಮಾನತುಪಡಿಸಿದ ಆದೇಶವನ್ನು ರದ್ದುಪಡಿಸಲಾಗುತ್ತಿದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ನೆರವಿಗೆ ವಿಶೇಷ ಘಟಕ: ಭರವಸೆ

ಶ್ರೀನಗರ (ಪಿಟಿಐ): ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆಯಿಂದ ಜಮ್ಮು–ಕಾಶ್ಮೀರದಲ್ಲಿ ತೊಂದರೆಗೀಡಾದ ಕುಟುಂಬಗಳ ಸಹಾಯಕ್ಕೆ ವಿಶೇಷ ಘಟಕ ಸ್ಥಾಪಿಸುವುದರ ಜತೆಗೆ ಟೋಲ್ ಫ್ರೀ ನಂಬರ್ ಅನ್ನು ಪರಿಚಯಿಸುವುದಾಗಿ ಜಮ್ಮು–ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಘೋಷಿಸಿದ್ದಾರೆ.

'ಹೊಸ ಕ್ರಿಮಿನಲ್ ಕಾನೂನು ರಚನೆ: ದೊಡ್ಡ ಸುಧಾರಣೆ'

ನವದೆಹಲಿ(ಪಿಟಿಐ): 'ದೇಶದ ನಾಗರಿಕರ ಎಲ್ಲ ಹಕ್ಕುಗಳ ರಕ್ಷಣೆಯಾಗಬೇಕು ಹಾಗೂ ಯಾವುದೇ ಅಪರಾಧಿ ಶಿಕ್ಷೆಯಿಂದ ಪಾರಾಗಬಾರದು ಎಂಬ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ರಚಿಸಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಹೇಳಿದ್ದಾರೆ.

'ಈ ಹೊಸ ಮೂರು ಕ್ರಿಮಿನಲ್ ಕಾನೂನುಗಳ ರಚನೆಯು ನ್ಯಾಯದಾನ ಪ್ರಕ್ರಿಯೆಯಲ್ಲಿ ಮಾಡಲಾದ ಅತಿದೊಡ್ಡ ಸುಧಾರಣೆಯೂ ಆಗಿದೆ' ಎಂದು ಅವರು ಹೇಳಿದ್ದಾರೆ.

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷಣಾ ಸಂಹಿತೆ (ಬಿಎನ್‌ಎಸ್‌ಎಸ್) ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆ (ಬಿಎಸ್‌ಎ) ಜಾರಿಗೊಂಡು ವರ್ಷ ತುಂಬಿರುವ ಕಾರಣ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿರು,

ಕರ್ನಾಟಕ ಸರ್ಕಾರ

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ಪದನಿಮಿತ್ತ ಕಾರ್ಯದರ್ಶಿ & ನೋಡಲ್ ಅಧಿಕಾರಿ (ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ.

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–27 ದೂರವಾಣಿ : 080-22109670/665, ಇಮೇಲ್ : rcb27bangalore@gmail.com

No-ADM/CR/09/2025-26 Date: 30-06-2025

ಟೆಂಡರ್ ಅಧಿಸೂಚನೆ

Regional Commissioner, Bengaluru Division and Nodal Officer, Ex-Officio Secretary (Economic offences) invites tender from interested agencies/ firms/companies to supply stationery and other required essential items to this office for the year 2025-26. The interested may submit their proposal as detailed in the tender document through E-procurement Portal **http://www.kppp.karnataka.gov.in** on or before specified date.

Commencement of download of e-Tender Form from website- https://eproc.karnataka.gov.in	02/07/2025
Last Date for Queries on or before	07/07/2025 till 5:00 p.m.
Pre-Bid Meeting	08/07/2025 at 11.00 a.m.
Last Date for Uploading of Tender in e-procurement platform on or before	10/07/2025 till 5:00p.m.
Opening of Technical Bid	11/07/2025 at 12:00 p.m.
Date of Original Document Verification	Will be done on the uploaded documents at e-portal.
Submission of Samples	18/07/2025 at 11:00 am
Opening of Financial Bid	Will be intimated
Approximate Value of the Tender.	Rs. 10.00 Lakhs

ಸಹಿ/–
ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ಪದನಿಮಿತ್ತ ಕಾರ್ಯದರ್ಶಿ & ನೋಡಲ್ ಅಧಿಕಾರಿ (ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ. ಬೆಂಗಳೂರು

DIPR/CP/1581/Zen/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ನೋಂದಣಿ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಯುಎನ್ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು – 560051.
ಇಮೇಲ್ ಐಡಿ: dgm3bswml@gmail.com

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/05/2025–25 ದಿನಾಂಕ: 01–07–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ / ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೆಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕೆಳಗೆ ತಿಳಿಸಲಾದ ಕಾಮಗಾರಿಗಾಗಿ ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ–ಪಾವತಿ ರೂಪದಲ್ಲಿ ಪ್ರತಿಯೊಂದು ಕಾಮಗಾರಿಗೆ ನೀಡಲಾಗಿರುವ ನಿರ್ದಿಷ್ಟ ಶುಲ್ಕವನ್ನು (ಹಿಂತಿರುಗಿಸಲಾಗದಂತಹದು) ಪಾವತಿಸಬೇಕು. ಟೆಂಡರ್ ಸಲ್ಲಿಸುವವರು ಮಾನ್ಯವಾದ ನೋಂದಣಿ ಪ್ರಮಾಣಪತ್ರದ ಪ್ರತಿ ಜೊತೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (ಸ್ಟಾಂಡರ್ಡ್ ಟೆಂಡರ್ ಬಿಡ್ ಡಾಕ್ಯುಮೆಂಟ್ ರೂಪದಲ್ಲಿ) ಸಲ್ಲಿಸಬೇಕು.

ಕ್ರ. ಸಂ.	ಕಾಮಗಾರಿಯ ಹೆಸರು	ಕೆಲಸದ ಮೌಲ್ಯ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ಮೊತ್ತ ರೂ.ಗಳಲ್ಲಿ)	ಪೂರ್ಣಗೊಳಿಸುವಿಕೆಯ ನಿಗದಿತ ಅವಧಿ	ಗುತ್ತಿಗೆದಾರರ ಅರ್ಹತೆ
1	ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿಂದ (DWCCs) ಮತ್ತು ಸಂಸ್ಕರಣಾ ಘಟಕಗಳಿಂದ ರೆಫ್ಯೂಸ್ಡ್ ಡೆರೈವ್ಡ್ ಫ್ಯೂಲ್ (ಆರ್‌ಡಿಎಫ್) ಅನ್ನು ಬಿಡದಿ ಕೆಪಿಸಿಎಲ್ ತ್ಯಾಜ್ಯದಿಂದ ಇಂಧನ ಉತ್ಪಾದಿಸುವ ಸ್ಥಾವರಕ್ಕೆ ಸಾಗಿಸುವ ಹಾಗೂ ಸ್ಥಾವರದಲ್ಲಿ ಉತ್ಪತ್ತಿಯಾದ ಬೂದಿಯನ್ನು ಭೂಭರ್ತಿ ಸ್ಥಳಕ್ಕೆ ಸಾಗಿಸಲು ಟೆಂಡರ್, 2ನೇ ಹಂತ (2ನೇ ಕರೆ).	980.00	ರೂ. 1,00,000/– ಅನ್ನು ಇ–ಪಾವತಿ ಮೂಲಕ, ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮೂಲಕ, ಮತ್ತು ಉಳಿದ ರೂ.13,70,000/– ಅನ್ನು ರಾಷ್ಟ್ರೀಕೃತ / ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸಲಾಗುತ್ತದೆ.	220 ದಿನಗಳು	ಸಾಮಾನ್ಯ

ವೇಳಾಪಟ್ಟಿ:

1. ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್ ದಾಖಲೆಯನ್ನು ಅಪ್‌ಲೋಡ್ ಮಾಡಿದ **ದಿನಾಂಕ: 02.07.2025.** 2. ಬಿಡ್ ಪೂರ್ವ ಸಭೆಯ ದಿನಾಂಕ: **07.07.2025 ರಂದು ಮಧ್ಯಾಹ್ನ 3:00 ಗಂಟೆಗೆ** ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಅವರ ಕಚೇರಿಯಲ್ಲಿ. 3. ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 09.07.2025 ರಂದು ಸಂಜೆ 4:00 ಗಂಟೆಗೆ ಮುಂಚಿತವಾಗಿ.** 4. ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.07.2025 ರಂದು ಸಂಜೆ 4:30 ಗಂಟೆಯ ನಂತರ.**

ಸೂಚನೆ: 1. ಯಾವುದೇ ಜಂಟಿ ಉದ್ಯಮ / ಒಕ್ಕೂಟಕ್ಕೆ ಅವಕಾಶವಿಲ್ಲ. ಟೆಂಡರ್‌ನ ಸಿಂಧುತ್ವವು ಟೆಂಡರ್ ತೆರೆಯುವ ದಿನಾಂಕದಿಂದ 90 ದಿನಗಳು. 2. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೋಂದಾಯಿಸದ ಆಕಾಂಕ್ಷಿ ಬಿಡ್ಡುದಾರರು / ಗುತ್ತಿಗೆದಾರರು ವೆಬ್‌ಸೈಟ್ **(https://kppp.karnataka.gov.in)** ನಲ್ಲಿ ಭಾಗವಹಿಸುವ ಮೊದಲು ನೋಂದಾಯಿಸಿಕೊಳ್ಳಬೇಕು **(https://kppp.karnataka.gov.in).** 3. ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಬಿಡ್ಡುದಾರರು ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬಿಡ್‌ನೊಂದಿಗೆ ಲಗತ್ತಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು. 4. ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಿ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. 5. ವಿವರಗಳು, ನೋಂದಣಿ ಮತ್ತು ಇ–ಪಾವತಿಗಾಗಿ ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in)** ಗೆ ಭೇಟಿ ನೀಡಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿಯನ್ನು ಸಂಪರ್ಕಿಸಿ.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು

ವಾಸಾಸಂಇ/ವಾ.ಪ್ರ/1584/ಎಸ್‌ಎಸ್‌ಸಿ/2025–26

ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾವೇರಿ

ಪಶು ಆಸ್ಪತ್ರೆ ಆವರಣ, ಪಿ.ಬಿ. ರಸ್ತೆ, ಹಾವೇರಿ– 581 110

ದೂರವಾಣಿ ಸಂಖ್ಯೆ : 08375–200 540 ಇ–ಮೇಲ್: purhavemul@gmail.com

ಐ.ಎಫ್.ಟಿ. ಸಂಖ್ಯೆ/ಹಾಹಾಒ/ಶೇಮತಾಂ/ಟೆಂಡರ್/ /2025–26 ದಿನಾಂಕ: 01.07.2025

ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ

ಹಾವೇರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಬಿ.ಎಮ್.ಸಿ. ಕೇಂದ್ರಗಳಿಗೆ ಹಾಗೂ ಶಿಥಲೀಕರಣ ಕೇಂದ್ರಗಳಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಲ್ ಮುಚ್ಚಿದ ಬಾಡಿಯುಳ್ಳ 2022 ಅಥವಾ ನಂತರದ ಮಾದರಿಯ ಸರಕು ಸಾಗಾಣಿಕೆ ವಾಹನವನ್ನು, ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒಕ್ಕೂಟಕ್ಕೆ ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು. ವಿಳಾಸ : https://kppp.karnataka.gov.in

1	ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	01.07.2025 ರಿಂದ 08.08.2025 ಸಂಜೆ 05.00 ಗಂಟೆಯವರೆಗೆ
2	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	08.08.2025 ರಂದು ಸಂಜೆ 5.00 ರವರೆಗೆ
3	ಟೆಕ್ನಿಕಲ್ ಟೆಂಡರ್ ತೆರೆಯುವ ದಿನ	11.08.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ
4	ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ	13.08.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ

ಕ್ರ ಸಂ.	ಹಾಲು ಶೇಖರಣೆ / ಕಾರಿನ ಮಾರ್ಗಗಳ ಹೆಸರು	ಅಂದಾಜು ದಿನದ ಅಂತರ (ಕೀ.ಮೀ)	ಸಾಮರ್ಥ್ಯ (ಮೆ.ಟನ್)	ಇ.ಎಂ.ಡಿ. (ರೂ.)	ಭದ್ರತಾ ಠೇವಣಿ (ರೂ.)
1	ಮರಡೂರ ಬಿ.ಎಂ.ಸಿ ಮಾರ್ಗ	142	2	30,000/–	30,000/–
2	ನೆಗಳೂರ ಬಿಎಂಸಿ ಮಾರ್ಗ – 1	138	2	30,000/–	30,000/–
3	ದೊಡ್ಡಗುಬ್ಬಿ ಬಿಎಂಸಿ ಮಾರ್ಗ	71.2	2	30,000/–	30,000/–
4	ಹಿರೆಕಬ್ಬಾರ ಬಿಎಂಸಿ ಮಾರ್ಗ	52	2	30,000/–	30,000/–
5	ದೇವಗಿರಿ ಬಿಎಂಸಿ ಮಾರ್ಗ	117	2	30,000/–	30,000/–
6	ಯಲವಿಗಿ ಬಿಎಂಸಿ ಮಾರ್ಗ	116	2	30,000/–	30,000/–
7	ಮುಗಳಿ ಬಿಎಂಸಿ ಮಾರ್ಗ	182	2	30,000/–	30,000/–
8	ಕುಂದೂರ ಬಿಎಂಸಿ ಮಾರ್ಗ – 1	140	2	30,000/–	30,000/–
9	ಮುದೆನೂರ ಬಿಎಂಸಿ ಮಾರ್ಗ – 1	82	2	30,000/–	30,000/–
10	ಹನುಮರಹಳ್ಳಿ ಬಿಎಂಸಿ ಮಾರ್ಗ	150	2	30,000/–	30,000/–
11	ಮಡ್ಲೂರ ಬಿಎಂಸಿ ಮಾರ್ಗ	99	2	30,000/–	30,000/–
12	ಸುಣಕಲ್ಲಬಿದರಿ ಬಿಎಂಸಿ ಮಾರ್ಗ	62	2	30,000/–	30,000/–
13	ಬೊಮ್ಮನಹಳ್ಳಿ ಬಿಎಂಸಿ ಮಾರ್ಗ	130	2	30,000/–	30,000/–
14	ಕಲಿವಾಳ ಬಿಎಂಸಿ ಮಾರ್ಗ	56	2	30,000/–	30,000/–
15	ಹಲಗೇರಿ ಬಿಎಂಸಿ ಮಾರ್ಗ	122	2	30,000/–	30,000/–
16	ಬೆಟಕೆರೂರ ಬಿಎಂಸಿ ಮಾರ್ಗ	22	2	30,000/–	30,000/–
17	ನಾಗವಂದ ಬಿಎಂಸಿ ಮಾರ್ಗ	52	2	30,000/–	30,000/–
18	ಆಲದಕಟ್ಟಿ ಬಿಎಂಸಿ ಮಾರ್ಗ	102	2	30,000/–	30,000/–
19	ತೊಂಡುರು ಬಿಎಂಸಿ ಮಾರ್ಗ	146	2	30,000/–	30,000/–
20	ಗೊಂದಿ ಬಿಎಂಸಿ ಮಾರ್ಗ	186	2	30,000/–	30,000/–
21	ಕರೂರ ಬಿಎಂಸಿ ಮಾರ್ಗ	80	2	30,000/–	30,000/–
22	ಕಬ್ಬೂರ ಬಿಎಂಸಿ ಮಾರ್ಗ	117	2	30,000/–	30,000/–
23	ನೆಗಳೂರ ಬಿಎಂಸಿ ಮಾರ್ಗ – 2	70	2	30,000/–	30,000/–
24	ಬಂಕಾಪುರ ಬಿಎಂಸಿ ಮಾರ್ಗ	156	2	30,000/–	30,000/–
25	ಕಡೂರ ಬಿ.ಎಮ್.ಸಿ ಮಾರ್ಗ	66	2	30,000/–	30,000/–
26	ಮಕರಿ ಬಿ.ಎಂ.ಸಿ ಮಾರ್ಗ	76.8	2	30,000/–	30,000/–
27	ಮತ್ತೂರು ಬಿ.ಎಮ್.ಸಿ ಮಾರ್ಗ	145	2	30,000/–	30,000/–
28	ಕಲ್ಲೇದೇವರು ಬಿ.ಎಂ.ಸಿ ಮಾರ್ಗ	140	2	30,000/–	30,000/–
29	ಆಡೂರ ಬಿ.ಎಮ್.ಸಿ ಮಾರ್ಗ	173	2	30,000/–	30,000/–
30	ಸುತ್ತಕೋಟೆ ಬಿ.ಎಂ.ಸಿ ಮಾರ್ಗ	100	2	30,000/–	30,000/–
31	ಶ್ರೀರಾಮನಕೊಪ್ಪ – ಹಿರೆಕೆರೂರ ಸಿಸಿ ಮಾರ್ಗ	96	2	30,000/–	30,000/–
32	ಇಂಗಳಗೊಂದಿ – ಹಿರೆಕೆರೂರ ಸಿಸಿ ಮಾರ್ಗ	77	2	30,000/–	30,000/–
33	ಅಬಲೂರು – ಹಿರೆಕೆರೂರ ಸಿಸಿ ಮಾರ್ಗ	68	2	30,000/–	30,000/–
34	ಆಲದಗೇರಿ – ಹಿರೆಕೆರೂರ ಸಿಸಿ ಮಾರ್ಗ	140	2	30,000/–	30,000/–
35	ವೀರಾಪುರ – ಹಿರೆಕೆರೂರ ಸಿಸಿ ಮಾರ್ಗ	74	2	30,000/–	30,000/–
36	ಗೊಡಚಿಕೊಂಡ – ಹಿರೆಕೆರೂರ ಸಿಸಿ ಮಾರ್ಗ	51	2	30,000/–	30,000/–
37	ಹಿರೇಮತ್ತೂರು – ಹಿರೇಕೆರೂರು ಸಿಸಿ ಮಾರ್ಗ	98	2	30,000/–	30,000/–
38	ಹಳಿಯಾಳ – ಹಿರೆಕೆರೂರ ಸಿ.ಸಿ ಮಾರ್ಗ	122	2	30,000/–	30,000/–
39	ಚಿಕ್ಕಕಬ್ಬಾರ – ಹಿರೆಕೆರೂರ ಸಿ.ಸಿ ಮಾರ್ಗ	158	2	30,000/–	30,000/–
40	ಕಳಗೊಂಡ – ಹಿರೆಕೆರೂರ ಸಿ.ಸಿ ಮಾರ್ಗ	46	2	30,000/–	30,000/–
41	ಬುರಡಿಕಟ್ಟಿ – ಹಿರೆಕೆರೂರ ಸಿಸಿ ಮಾರ್ಗ	38	2	30,000/–	30,000/–
42	ಚಿಕ್ಕೋಣತಿ – ಹಿರೆಕೆರೂರ ಸಿ.ಸಿ ಮಾರ್ಗ	98	2	30,000/–	30,000/–
43	ಕೋಟಿಹಾಳ – ಹಿರೇಕೆರೂರು ಸಿಸಿ ಮಾರ್ಗ	208	2	30,000/–	30,000/–
44	ಹಿರೇಮುಗದೂರು – ಹಾವೇರಿ ಸಿಸಿ ಮಾರ್ಗ	180	2	30,000/–	30,000/–
45	ಗಂಗಾಪೂರ – ಹಾವೇರಿ ಸಿ.ಸಿ ಮಾರ್ಗ	240	2	30,000/–	30,000/–
46	ಅಳಲಗೇರಿ– ಹಾವೇರಿ ಸಿ.ಸಿ ಮಾರ್ಗ	186	2	30,000/–	30,000/–
47	ಮಲಗುಂದ – ಹಾವೇರಿ ಸಿಸಿ ಮಾರ್ಗ	162	2	30,000/–	30,000/–
48	ಮೊಟೆಬೆನ್ನೂರ – ಹಾವೇರಿ ಸಿಸಿ ಮಾರ್ಗ	178	2	30,000/–	30,000/–
49	ಕೂಸನೂರ – ಹಾವೇರಿ ಸಿಸಿ ಮಾರ್ಗ	214	2	30,000/–	30,000/–
50	ಹಾವನೂರು – ಹಾವೇರಿ ಸಿಸಿ ಮಾರ್ಗ	222	2	30,000/–	30,000/–
51	ಮಾರನಬೀಡ – ಹಾವೇರಿ ಸಿಸಿ ಮಾರ್ಗ	237	2	30,000/–	30,000/–
52	ಕನವಳ್ಳಿ – ಹಾವೇರಿ ಸಿಸಿ ಮಾರ್ಗ	164	2	30,000/–	30,000/–
53	ಅತ್ತಿಕಟ್ಟಿ – ಹಾವೇರಿ ಸಿ.ಸಿ ಮಾರ್ಗ	184	2	30,000/–	30,000/–
54	ಗುಡಿಹೊನ್ನತ್ತಿ – ಹಾವೇರಿ ಸಿಸಿ ಮಾರ್ಗ	218	2	30,000/–	30,000/–
55	ಅಕ್ಕಿಆಲೂರು – ಹಾವೇರಿ ಸಿಸಿ ಮಾರ್ಗ	241	2	30,000/–	30,000/–
56	ನೆಲೋಗಲ್ – ಹಾವೇರಿ ಸಿಸಿ ಮಾರ್ಗ	111	2	30,000/–	30,000/–

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಹಾವೇರಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾವೇರಿ

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ನಂ.1ನೇ ಉಪವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಕೊಟೇಷನ್ ಪ್ರಕಟಣೆ ಸಂಖ್ಯೆ: 06/2025–26// ದಿನಾಂಕ : 27.06.2025

ಅಲ್ಪಾವಧಿ ಕೊಟೇಷನ್ ಪ್ರಕಟಣೆ

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, Supply and Installation Repository Facility for New Model Court Building in Chikmagalur taluk and district ಕಾಮಗಾರಿಗಳಿಗೆ ಕೊಟೇಷನ್‌ಗಳನ್ನು ಸಲ್ಲಿಸಲು ದಿನಾಂಕ: 07.07.2025 ರಂದು ಸಂಜೆ 4.00 ಗಂಟೆಗೆ ಸಲ್ಲಿಸಲು ತಿಳಿಸಲಾಗಿದೆ. ಆ ನಂತರ ಬಂದ ಕೊಟೇಷನ್‌ಗಳನ್ನು ತಿರಸ್ಕರಿಸಲಾಗುವುದು. ಸದರಿ ಕೊಟೇಷನ್‌ಗಳನ್ನು ದಿನಾಂಕ : 08.07.2025 ರಂದು ಸಂಜೆ 5:00 ಗಂಟೆಗೆ ಕೊಟೇಷನ್‌ಗಳನ್ನು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಲೋಕೋಪಯೋಗಿ ಇಲಾಖೆ ವಿಭಾಗ ಕಛೇರಿಯ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ. ಪ್ರಕಟಣೆಯನ್ನು www.kpwdcmg@gmail.com website ನಲ್ಲಿ ಓದಿಕೊಳ್ಳುವುದು.

ಸಹಿ/– ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1ನೇ ಉಪವಿಭಾಗ, ಚಿಕ್ಕಮಗಳೂರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.52/1420 ದಿನಾಂಕ: 28–06–2025

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ೯ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಬೆಳಗಾವಿಯ ಆವರಣದಲ್ಲಿರುವ ಹೊಸ ಅತಿಥಿ ಗೃಹದ ಟೆರೆಸ್ ಮೇಲೆ PUF ಶೀಟ್‌ನೊಂದಿಗೆ ಟ್ರಸ್‌ರೂಫ್‌ನ್ನು ಒದಗಿಸುವ ಕಾಮಗಾರಿ ಮೊತ್ತ ರೂ. 3,36,42,995/– (ತೆರಿಗೆ ರಹಿತ).** ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **03–07–2025** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/569/ಅಡ್ವಟೈರ್/2025–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.

Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ಪಡೆಯಲು ಅರ್ಜಿ ಆಹ್ವಾನ ಪ್ರಕಟಣೆ

ಅರ್ಜಿ ಸಲ್ಲಿಕೆ

2025–26ನೇ ಸಾಲಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ UPSC/KAS ಗೆಜೆಟೆಡ್ ಪ್ರೊಬೇಷನರ್ ವಸತಿಯುತ ತರಬೇತಿಯನ್ನು ಬೆಂಗಳೂರಿನ ಹಜ್ ಭವನದಲ್ಲಿ. ಹಾಗೂ KPSC ಗ್ರೂಫ್ 'ಸಿ', RRB & SSC ಪರೀಕ್ಷಾ ಪೂರ್ವ ತರಬೇತಿಯನ್ನು ಪ್ರತಿಷ್ಠಿತ ಸಂಸ್ಥೆಗಳ ಮೂಲಕ ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ

ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: **02.07.2025.**
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **02.08.2025.**

ಅರ್ಹತೆ

- ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- ಅಭ್ಯರ್ಥಿಯು ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಪದವಿ ಹೊಂದಿರಬೇಕು.
- ಅಭ್ಯರ್ಥಿಯ ವಯೋಮಿತಿ: UPSC/KAS ಗೆಜೆಟೆಡ್ ಪ್ರೊಬೇಷನರ್, KPSC ಗ್ರೂಫ್ 'ಸಿ' ತರಬೇತಿಗೆ ಕನಿಷ್ಠ 21 ಹಾಗೂ ಗರಿಷ್ಠ 35 ವರ್ಷಗಳು ಮತ್ತು RRB & SSC ತರಬೇತಿಗಳಿಗೆ ಕನಿಷ್ಠ 18 ಹಾಗೂ ಗರಿಷ್ಠ 30 ವರ್ಷಗಳು ಮೀರಿರಬಾರದು. (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ).
- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.
- ಹಿಂದಿನ ಸಾಲಿನಲ್ಲಿ IAS/KAS ತರಬೇತಿ ಪಡೆದ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ಅರ್ಜಿದಾರರಿಗೆ ಸೂಚನೆಗಳು

- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ .
- ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ವಿವರವಾದ ಸೂಚನೆಗಳು/ವಿಧಾನಗಳು https://dom.karnataka.gov.in ಇಲ್ಲಿ ಲಭ್ಯವಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: 8277799990 ಇವರನ್ನು ಸಂಪರ್ಕಿಸಬಹುದು.

ದಿನಾಂಕ : 02.07.2025
ಸ್ಥಳ : ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/1579/25–26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಮನಸ್ಸು ಮೃದುವಾಗಬೇಕು. ಹೃದಯ ಅರಳುತ್ತಾ ಹೋಗಬೇಕು. ಅದೇ ಮಾನವ ಸಂಸ್ಕೃತಿ.

–ಜಾನ್ ರಸ್ಕಿನ್

ಸಂಪಾದಕೀಯ

ಹೃದಯಾಘಾತಗಳ ದಿಢೀರ್ ಹೆಚ್ಚಳ ಅಧ್ಯಯನದಿಂದ ಸತ್ಯ ಹೊರಬರಲಿ

ಒಂದೂವರೆ ತಿಂಗಳ ಅವಧಿಯಲ್ಲಿ ಹಾಸನ ಜಿಲ್ಲೆಯ ಇಪ್ಪತ್ತೊಂದು ಮಂದಿ ಹೃದಯಾಘಾತದಿಂದ ಸಾವಿಗೀಡಾಗಿರುವುದು ಕಳವಳಕಾರಿ ವಿದ್ಯಮಾನ. ದೈಹಿಕವಾಗಿ ಸದೃಢರಾಗಿ ಇರುವವರೂ ತೀವ್ರ ಹೃದಯಾಘಾತ, ಹೃದಯಸ್ತಂಭನಕ್ಕೆ ತುತ್ತಾಗುತ್ತಿದ್ದಾರೆ. ಕೊರೊನಾ ನಂತರ ಯುವಜನ ಹೆಚ್ಚಿನ ಪ್ರಮಾಣದಲ್ಲಿ ಹೃದಯಾಘಾತಕ್ಕೆ ಒಳಗಾಗುತ್ತಿರುವ ಪ್ರಕರಣಗಳು ದೇಶದ ವಿವಿಧ ಭಾಗಗಳಿಂದ ವರದಿ ಆಗುತ್ತಿರುವುದರ ಹಿನ್ನೆಲೆಯಲ್ಲಿ, ಜಿಲ್ಲೆಯೊಂದರಲ್ಲಿ ದಿಢೀರ್ ಸಂಭವಿಸುತ್ತಿರುವ ಹೃದಯಾಘಾತಗಳು ನಾಗರಿಕರ ಆತಂಕಕ್ಕೆ ಕಾರಣವಾಗಿವೆ. ಹಾಸನ ಜಿಲ್ಲೆಯೊಂದರಲ್ಲಿಯೇ ಹೆಚ್ಚಿನ ಹೃದಯಾಘಾತಗಳು ಏಕೆ ಸಂಭವಿಸುತ್ತಿವೆ ಎನ್ನುವುದರ ಬಗ್ಗೆ ಅಧ್ಯಯನ ನಡೆಸಲು ಸರ್ಕಾರ ಸಮಿತಿ ರಚಿಸಿರುವುದು ಸ್ವಾಗತಾರ್ಹ. ಅಧ್ಯಯನ ತ್ವರಿತವಾಗಿ ಪೂರ್ಣಗೊಂಡು ಜನರ ಸಂಶಯಗಳಿಗೆ ಉತ್ತರ ದೊರೆಯಲಿ. ಹೆಚ್ಚುತ್ತಿರುವ ಹೃದಯಾಘಾತಗಳಿಗೂ ಜೀವನಶೈಲಿಯಲ್ಲಿ ಆಗಿರುವ ಬದಲಾವಣೆಗಳಿಗೂ ಇರಬಹುದಾದ ಸಂಬಂಧದ ಬಗ್ಗೆ ವಿಶ್ಲೇಷಣೆಗಳು ನಡೆದಿವೆ. ಈಗಿನ ಜೀವನಶೈಲಿ, ಆಹಾರ ಪದ್ಧತಿ, ಮೊಬೈಲ್ ಫೋನ್ ವ್ಯಸನದಿಂದಾಗಿ ಅನಾರೋಗ್ಯ ಸಮಸ್ಯೆ ಹೆಚ್ಚಾಗಿದೆ; ಅಧಿಕ ರಕ್ತದೊತ್ತಡ, ಮಧುಮೇಹ ಸಮಸ್ಯೆಗಳು ಕಿರಿಯರಲ್ಲೂ ಕಾಣಿಸಿಕೊಳ್ಳುತ್ತಿವೆ ಎಂದು ಆರೋಗ್ಯ ಸಚಿವರು ಹೇಳಿದ್ದಾರೆ. ಜೀವನಶೈಲಿಗೂ ಆರೋಗ್ಯಕ್ಕೂ ಸಂಬಂಧ ಇದೆ ಎನ್ನುವುದರ ಬಗ್ಗೆ ಯಾರಿಗೂ ಅನುಮಾನವಿಲ್ಲ. ಆದರೆ, ಹಾಸನ ಜಿಲ್ಲೆಯಲ್ಲಿ ಹೃದಯಾಘಾತಗಳ ಸಂಖ್ಯೆ ಹೆಚ್ಚಾಗಿರುವುದಕ್ಕೂ ಅನಾರೋಗ್ಯಕರ ಜೀವನಶೈಲಿಗೂ ಸಂಬಂಧ ಕಲ್ಪಿಸುವುದು ಕಷ್ಟ. ಜೀವನ ಶೈಲಿಯಲ್ಲಿನ ಬದಲಾವಣೆ ನಿರ್ದಿಷ್ಟ ಜಿಲ್ಲೆಗೆ ಸಂಬಂಧಿಸಿದ ಸಮಸ್ಯೆಯಲ್ಲ. ಅದು, ಇಡೀ ವಿಶ್ವವನ್ನು ಬಾಧಿಸುತ್ತಿರುವ ಸಮಸ್ಯೆ. ಹಾಗೆಯೇ, ಕೊರೊನಾ ನಂತರ ಹೃದಯ ಸಂಬಂಧಿ ಸಮಸ್ಯೆಗಳ ಸಂಖ್ಯೆ ಹೆಚ್ಚಾಗಿರುವುದರ ಬಗೆಗಿನ ಆತಂಕವೂ ವಿಶ್ವವ್ಯಾಪಿ ಆದುದೇ ಆಗಿದೆ. 2020ರ ನಂತರ ಭಾರತದಲ್ಲಿ ಹೃದಯಾಘಾತಗಳ ಸಂಖ್ಯೆಯಲ್ಲಿ ದಿಢೀರ್ ಹೆಚ್ಚಳ ಆಗಿದ್ದು, ಶೇ 50ರಷ್ಟು ಹೃದಯಾಘಾತಗಳು 40 ವರ್ಷದೊಳಗಿನ ವಯೋಮಾನದವರಲ್ಲೇ ಸಂಭವಿಸುತ್ತಿವೆ. ಪುಟ್ಟ ಮಕ್ಕಳು ಕೂಡ ಹೃದ್ರೋಗಕ್ಕೆ ಬಲಿಯಾಗುವ ಪ್ರಕರಣಗಳು ವರದಿಯಾಗಿವೆ. ಈ ವರ್ಷದ ಆರಂಭದಲ್ಲಿ, ಚಾಮರಾಜನಗರ ಜಿಲ್ಲೆಯಲ್ಲಿ ಎಂಟು ವರ್ಷದ ಬಾಲಕಿಯೊಬ್ಬಳು ಹೃದಯ ಸ್ತಂಭನದಿಂದ ಸಾವಿಗೀಡಾಗಿದ್ದಳು. ಈ ಅಂಕಿಅಂಶಗಳಲ್ಲಿ, ನಾಗರಿಕರು ತಮ್ಮ ಹೃದಯದ ಆರೋಗ್ಯದ ಬಗ್ಗೆ ಆತಂಕಪಡಲು ಕಾರಣವಾಗಿವೆ.

ಹೃದಯಾಘಾತಗಳು ಹೆಚ್ಚುತ್ತಿರುವುದರ ಬಗ್ಗೆ ವೈಜ್ಞಾನಿಕ ಸಮೀಕ್ಷೆಗಳ ಅಗತ್ಯ. ನಿಖರ ಹಾಗೂ ವೈಜ್ಞಾನಿಕ ಅಧ್ಯಯನದ ಬೆಂಬಲವಿಲ್ಲದ ಸಂಗತಿಗಳು ಅಭಿಪ್ರಾಯಗಳಾಗಿಯಷ್ಟೇ ಉಳಿದಿರುತ್ತವೆ.

ಹೃದಯಾಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದರ ಬಗ್ಗೆ ಜನರಲ್ಲಿ ಇರುವ ಆತಂಕವನ್ನು ಪರಿಹರಿಸಬೇಕಾದುದು ಸರ್ಕಾರದ ಕರ್ತವ್ಯ. ವೈಜ್ಞಾನಿಕ ಅಧ್ಯಯನಗಳ ಮೂಲಕ ಹೃದಯಾಘಾತಕ್ಕೆ ಕಾರಣಗಳನ್ನು ಕಂಡುಕೊಂಡು, ಸತ್ಯಾಂಶವನ್ನು ಜನರ ಮುಂದಿಡುವ ಕೆಲಸ ಆದಷ್ಟು ತ್ವರಿತವಾಗಿ ನಡೆಯಬೇಕಾಗಿದೆ. 'ಕೋವಿಡ್–19' ಲಸಿಕೆಯ ಅಡ್ಡ ಪರಿಣಾಮದ ರೂಪದಲ್ಲಿ ಹೃದಯಾಘಾತಗಳು ಹೆಚ್ಚಳದ ಸಾಧ್ಯತೆಯನ್ನು ಕೆಲವು ವೈದ್ಯರು ನಿರಾಕರಿಸಿದ್ದಾರೆ. ಆದರೆ, ನಿಖರ ಹಾಗೂ ವೈಜ್ಞಾನಿಕ ಅಧ್ಯಯನದ ಬೆಂಬಲವಿಲ್ಲದ ಸಂಗತಿಗಳು ಅಭಿಪ್ರಾಯಗಳಾಗಿಯಷ್ಟೇ ಉಳಿದಿರುತ್ತವೆ. ಅಧ್ಯಯನದ ಜೊತೆ ಜೊತೆಗೇ ಹೃದ್ರೋಗ ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ಸವಲತ್ತುಗಳನ್ನು ಬಲಪಡಿಸುವ ಕೆಲಸವನ್ನೂ ಸರ್ಕಾರ ಮಾಡಬೇಕಾಗಿದೆ. ಹೆಚ್ಚುತ್ತಿರುವ ಹೃದಯಾಘಾತಗಳನ್ನು ನಿಭಾಯಿಸುವ ಮಟ್ಟಿಗೆ ನಮ್ಮ ವೈದ್ಯಕೀಯ ವ್ಯವಸ್ಥೆ ಸಜ್ಜಾಗಿಲ್ಲ. ಬಹುತೇಕ ಸರ್ಕಾರಿ ಆಸ್ಪತ್ರೆಗಳು ಹೃದಯಾಘಾತದ ಸಂದರ್ಭದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲೂ ಸಾಧ್ಯವಾಗದಷ್ಟು ದುರ್ಬಲವಾಗಿವೆ. ಹೃದಯಾಘಾತಕ್ಕೆ ಒಳಗಾದವರಿಗೆ ತಕ್ಷಣ ಚಿಕಿತ್ಸೆ ದೊರೆಯುವುದು ಅಗತ್ಯ, ಕೆಲವು ಸಂದರ್ಭಗಳಲ್ಲಿ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆತರೆ ಸಾವು ಸಂಭವಿಸುವುದಿಲ್ಲ. ಹೃದ್ರೋಗ ಸಂಬಂಧಿತ ಚಿಕಿತ್ಸೆಗಳು ದುಬಾರಿಯಾದುದರಿಂದ, ಜನಸಾಮಾನ್ಯರು ಹೃದಯ ಸಂಬಂಧಿ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯಲು ಹಿಂಜರಿಯುವುದೂ ಇದೆ. ಹೃದ್ರೋಗ ಸಮಸ್ಯೆಗಳು ಮತ್ತು ಚಿಕಿತ್ಸೆಯ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸವನ್ನು ಸರ್ಕಾರ ವ್ಯಾಪಕವಾಗಿ ಮಾಡಬೇಕಾಗಿದೆ. ಹೃದಯಾಘಾತದ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಖಾಸಗಿ ಸಹಭಾಗಿತ್ವದಲ್ಲಿ ಸುಲಭ ದರದಲ್ಲಿ ಚಿಕಿತ್ಸೆ ಒದಗಿಸುವ ಮಾರ್ಗೋಪಾಯಗಳನ್ನೂ ಸರ್ಕಾರ ಕಂಡುಕೊಳ್ಳಬೇಕಾಗಿದೆ. ಹಾಸನ ಜಿಲ್ಲೆಯಲ್ಲಿ, ಮೇ 20ರಿಂದ ಜೂನ್ 30ರ ಅವಧಿಯಲ್ಲಿ 21 ಜನರು ಹೃದಯಾಘಾತದಿಂದ ಮೃತಪಟ್ಟಿರುವುದು ವೈದ್ಯಕೀಯ ವ್ಯವಸ್ಥೆ ಎಚ್ಚೆತ್ತುಕೊಳ್ಳಲು ಕಾರಣವಾಗಬೇಕು. ಸರ್ಕಾರ ನೇಮಿಸಿರುವ ಸಮಿತಿಯ ಅಧ್ಯಯನ ಹಾಸನದ ಪ್ರಕರಣಗಳಿಗಷ್ಟೇ ಸೀಮಿತವಾಗದೆ ರಾಜ್ಯದ ಎಲ್ಲ ಜಿಲ್ಲೆಗಳನ್ನೂ ಒಳಗೊಳ್ಳುವಂತಾಗಬೇಕು.

ಅಚ್ಚರಿ ನಡೆ...

ಬೆಂಗಳೂರಿನಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಬಿಎಂಟಿಸಿ ಬಸ್‌ಗಳು ರಸ್ತೆ ಮಧ್ಯದಲ್ಲಿಯೇ ಏಕೆ ನಿಲ್ಲುತ್ತವೆ ಮತ್ತು ಪ್ರತಿ ಬಾರಿಯೂ ಪ್ರಯಾಣಿಕರು ಬಸ್‌ನಿಲ್ದಾಣದಿಂದ ಬಹುದೂರ ಏಕೆ ನಿಂತಿರುತ್ತಾರೆ ಎನ್ನುವುದು ಅಚ್ಚರಿಯ ಸಂಗತಿ.

ಪ್ರಣವ್ ಬಾಲಕೃಷ್ಣನ್, ಎಂಜಿನಿಯರ್, 'ಎಕ್ಸ್'ನಿಂದ

ಕಿಡಿನುಡಿ

ನನ್ನ ಕಾರಿನ ಮೇಲೆ ಕಾಗೆ ಕೂತಿದ್ದನ್ನು ಚರ್ಚೆ ನಡೆಸಿ, ಮೂಢನಂಬಿಕೆ ಬಿತ್ತುವುದನ್ನು ಪತ್ರಿಕಾ ವೃತ್ತಿ ಎಂದು ಕರೆಯಬೇಕೆ? ಜನರನ್ನು ಮೌಢ್ಯಕ್ಕೆ ತಳ್ಳುವುದು ಪತ್ರಿಕಾ ವೃತ್ತಿಯೇ? ಈ ಬಗ್ಗೆ ಪತ್ರಕರ್ತರು ಯೋಚಿಸಬೇಕು.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 2-7-2000

• ಸರಣಿ ಸಾವಿನ ಸೂತಕದಲ್ಲಿ ಅಣೆತಗ್ಗಹಳ್ಳಿ ಗ್ರಾಮ

ಮಂಡ್ಯ, ಜುಲೈ 1– ಜಿಲ್ಲೆಯ ಮದ್ದೂರು ತಾಲ್ಲೂಕು ಶಿಂಷಾ ನದಿ ದಡದಲ್ಲಿರುವ ಅಣೆತಗ್ಗಹಳ್ಳಿ ಗ್ರಾಮಕ್ಕೆ ಈಗ ಸೂತಕ ತಟ್ಟಿ, ತಿಥಿ ದಿನಗಳನ್ನು ಎದುರಿಸುತ್ತಿದೆ.

ಗ್ರಾಮಸ್ಥರು ಕೇವಲ ಒಂದು ವಾರಾವಧಿಯಲ್ಲಿ ನಾಲ್ಕು ಸಾವು ಕಂಡು ಅಧೀರರಾಗಿದ್ದಾರೆ. ಗ್ರಾಮದಲ್ಲಿ ಹಿರಿಯರಾಗಿದ್ದ ಇಬ್ಬರು ಹೃದಯಾಘಾತಕ್ಕೆ ಒಳಗಾದರೆ, ಇನ್ನಿಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರಿಂದಾಗಿ ಗ್ರಾಮ ಎಲ್ಲರ ಗಮನ ಸೆಳೆದು ಹಗಲು–ರಾತ್ರಿ ಪೊಲೀಸರ ಸರ್ಪಗಾವಲಿನಲ್ಲಿದೆ.

ಗ್ರಾಮದ ಸೂತಕಕ್ಕೆ ಕಾರಣರಾಗಿರುವವರು ಚನ್ನಬಸಪ್ಪ, ದೊಳ್ಳೇಗೌಡ, ಕರೀಗೌಡ, ಚಿಕ್ಕೋನಯ್ಯ ಎಂಬ 60 ವರ್ಷ ಗಡಿ ದಾಟಿದ ವೃದ್ಧರು.

• ಸತತ ಮಳೆ: ಮನೆ ಕುಸಿದು ಮೂವರ ಸಾವು

ಅಫಜಲಪುರ, ಜುಲೈ 1– ಜಿಲ್ಲೆಯಲ್ಲಿ ಕಳೆದ ಎರಡು ದಿನಗಳ ಕಾಲ ಸತತವಾಗಿ ಮಳೆ ಬಿದ್ದ ಕಾರಣ ಅಫಜಲಪುರ ತಾಲ್ಲೂಕಿನ ಬಂಕಲಗಿ ಗ್ರಾಮದಲ್ಲಿ ಮನೆಯೊಂದು ಕುಸಿದು, ಒಂದೇ ಕುಟುಂಬದ ಮೂವರು ಮೃತಪಟ್ಟ ಘಟನೆ ನಿನ್ನೆ ರಾತ್ರಿ ಸಂಭವಿಸಿದೆ. ಸತ್ತವರು ಹೊನ್ನಪ್ಪ ಪೂಜಾರಿ (28), ಆತನ ಹೆಂಡತಿ ಭಾರತೀ ಬಾಯಿ (24) ಮತ್ತು ಮಗು ಮಲ್ಲಿನಾಥ (2).

ಸ್ಥಳಕ್ಕೆ ಉಪ ಆಯುಕ್ತ ಮಹದೇವ್ ಭೇಟಿ ನೀಡಿದರು.

75 ವರ್ಷಗಳ ಹಿಂದೆ

ಭಾನುವಾರ, 2-7-1950

• ವನ ಮಹೋತ್ಸವ: 16 ಲಕ್ಷ ಸಸಿ ವಿತರಣೆ

ಬೆಂಗಳೂರು, ಜುಲೈ 1– 'ವನ ಮಹೋತ್ಸವ' ಇಂದು ಯಶಸ್ವಿಯಾಗಿ ಸಂಸ್ಥಾನದಾದ್ಯಂತ ಆಚರಿಸಲ್ಪಟ್ಟಿತು.

'ಸಸಿ ನೆಡುವ ಚಳವಳಿ'ಯ ಅವಧಿಯಲ್ಲಿ ಮೈಸೂರು ಸಂಸ್ಥಾನದಾದ್ಯಂತ ಸುಮಾರು 16 ಲಕ್ಷ ಸಸಿಗಳನ್ನು ನೆಡಲಾಗುವುದು.

ಸಂಸ್ಥಾನದ ಮುಖ್ಯ ನಗರಗಳು, ಜಿಲ್ಲಾ ಕೇಂದ್ರಗಳು ಮತ್ತು ತಾಲ್ಲೂಕುಗಳಲ್ಲಿ ಉತ್ಸವ ಯಶಸ್ವಿಯಾಗಿ ನಡೆದು, ಕೇಂದ್ರ ಹಾಗೂ ಸಂಸ್ಥಾನದ ಸರ್ಕಾರಿ ಅಧಿಕಾರಿಗಳು, ಜಿಲ್ಲಾ ಬೋರ್ಡುಗಳು, ಪೌರಸಭೆಗಳು, ಅಭಿವೃದ್ಧಿ ಸಮಿತಿಗಳು ಮತ್ತು ಪಂಚಾಯಿತಿಗಳು, ಸಂಘ–ಸಂಸ್ಥೆಗಳು, ರೈತರು, ಕಾರ್ಮಿಕರು, ಸಾರ್ವಜನಿಕರು ಭಾಗವಹಿಸಿದ್ದರು.

ಒಪ್ಪಂದದ ಹೊತ್ತಿಗೆ, ಸಿದ್ಧವಿತ್ತು ಸುತ್ತಿಗೆ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

'ಅಮೆರಿಕದೊಂದಿಗಿನ ಪರಮಾಣು ಒಪ್ಪಂದದ ನಿಯಮಗಳಿಗೆ ಇರಾನ್ ಒಪ್ಪಿಗೆ ನೀಡಿದೆ. ಶಾಂತಿ ಸ್ಥಾಪನೆಯ ದಿಸೆಯಲ್ಲಿ ಗಂಭೀರ ಮಾತುಕತೆ ನಡೆಯುತ್ತಿವೆ' ಎಂದು ಮೇ 15ರಂದು ಕೊಲ್ಲಿ ರಾಷ್ಟ್ರಗಳ ಪ್ರವಾಸದಲ್ಲಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕತಾರ್‌ನಲ್ಲಿ ಹೇಳಿದ್ದರು. ಆದರೆ, ಜೂನ್ 22ರಂದು ಇರಾನಿನ ಮೂರು ಪ್ರಮುಖ ಪರಮಾಣು ಘಟಕಗಳ ಮೇಲೆ ಅಮೆರಿಕ 'ಬಂಕರ್ ಬಸ್ಟರ್' ಬಾಂಬ್ ದಾಳಿ ನಡೆಸಿತು. ವೈಮಾನಿಕ ದಾಳಿಯ ಆ ಕಾರ್ಯಾಚರಣೆಯನ್ನು 'ಮಿಡ್‌ನೈಟ್ ಹ್ಯಾಮರ್' ಎಂದು ಕರೆಯಲಾಯಿತು.

ಒಂದು ತಿಂಗಳ ಅವಧಿಯಲ್ಲಿ ಪರಮಾಣು ಒಪ್ಪಂದದ ಮಾತುಕತೆಯ ಮೇಜಿನಿಂದ ಯುದ್ಧದ ಅಂಗಳಕ್ಕೆ ಇರಾನ್ ಬಂದು ನಿಂತಿತ್ತು. ಇಸ್ರೇಲ್ ಜೊತೆಗೆ ಹನ್ನೆರಡು ದಿನಗಳ ಕಾಲ ಸೆಣಸಿದ ಇರಾನ್, ಕೊನೆಗೆ ಕತಾರ್‌ನಲ್ಲಿದ್ದ ಅಮೆರಿಕದ ಸೇನಾ ಘಟಕದ ಮೇಲೆ ಯಾವ ಹಾನಿಯನ್ನೂ ಮಾಡದ ಕ್ಷಿಪಣಿಗಳನ್ನು ತೂರಿಬಿಟ್ಟಿತು. ಕದನ ವಿರಾಮದ ಘೋಷಣೆಯಾಯಿತು. ಪಶ್ಚಿಮ ಏಷ್ಯಾದ ಆಗಸ ಶಾಂತವಾಯಿತು.

ಇಸ್ರೇಲ್ ಮತ್ತು ಇರಾನ್ ನಡುವಿನ ಈ ಸಂಘರ್ಷ, ಕೆಲವು ಸಂಗತಿಗಳನ್ನು ಸ್ಪಷ್ಟಗೊಳಿಸಿತು. ಇಸ್ರೇಲಿನ ಬೇಹುಗಾರಿಕಾ ಸಂಸ್ಥೆ 'ಮೊಸಾದ್' ಹಾಗೂ ಇಸ್ರೇಲಿನ ಸೇನೆ, ಶತ್ರುಗಳನ್ನು ಗುರಿಯಾಗಿಸಿಕೊಂಡು ನಿಖರವಾಗಿ ದಾಳಿ ಮಾಡುವ ಸಾಮರ್ಥ್ಯ ಹೊಂದಿವೆ ಎನ್ನುವುದು ಮತ್ತೊಮ್ಮೆ ಸಾಬೀತಾಯಿತು. ಇಸ್ರೇಲಿನ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು (ಐರನ್ ಡೋಮ್) ಭೇದಿಸುವುದು ಅಸಾಧ್ಯವೇನಲ್ಲ ಎನ್ನುವುದನ್ನೂ ಇರಾನ್ ಸಾಧಿಸಿ ತೋರಿಸಿತು.

ಬಂಡುಕೋರರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ಪರೋಕ್ಷ ಯುದ್ಧವನ್ನು ಇರಾನ್ ನಡೆಸಬಹುದೇ ವಿನಾ, ನೇರ ಯುದ್ಧದಲ್ಲಿ ತೊಡಗುವಷ್ಟು ಅದು ಶಕ್ತವಾಗಿಲ್ಲ ಎನ್ನುವುದು ಜಾಹೀರಾಯಿತು. ತನ್ನ ಉದ್ದೇಶ ಈಡೇರಿಸಿಕೊಳ್ಳಲು ಯಾವ ಕ್ಷಣದಲ್ಲಾದರೂ ನಿಲುವು, ಯೋಜನೆ ಹಾಗೂ ಕಾರ್ಯತಂತ್ರಗಳನ್ನು ಅಮೆರಿಕ ಬದಲಿಸಬಲ್ಲದು ಎನ್ನುವುದು ಜಗತ್ತಿಗೆ ಮತ್ತೊಮ್ಮೆ ಸ್ಪಷ್ಟವಾಯಿತು.

ಕದನ ವಿರಾಮದ ನಂತರ ಸದ್ಯಕ್ಕೆ ನಮ್ಮ ಮುಂದಿರುವುದು, ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧ ಆಕಸ್ಮಿಕವಾಗಿ ನಡೆದದ್ದೇ ಎನ್ನುವ ಪ್ರಶ್ನೆ. ಇಸ್ರೇಲ್ ಹಾಗೂ ಇರಾನ್ ನಡುವಿನ ಜಟಾಪಟಿ ಹೊಸದೇನಲ್ಲ. ಇಸ್ರೇಲಿನ ಆಕ್ರಮಣಕಾರಿ ನಿಲುವು, ಪ್ರಾಂತೀಯವಾಗಿ ಹಿಡಿತ ಸಾಧಿಸಬೇಕೆಂಬ ಇರಾನಿನ ಹೆಬ್ಬಯಕೆ ಹಾಗೂ ತೈಲ ಸಂಪದ್ಭರಿತ ಭೂಭಾಗಗಳು ತನ್ನ ಪ್ರಭಾವ ವಲಯದಲ್ಲೇ ಇರಬೇಕು ಎನ್ನುವ ಅಮೆರಿಕದ ಮಹತ್ವಾಕಾಂಕ್ಷೆ, ಪಶ್ಚಿಮ ಏಷ್ಯಾವನ್ನು ಸಂಘರ್ಷದ ಕೂಪವಾಗಿಸಿದೆ.

ಕಳೆದ ಹತ್ತು ವರ್ಷಗಳಲ್ಲಿ ಪಶ್ಚಿಮ ಏಷ್ಯಾದ ರಾಜಕೀಯ ಸಮೀಕರಣ ಹೇಗೆಲ್ಲ ಬದಲಾಯಿತು ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಸಂಘರ್ಷ ಆಕಸ್ಮಿಕವೇ ಅಲ್ಲವೇ ಎನ್ನುವ ಪ್ರಶ್ನೆಗೆ ಉತ್ತರ ದೊರಕಬಹುದು. ಇರಾನ್‌ನ ಅಣ್ವಸ್ತ್ರ ಯೋಜನೆ ಕುರಿತು ಸತತವಾಗಿ ಮಾತನಾಡುವುದರ ಜೊತೆಗೆ, ಅಣುಬಾಂಬ್ ಹೊಂದಲು ಪ್ರಯತ್ನಿಸುತ್ತಿರುವ ಇರಾನ್ ವಿರುದ್ಧ ಕ್ರಮ ಕೈಗೊಳ್ಳುವುದು ಅಗತ್ಯವೆಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸಾಕಷ್ಟು ಬಾರಿ ಪ್ರತಿಪಾದಿಸಿದ್ದಾರೆ. 2012ರ ಸೆಪ್ಟೆಂಬರ್‌ನಲ್ಲಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಅಧಿವೇಶನದಲ್ಲಿ ಬಾಂಬ್ ಚಿತ್ರವೊಂದನ್ನು ಹಿಡಿದು, ಇರಾನ್‌ನ ಅಣ್ವಸ್ತ್ರ ಯೋಜನೆ ಯಾವ ಹಂತದಲ್ಲಿದೆ, ಇರಾನ್ ಅಣ್ವಸ್ತ್ರ ಹೊಂದುವುದರಿಂದ ಪಶ್ಚಿಮ ಏಷ್ಯಾದ ರಾಜಕೀಯ ಚಿತ್ರಣ ಹೇಗೆ ಬದಲಾಗುತ್ತದೆ ಹಾಗೂ ಯಾವ ದೇಶಗಳಿಗೆ ಇದರಿಂದ ಅಪಾಯ ಎಂಬುದನ್ನು ನೆತನ್ಯಾಹು ವಿಶ್ವದ ಗಮನಕ್ಕೆ ತಂದಿದ್ದರು.

ಇರಾನ್ ಅಣ್ವಸ್ತ್ರ ಯೋಜನೆ ಕುರಿತು ಇಸ್ರೇಲ್ ನಿರಂತರವಾಗಿ ಕಣ್ಗಾವಲು ನಡೆಸಿತ್ತು ಹಾಗೂ ಆ ಯೋಜನೆಯನ್ನು ವಿಫಲಗೊಳಿಸಲು ವಿಜ್ಞಾನಿಗಳ ಹತ್ಯೆಯೂ ಸೇರಿದಂತೆ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿತ್ತು.

2015ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ನೇತೃತ್ವದ ಆಡಳಿತ, ಇರಾನ್ ಜೊತೆಗೆ ಪರಮಾಣು ಒಪ್ಪಂದಕ್ಕೆ ಮುಂದಾಯಿತು. ಆದರೆ, ಟ್ರಂಪ್ ಅವರು ಅಧ್ಯಕ್ಷರಾದ ಬಳಿಕ 2018ರಲ್ಲಿ ಈ ಒಪ್ಪಂದದಿಂದ ಅಮೆರಿಕ ಹೊರಗೆ ಬಂತು. ಇರಾನ್‌ನೊಂದಿಗಿನ ಒಪ್ಪಂದ ಕಡಿದುಕೊಂಡ ಅಮೆರಿಕ, ಇಸ್ರೇಲ್ ಪರ ನಿಲುವು ಪ್ರಕಟಿಸಿತು. ಇರಾನ್ ವಿರುದ್ಧ ಆರ್ಥಿಕ ದಿಗ್ಬಂಧನವನ್ನೂ ಹೇರಲಾಯಿತು. ಅಧ್ಯಕ್ಷರಿಗೆ ಹಿರಿಯ ಸಲಹೆಗಾರನಾಗಿ ಕಾರ್ಯನಿರ್ವಹಿಸುತ್ತಿದ್ದ ಟ್ರಂಪ್ ಅವರ ಅಳಿಯ ಜರೇಡ್ ಕುಶ್ನರ್, ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳನ್ನು ಹತ್ತಿರ ತರುವ ಪ್ರಯತ್ನ ಮಾಡಿದರು.

ಅಮೆರಿಕದ ಪ್ರಯತ್ನಕ್ಕೆ ಪ್ರತಿಯಾಗಿ ಇರಾನ್ ಕೂಡ ತನ್ನದೇ ಕಾರ್ಯತಂತ್ರವನ್ನು ರೂಪಿಸಿತು. ಅದು ಲೆಬನಾನ್, ಸಿರಿಯಾ, ಯೆಮೆನ್ ಮತ್ತು ಇರಾಕ್‌ನಲ್ಲಿ ತನ್ನ ಅನಧಿಕೃತ ಸೇನೆಯ ಜಾಲವನ್ನು ರಚಿಸುವ ಮೂಲಕ, ನಾಲ್ಕು ದೇಶಗಳನ್ನು ಪರೋಕ್ಷವಾಗಿ ನಿಯಂತ್ರಿಸುವ ಕೆಲಸಕ್ಕೆ ಮುಂದಾಯಿತು. ಶತಕೋಟಿ ಡಾಲರ್ ಮೊತ್ತವನ್ನು ತನ್ನ ಪರ ನಿಲ್ಲಬಲ್ಲ ಬಂಡುಕೋರ ಗುಂಪುಗಳನ್ನು ಬೆಳೆಸಲು ಮೀಸಲಿಟ್ಟಿತು. ಹಿಜ್ಬುಲ್ಲಾ, ಹಮಾಸ್ ಹಾಗೂ ಹುಥಿ ಪಡೆ ಶಕ್ತವಾಯಿತು.

2020ರಲ್ಲಿ ನಡೆದ ಖಾಸಿಮ್ ಸುಲೇಮನಿ ಹತ್ಯೆ ಇರಾನ್ ತಂತ್ರಗಾರಿಕೆಗೆ ಮೊದಲ ಹೊಡೆತ ಕೊಟ್ಟಿತು.

> ಇರಾನ್ ಮತ್ತು ಇಸ್ರೇಲ್ ನಡುವಣ ಸಂಘರ್ಷ ಸದ್ಯಕ್ಕೆ ಶಮನಗೊಂಡಿದೆ. ಕದನ ವಿರಾಮದ ಮಧ್ಯಸ್ಥಿಕೆ ವಹಿಸಿದ ಅಮೆರಿಕ ಗಳಿಸಿದ್ದೇನು? ತೀವ್ರ ದಾಳಿಗೆ ತುತ್ತಾದ ಇರಾನ್, ಅಣ್ವಸ್ತ್ರ ಹೊಂದುವ ಪ್ರಯತ್ನವನ್ನು ಕೈಬಿಡುವುದೇ? ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲಸುವುದೇ? ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೋದರೆ ಸಂಘರ್ಷ ಮುಗಿಯಿತು ಎಂದು ಹೇಳಲಾಗದು.

ಅಮೆರಿಕದ ವಿರುದ್ಧ ನಿಲ್ಲಲು ರಷ್ಯಾ ಹಾಗೂ ಚೀನಾದ ಛತ್ರಿಯಡಿ ಇರಾನ್ ಸೇರಿಕೊಂಡಿತು. ಉಕ್ರೇನ್ ಯುದ್ಧ ಆರಂಭವಾದಾಗ, ರಷ್ಯಾಕ್ಕೆ ಇರಾನ್ ಡ್ರೋನ್‌ಗಳನ್ನು ಪೂರೈಸಿತು.

2021ರಲ್ಲಿ ಜೋ ಬೈಡೆನ್ ಅಮೆರಿಕದ ಅಧ್ಯಕ್ಷರಾದ ಬಳಿಕ, ಪರಮಾಣು ಒಪ್ಪಂದದ ಮಾತುಕತೆಗೆ ಮತ್ತೊಮ್ಮೆ ಚಾಲನೆ ನೀಡಲಾಯಿತು. ಆದರೆ, ಅದಾಗಲೇ ಅಮೆರಿಕದ ಆರ್ಥಿಕ ದಿಗ್ಬಂಧನವನ್ನು ಜೀರ್ಣಿಸಿಕೊಂಡಿದ್ದ ಇರಾನ್, ಬೈಡೆನ್ ಆಡಳಿತ ಮುಂದಿಟ್ಟ ಎಲ್ಲ ಷರತ್ತುಗಳಿಗೂ ಗೋಣು ಅಲ್ಲಾಡಿಸಲಿಲ್ಲ. ಮಾತುಕತೆ ಮುರಿದುಬಿತ್ತು. ಬೈಡೆನ್ ಆಡಳಿತ ದಿಗ್ಬಂಧನವನ್ನು ವಿಸ್ತರಿಸಿತು.

ಮುಸ್ಲಿಂ ಜಗತ್ತಿನ ನಾಯಕತ್ವ ಹಾಗೂ ಪಶ್ಚಿಮ ಏಷ್ಯಾದ ಮೇಲಿನ ಹಿಡಿತ ತನ್ನದಾಗಬೇಕು ಎಂದು ಬಯಸುವ ಇರಾನ್ ತನ್ನ ನೆರೆಹೊರೆ ರಾಷ್ಟ್ರಗಳಲ್ಲಿದ್ದ ಬಂಡುಕೋರರಿಗೆ ಶಸ್ತ್ರಾಸ್ತ್ರ ಪೂರೈಸುವ ಕೆಲಸವನ್ನು ಮುಂದುವರಿಸಿತು. ಇತ್ತ, ಅಮೆರಿಕದ ಮಧ್ಯಸ್ಥಿಕೆಯಲ್ಲಿ ಅರಬ್ ರಾಷ್ಟ್ರಗಳು ಇಸ್ರೇಲ್ ಜೊತೆಗೆ ಸಂಬಂಧ ಸುಧಾರಿಸಿಕೊಳ್ಳಲು ಮುಂದಾದವು. ಮುಖ್ಯವಾಗಿ ಸೌದಿ ಅರೇಬಿಯಾ ಹಾಗೂ ಇಸ್ರೇಲ್ ನಡುವಿನ ಮಾತುಕತೆಗೆ ವೇದಿಕೆ ಸಿದ್ಧವಾಯಿತು.

ಆಗ ನಡೆದದ್ದು ಇಸ್ರೇಲ್ ಮೇಲಿನ ಹಮಾಸ್ ದಾಳಿ! ಆ ದಾಳಿಗೆ ಇರಾನ್ ಪ್ರಚೋದನೆಯಿತ್ತು ಎನ್ನುವುದು ನಂತರ ಬಹಿರಂಗವಾಯಿತು. ಇಂತಹದೊಂದು ದಾಳಿಯಾದರೆ ಅಮೆರಿಕದ ಜೊತೆಗಿನ ಸಂಬಂಧ ಇನ್ನಷ್ಟು ಕೆಡುತ್ತದೆ, ಇಸ್ರೇಲಿನ ಜೊತೆ ಸಂಘರ್ಷ ಏರ್ಪಡುತ್ತದೆ ಎನ್ನುವುದು ತಿಳಿದಿದ್ದರೂ ಹಮಾಸ್ ಅನ್ನು ಬೆಂಬಲಿಸುವ ಕೆಲಸವನ್ನು ಇರಾನ್ ಮಾಡಿತು. ಹಿಜ್ಬುಲ್ಲಾವನ್ನು ಬಳಸಿ ಲೆಬನಾನ್ ಭಾಗದಿಂದ ಇಸ್ರೇಲಿನ ಮೇಲೆ ದಾಳಿಯಾಗುವಂತೆ ನೋಡಿಕೊಂಡಿತು. ಆ ಮೂಲಕ ಇರಾನ್ ಎಡವಿತು.

ತನ್ನ ಮೇಲೆ ನಡೆದ ದಾಳಿಯ ಬಳಿಕ ಇಸ್ರೇಲ್, ಹಿಜ್ಬುಲ್ಲಾ ನಾಯಕರನ್ನು ಗುರಿಯಾಗಿಸಿಕೊಂಡಿತು. ಅದರ ಶಸ್ತ್ರಾಗಾರಗಳನ್ನು ನಾಶ ಮಾಡಿತು. ಯೆಮೆನ್‌ನಲ್ಲಿ ಸಕ್ರಿಯವಾಗಿರುವ ಹುಥಿ ಉಗ್ರರ ನೆಲೆಗಳ ಮೇಲೆ ಅಮೆರಿಕ ದಾಳಿ ನಡೆಸಿತು. ಸಿರಿಯಾದಲ್ಲಿ ಇರಾನ್ ಪರ ಇದ್ದ ಬಷರ್ ಅಲ್ ಅಸ್ಸಾದ್ ಆಡಳಿತ ಅಂತ್ಯಗೊಂಡಿತು. ಈ ಬೆಳವಣಿಗೆಗಳಿಂದ ಇರಾನ್ ಅಸಹಾಯಕ ಸ್ಥಿತಿಗೆ ತಲುಪಿತು. ಅಣು ಒಪ್ಪಂದಕ್ಕೆ ಟ್ರಂಪ್ ಆಡಳಿತ ಹೊಸ ಕರಾರುಗಳನ್ನು ಜೋಡಿಸಿತು. ಇರಾನ್ ತನ್ನ ಅಣ್ವಸ್ತ್ರ ಯೋಜನೆಯನ್ನು ಚುರುಕುಗೊಳಿಸಿತು. ಬರೀ ಅಣು ಒಪ್ಪಂದದಿಂದ ಇರಾನ್ ಅಣ್ವಸ್ತ್ರ ಹೊಂದದಂತೆ ತಡೆಯಬಹುದೇ ಎಂಬ ಪ್ರಶ್ನೆಯೂ ಎದ್ದಿತು.

ಇರಾನ್ ಅಣುಬಾಂಬ್ ಹೊಂದಲು ಹೆಚ್ಚು ಸಮಯ ಬೇಕಿಲ್ಲ. ಶಸ್ತ್ರಾಸ್ತ್ರ ದರ್ಜೆಯ ಯುರೇನಿಯಂ ಉತ್ಪಾದಿಸಲು ಇರಾನಿಗೆ ಕೆಲವು ವಾರಗಳು ಸಾಕು ಎಂದು 2024ರ ಜುಲೈನಲ್ಲಿ ಬೈಡೆನ್ ಅವರ ಅವಧಿಯಲ್ಲಿ ಅಮೆರಿಕದ ವಿದೇಶಾಂಗ ಸಚಿವರಾಗಿದ್ದ ಬ್ಲಿಂಕೆನ್ ಹೇಳಿದ್ದರು. ಅಮೆರಿಕ, ಇಸ್ರೇಲ್ ಹಾಗೂ ಐರೋಪ್ಯ ರಾಷ್ಟ್ರಗಳು ಹಂಚಿಕೊಂಡ ಮಾಹಿತಿ ಇದಕ್ಕಿಂತ ಭಿನ್ನವಾಗಿರಲಿಲ್ಲ. ಇರಾನ್ ಜೊತೆಗೆ ಪರಮಾಣು ಒಪ್ಪಂದ ಮಾಡಿಕೊಳ್ಳಲಾಗುವುದು ಎನ್ನುತ್ತಲೇ ಅಮೆರಿಕ, ಅಣ್ವಸ್ತ್ರ ಹೊಂದುವ ಹಾದಿಯಲ್ಲಿ ಇರಾನ್ ಅನ್ನು ಹಿಂದಕ್ಕೆ ತಳ್ಳುವ ಅವಕಾಶಕ್ಕಾಗಿ ಕಾಯತೊಡಗಿತು.

ಜೂನ್ 12ರಂದು ಇರಾನ್ ಮೇಲೆ ಇಸ್ರೇಲ್ ದಾಳಿ ಮಾಡಿತು. ಇರಾನ್ ಪ್ರತಿಕ್ರಿಯಿಸಿತು. ಇಸ್ರೇಲ್ ಬೆಂಬಲಕ್ಕೆ ಅಮೆರಿಕ ನಿಂತಿತು. ಆದರೆ ರಷ್ಯಾ ಮತ್ತು ಚೀನಾದ ಪ್ರತಿಕ್ರಿಯೆ ಇಸ್ರೇಲ್ ದಾಳಿ ಕುರಿತ ಖಂಡನಾ ಹೇಳಿಕೆಗೆ ಸೀಮಿತವಾಯಿತು.

ಉಕ್ರೇನ್ ಯುದ್ಧ ಚಾಲ್ತಿಯಲ್ಲಿರುವಾಗ ಹಾಗೂ ಉಕ್ರೇನ್ ಅನ್ನು ನಿಗ್ರಹಿಸುವುದೇ ರಷ್ಯಾಕ್ಕೆ ತ್ರಾಸವಾಗಿರುವಾಗ ಮತ್ತೊಂದು ಸಂಘರ್ಷದಲ್ಲಿ ಅದು ಪಾಲ್ಗೊಳ್ಳಬಹುದು ಎಂದು ನಿರೀಕ್ಷಿಸುವುದಾದರೂ ಹೇಗೆ? ಇರಾನ್ ಜೊತೆಗಿನ ಸಂಬಂಧವನ್ನು ಚೀನಾ ವಾಣಿಜ್ಯ ವ್ಯವಹಾರಗಳಿಗೆ ಸೀಮಿತಗೊಳಿಸಿತು. ಅರಬ್ ರಾಷ್ಟ್ರಗಳು ಇರಾನ್ ಜೊತೆಗೆ ಅಂತರ ಕಾಯ್ದುಕೊಂಡವು. ಇಸ್ರೇಲ್‌ನ ಸತತ ದಾಳಿಯಿಂದ ಇರಾನ್ ಶಕ್ತಿ ಕುಂದಿತು. ಅಮೆರಿಕ ಸುತ್ತಿಗೆ ಹಿಡಿದು ಕಾರ್ಯಪ್ರವೃತ್ತವಾಯಿತು. ಕೊನೆಗೆ ಮುಖ ಉಳಿಸಿಕೊಳ್ಳುವ ಮಾರ್ಗವನ್ನೂ ಇರಾನಿಗೆ ನೀಡಿತು. ಕದನ ವಿರಾಮ ಏರ್ಪಟ್ಟಿತು.

ಇಸ್ರೇಲ್ ಮತ್ತು ಇರಾನ್ ಸಂಘರ್ಷದಲ್ಲಿ ಅಮೆರಿಕ ತನ್ನ ಲೆಕ್ಕಾಚಾರದಂತೆಯೇ ಅಂದುಕೊಂಡಿದ್ದನ್ನು ಸಾಧಿಸಿತೆ? ಇರಾನ್ ಅಣ್ವಸ್ತ್ರ ಹೊಂದಲು ಸಾಧ್ಯವಾಗದಂತೆ ಮಾಡಿದ್ದೇವೆ ಎಂದು ದಾಳಿಯ ಬಳಿಕ ಅಮೆರಿಕ ಹೇಳಿದೆ. ಆದರೆ, ಪರಮಾಣು ಶಸ್ತ್ರಕ್ಕೆ ಬೇಕಾದ ಗುಣಮಟ್ಟದ ಯುರೇನಿಯಂ ಅನ್ನು ಇರಾನ್ ಈ ಘಟಕಗಳಲ್ಲಿ ಇರಿಸಿರಲಿಲ್ಲ ಎಂಬ ವರದಿಗಳೂ ಬರುತ್ತಿವೆ. ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ, ದಾಳಿಯಿಂದ ಅಮೆರಿಕ ಮಹತ್ವದ್ದೇನನ್ನೂ ಸಾಧಿಸಿಲ್ಲ ಎಂದಿದ್ದಾರೆ. ಪರಮಾಣು ಯೋಜನೆಯನ್ನು ಮುಂದುವರಿಸುವ ಮಾತನ್ನಾಡಿದ್ದಾರೆ. ಹಾಗಾಗಿ, ಸಂಘರ್ಷ ಮುಗಿಯಿತು ಎನ್ನಲಾಗದು.

ಇರಾನ್ ಜೊತೆಗಿನ ಮಾತುಕತೆಗೆ ಅಮೆರಿಕ ಚಾಲನೆ ಕೊಟ್ಟಿರುವುದು ಹಾಗೂ ಆರ್ಥಿಕ ನೆರವಿನ ಭರವಸೆ ನೀಡಿರುವ ಸುದ್ದಿಯೂ ವರದಿಯಾಗಿದೆ. ದಿಗ್ಬಂಧನವನ್ನು ವಿಸ್ತರಿಸಿ ಪರಮಾಣು ಒಪ್ಪಂದಕ್ಕೆ ಬದ್ಧವಾಗುವಂತೆ ಒತ್ತಡ ಹೇರುವ ತಂತ್ರವೂ ಮುಂದುವರಿಯಬಹುದು. ಒಂದೊಮ್ಮೆ ಪರಮಾಣು ಒಪ್ಪಂದ ಏರ್ಪಟ್ಟರೂ ಅಣ್ವಸ್ತ್ರ ಹೊಂದುವ ಬಯಕೆಯನ್ನು ಇರಾನ್ ಬಿಡುತ್ತದೆ ಎಂದು ಹೇಳಲಾಗದು. ಹಾಗಾಗಿ, ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ, ಸಂಧಾನ, ಒಪ್ಪಂದ ಎಂಬ ಚಕ್ರದ ಚಲನೆಯಂತೂ ಚಾಲ್ತಿಯಲ್ಲಿರುತ್ತದೆ ಎನ್ನುವ ಸಾಧ್ಯತೆಯೇ ಸತ್ಯಕ್ಕೆ ಹೆಚ್ಚು ಸಮೀಪವಾದುದು.

ವಾಚಕರ ವಾಣಿ

ಕಾಲಹರಣ ಮಾಡಿದರೆ ಶಾಸ್ತಿ

ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ಶ್ರೀಸಾಮಾನ್ಯನ ಬದುಕು ಬದಲಾಗದು ಎಂಬ ಸ್ಥಿತಿಗೆ ಕರ್ನಾಟಕದ ರಾಜಕೀಯ ತಲುಪಿದೆ. ಈ ಹಿಂದೆ ಅಧಿಕಾರಕ್ಕೇರುವ ಮೊದಲು ಬಿಜೆಪಿ ಗಳಿಸಿದ್ದ ಜನರ ಒಲವು ಅವರಲ್ಲಿನ ಆಂತರಿಕ ಕಚ್ಚಾಟದಿಂದ ವಿರೋಧವಾಗಿ ಮಾರ್ಪಾಡಾಗಿತ್ತು. ಅದೀಗ ಕಾಂಗ್ರೆಸ್ ಸರ್ಕಾರಕ್ಕೆ ವರ್ಗಾವಣೆ ಆಗುವಂತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊದಲ ಅವಧಿಯಲ್ಲಿದ್ದ ಹಿಡಿತವನ್ನು ಈ ಬಾರಿ ಕಳೆದುಕೊಂಡಿದ್ದಾರೆ ಎಂಬುದಕ್ಕೆ ಸಾಲು ಸಾಲು ಉದಾಹರಣೆ ಇವೆ. ಆದರೆ, ಅದು ಆಡಳಿತ ಯಂತ್ರದ ಮೇಲೆ ಪರಿಣಾಮ ಬೀರುವಷ್ಟರಮಟ್ಟಿಗೆ ಬಂದು ತಲುಪಿರುವುದು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ. ಕಾಂಗ್ರೆಸ್ ಗೆಲ್ಲಲು ಗ್ಯಾರಂಟಿಗಳು ಎಷ್ಟು ಕಾರಣವೋ, ಬಿಜೆಪಿಯ ಒಡಕು ಮತ್ತು ಬೆಲೆ ಏರಿಕೆಯಂತಹ ಸಮಸ್ಯೆಗಳು ಅಷ್ಟೇ ಕಾರಣವಾಗಿವೆ. ರಾಜ್ಯದ ಜನರಿಗೆ ಗ್ಯಾರಂಟಿ ನೀಡಿದ್ದೇವೆ, ಜನ ನಮ್ಮನ್ನು ಮುಂದಿನ ಬಾರಿಯೂ ಗೆಲ್ಲಿಸುತ್ತಾರೆ ಎಂಬ ಭ್ರಮೆಯಲ್ಲಿ ಕಾಲಹರಣ ಮಾಡಿದರೆ ಮತದಾರರು ಕೈಕೊಡುವುದು ಖಚಿತ.

ಮಣಿಕಂಠ ಪಾ. ಹಿರೇಮಠ, ಬಾಗಲಕೋಟೆ

ಕ್ರೀಡೆಗೆ ಪ್ರೋತ್ಸಾಹ ಬೇಕು

ಶಾಲೆಗಳಿಗೆ 10 ಲಕ್ಷ ಫುಟ್‌ಬಾಲ್ ವಿತರಣೆ ಮಾಡುವುದಾಗಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ (ಪ್ರ.ವಾ., ಜುಲೈ 1). ಫುಟ್‌ಬಾಲ್ ಕ್ರೀಡೆಯಲ್ಲಿ ಹೆಚ್ಚು ಮಕ್ಕಳು ತೊಡಗುವಂತೆ ಪ್ರೇರೇಪಿಸಲು ಹಾಗೂ ಕ್ರೀಡಾ ಸಂಸ್ಕೃತಿ ಬೆಳೆಸುವ ಉದ್ದೇಶದಿಂದ ಈ ಕ್ರಮ ಸರಿಯಾಗಿದೆ.

ಸ್ವಾಮಿ ವಿವೇಕಾನಂದ ಅವರು, 'ಭಗವದ್ಗೀತೆ ಓದುವುದಕ್ಕಿಂತ ಫುಟ್‌ಬಾಲ್ ಆಡುವುದೇ ಉತ್ತಮ' ಎಂದು ನುಡಿದಿದ್ದರು. ಈಗಲಾದರೂ ಕೇಂದ್ರ ಮತ್ತು ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬೇಕು. ಜೊತೆಗೆ, ಹದಿಹರೆಯದ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಆಗಷ್ಟೇ ಆರೋಗ್ಯಪೂರ್ಣ ಯುವ ಮನಸ್ಸುಗಳು ಅರಳಲು ಸಾಧ್ಯ.

ಸತ್ಯಮೂರ್ತಿ, ಬೆಂಗಳೂರು

ಒಂದೇ ಮಾನದಂಡ ಅನುಸರಿಸಿ

ಬೆಂಗಳೂರಿನಲ್ಲಿ ಹಲವೆಡೆ ರಾಜಕಾಲುವೆ ಮೇಲೆ ಪಟ್ಟಭದ್ರರು ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಬಗ್ಗೆ ದೂರು ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ದುರದೃಷ್ಟಕರ (ಪ್ರ.ವಾ., ಜುಲೈ 1). ಈ ಹಿಂದೆ ಕೆಲವೆಡೆ ರಾಜಕಾಲುವೆ ಒತ್ತುವರಿ ತೆರವು ಮಾಡಿದ ಉದಾಹರಣೆಗಳಿವೆ. ಆಗ ಜನಸಾಮಾನ್ಯರು ಹೆಚ್ಚು ತೊಂದರೆ ಅನುಭವಿಸಿದ್ದೂ ಉಂಟು. ಆದರೆ, ತೆರವು ಕಾರ್ಯಾಚರಣೆಯ ಹಿಂದಿನ ತರ್ಕ ನಮಗೆ ಅರ್ಥವಾಗುತ್ತಿಲ್ಲ. ಜನಸಾಮಾನ್ಯರಿಗೂ ಹಾಗೂ ಪ್ರಭಾವಿಗಳಿಗೂ ಒಂದೇ ಮಾನದಂಡ ಅನುಸರಿಸಬೇಕಿದೆ.

ಜಿ.ಪಿ. ದಯಾನಂದ, ಬೆಂಗಳೂರು

ಲೂಟಿಕೋರರಿಗೆ ಶಿಕ್ಷೆ ಆಗಲಿ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಭಾವನಹಳ್ಳಿಯಲ್ಲಿ ರೈತರ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ₹150 ಕೋಟಿ ವಂಚನೆ ನಡೆದಿರುವುದು ಆಘಾತಕಾರಿಯಾದ ಸಂಗತಿ (ಪ್ರ.ವಾ., ಜುಲೈ 1). ಇದರಲ್ಲಿ ಸರ್ವೆ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಶಾಮೀಲಾಗಿರುವುದು ಬಯಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪಾರದರ್ಶಕವಾಗಿ ನಡೆದಿಲ್ಲ ಎಂಬುದಕ್ಕೆ ಈ ಪ್ರಕರಣ ಸಾಕ್ಷಿಯಾಗಿದೆ. ಇಷ್ಟು ಹಣ ಲೂಟಿ ಮಾಡಿದವರಿಗೆ ಕಠಿಣ ಶಿಕ್ಷೆಯಾಗಬೇಕಿದೆ.

ಸಿದ್ದು ಮೈದೊಳಲು, ಶಿವಮೊಗ್ಗ

ಆಟೊ ದರ: ಕಟ್ಟುನಿಟ್ಟು ನಿಯಮ ಬೇಕು

ಅಧಿಕ ದರ ವಸೂಲಿ ಮಾಡಿದ 114 ಆಟೊಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಿದ್ದಾರೆ (ಪ್ರ.ವಾ., ಜುಲೈ 1). ಆಟೊದವರ ದುಬಾರಿ ದರ ವಸೂಲಿ ಹೊಸತೇನಲ್ಲ. ಬೆಂಗಳೂರಿನ ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಗಳಲ್ಲಿ ದೂರದ ಊರಿಂದ ಬಂದವರ ಕೈಯಲ್ಲಿ ಲಗೇಜ್ ಇದ್ದರಂತೂ ಆಟೊ ಚಾಲಕರು ಒಂದಾಗಿ ದುಪ್ಪಟ್ಟು ದರ ವಸೂಲಿ ಮಾಡುತ್ತಾರೆ. ರಾತ್ರಿ ವೇಳೆ ಇವರು ಕೇಳುವಷ್ಟೇ ಹಣ ನೀಡಿ ಸಂಚರಿಸಬೇಕಿದೆ.

ಕರಾರುವಕ್ಕಾದ ಮೀಟರ್‌ಗಳಿಲ್ಲ. ಮೀಟರ್‌ಗಳನ್ನು ತಪಾಸಣೆ ಮಾಡುವ ತೂಕ ಮತ್ತು ಅಳತೆ ಇಲಾಖೆಯು ಇದೆಯೋ ಇಲ್ಲವೋ ಎಂಬ ಅನುಮಾನ ಕಾಡುತ್ತಿದೆ. ಪ್ರಿಪೇಯ್ಡ್ ಆಟೊ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ನಿಯಮದ ಬಗ್ಗೆ ಮಾತನಾಡಿದರೆ ಆಟೊ ಚಾಲಕರು ಒಂದಾಗಿ ಬಿಡುತ್ತಾರೆ. ಆ್ಯಪ್ ಆಧಾರಿತ ಆಟೊ ಸೇವೆ ಒದಗಿಸುವ ಕಂಪನಿಗಳು ಕೂಡ ಗ್ರಾಹಕರಿಂದ ಹೆಚ್ಚು ಹಣ ವಸೂಲಿ ಮಾಡುತ್ತಿವೆ. ಪ್ರಯಾಣಿಕರ ಹಿತದೃಷ್ಟಿಯಿಂದ ದುಬಾರಿ ಹಣ ವಸೂಲಿ ಮಾಡುವ ಆಟೊ ಚಾಲಕರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕಿದೆ.

ಅತ್ತಿಹಳ್ಳಿ ದೇವರಾಜ್, ಬೆಂಗಳೂರು

ಅಶಿಸ್ತಿನ ಜೀವನಶೈಲಿ ಅಪಾಯಕರ

ರಾಜ್ಯದಲ್ಲಿ ಹೃದಯಾಘಾತಕ್ಕೆ ತುತ್ತಾಗಿ ಮೃತಪಡುತ್ತಿರುವ ಯುವಜನರ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಅಶಿಸ್ತಿನ ಜೀವನಶೈಲಿಯೇ ಪ್ರಮುಖ ಕಾರಣ. ಹೃದಯಾಘಾತಕ್ಕೆ ಇಳಿವಯಸ್ಸಿನವರು ಮಾತ್ರ ಬಲಿಯಾಗುತ್ತಾರೆ ಎಂಬ ಅಸಡ್ಡೆ ಇದೆ. ಇದರಿಂದ ಯುವ ಸಮೂಹವು ಆರೋಗ್ಯ ಪರೀಕ್ಷೆಗೆ ಒಳಗಾಗುವುದಿಲ್ಲ.

ತೋರ್ಪಡಿಕೆಯ ಬದುಕು ಯುವಜನರನ್ನು ಸಾವಿನ ಅಂಚಿಗೆ ದೂಡುತ್ತಿದೆ. ಆರೋಗ್ಯಯುತ ಬದುಕಿನ ಕ್ರಮವನ್ನು ಮಕ್ಕಳಿಗೆ ಬಾಲ್ಯದಲ್ಲಿಯೇ ರೂಢಿಸಬೇಕಿದೆ. 'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿಯನ್ನು ಯುವಜನರ ಹೃದಯಕ್ಕಿಳಿಸುವುದು ಇಂದಿನ ಅಗತ್ಯವಾಗಿದೆ.

ಸಚಿನ್ ಹೊಳೆಹದ್ದು, ಶೃಂಗೇರಿ

ಚುರುಮುರಿ

ಗ್ರಾಮಾಭಿವೃದ್ಧಿ

• ಮಣ್ಣೆ ರಾಜು

ಚಟ್ನಹಳ್ಳಿಯಲ್ಲಿ ಮನೆ ಮನೆಗಳಲ್ಲೂ ಆನೆ ಗಾತ್ರದ ಹಸುಗಳು ಕೆಚ್ಚಲು ಬಿಟ್ಟು ನಿಂತಿದ್ದವು. ಊರ ಹೆಂಗಸರ ಸೊಂಟದ ಬಾಳೆಕಾಯಿ, ಸೆರಗಿನ ಗಂಟುಗಳು ದಪ್ಪಗಾಗಿದ್ದವು. ಸೀಮೆಹಸುಗಳಂತೆ ಹೆಂಗಸರೂ ಎರಡು ಮೂರು ಸುತ್ತು ದಪ್ಪಗಾಗಿದ್ದರು. ಆದರೆ, ಊರಿನ ಗಂಡಸು ತಳಿಗಳು ಆರ್ಥಿಕ, ದೈಹಿಕವಾಗಿ ದುರ್ಬಲವಾಗಿದ್ದವು.

ಮೊದಲು ಗಂಡಸರು ಹೀಗಿರಲಿಲ್ಲ, ಹೊಲ–ಮನೆ ನೋಡಿಕೊಂಡು ತಕ್ಕಮಟ್ಟಿಗಿದ್ದರು. ವ್ಯವಸಾಯ ಮೊದಲಿನಂತಿರಲಿಲ್ಲ, ಬೆಳೆದ ಬೆಳೆಗೆ ಬೆಂಬಲ ಬೆಲೆ ಇಲ್ಲ, ಕೃಷಿ ಕೆಲಸಕ್ಕೆ ಕೂಲಿ ಆಳು ಸಿಗುತ್ತಿರಲಿಲ್ಲ. ಲಾಭದಾಯಕ ಅಲ್ಲವೆಂದು ವ್ಯವಸಾಯವನ್ನು ಕಡೆಗಣಿಸಿದ್ದರು.

ಹಿಂಗಾದ್ರೆ ಸಂಸಾರ ನಡೆಸೋದು ಹೆಂಗೆ ಎಂದು ಊರಿನ ಸ್ತ್ರೀಕುಲ ಕಳವಳಗೊಂಡಿತು. ಎಚ್ಚೆತ್ತುಕೊಂಡ ಹೆಂಗಸರು ಹಸು ಸಾಕಾಣಿಕೆ, ಹೈನುಗಾರಿಕೆ ಆರಂಭಿಸಿ ಆರ್ಥಿಕ ಸ್ವಾವಲಂಬಿಯಾದರು. ಸಂಸಾರಕ್ಕೆ ಆಧಾರವಾದರು. ಒಂದಿಷ್ಟು ಕಾಸು– ಕರಿಮಣಿ ಕಂಡರು.

ಗಂಡಸರು ನಿರುದ್ಯೋಗಿಯಂತಾಗಿದ್ದರು. ಹಲ್ಲು ಕಿರಿದು, ತಲೆ ಕೆರೆದು ಹೆಂಡ್ತಿಯಿಂದ ದೈನಂದಿನ ಖರ್ಚಿಗೆ ಕಾಸು ಗಿಟ್ಟಿಸಿಕೊಳ್ಳುವ ದಯನೀಯ ಪರಿಸ್ಥಿತಿ ಅನುಭವಿಸಿದ್ದರು.

ಹೀಗಿರುವಾಗ, ಅದೃಷ್ಟಕ್ಕೋ ದುರದೃಷ್ಟಕ್ಕೋ ಚಟ್ನಹಳ್ಳಿಯಲ್ಲಿ ಕೈಗಾರಿಕೆ ಸ್ಥಾಪನೆಗೆ ಸರ್ಕಾರ ಯೋಜನೆ ರೂಪಿಸಿತು. ಆಗ ರಿಯಲ್ ಎಸ್ಟೇಟ್ ಕುಳಗಳು ಊರಿಗೆ ನುಗ್ಗಿದವು. ಕಾಸಿಲ್ಲದೆ ಕಂಗಾಲಾಗಿದ್ದ ಜನ ಬರಮಾಡಿಕೊಂಡರು.

ಎಕರೆಗೆ ಕೋಟಿಗಟ್ಟಲೆ ದುಡ್ಡು ಕೊಟ್ಟು ಕೊಂಡುಕೊಂಡ ಜಮೀನಿಗೆ ಕಾಂಪೌಂಡ್ ಕಟ್ಟಿಕೊಂಡರು. ಜಮೀನು ಮಾರಿಕೊಂಡವರು. ಮೂಟೆಗಟ್ಟಲೆ ದುಡ್ಡು ಎಣಿಸಿಕೊಂಡು ದೊಡ್ಡ ಮನೆ, ದೊಡ್ಡ ಕಾರುಗಳ ಒಡೆಯರಾದರು.

ನಿತ್ಯ ಹಸುವಿನ ಮೈ ತೊಳೆದು, ಸಗಣಿ, ಗಂಜಲ ಕ್ಲೀನ್ ಮಾಡೋದು ಅಸಹ್ಯ ಎನಿಸಿತು. ಜೊತೆಗೆ ಹಸುಗಳಿಗೆ ಮೇವು ಬೆಳೆಯುವ ಜಮೀನನ್ನೂ ಮಾರಿಕೊಂಡಿದ್ದರು. ಹಾಲು ಕೊಡುವ ಹಸುಗಳು ಮಾರಾಟವಾದವು.

ಅನ್ನದ ಬದಲು ದುಡ್ಡು ತಿನ್ನುವವರಂತೆ ಚಟ್ನಹಳ್ಳಿ ಜನ ನೂರು ರೂಪಾಯಿ ನೋಟುಗಳ ತಿಂಡಿ, ಐದು ನೂರು ನೋಟುಗಳ ಊಟ ಮಾಡಿಕೊಂಡು ಸದ್ಯಕ್ಕೆ ಸುಖವಾಗಿದ್ದಾರೆ... ಮುಂದೇನಾಗುವುದೋ ಬಲ್ಲವರಿಲ್ಲ.

ಸಂಗತ

ಹುಲಿಗಳ ಸಂರಕ್ಷಣೆ ಎಲ್ಲರ ಹೊಣೆ

ಐದು ಹುಲಿಗಳ ಸಾವು ಆತಂಕ ಮೂಡಿಸುವ ಸಂಗತಿ. ಇಂಥ ದುರಂತಗಳನ್ನು ತಡೆಗಟ್ಟಲು, ಸ್ಥಳೀಯರಿಗೆ ಅರಿವು ಮೂಡಿಸುವ ಪ್ರಯತ್ನಗಳು ಹೆಚ್ಚಬೇಕು.

• ಐ. ಸೇಸುನಾಥನ್

ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ವನ್ಯಜೀವಿ ಧಾಮದ ವ್ಯಾಪ್ತಿಯ ಮೀಣ್ಯಂ ಅರಣ್ಯದಲ್ಲಿ ಸಂಭವಿಸಿದ ಐದು ಹುಲಿಗಳ ಸಾವು ರಾಷ್ಟ್ರ ಮಟ್ಟದ ಸುದ್ದಿಯಾಗಿದೆ. ಹುಲಿಯ ದಾಳಿಗೆ ಬಲಿಯಾದ ಹಸುವಿನ ಕಳೇಬರಕ್ಕೆ ಸಿಂಪಡಿಸಿದ ಕೀಟನಾಶಕವನ್ನು ತಿಂದ ತಾಯಿ ಹುಲಿ ಮತ್ತು ನಾಲ್ಕು ಮರಿಗಳು ಮೃತಪಟ್ಟಿವೆ.

ಬಂಡೀಪುರ ಮತ್ತು ಬಿಳಿಗಿರಿರಂಗನಾಥ ಸ್ವಾಮಿ ಹುಲಿ ರಕ್ಷಿತಾರಣ್ಯಕ್ಕೆ ಹೋಲಿಸಿದರೆ, ಕಾವೇರಿ ವನ್ಯಜೀವಿಧಾಮ ಮತ್ತು ಮಲೆಮಹದೇಶ್ವರ ವನ್ಯಜೀವಿಧಾಮದಲ್ಲಿ ಇರುವ ಹುಲಿಗಳ ಸಂಖ್ಯೆ ಬಹಳ ಕಡಿಮೆ. ಹೀಗಿರುವಾಗ, ಏಕಾಏಕಿ ಐದು ಹುಲಿಗಳ ಸಾವು ಆತಂಕದ ವಿಚಾರವಾಗಿದೆ. ಕೆಲವು ಮಾಧ್ಯಮಗಳು 'ಮಲೆಮಹದೇಶ್ವರ ಬೆಟ್ಟದಲ್ಲಿ ಹುಲಿಗಳ ದಾರುಣ ಸಾವು' ಎಂದು ತಪ್ಪಾಗಿ ವರದಿ ಮಾಡುತ್ತಿವೆ. ಹುಲಿಗಳು ಮೃತಪಟ್ಟಿರುವುದು ಮಲೆಮಹದೇಶ್ವರ ವನ್ಯಜೀವಿಧಾಮಕ್ಕೆ ಸೇರಿದ ಅರಣ್ಯ ಪ್ರದೇಶದಲ್ಲೇ ಹೊರತು, ಮಲೆಮಹದೇಶ್ವರ ಬೆಟ್ಟದಲ್ಲಿ ಅಲ್ಲ. ಘಟನೆ ನಡೆದ ಸ್ಥಳ ಮಲೆಮಹದೇಶ್ವರ ಬೆಟ್ಟದಿಂದ ನೈರುತ್ಯಕ್ಕೆ ಸುಮಾರು 60 ಕಿ.ಮೀ ದೂರದಲ್ಲಿದ್ದು, ರಾಮಾಪುರ ಠಾಣೆಯ ವ್ಯಾಪ್ತಿಗೆ ಬರುತ್ತದೆ.

ಹನೂರು ತಾಲ್ಲೂಕಿನ ಮೀಣ್ಯಂ, ಹೂಗ್ಯಂ, ಮಾರ್ಟಳ್ಳಿ, ಗೋಪಿನಾಥಂ ಗ್ರಾಮ ಪಂಚಾಯಿತಿಗಳು ಕರ್ನಾಟಕದ ಗಡಿಯಲ್ಲಿ ಅರಣ್ಯ ಪ್ರದೇಶದ ನಡುವೆ ಇವೆ. ಇಲ್ಲಿ ಆದಿವಾಸಿಗಳು ಮತ್ತು ಬುಡಕಟ್ಟು ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಾಡಂಚಿನ ಜನರು ಕೃಷಿ, ಪಶುಸಂಗೋಪನೆಯ ಜೊತೆಗೆ ಅರಣ್ಯ ಅವಲಂಬಿತ ಕಸುಬುಗಳಲ್ಲಿ ತೊಡಗಿಕೊಂಡಿದ್ದಾರೆ.

ಕಾಡಂಚಿನ ಗ್ರಾಮಗಳಲ್ಲಿ ಮಾನವ ಮತ್ತು ಪ್ರಾಣಿಗಳ ನಡುವಿನ ಸಂಘರ್ಷ ಮುಂದುವರಿದಿದೆ. ಕಾಡುಪ್ರಾಣಿಗಳು ಊರೊಳಗೆ ನುಗ್ಗಿ ರೈತರ ಫಸಲುಗಳನ್ನು ಹಾಳು ಮಾಡಿದಾಗ, ಕೆಲವರು ಪ್ರಾಣಿಗಳ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾಗುತ್ತಾರೆ. ಕಾಡುಪ್ರಾಣಿಗಳು ಊರೊಳಗೆ ಬಂದು ಸಾಕುಪ್ರಾಣಿಗಳ ಮೇಲೆ ದಾಳಿ ಮಾಡಿದಾಗ, ಜಾಡನ್ನು ಅನುಸರಿಸಿ ಹೋಗಿ ವಿಷಪ್ರಾಶನ ಮಾಡಿ ಬರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ದೇಸಿ ದನಕರುಗಳನ್ನು ಸಾಕುವ ಮಾಲೀಕರು, ತಮ್ಮ ಜಾನುವಾರುಗಳನ್ನು ಕಾಡಿಗೆ ಬಿಡುವಾಗ ಅವುಗಳ ಜೊತೆಗೆ ಹೋಗುವುದಿಲ್ಲ. ಮೇವಿಗಾಗಿ ಕಾಡಿಗೆ ಹೋದ ದನಕರುಗಳಲ್ಲಿ ಕೆಲವು, ಒಂದೆರಡು ದಿನ ಅಲ್ಲೇ ತಂಗಿದ್ದು ವಾಪಸ್ಸಾಗುವುದೂ ಇದೆ.

ಹೀಗೆ ಅರಣ್ಯದಲ್ಲಿಯೇ ತಂಗುವ ದನಕರುಗಳು ಕಾಡುಪ್ರಾಣಿಗಳಿಗೆ ಬಲಿಯಾದಾಗಲೂ ವಿಷಪ್ರಾಶನದಂತಹ ಘಟನೆಗಳು ಸಂಭವಿಸುತ್ತವೆ. ಇಂತಹ ದುರ್ಘಟನೆಗಳನ್ನು ತಪ್ಪಿಸಲು ಅರಣ್ಯ ಇಲಾಖೆ ಮೊದಲು ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರಿಗೆ ಅರಣ್ಯ ಸಂರಕ್ಷಣೆಯ ಮಹತ್ವ ಕುರಿತು ಅರಿವು ಮೂಡಿಸಬೇಕು. ಕಾನೂನುಬಾಹಿರ ಚಟುವಟಿಕೆಗಳಿಗೆ ವಿಧಿಸುವ ಶಿಕ್ಷೆಗಳ ಬಗ್ಗೆಯೂ ಮನವರಿಕೆ ಮಾಡಿಕೊಡಬೇಕು.

ಕಾಡುಪ್ರಾಣಿಗಳಿಂದ ರೈತರ ಫಸಲಿಗೆ ಹಾನಿಯಾದರೆ ಅಥವಾ ಸಾಕುಪ್ರಾಣಿಗಳು ಬಲಿಯಾದರೆ ಅರಣ್ಯ ಇಲಾಖೆಯು ತಕ್ಷಣವೇ ಕಾರ್ಯಪ್ರವೃತ್ತವಾಗಿ ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸುವಂತಾಗಬೇಕು. ಹಾಗೆ ಮಾಡಿದಲ್ಲಿ ಸಂತ್ರಸ್ತರು ಕಾಡುಪ್ರಾಣಿಗಳ ಮೇಲೆ ಸೇಡು ತೀರಿಸಿಕೊಳ್ಳುವ ಮಟ್ಟಕ್ಕೆ ಹೋಗಲಾರರು. ಅಂತೆಯೇ, ಕಾಡಿನಲ್ಲಿ ಸತ್ತ ಪ್ರಾಣಿಗಳ ಕಳೇಬರಗಳನ್ನು ಅರಣ್ಯ ಇಲಾಖೆ ಆದಷ್ಟು ಬೇಗನೆ ಪತ್ತೆಹಚ್ಚಿ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು.

ಅರಣ್ಯ ಇಲಾಖೆಯು ಹೊರಗುತ್ತಿಗೆ ಆಧಾರದ ಮೇಲೆ ಅರಣ್ಯ ವೀಕ್ಷಕರನ್ನು ನೇಮಕ ಮಾಡುವಾಗ ಸ್ಥಳೀಯರಿಗೆ ಆದ್ಯತೆ ನೀಡುವುದು ಒಳ್ಳೆಯದು. ಸ್ಥಳೀಯರಿಗೆ ಅರಣ್ಯದ ಪರಿಚಯದ ಜೊತೆಗೆ ಜನರ ಪರಿಚಯವೂ ಇರುವುದರಿಂದ, ಅವರಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವವರನ್ನು ಸುಲಭವಾಗಿ ಪತ್ತೆ ಹಚ್ಚಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ನೆರವಾಗಬಹುದು.

ತಮಿಳುನಾಡಿನ ಬರಗೂರು, ತಟ್ಟೆಕೆರೆ, ತಾವರೆಕೆರೆ ಮುಂತಾದ ಸ್ಥಳಗಳಿಂದ ಪ್ರತಿವರ್ಷ ಮೇವು ಮತ್ತು ಗೊಬ್ಬರಕ್ಕಾಗಿ ಸಾವಿರಾರು ಜಾನುವಾರುಗಳನ್ನು ಕರ್ನಾಟಕದ ಗಡಿಯೊಳಗೆ ತಂದು ತಾತ್ಕಾಲಿಕ ಕೊಟ್ಟಿಗೆಗಳನ್ನು ನಿರ್ಮಿಸಿ, ಮೇಯಲು ಬಿಡುತ್ತಾರೆ. ಈ ಜಾನುವಾರುಗಳ ಪ್ರವೇಶದಿಂದಾಗಿ ಸ್ಥಳೀಯರ ದನಕರುಗಳಿಗೆ ಮೇವಿನ ಅಭಾವ ಉಂಟಾಗುವುದಲ್ಲದೆ, ವಿಷಪ್ರಾಶನದಂತಹ ಘಟನೆಗಳಿಗೆ ಕಾರಣವಾಗುತ್ತದೆ.

ಹನೂರು ತಾಲ್ಲೂಕಿನ ಪಾಲಾರ್, ಗರಿಕೆಕಂಡಿ, ಜಲ್ಲಿಪಾಳ್ಯ ಮುಂತಾದ ಅಂತರರಾಜ್ಯ ಗಡಿಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿ, ಹೊರರಾಜ್ಯದ ಜಾನುವಾರುಗಳ ಪ್ರವೇಶಕ್ಕೆ ಕಡಿವಾಣ ಹಾಕಬೇಕು. ಹನೂರು–ಹಂದಿಯೂರು ರಸ್ತೆಗಳು ಕೂಡುವ ಅಂತರರಾಜ್ಯ ಗಡಿಯಾದ ಗರಿಕೆಕಂಡಿಯಲ್ಲಿ ತಮಿಳುನಾಡಿನ ಚೆಕ್‌ಪೋಸ್ಟ್ ಮಾತ್ರ ಇದ್ದು, ಕರ್ನಾಟಕದ ಚೆಕ್‌ಪೋಸ್ಟ್ ರಾಜ್ಯದ ಗಡಿಯಿಂದ 5 ಕಿ.ಮೀ ಒಳಗೆ ನಾಲ್ ರೋಡ್‌ನಲ್ಲಿದೆ. ಇದನ್ನು ಅರಣ್ಯದೊಳಗಿರುವ ಗರಿಕೆಕಂಡಿಗೆ ಸ್ಥಳಾಂತರ ಮಾಡಿದಲ್ಲಿ, ಕಾಡಿನಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಸಹಾಯಕವಾಗಬಹುದು.

ರಾಜ್ಯದಲ್ಲೇ ಅತಿಹೆಚ್ಚು ಹುಲಿಗಳು ಇರುವ ಪ್ರದೇಶ ಎಂಬ ಕೀರ್ತಿಗೆ ಚಾಮರಾಜನಗರ ಪಾತ್ರವಾಗಿದೆ. ಜಿಲ್ಲೆಯ ಬಂಡೀಪುರ ಮತ್ತು ಬಿಳಿಗಿರಿರಂಗನಾಥಸ್ವಾಮಿ ಹುಲಿ ರಕ್ಷಿತಾರಣ್ಯಗಳಿವೆ. ಮಲೆಮಹದೇಶ್ವರ ವನ್ಯಜೀವಿಧಾಮವನ್ನೂ ಹುಲಿ ರಕ್ಷಿತಾರಣ್ಯವೆಂದು ಘೋಷಿಸಬೇಕೆಂಬ ಪ್ರಸ್ತಾವ ಇದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯು ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯೋನ್ಮುಖವಾಗಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

5.65 ಲಕ್ಷ ಹೆಕ್ಟೇರ್ — ಕರ್ನಾಟಕದಲ್ಲಿ ತೆಂಗಿನಕಾಯಿ ಬೆಳೆಯುವ ಪ್ರದೇಶದ ವಿಸ್ತೀರ್ಣ

615.1 ಕೋಟಿ — 2023–24ರಲ್ಲಿ ಕರ್ನಾಟಕದಲ್ಲಿ ಬೆಳೆದ ತೆಂಗಿನಕಾಯಿಗಳು

10,894 — ಕರ್ನಾಟಕದಲ್ಲಿ ಪ್ರತಿ ಹೆಕ್ಟೇರ್‌ಗೆ ಬರುವ ತೆಂಗಿನಕಾಯಿ ಇಳುವರಿ

2.24 ಲಕ್ಷ ಹೆಕ್ಟೇರ್ — ತುಮಕೂರು ಜಿಲ್ಲೆಯೊಂದರಲ್ಲೇ ತೆಂಗಿನಕಾಯಿ ಬೆಳೆಯುವ ಪ್ರದೇಶ

1.46 ಲಕ್ಷ ಹೆಕ್ಟೇರ್ — ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ತೆಂಗಿನಕಾಯಿ ಬೆಳೆಯುವ ಪ್ರದೇಶ

ಕಾಯಿ–ಕೊಬ್ಬರಿ ಏಕಿಷ್ಟು ದುಬಾರಿ?

ಶ್ರಾವಣ ಮಾಸ, ಗಣೇಶ ಚತುರ್ಥಿ, ದಸರಾ, ದೀಪಾವಳಿ... ಮುಂದೆ ಸಾಲು ಸಾಲು ಹಬ್ಬಗಳಿದ್ದು, ತೆಂಗಿನಕಾಯಿ ಉತ್ಪನ್ನಗಳಿಗೆ ಮತ್ತಷ್ಟು ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇದೆ. ಹಾಗಾಗಿ, ಇನ್ನಷ್ಟು ಸಮಯ ಬೆಲೆ ಹೀಗೆಯೇ ಏರುಮುಖವಾಗಿರಲಿದೆ ಎಂದು ವ್ಯಾಪಾರಿಗಳು ಹೇಳುತ್ತಿದ್ದಾರೆ

ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ಕೆಲವು ತಿಂಗಳುಗಳಿಂದೀಚೆಗೆ ತೆಂಗಿನಕಾಯಿ, ಕೊಬ್ಬರಿ, ಕೊಬ್ಬರಿ ಎಣ್ಣೆ ಸೇರಿದಂತೆ ತೆಂಗಿನಕಾಯಿ ಉತ್ಪನ್ನಗಳ ಬೆಲೆ ಗಗನಮುಖಿಯಾಗಿದೆ. ಮಾರುಕಟ್ಟೆಯಲ್ಲಿ ತೆಂಗಿನಕಾಯಿ ಮತ್ತು ಕೊಬ್ಬರಿ ಬೆಲೆಯೂ ದಾಖಲೆ ಮಟ್ಟಕ್ಕೆ ತಲುಪಿದೆ. ತುಮಕೂರು ಜಿಲ್ಲೆಯ ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ ಉಂಡೆ ಕೊಬ್ಬರಿ ಕ್ವಿಂಟಲ್‌ಗೆ ₹31,606ಕ್ಕೆ ಮಾರಾಟವಾಗಿದೆ. ಜೂನ್ 27ರಂದು ಹಾಸನ ಜಿಲ್ಲೆಯ ಅರಸೀಕೆರೆ ಮಾರುಕಟ್ಟೆಯಲ್ಲಿ ಕ್ವಿಂಟಲ್ ಉಂಡೆ ಕೊಬ್ಬರಿ ಧಾರಣೆ ₹30,508 ತಲುಪಿತ್ತು (ಮಂಗಳವಾರ ಅದು ₹29,090ಕ್ಕೆ ಇಳಿದಿದೆ). ರಾಜ್ಯದಾದ್ಯಂತ ಒಂದು ಕೆ.ಜಿ ತೆಂಗಿನಕಾಯಿಗೆ ₹50ರಿಂದ ₹80ರವರೆಗೂ ದರ ಇದೆ. ಕೊಬ್ಬರಿ ಎಣ್ಣೆಯ ಬೆಲೆಯಲ್ಲೂ ಹೆಚ್ಚಳವಾಗಿದ್ದು, ₹300–₹350ರ ಆಸುಪಾಸಿನಲ್ಲಿದ್ದ ಲೀಟರ್ ಎಣ್ಣೆಯ ಬೆಲೆ ₹450ರಿಂದ ₹500ರವೆಗೂ ಏರಿಕೆ ಕಂಡಿದೆ.

ಮಾರುಕಟ್ಟೆಯಲ್ಲಿ ತೆಂಗಿನಕಾಯಿ, ಕೊಬ್ಬರಿಗೆ ಬೇಡಿಕೆ ಇರುವುದರಿಂದ ತೆಂಗು ಬೆಳೆಯುವ ರೈತರಿಗೆ ಉತ್ತಮ ಬೆಲೆ ಸಿಗುತ್ತಿದೆ. ಆದರೆ, ಇಳುವರಿ ಕಡಿಮೆ ಇರುವುದರಿಂದ ಬೆಲೆ ಹೆಚ್ಚಳದ ಲಾಭ ದೊಡ್ಡ ಮಟ್ಟದಲ್ಲಿ ಬೆಳೆಗಾರರಿಗೆ ಸಿಗುತ್ತಿಲ್ಲ.

‘ಕೊಬ್ಬರಿಯನ್ನು ಸಂಗ್ರಹಿಸಿ ಇಟ್ಟುಕೊಂಡಿರುವ ಮಧ್ಯವರ್ತಿಗಳು, ನಾಫೆಡ್‌ಗೆ ಇದರ ಲಾಭ ಸಿಗುವಂತಾಗಿದೆ. ರೈತರಿಗೆ ಇಳುವರಿಯಲ್ಲಿ ಆಗುವ ನಷ್ಟ ಬರುವ ಲಾಭದಲ್ಲಿ ಸರಿದೂಗುತ್ತಿದೆ’ ಎಂದು ಹೇಳುತ್ತಾರೆ ತೆಂಗು ಕೃಷಿಕರು.

ರಾಜ್ಯದಲ್ಲಿ 5.65 ಲಕ್ಷ ಹೆಕ್ಟೇರ್‌ಗೂ (14 ಸಾವಿರ ಎಕರೆ) ಹೆಚ್ಚು ಪ್ರದೇಶದಲ್ಲಿ ತೆಂಗು ಬೆಳೆಯಲಾಗುತ್ತಿದೆ. ಅಂದಾಜು ಎಂಟು ಲಕ್ಷಕ್ಕೂ ಹೆಚ್ಚು ಕೃಷಿಕರು ತೆಂಗು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ತುಮಕೂರು, ಹಾಸನ, ಮಂಡ್ಯ, ದಕ್ಷಿಣ ಕನ್ನಡ, ಉಡುಪಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ತೆಂಗು ಬೆಳೆಯಲಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ರೈತರು ತೆಂಗಿನಕಾಯಿ, ಕೊಬ್ಬರಿಗಿಂತ ಎಳನೀರು ಮಾರಾಟಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ.

ಮಾಹಿತಿ: ಪ್ರಜಾವಾಣಿ ಬ್ಯೂರೊಗಳು. ಆಧಾರ: ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ

ಯಾಕಾಗಿ ಹೆಚ್ಚು ಬೇಡಿಕೆ?

- ಉತ್ತರ ಭಾರತದ ರಾಜ್ಯಗಳಲ್ಲಿ ಕೊಬ್ಬರಿಗೆ ಬೇಡಿಕೆ ಇದ್ದು, ರಾಜ್ಯದ ವಿವಿಧ ಭಾಗಗಳಿಂದ ಉತ್ತರ ಪ್ರದೇಶ, ಮಧ್ಯಪ್ರದೇಶ, ದೆಹಲಿ, ಜಮ್ಮು–ಕಾಶ್ಮೀರ ಸೇರಿದಂತೆ ಹಲವು ರಾಜ್ಯಗಳಿಗೆ ರವಾನೆಯಾಗುತ್ತಿದೆ
- ಸಿಹಿ ತಿನಿಸು, ಅಡುಗೆಯಲ್ಲಿ ಕೊಬ್ಬರಿ ಎಣ್ಣೆಯ ಬಳಕೆ ಹೆಚ್ಚಾಗಿದೆ. ತಿಪಟೂರು ಭಾಗದ ಕೊಬ್ಬರಿಯಲ್ಲಿ ಎಣ್ಣೆ ಹಾಗೂ ಸಿಹಿ ಅಂಶ ಹೆಚ್ಚಿನ ಪ್ರಮಾಣದಲ್ಲಿದ್ದು, ಆಹಾರದಲ್ಲಿ ಹೆಚ್ಚು ಬಳಸುತ್ತಾರೆ.
- ಆರೋಗ್ಯದ ದೃಷ್ಟಿಯಿಂದಲೂ ತೆಂಗಿನಕಾಯಿ, ಕೊಬ್ಬರಿ ಎಣ್ಣೆ ಬಳಕೆ ಹೆಚ್ಚಾಗಿದೆ

ಬೆಲೆ ಏರಿಕೆಗೆ ಕಾರಣಗಳು ಹಲವು

- ತೆಂಗು ಇಳುವರಿ ಕುಸಿತದಿಂದ ಪೂರೈಕೆ ಕಡಿಮೆ, ಹೆಚ್ಚಾದ ಬೇಡಿಕೆ
- ನೆರೆಯ ತಮಿಳುನಾಡು, ಕೇರಳ ರಾಜ್ಯದಲ್ಲೂ ಉತ್ಪಾದನೆ ಕಡಿಮೆಯಾಗಿದ್ದು, ರಾಜ್ಯದಿಂದ ಅಲ್ಲಿಗೆ ಪೂರೈಕೆಯಾಗುತ್ತಿದೆ
- ಎಳನೀರಿಗೆ ಉತ್ತಮ ಬೆಲೆ ಇರುವುದರಿಂದ ರೈತರು ತೋಟದಲ್ಲೇ ಎಳನೀರು ಮಾರಾಟ ಮಾಡುತ್ತಿದ್ದಾರೆ. ದಲ್ಲಾಳಿಗಳು, ವ್ಯಾಪಾರಿಗಳು ಎಳನೀರನ್ನು ತೋಟದಲ್ಲೇ ₹30ರಿಂದ ₹40ಕ್ಕೆ ಖರೀದಿಸುತ್ತಾರೆ. ಇದರಿಂದ ತಕ್ಷಣಕ್ಕೆ ಹಣ ಸಿಗುತ್ತದೆ. ಕಾಯಿ ಬಲಿತು, ಅದನ್ನು ಕೊಬ್ಬರಿ ಮಾಡಲು ವರ್ಷ ಕಾಯಬೇಕು. ಮುಂಬೈ, ದೆಹಲಿ ಸೇರಿದಂತೆ ಮಹಾ ನಗರಗಳಲ್ಲಿ ಎಳನೀರಿಗೆ ಬೇಡಿಕೆ ಹೆಚ್ಚುತ್ತಿದ್ದು, ಬೆಳೆಗಾರರು ಎಳನೀರು ಕಾಯಿಗಳ ಮಾರಾಟಕ್ಕೆ ಆಸಕ್ತಿ ತೋರುತ್ತಿದ್ದಾರೆ. ಇದರಿಂದಾಗಿ ಕಾಯಿಯ ಇಳುವರಿ ಕಡಿಮೆಯಾಗಿದೆ
- ಈ ಬಾರಿ ತೆಂಗಿನಕಾಯಿಗೂ ಉತ್ತಮ ಬೆಲೆ ಇದೆ. ಒಂದು ದಪ್ಪ ಕಾಯಿ ₹50ರಿಂದ ₹80ರವರೆಗೂ ಮಾರಾಟವಾಗುತ್ತಿದೆ. ಕಾಯಿ ಕೊಬ್ಬರಿಯಾಗಲು ಒಂದು ವರ್ಷ ಕಾಯಬೇಕು. ಉತ್ತಮ ಬೆಲೆ ಸಿಗುತ್ತಿರುವುದರಿಂದ ರೈತರು ತೆಂಗಿನಕಾಯಿಯನ್ನೇ ಮಾರಾಟ ಮಾಡುತ್ತಿದ್ದಾರೆ. ಹಾಗಾಗಿ ಕೊಬ್ಬರಿಗೆ ತೆಂಗಿನಕಾಯಿ ದಾಸ್ತಾನು ಮಾಡುವುದು ಕಡಿಮೆಯಾಗಿದೆ
- ರೋಗ ಬಾಧೆಯೂ ತೆಂಗಿನ ಮರಗಳನ್ನು ಕಾಡುತ್ತಿದೆ. ಗರಿ ಒಣಗುವುದು, ಕಪ್ಪು ಮೂತಿ ಹುಳು ಕಾಟದಿಂದ ಬೆಳೆ ಹಾಳಾಗುತ್ತಿರುವುದು ಇಳುವರಿ ಕಡಿಮೆಯಾಗುವುದಕ್ಕೆ ಕಾರಣವಾಗಿದೆ
- ಅಡಿಕೆಯ ಬೆಲೆ ಹೆಚ್ಚುತ್ತಿರುವುದರಿಂದ ತೆಂಗಿನ ಬೆಳೆ ನಿರ್ವಹಣೆ ಕಡಿಮೆ ಮಾಡಿ, ಅಡಿಕೆ ಬೆಳೆಯತ್ತ ರೈತರು ಹೆಚ್ಚಿನ ಒಲವು ತೋರುತ್ತಿದ್ದಾರೆ. ಹೊಸದಾಗಿ ತೆಂಗು ನೆಡುತ್ತಿಲ್ಲ. ನಿಧಾನವಾಗಿ ತೆಂಗಿನ ಜಾಗವನ್ನು ಅಡಿಕೆ ಬೆಳೆ ಆವರಿಸಿಕೊಳ್ಳುತ್ತಿರುವುದು ಕೂಡ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ

ಕರ್ನಾಟಕವೇ ನಂ.1

ದೇಶದಲ್ಲಿ ದಕ್ಷಿಣದ ರಾಜ್ಯಗಳು ತೆಂಗು ಬೆಳೆಯಲ್ಲಿ ಮುಂಚೂಣಿಯಲ್ಲಿವೆ. ಅದರಲ್ಲೂ ಕೇರಳ 2016ರಿಂದಲೂ ಮೊದಲ ಸ್ಥಾನ ಪಡೆದಿತ್ತು. ಆದರೆ, ನಂತರ ಕರ್ನಾಟಕ ಮೊದಲ ಸ್ಥಾನಕ್ಕೇರಿದೆ. ಕೇಂದ್ರ ತೆಂಗು ಅಭಿವೃದ್ಧಿ ಮಂಡಳಿ (ಸಿಡಿಬಿ) ಅಂಕಿಅಂಶದ ಪ್ರಕಾರ, 2021–22ರಲ್ಲಿ ಕೇರಳದಲ್ಲಿ 552 ಕೋಟಿ ತೆಂಗಿನಕಾಯಿ ಉತ್ಪಾದನೆಯಾದರೆ, ಕರ್ನಾಟಕದಲ್ಲಿ 518 ಕೋಟಿ ಉತ್ಪಾದನೆಯಾಗಿದ್ದವು. ಆದರೆ, 2022–23ರಲ್ಲಿ ಕರ್ನಾಟಕವು 595 ಕೋಟಿ ತೆಂಗಿನ ಕಾಯಿಗಳ ಉತ್ಪಾದನೆಯೊಂದಿಗೆ ಪ್ರಥಮ ಸ್ಥಾನಕ್ಕೇರಿದರೆ, ಕೇರಳ (563 ಕೋಟಿ) ಎರಡನೆಯ ಸ್ಥಾನಕ್ಕೆ ಕುಸಿಯಿತು. 2023–24ರಲ್ಲಿ ಕೇರಳದ ಸ್ಥಾನ ಮತ್ತಷ್ಟು ಕುಸಿದಿದೆ. 615.1 ಕೋಟಿ ತೆಂಗಿನ ಕಾಯಿಗಳ ಉತ್ಪಾದನೆಯೊಂದಿಗೆ ಕರ್ನಾಟಕ ಮೊದಲ ಸ್ಥಾನದಲ್ಲಿಯೇ ಇದ್ದರೆ, 609 ಕೋಟಿ ಉತ್ಪಾದನೆಯೊಂದಿಗೆ ತಮಿಳುನಾಡು ಎರಡನೇ ಸ್ಥಾನಕ್ಕೇರಿದೆ. ಕೇರಳ ಮೂರನೇ (562 ಕೋಟಿ) ಸ್ಥಾನಕ್ಕೆ ಕುಸಿದಿದೆ. ದೇಶದ ಉಂಡೆ ಕೊಬ್ಬರಿಯ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 72.8ರಷ್ಟು.

ದೇಶದ ತೆಂಗು ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 28.5. ರಾಜ್ಯದ ಒಟ್ಟು ಉತ್ಪಾದನೆಯಲ್ಲಿ ಶೇ 80ರಷ್ಟು ತುಮಕೂರು, ಹಾಸನ, ಮಂಡ್ಯ ಜಿಲ್ಲೆಗಳಲ್ಲಿಯೇ ಉತ್ಪಾದನೆಯಾಗುತ್ತಿದೆ. ಕೇರಳದಲ್ಲಿ ಕರ್ನಾಟಕಕ್ಕಿಂತಲೂ ಹೆಚ್ಚು ಭೂಮಿಯಲ್ಲಿ ತೆಂಗು ಬೆಳೆಯಲಾಗುತ್ತಿದ್ದರೂ, ವಿವಿಧ ಕಾರಣಗಳಿಂದ ಅಲ್ಲಿಗಿಂತಲೂ ನಮ್ಮಲ್ಲಿ ಇಳುವರಿ ಹೆಚ್ಚಿದೆ.

ಹರಾಜು ವ್ಯವಸ್ಥೆ ಬದಲು

ತುಮಕೂರು ಜಿಲ್ಲೆಯ ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಈ ಹಿಂದೆ ಕೊಬ್ಬರಿ ಹರಾಜು ಪಾರದರ್ಶಕವಾಗಿ ನಡೆಯುತ್ತಿರಲಿಲ್ಲ. ಒಬ್ಬ ವರ್ತಕ ನಿಗದಿಪಡಿಸಿದ ಬೆಲೆಯಲ್ಲೇ ಇತರೆ ವರ್ತಕರು ಕೊಬ್ಬರಿ ಖರೀದಿಸುತ್ತಿದ್ದರು. ಇದನ್ನು ತಪ್ಪಿಸುವುದಕ್ಕಾಗಿ ಕೊಬ್ಬರಿ ಹರಾಜು ನಿಯಮಗಳಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿದೆ. ಹಿಂದೆ ವಾರಕ್ಕೆ ಮೂರು ದಿನ ಹರಾಜು ನಡೆಯುತ್ತಿದ್ದರೆ, ಈ ವರ್ಷದ ಮಾರ್ಚ್ ತಿಂಗಳಿಂದ ವಾರಕ್ಕೆ ಎರಡು ಬಾರಿ ಹರಾಜು ನಡೆಯುತ್ತಿದೆ. ಹಿಂದೆ ವರ್ತಕರು ನಿಗದಿಪಡಿಸಿದ ಬೆಲೆಗೆ ಎಲ್ಲರೂ ಖರೀದಿಸುತ್ತಿದ್ದರು. ಆದರೆ ಈಗ ಹರಾಜು ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲಾಗಿದೆ. ಯಾರು ಬೇಕಾದರೂ ಮುಕ್ತವಾಗಿ ಹರಾಜಿನಲ್ಲಿ ಭಾಗವಹಿಸಬಹುದು. ಆನ್‌ಲೈನ್ ಮೂಲಕವೂ ಖರೀದಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದಾಗಿ ಕೊಬ್ಬರಿ ಖರೀದಿದಾರರು, ಬೇಡಿಕೆಗೆ ಅನುಗುಣವಾಗಿ ಬೆಲೆ ನಿಗದಿಪಡಿಸಿ ಖರೀದಿಸುತ್ತಾರೆ.

ತೆಂಗಿಗೆ ತಗುಲಿರುವ ರೋಗ, ಇಳುವರಿ ಕುಸಿತಕ್ಕೆ ಕಾರಣವಾಗಿದೆ. ಜೊತೆಗೆ, ತೆಂಗಿನಕಾಯಿಯ ಉತ್ಪನ್ನಗಳು, ಕೊಬ್ಬರಿ ಎಣ್ಣೆ ಬಳಕೆ ಬಗ್ಗೆ ಜನರಲ್ಲಿ ಮೂಡಿರುವ ಜಾಗೃತಿ, ಎಳನೀರಿನ ಉಪಉತ್ಪನ್ನಗಳಾದ ಪಾನೀಯ, ಐಸ್‌ಕ್ರೀಮ್ ತಯಾರಿಕೆ ಹೆಚ್ಚಿದ ಮೇಲೆ ತೆಂಗಿನಕಾಯಿಯ ಬೆಲೆ ಏರುತ್ತಾ ಸಾಗಿದೆ. ತೆಂಗಿನಕಾಯಿ ದರ ಸದ್ಯದಲ್ಲಿ ಇಳಿಕೆಯಾಗುವ ಲಕ್ಷಣಗಳು ಇಲ್ಲ. ಕೆ.ಜಿ.ಯೊಂದಕ್ಕೆ ₹120ರವರೆಗೆ ತಲುಪಿದರೂ ಅಚ್ಚರಿಯಿಲ್ಲ

ಯತೀಶ್ ಕೆ.ಎಸ್.
ತೆಂಗು ರೈತ ಉತ್ಪಾದಕರ ಸಂಸ್ಥೆಯ ಮುಖ್ಯಸಲಹೆಗಾರ, ದಕ್ಷಿಣ ಕನ್ನಡ ಜಿಲ್ಲೆ

ಚಿಪ್ಪಿಗೂ ಶುಕ್ರದೆಸೆ

ತೆಂಗಿನಕಾಯಿ, ಕೊಬ್ಬರಿ ಮಾತ್ರವಲ್ಲ, ಇತ್ತೀಚಿನ ದಿನಗಳಲ್ಲಿ ತೆಂಗಿನಕಾಯಿ ಚಿಪ್ಪಿಗೂ ಬೇಡಿಕೆ ಹೆಚ್ಚಾಗಿದೆ. ಇದ್ದಿಲು ತಯಾರಿಸಲು ಚಿಪ್ಪನ್ನು ಬಳಸಲಾಗುತ್ತದೆ. 2021–22ನೇ ಸಾಲಿನಲ್ಲಿ ಟನ್‌ಗೆ ₹18 ಸಾವಿರ ಇದ್ದ ಚಿಪ್ಪಿನ ಬೆಲೆ ಇದೀಗ ₹30 ಸಾವಿರಕ್ಕೆ ಏರಿದೆ. ಅಧಿಕ ಲಾಭ, ಕಡಿಮೆ ಶ್ರಮ ಇರುವುದರಿಂದ ಬೆಳೆಗಾರರು ಎಳನೀರು ಮಾರಾಟಕ್ಕೆ ಆದ್ಯತೆ ನೀಡುತ್ತಿದ್ದು, ಉಂಡೆ ಕೊಬ್ಬರಿಯ ಜೊತೆಗೆ ಚಿಪ್ಪಿನ ಕೊರತೆಯೂ ಎದುರಾಗಿದೆ. ಬೇಡಿಕೆಯಷ್ಟು ಪ್ರಮಾಣದ ಚಿಪ್ಪು ದೊರೆಯದೇ ಇರುವುದರಿಂದ ಕಾರ್ಖಾನೆಗಳ ವರ್ತಕರು, ಗಾಡಿಗಳಲ್ಲಿ ಬಂದು ‘ಚಿಪ್ಪು ಇದೆಯಾ’ ಎಂದು ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ರೈತರು, ವರ್ತಕರ ಮಾತು

ಬೆಳೆಗಾರರಿಗಿಲ್ಲ ಲಾಭ

ಬೆಲೆ ಹೆಚ್ಚಾಗಿದೆ. ಆದರೆ, ರೈತರ ಬಳಿ ತೆಂಗಿನಕಾಯಿ, ಕೊಬ್ಬರಿಯೇ ಇಲ್ಲದಾಗಿದೆ. ಬೆಲೆ ಏರಿಕೆಯ ಪ್ರಯೋಜನ ಬೆಳೆಗಾರರಿಗೆ ಸಿಗುತ್ತಿಲ್ಲ. ಬೆಲೆ ಕುಸಿತದಿಂದ ಕಂಗಾಲಾಗಿದ್ದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಖರೀದಿಸಿತ್ತು. ಆಗ, ಸಿಕ್ಕಷ್ಟು ಸಿಗಲಿ ಎಂದು ರಾತ್ರಿಯಿಡೀ ಸರದಿಯಲ್ಲಿ ನಿಂತು ನೋಂದಣಿ ಮಾಡಿದ್ದೆವು. ನಂತರ ಅಷ್ಟೇ ಕಷ್ಟಪಟ್ಟು ಮಾರಾಟವನ್ನೂ ಮಾಡಿದ್ದೆವು. ಈಗ ಪಶ್ಚಾತ್ತಾಪ ಪಡುವಂತಾಗಿದೆ

ವಿರೂಪಾಕ್ಷಪ್ಪ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ

ದಾಖಲೆ ಬೆಲೆ

ನನ್ನ 30 ವರ್ಷಗಳ ಕೊಬ್ಬರಿ ವ್ಯಾಪಾರದಲ್ಲಿ ಈ ಮಟ್ಟದಲ್ಲಿ ಬೆಲೆ ಏರಿಕೆ ನೋಡಿರಲಿಲ್ಲ. ಈ ಬಾರಿ ದಾಖಲೆ ಬರೆದಿದೆ. ಬೇಡಿಕೆಯಷ್ಟು ಆವಕ ಇಲ್ಲದೆ ಬೆಲೆ ಹೆಚ್ಚಳವಾಗಿದೆ. ರೈತರು ಹಂತ ಹಂತವಾಗಿ ಕೊಬ್ಬರಿಯನ್ನು ಮಾರುಕಟ್ಟೆಗೆ ತಂದರೆ ಧಾರಣೆ ಇದೇ ಮಟ್ಟದಲ್ಲಿ ಮುಂದುವರಿಯಬಹುದು. ಅವಸರವಾಗಿ ಎಲ್ಲರೂ ಒಟ್ಟಿಗೆ ತಂದರೆ ಬೆಲೆಯಲ್ಲಿ ಏರಿಳಿತ ಉಂಟಾಗಬಹುದು

ಸುಧಾಕರ್, ವರ್ತಕ, ತಿಪಟೂರು, ತುಮಕೂರು ಜಿಲ್ಲೆ

ಶೇ 50ರಷ್ಟು ಇಳುವರಿ ಕುಸಿತ

ಹೊಂಬಾಳೆಯಲ್ಲಿ ಗುಳ್ಳು ನಿಲ್ಲುತ್ತಿಲ್ಲ. ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಲಹೆಯಂತೆ ಕೀಟನಾಶಕ, ಗೊಬ್ಬರ, ನೀರು ಕೊಟ್ಟಿದ್ದೇವೆ. ಆದರೂ ಮರಗಳಲ್ಲಿ ಫಲ ಇಲ್ಲದಾಗಿದೆ. ಈ ವರ್ಷ ಶೇ 50ರಷ್ಟು ಇಳುವರಿ ಕುಸಿದಿದೆ. ಬೆಳೆ ಹೆಚ್ಚಿಲ್ಲದಿರುವುದರಿಂದ ಧಾರಣೆ ಜಾಸ್ತಿ ಇದ್ದರೂ ಲಾಭ ಸಿಕ್ಕಿಲ್ಲ

ಲವಕುಮಾರ್, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಆಷಾಢ ಮಾಸದಲ್ಲೇ ಏರಿಕೆ

ಸಾಮಾನ್ಯವಾಗಿ ಶ್ರಾವಣ ಮಾಸದಲ್ಲಿ ಕೊಬ್ಬರಿ ಬೆಲೆಯಲ್ಲಿ ಹೆಚ್ಚಳವಾಗುತ್ತಿತ್ತು. ಆದರೆ ಈ ಬಾರಿ ಶ್ರಾವಣ ಮಾಸಕ್ಕೂ ಮುನ್ನ ಆಷಾಢ ಮಾಸದಲ್ಲೇ ಉತ್ತಮ ಬೆಲೆ ಸಿಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಅಗತ್ಯಕ್ಕೆ ತಕ್ಕಷ್ಟು ಮಾತ್ರ ಕೊಬ್ಬರಿಯನ್ನು ಮಾರುಕಟ್ಟೆಗೆ ತಂದರೆ ಬೆಲೆಯಲ್ಲಿ ಸ್ಥಿರತೆ ಕಾಣಬಹುದು

ದೇವರಾಜು ತಿಮ್ಲಾಪುರ, ತೆಂಗು ಬೆಳೆಗಾರ, ತುಮಕೂರು ಜಿಲ್ಲೆ

ನೇರ ಮಾರಾಟದಲ್ಲಿ ಲಾಭ

ದರ ಏರಿಕೆಯಾದ ಮೇಲೆ ರೈತರಿಗೆ, ತೆಂಗಿನಕಾಯಿಗೆ ಕೆ.ಜಿ.ಗೆ ₹70ರವರೆಗೆ ಬೆಲೆ ಸಿಗುತ್ತಿದೆ. ನೇರ ಮಾರಾಟ ಮಾಡಿದರೆ ಮಾತ್ರ ಈ ಲಾಭ ಸಿಗುತ್ತದೆ. ಆದರೆ, ತೋಟದಲ್ಲಿ ಇಳುವರಿ ಶೇ 40ರಷ್ಟು ಕಡಿಮೆ ಇದೆ. ಇಳುವರಿಯ ನಷ್ಟ ಈ ಲಾಭದಲ್ಲಿ ಸರಿದೂಗುತ್ತಿದೆ. ರೈತನಿಗೆ ನಿಜವಾಗಿ ಲಾಭ ಸಿಗಬೇಕಾದರೆ, ಇಳುವರಿ ಹೆಚ್ಚಿರಬೇಕು

ರಮೇಶ್ ನೂಜಿಪ್ಪಾಡಿ, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ವಿಮಾನದ ಒಳಗೆ ಪ್ರಯಾಣಿಕರು ತಮ್ಮ ತಮ್ಮಲ್ಲೇ ಜಗಳವಾಡುತ್ತಿರುವಂತೆ ಕಾಣುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ತುರ್ತು ನಿರ್ಗಮನ ಇರುವ 11ಎ ಆಸನಕ್ಕಾಗಿ ಪ್ರಯಾಣಿಕರ ನಡುವೆ ಜಗಳ ನಡೆಯುತ್ತಿರುವ ವಿಡಿಯೊ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ಬದುಕುಳಿದ ಏಕೈಕ ಪ್ರಯಾಣಿಕ 11ಎ ಆಸನದಲ್ಲಿ ಕುಳಿತಿದ್ದವರು ಎನ್ನುವ ವಾಸ್ತವಾಂಶದ ಕಾರಣ ಈ ವಿಡಿಯೊ ಮಹತ್ವ ಪಡೆದಿದೆ. ಆದರೆ, ಇದು ಸುಳ್ಳು ಸುದ್ದಿ.

ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಡಿದಾಗ ಈ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಸಿಗಲಿಲ್ಲ. ರಿವರ್ಸ್ ಇಮೇಜ್ ಸರ್ಚ್ ಮಾಡಿದಾಗ, ಇದೇ ವಿಡಿಯೊ ಅನ್ನು ಶೋಬಿಜ್ ಸೆಲಬ್ರಿಟಿ ಅಫಿಶಿಯಲ್ ಎನ್ನುವ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅದು ನಾಗಪುರದ ಫ್ಲೈಯಿಂಗ್ ಇನ್‌ಸ್ಟಿಟ್ಯೂಟ್ ಹಂಚಿಕೊಂಡಿರುವ ವಿಡಿಯೊ ಎನ್ನುವುದು ಉಲ್ಲೇಖವಾಗಿತ್ತು. ಫ್ಲೈಯಿಂಗ್ ಇನ್‌ಸ್ಟಿಟ್ಯೂಟ್‌ನ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ ವಿಡಿಯೊ ಅನ್ನು 2025ರ ಜೂನ್ 16ರಂದು ಹಂಚಿಕೊಳ್ಳಲಾಗಿದೆ. ಪ್ರಯಾಣಿಕರನ್ನು ಹೇಗೆ ನಿಭಾಯಿಸಬೇಕು ಎನ್ನುವ ಬಗ್ಗೆ ತರಬೇತಿ ನೀಡುವ ಸಲುವಾಗಿ ಈ ವಿಡಿಯೊ ರೂಪಿಸಲಾಗಿತ್ತು. ಅದನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಬೆಳಕಿಗೆ ಒಂದೇ ನೆಪ, ಕತ್ತಲಿಗೆ ನೂರಾರು

ನುಡಿ ಬೆಳಗು

ವಾಸುದೇವ ನಾಡಿಗ್

ಆ ನಿರ್ದೇಶಕ ಯಾವಾಗಲೂ ಹೊಸ ಪ್ರಯೋಗಗಳನ್ನು ಮಾಡುವುದರಲ್ಲೇ ನಿರತ. ಈ ಬಾರಿ ಅವರು ಆಯ್ದುಕೊಂಡದ್ದು ಕತ್ತಲು. ಕೇವಲ ಕತ್ತಲಿನ ಮೂಲಕವೇ ಒಂದು ಸಂದೇಶವನ್ನು ನೀಡಲು ಪ್ರಯತ್ನ ಮಾಡಿದರು. ರಂಗದ ಮೇಲೆ ಕೇವಲ ಗಾಢವಾದ ಕತ್ತಲನ್ನು ತಂದು ಕಪ್ಪು ಬಟ್ಟೆಯನ್ನು ಉಟ್ಟ ಪಾತ್ರಧಾರಿಗಳ ಓಡಾಟ ಮತ್ತು ಮಾತು.

ಯಾವತ್ತಿನಂತೆ ಹೆಸರಾಂತ ನಿರ್ದೇಶನದ ನಾಟಕ ಪ್ರಯೋಗಗಳಿಗೆ ಧಾವಿಸಿ ತುಂಬುವ ಪ್ರೇಕ್ಷಕ ಗಣ. ನಾಟಕ ಆರಂಭವಾಯಿತು. ಜೀ ಎನ್ನುವ ಮಳೆಗಾಲದ ವಾತಾವರಣದ ನಿರ್ಮಾಣ ವೇದಿಕೆಯ ಮೇಲೆ. ಕಪ್ಪು ಕೊಡೆ ಮತ್ತು ಕಪ್ಪು ಬಟ್ಟೆಯನ್ನು ಉಟ್ಟ ಪಾತ್ರಧಾರಿಗಳ ಓಡಾಟ ಗೊಣಗಾಟ ಮಾತುಗಾರಿಕೆ ಹಿನ್ನೆಲೆಯಲ್ಲಿ ಕಚ ಪಿಚ ಕೆಸರಿನಲ್ಲಿ ಹೆಜ್ಜೆ ಊರುವ ಹೆಜ್ಜೆಗಳ ಸದ್ದು. ಯಾರ ಆಕೃತಿಯೂ ಸರಿಯಾಗಿ ಕಾಣದ ಅಸ್ಪಷ್ಟತೆ. ಹಣ, ಸಾಲ, ಕಷ್ಟ ಕಾರ್ಪಣ್ಯಗಳ ಮಾತು. ಮುಸು ಮುಸು ಅಳು ಮತ್ತದೇ ಮಂದ್ರವಾದ ರಾಗ ಪಿಸುಗುಡುವಿಕೆ. ಇಡೀ ಪ್ರೇಕ್ಷಕ ಗಣದ್ದು ಒಂದೇ ನಿರೀಕ್ಷೆ; ಬೆಳಕು ಯಾವಾಗ ಕಾಣಿಸುತ್ತದೆ? ಅಷ್ಟೊತ್ತಿಗೆ ನಾಟಕ ಮುಗಿದು ಜಗ್ಗನೆ ಎಲ್ಲ ಪಾತ್ರಗಳೂ ತಮ್ಮ ತಮ್ಮ ಪರಿಚಯ ಮಾಡಿಕೊಡುವ ಸಮಯ ಬಂದಿತ್ತು.

ಕಪ್ಪು ಕತ್ತಲೆ ಮಸುಕುಗಳ ಮೂಲಕ ಈ ನಿರ್ದೇಶಕ ಸಾಧಿಸಿದ್ದಾದರೂ ಏನೆಂಬ ಗುಸು ಗುಸು ಮಾತುಗಳು ಶುರುವಾದವು. ಇದು ನಿರ್ದೇಶಕನ ಮೊದಲ ವಿಫಲ ರಂಗ ಪ್ರಯೋಗ ಎಂಬ ನಿರ್ಧಾರಕ್ಕೆ ಅನೇಕರು ಬಂದರು. ಎಷ್ಟು ಹೊತ್ತು ಅಂತ ಈ ಕತ್ತಲೆಯದ್ದೇ ಕಾರುಬಾರು? ಬೆಳಕು ಯಾವಾಗ ಬರುತ್ತದೋ ಗೊತ್ತಿಲ್ಲ. ಇಡೀ ವೇದಿಕೆಯಲ್ಲಿ ಒಂದು ಹಾಡಿಲ್ಲ. ನಗೆಚಾಟಿಕೆ ಇಲ್ಲ. ಸರಸ ಇಲ್ಲ. ಕತ್ತಲು ಕತ್ತಲು ಕತ್ತಲು ಅಷ್ಟೇ. ಯಾರೋ ಒಬ್ಬರು ಕೂಗಿಯೂ ಬಿಟ್ಟರು ‘ಏ ಸಾಕು ನಿಲ್ಸಯ್ಯ ಈ ರಂಪ’ ಅಂತ. ಗೊತ್ತಿತ್ತು ಇದು ಹೀಗೇ ಆಗುತ್ತದೆ ಅಂತ.

ಇದ್ದಕ್ಕಿದ್ದಂತೆ ಎಲ್ಲಿಂದಲೋ ಹತ್ತಾರು ದೀಪದ ಹುಳುಗಳು ಹಾರಾಡಲು ಶುರು ಮಾಡಿದವು. ಪಾತ್ರಗಳೆಲ್ಲ ಅವುಗಳನ್ನು ಓಡಿಸಲು ಆರಂಭಿಸಿದವು... ಉಶ್ ಉಶ್ ಸದ್ದು ಸಪ್ಪಳ. ಆದರೂ ಅವು ಬಿಡಲಿಲ್ಲ ಮುಖ ಮೈ ಬಟ್ಟೆಗಳ ಮೇಲೆಲ್ಲ ಹಾರಿ ಕೂತು ಪುರ್ ಅಂತ ಬೆಳಕ ಬಿಟ್ಟವು. ಇನ್ನು ನಿರ್ದೇಶಕನಿಗೆ ಅನ್ಯ ದಾರಿ ಇಲ್ಲ. ಝಗ್ಗನೆ ಹೊತ್ತಿಕೊಂಡ ಪ್ರಖರವಾದ ದೀಪಗಳು ಸಾಲಾಗಿ ನಿಂತುಕೊಂಡ ಕಪ್ಪು ಪಾತ್ರಗಳು.

ಕತ್ತಲೆಯ ಇಂತಹ ಹತ್ತಾರು ಮೂತಿಗಳನ್ನು ತಿವಿಯಲು ಇಂತಹ ಬೆಳಕಿನ ರೆಕ್ಕೆಗಳು ಆಗಮಿಸಲೇಬೇಕಲ್ಲವೇ?

ಗುಂಡಣ್ಣ

ಪದಬಂಧ 6091

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಂಡಲ ಬರೆದ ಯತಿ ಬಳಸಿದ ನೀರಿನ ಪಾತ್ರೆ (4)
3. ಒಂದೇ ಗೋತ್ರಕ್ಕೆ ಸೇರಿದುದು (3)
5. ಜಳಕ ಎಂದರೆ ಹೀಗೆ ರೋಮಾಂಚವೇ? (3)
7. ದಯವನ್ನು ಹೊಂದಿರುವ ಹುಟ್ಟು! (3)
8. ಎಲ್ಲರೂ ಸೇರಿ ಒಟ್ಟಾಗಿ ಹಾಡುವುದು (5)
11. ಬಾಣ ಹಿಡಿದಿರುವ ಶೈವ ಭಕ್ತೆ (3)
12. ಕಮ್ಮಾರನ ಒಲೆಯಿದು (3)
15. ಕೊನೆಗೆ ಬೆಲೆಯಿಟ್ಟರೆ ಕಣಿವೆ ಕಂಡೀತು (3)
16. ಹೊಸ ಜೀವನವಿದು (4)

ಮೇಲಿಂದ ಕೆಳಕ್ಕೆ

1. ಕದಕ್ಕೆ ತಾಕಿರುವ ಕೆನ್ನೆ (3)
2. ಹೆಜ್ಜೆ ಊರಲೂ ನಾಚಿಕೆಯೇ? (2)
3. ಮಯನ ಹತ್ತಿರ ಕಳೆದಿರುವ ವೇಳೆ (3)
4. ಪಕ್ಷದ ಹದಿಮೂರನೆಯ ದಿನ (4)
6. ಪೂಜಾ ಸಮಯದಲ್ಲಿ ನೀರು ತುಂಬಿಟ್ಟಿರುವ ಕೊಡ (3)
7. ದಾಹಗೊಂಡವನಿಗೆ ನೀಡಿರುವ ದೃಷ್ಟಾಂತ (5)
9. ಬೆಳಗಿನ ಜಾವವಿದು (3)
10. ಗರ್ಜಿಸುವ ಸಿಂಹ ತಿರುಗಿದೆಯಲ್ಲಾ? (4)
11. ಶರದೊಳಗೆ ತೂರಿಕೊಂಡ ಮೈ (3)
13. ಮಡಿಕೆಗಳುಳ್ಳ ಮಸ್ತಿಷ್ಕ (3)
14. ಮಾತಾಡದಿರುವಿಕೆ ಅಥವಾ ನೀರವತೆ (2)



6090ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಪರಂಜಿ 3.ಪರಿಮಿತ 5.ನಗರ 6.ನಿಗಮ 8.ಜನನ 9.ವಿವಾಹ 10.ಕದನ 12.ಇರುಳು 14.ನವಿರೆಳೆ 15.ಅನುಮಾನ

ಮೇಲಿಂದ ಕೆಳಕ್ಕೆ: 1.ಅವನಿ 2.ಜಿನ 3.ಪರ 4.ತಲ್ಲೀನ 7.ಮನೋನಿಗ್ರಹ 8.ಜನನಾಯಕ 9.ವಿಧಾನ 11.ನರ್ತನ 12.ಇಳೆ 13.ಳುಅ

ಸುಡೊಕು 6475

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		7		8			2	
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	1

6474 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

02 ಜುಲೈ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಸಪ್ತಮಿ ಗಂ. 11-59 **ನಕ್ಷತ್ರ:** ಉತ್ತರ ಫಾಲ್ಗುಣಿ ಗಂ. 11-08 **ಯೋಗ:** ವರಿಯಾನ್ ಗಂ. 17-47 ಕರಣ: ವಣಿಜ ಗಂ. 11-59, ಮಿಥುನ ಮಾಸದ 18 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 – 01-30. **ಸೂರ್ಯೋದಯ:** 06-12 **ಸೂರ್ಯಾಸ್ತ:** 06-58. **ಮುಸ್ಲಿಂ ದಿನಾಂಕ:** 06 ಮೊಹರಮ್. **ಅದೃಷ್ಟ ಸಂಖ್ಯೆ:** 7, 11

ಮೇಷ: ಮಗಳ ಮದುವೆಯ ವಿಚಾರವಾಗಿ ವಿವಿಧ ರೀತಿಯ ಪರಿಸ್ಥಿತಿ ಎದುರಿಸುವಿರಿ. ಕಂಪ್ಯೂಟರ್ ಎಂಜಿನಿಯರ್ ಕಂಪನಿಯನ್ನು ಬದಲಾಯಿಸಬೇಡಿ. ನಿತ್ಯದ ಕೆಲಸಗಳಲ್ಲಿ ಬದಲಾವಣೆ ಇರುವುದಿಲ್ಲ.

ವೃಷಭ: ದೇಹಕ್ಕೆ ಅಗತ್ಯವಿರುವಷ್ಟು ಆಹಾರ ಹಾಗೂ ವಿಶ್ರಾಂತಿ ತೆಗೆದುಕೊಳ್ಳುವುದರ ಮೂಲಕ ಆರೋಗ್ಯ ಕಾಪಾಡಿಕೊಳ್ಳಬಹುದು. ವೈದ್ಯರ ಸಲಹೆಗಳನ್ನು ಪಾಲಿಸಿ. ಬದುಕುವ ಛಲ ಇರಲಿ.

ಮಿಥುನ: ಮಿತಿಮೀರುತ್ತಿರುವ ಪುತ್ರವ್ಯಾಮೋಹವು ಆತನ ಭವಿಷ್ಯಕ್ಕೆ ಕಂಟಕವನ್ನು ತಂದು ಒಡ್ಡಲಿದೆ. ಹಿಂದೆ ಕೊಟ್ಟ ಮಾತುಗಳನ್ನು ಉಳಿಸಿಕೊಳ್ಳುವ ಬಗ್ಗೆ ಯೋಚಿಸಿ. ಬೇರೆಯವರನ್ನು ಕಾರಣವಿಲ್ಲದೆ ದೂಷಿಸಬೇಡಿ.

ಕರ್ಕಾಟಕ: ಉತ್ತಮ ಗಾಳಿ, ಪ್ರಶಾಂತ ವಾತಾವರಣ, ಏಕಾಂತ ಬೇಕೆಂದು ಮನಸ್ಸಿಗೆ ಅನಿಸುವುದು. ಹರಿತ ವಸ್ತುಗಳನ್ನು ಬಳಸುವಾಗ ಗಮನ ಇರಲಿ. ಗೌರವ ಉಳಿಸಿಕೊಳ್ಳಿ.

ಸಿಂಹ: ವಿದೇಶಕ್ಕೆ ತೆರಳಲು ವಿಪುಲ ಅವಕಾಶ ಒದಗಿಬರಲಿದೆ. ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರವಾಗುವುದು. ಆತ್ಮೀಯರನ್ನು ಭೇಟಿ ಮಾಡಲಿದ್ದೀರಿ. ಹಸಿರು ಬಣ್ಣ ಅದೃಷ್ಟ ತರುವುದು.

ಕನ್ಯಾ: ಬೇಡಿಕೆ ಕಡಿಮೆ ಆಗಿರುವ ವಿದ್ವಾಂಸರಿಗೆ ಶಿಷ್ಯರ ಮೂಲಕ ಹೆಚ್ಚಿನ ಮನ್ನಣೆ ಸಿಗಲಿದೆ. ಒಂಟಿತನ ಹೋಗಲಾಡಿಸಿಕೊಳ್ಳಲು ಕ್ರಿಯಾತ್ಮಕ ಕೆಲಸಗಳತ್ತ ಮನಸ್ಸು ಹರಿಸುವಿರಿ.

ತುಲಾ: ಸುತ್ತಿಬಳಸಿ ವಿಷಯಗಳನ್ನು ಕುಟುಂಬದ ಎದುರು ಇಡುವುದಕ್ಕಿಂತ ಆಕಾಂಕ್ಷೆಗಳನ್ನು ನೇರವಾಗಿ ತಿಳಿಸಿದರೆ ಖಂಡಿತವಾಗಿ ಬೇಕಾದ ಫಲಿತಾಂಶ ಸಿಗಲಿದೆ. ದಿನಸಿ ವ್ಯಾಪಾರಿಗಳಿಗೆ ಲಾಭ ಸಿಗುತ್ತದೆ.

ವೃಶ್ಚಿಕ: ಮನೆಯ ಜಾನುವಾರು, ಸಾಕು ಪ್ರಾಣಿಗಳ ಆರೋಗ್ಯದ ವಿಷಯವಾಗಿ ತಲೆಕೆಡಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುವುದು. ಲಾಭದ ಹಾದಿಯಲ್ಲಿ ಬಂದ ನಿಮಗೆ ಸಣ್ಣ ನಷ್ಟವು ಒಮ್ಮೆ ಎಡವಿದಂತಾಗಬಹುದು.

ಧನು: ಯಾವುದೋ ಕಾರಣದಿಂದ ದೂರವಾದ ಸ್ನೇಹಿತನು ಮತ್ತೆ ಪ್ರಾಣಸ್ನೇಹಿತನಾಗಿ ಮರಳಲಿದ್ದಾನೆ. ಉನ್ನತ ವಾಣಿಜ್ಯ ಶಿಕ್ಷಣ ವಿದ್ಯಾರ್ಥಿಗಳಿಗೆ ಪರಿಶ್ರಮದಿಂದ ಯಶಸ್ಸು. ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ.

ಮಕರ: ಸಂಭಾಷಣೆಯಲ್ಲಿನ ಉತ್ತಮ ಪದಗಳ ಬಳಕೆಯು ಮುಂದಿರುವವರನ್ನು ಆಕರ್ಷಿಸಿ ಲಾಭವನ್ನುಂಟುಮಾಡುತ್ತದೆ. ಅಪರಿಚಿತ ವ್ಯಕ್ತಿಯ ಕರೆ ಮನಸ್ಸನ್ನು ತಳಮಳಗೊಳಿಸುತ್ತದೆ.

ಕುಂಭ: ಮನಃಶಾಸ್ತ್ರಜ್ಞರು ರೋಗಿಗಳೊಂದಿಗೆ ವ್ಯವಹರಿಸುವುದು ಕಷ್ಟಕರ. ಧೈರ್ಯವಾಗಿ ತಿಳಿದವರ ಮಾರ್ಗದರ್ಶನದಿಂದ ಮುನ್ನಡೆದರೆ ಎಲ್ಲವು ಪರಿಹಾರ. ಅನಿರೀಕ್ಷಿತವಾಗಿ ಪ್ರಯಾಣ ಬೆಳೆಸಬೇಕಾಗುವುದು.

ಮೀನ: ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯ ಪಡೆದುಕೊಳ್ಳಿ. ಎಲ್ಲದರಿಂದಲೂ ಧನಲಾಭವನ್ನು ಮಾತ್ರ ಯೋಚಿಸಬೇಡಿ. ಸಹಾಯ ಮಾಡುವ ಮನಸ್ಥಿತಿಯನ್ನೂ ಬೆಳೆಸಿಕೊಳ್ಳಿ.

ಹೃದಯಾಘಾತ: ಮತ್ತೆ ಆರು ಸಾವು

ಮುಂಜಾಗ್ರತೆಗಾಗಿ ಆರೋಗ್ಯ ತಪಾಸಣೆಗೆ ಆಸ್ಪತ್ರೆಗಳತ್ತ ದೌಡು
ಜನರಲ್ಲಿ ಹೆಚ್ಚಿದ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೃದಯಾಘಾತದಿಂದ 24 ಗಂಟೆಗಳಲ್ಲಿ ರಾಜ್ಯದಲ್ಲಿ ವೈದ್ಯ ಸೇರಿದಂತೆ ಒಟ್ಟು ಆರು ಮಂದಿ ಅಕಾಲಿಕವಾಗಿ ಮೃತಪಟ್ಟಿದ್ದಾರೆ. ಹಾಸನದಲ್ಲಿ ಮೂವರು, ಧಾರವಾಡ ಜಿಲ್ಲೆಯಲ್ಲಿ ಇಬ್ಬರು, ಶಿವಮೊಗ್ಗ ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ.

ಮೃತರಲ್ಲಿ ಮೂವರು 30 ವರ್ಷ ಒಳಗಿನವರಾಗಿದ್ದರೆ, ಇತರ ಮೂವರು 45–48 ವರ್ಷ ವಯಸ್ಸಿನವರು. ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿರುವ ಹಿಂದೆಯೇ ಆತಂಕವೂ ಹೆಚ್ಚಿದ್ದು, ಹೆಚ್ಚಿನ ಜನರು ಆಸ್ಪತ್ರೆಗಳತ್ತ ಮುಖ ಮಾಡಿದ್ದು,ತಪಾಸಣೆಗೆ ಒಳಗಾಗುತ್ತಿದ್ದಾರೆ.

ಹಾಸನ ವರದಿ: ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣಗಳು ಮುಂದುವರಿದಿದ್ದು ಮತ್ತೆ ಮೂವರು ಮೃತಪಟ್ಟಿದ್ದಾರೆ. ಇವರು 30 ವರ್ಷ ವಯಸ್ಸಿನೊಳಗಿನವರು.

ಹೊಳೆನರಸೀಪುರ ತಾಲ್ಲೂಕಿನ ಸೋಮನಹಳ್ಳಿ ಕೊಪ್ಪಲು ಗ್ರಾಮದ ಸಂಜಯ್ (27), ತಾಲ್ಲೂಕಿನ ಕೊಮ್ಮೆನಹಳ್ಳಿಯ ಗೃಹಿಣಿ ಹರ್ಷಿತಾ (22) ಹಾಗೂ ಬೇಲೂರು ತಾಲ್ಲೂಕು ಮಾದೀಹಳ್ಳಿಯ ರವಿಕುಮಾರ್ (30) ಮೃತರು.

ಸಂಜಯ್ ಸೋಮವಾರ ರಾತ್ರಿ ಸ್ನೇಹಿತರೊಂದಿಗೆ ಪಾರ್ಟಿ ಮುಗಿಸಿ ಬಂದ ನಂತರ ರಕ್ತದೊತ್ತಡ ಹೆಚ್ಚಾಗಿದ್ದು, ಎದೆ ನೋವು ಕಾಣಿಸಿಕೊಂಡಿತ್ತು. ಅವರನ್ನು ಸೋಮನಹಳ್ಳಿ ಪ್ರಾಥಮಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಬೇರೊಂದು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಸಂಬಂಧಿಕರು, ಹಳ್ಳಿ ಮೈಸೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಒಂದೂವರೆ ತಿಂಗಳ ಬಾಣಂತಿಯಾಗಿದ್ದ ಹರ್ಷಿತಾ, ತವರೂರಾದ ಶಿವಮೊಗ್ಗ ಜಿಲ್ಲೆಯ ಆಯನೂರಿಗೆ ತೆರಳಿದ್ದರು. ಅಲ್ಲಿ ಹೃದಯಾಘಾತ ಆಗಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಪತಿಯ ಊರಾದ ಕೊಮ್ಮೆನಹಳ್ಳಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ರವಿಕುಮಾರ್ ಅವರು ಒಂಬತ್ತು ತಿಂಗಳ ಮಗನ ಜೊತೆ ಆಟವಾಡುವಾಗ ಹೃದಯಾಘಾತ ಸಂಭವಿಸಿದೆ. ಮಾದೀಹಳ್ಳಿ ಗ್ರಾಮದ ಅವರು, ತವರೂರಾದ ಸಂಶಟ್ಟಿಹಳ್ಳಿಯಲ್ಲಿದ್ದ ಪತ್ನಿ ನೋಡಲು ಹೋಗಿದ್ದರು. ಸೋಮವಾರ ಸಂಜೆ ಮಗು ಜೊತೆ ಆಟವಾಡುವಾಗ ಎದೆನೋವಿನಿಂದ ಕುಸಿದು ಬಿದ್ದಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿಯೇ ಮೃತಪಟ್ಟಿದ್ದಾರೆ. ಕೃಷಿಕರಾಗಿದ್ದ ಅವರು ಎರಡು ವರ್ಷಗಳ ಹಿಂದೆ ವಿವಾಹವಾಗಿದ್ದರು. ಮಾದೀಹಳ್ಳಿಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿತು.

ಧಾರವಾಡ ಜಿಲ್ಲೆಯ ಇಬ್ಬರು ಸಾವು

ಫಕ್ಕಿರಪ್ಪ

ಮುತ್ತಪ್ಪ

ಹುಬ್ಬಳ್ಳಿ: ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಲ್ಲಿ ಇಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಯಮನೂರ ಗ್ರಾಮದ ನಿವಾಸಿ ಫಕ್ಕಿರಪ್ಪ ಮಲ್ಲಪ್ಪ ಬಣಗಾರ (45) ಸೋಮವಾರ ನಿಧನರಾದರು. ಅವರಿಗೆ ತಾಯಿ, ಪತ್ನಿ ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ.

ನವಲಗುಂದದ ಸಿದ್ದಾಪುರ ಓಣಿಯ ನಿವಾಸಿ ಮುತ್ತಪ್ಪ ಶಂಕರಪ್ಪ ಪೂಜಾರ (44) ಮಂಗಳವಾರ ನಿಧನರಾದರು. ಅವರಿಗೆ ತಾಯಿ, ಪತ್ನಿ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ.

ಗದಗ ವರದಿ: ಗದಗ ತಾಲ್ಲೂಕಿನಲ್ಲಿ ಜೂನ್‌ನಲ್ಲಿ ಐವರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಅವರಲ್ಲಿ ಮೂವರು 35 ರಿಂದ 40 ವರ್ಷದೊಳಗಿನವರು' ಎಂದು ಗದಗ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಎಸ್. ನೀಲಗುಂದ ತಿಳಿಸಿದ್ದಾರೆ.

'ಜಿಲ್ಲಾ ಆಸ್ಪತ್ರೆಯಲ್ಲಿ ಈ ವರ್ಷ ಜೂನ್‌ವರೆಗೆ 34 ಮಂದಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಈ ಪೈಕಿ ಆರು ಮಂದಿ 50 ವರ್ಷದೊಳಗಿನವರು' ಎಂದು ಕೆ.ಎಚ್. ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ತಿಳಿಸಿದ್ದಾರೆ.

ವರದಿಗೆ 10 ದಿನ ಗಡುವು: ಆರೋಗ್ಯ ಸಚಿವ

ದಿನೇಶ್ ಗುಂಡೂರಾವ್

ಬೆಂಗಳೂರು: 'ಹಾಸನದಲ್ಲಿ ಸಂಭವಿಸುತ್ತಿರುವ ಹೃದಯಾಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆ 10 ದಿನಗಳಲ್ಲಿ ವರದಿ ನೀಡುವಂತೆ ತಜ್ಞರ ಸಮಿತಿಗೆ ಸೂಚಿಸಲಾಗಿದೆ. ಈ ವರದಿ ಆಧರಿಸಿ ಹೃದಯಾಘಾತ ತಡೆಗೆ ಕ್ರಮ ಕೈಗೊಳ್ಳಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಠಾತ್ ಹೃದಯಾಘಾತಕ್ಕೆ ಸಂಬಂಧಿಸಿದಂತೆ ಕೋವಿಡ್ ಹಾಗೂ ಲಸಿಕೆಯ ಅಡ್ಡ ಪರಿಣಾಮದ ಬಗ್ಗೆ ಅಧ್ಯಯನ ನಡೆಸಲು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಈ ಹಿಂದೆ ಸಮಿತಿ ರಚಿಸಲಾಗಿತ್ತು. ಹಾಸನದಲ್ಲಿ ವರದಿಯಾಗುತ್ತಿರುವ ಹೃದಯಾಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆಯೂ ಇದೇ ಸಮಿತಿಗೆ ಅಧ್ಯಯನ ನಡೆಸಲು ಸೂಚಿಸಲಾಗಿದೆ. ಹೃದಯಾಘಾತಕ್ಕೆ ಒಳಗಾದವರ ವಯಸ್ಸು, ವೈದ್ಯಕೀಯ ಇತಿಹಾಸ ಸೇರಿ ವಿವಿಧ ಅಂಶಗಳನ್ನು ಪರಿಗಣಿಸಿ ಸಮಿತಿ ಅಧ್ಯಯನ ಕೈಗೊಳ್ಳಲಿದೆ. ಈ ಅಧ್ಯಯನದ ಬಳಿಕ ನಿಖರ ಕಾರಣ ತಿಳಿಯಲಿದೆ' ಎಂದರು.

'ಬದಲಾದ ಜೀವನಶೈಲಿಯಿಂದ ಸಹಜವಾಗಿಯೇ ವಿವಿಧ ಕಾಯಿಲೆಗಳಿಂದ ಮೃತಪಡುವವರ ಸಂಖ್ಯೆ ಹೆಚ್ಚುತ್ತಿದೆ. ಜನರು ಉತ್ತಮ ಜೀವನಶೈಲಿ ಅಳವಡಿಸಿಕೊಂಡು, ಹೃದಯದ ಆರೋಗ್ಯಕ್ಕೆ ಆದ್ಯತೆ ನೀಡಬೇಕು' ಎಂದು ತಿಳಿಸಿದರು.

'ಹೃದಯ ತಪಾಸಣೆ ಹಾಗೂ ಚಿಕಿತ್ಸೆಗೆ ಇಲಾಖೆಯು ಆದ್ಯತೆ ನೀಡಿದ್ದು, 'ಸ್ಟೆಮಿ' (ಹೃದಯ ಸ್ನಾಯುವಿನ ಸೋಂಕು ನಿವಾರಣೆ) ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿದೆ. ಹಾಸನದಲ್ಲಿ ಹೃದ್ರೋಗಕ್ಕೆ ಸಂಬಂಧಿಸಿದಂತೆ 2023ರ ಮಾರ್ಚ್‌ನಿಂದ 2025ರ ಮೇ ತಿಂಗಳ ಅವಧಿಯಲ್ಲಿ ಈ ಕಾರ್ಯಕ್ರಮದಡಿ 37,847 ಮಂದಿಗೆ ಇಸಿಜಿ ಮಾಡಲಾಗಿದೆ. 480 ಪ್ರಕರಣಗಳಲ್ಲಿ ಹೃದಯ ಸ್ನಾಯುವಿನ ಸೋಂಕು ದೃಢಪಟ್ಟಿದ್ದು, ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗೆ ಒಳಪಡಿಸಲಾಗಿತ್ತು. ಇವರಲ್ಲಿ 420 ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದು, 60 ಮಂದಿ ಮೃತಪಟ್ಟಿದ್ದಾರೆ' ಎಂದು ಮಾಹಿತಿ ನೀಡಿದರು.

'ಹೃದಯಾಘಾತಕ್ಕೆ ಕೊರೊನಾ ಸೋಂಕು ಅಥವಾ ಕೋವಿಡ್ ಲಸಿಕೆ ಕಾರಣವೆಂದು ಹೇಳಲು ಪುರಾವೆಗಳಿಲ್ಲ. ಜಗತ್ತಿನಾದ್ಯಂತ ಲಸಿಕೆ ನೀಡಲಾಗಿದೆ. ಈ ಬಗ್ಗೆ ಜಾಗತಿಕ ಮಟ್ಟದಲ್ಲಿ ಅಥವಾ ರಾಷ್ಟ್ರ ಮಟ್ಟದಲ್ಲಿ ಅಧ್ಯಯನ ನಡೆಯಬೇಕಿದೆ. ವಿಶ್ವ ಆರೋಗ್ಯ ಸಂಸ್ಥೆ, ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನಂತಹ (ಐಸಿಎಂಆರ್) ಸಂಸ್ಥೆಗಳು ಅಧ್ಯಯನ ಕೈಗೊಳ್ಳಬೇಕು. ನಮ್ಮ ವ್ಯಾಪ್ತಿಯಲ್ಲಿ ಈ ಅಧ್ಯಯನ ಕಷ್ಟ. ಆದರೂ ಮುಖ್ಯಮಂತ್ರಿ ಅವರ ಸೂಚನೆ ಅನುಸಾರ ರಾಜ್ಯದಲ್ಲಿ ಅಧ್ಯಯನಕ್ಕೆ ಸಮಿತಿ ರಚಿಸಲಾಗಿದೆ' ಎಂದು ಹೇಳಿದರು.

ಕುಸಿದು ಬಿದ್ದಿದ್ದ ವೈದ್ಯ ಸಾವು

ಎನ್.ಸಂದೀಪ್

ಹೊಳೆಹೊನ್ನೂರು (ಶಿವಮೊಗ್ಗ): ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಎನ್.ಸಂದೀಪ್ (48) ಸೋಮವಾರ ರಾತ್ರಿ ಹೃದಯಾಘಾತದಿಂದ ಸಾವಿಗೀಡಾದರು. 3 ದಿನದ ಹಿಂದೆ ಮನೆಯಲ್ಲಿ ಕುಸಿದು ಬಿದ್ದಿದ್ದ ಸಂದೀಪ್ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು.

ಸುದ್ದಿ 2 ನಿಮಿಷ

5ರಿಂದ ಮೈಸೂರು ಸಾಹಿತ್ಯ ಸಂಭ್ರಮ

ಮೈಸೂರು: ಇಲ್ಲಿನ ಸದರ್ನ್‌ಸ್ಟಾರ್ ಹೋಟೆಲ್‌ನಲ್ಲಿ 'ಮೈಸೂರು ಸಾಹಿತ್ಯ ಸಂಭ್ರಮ' ಜುಲೈ 5 ಹಾಗೂ 6ರಂದು ನಡೆಯಲಿದೆ. 5ರಂದು ಬೆಳಿಗ್ಗೆ 10ಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸುವರು. ಬುಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್, ಅನುವಾದಕಿ ದೀಪಾ ಭಾಸ್ತಿ ಪಾಲ್ಗೊಳ್ಳುವರು.

'ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್' ಹಾಗೂ 'ಮೈಸೂರು ಬುಕ್ ಕ್ಲಬ್ಸ್' ಆಯೋಜಿಸುತ್ತಿರುವ 9ನೇ ಆವೃತ್ತಿಯ ಸಮ್ಮೇಳನ ಇದಾಗಿದೆ. ರಕ್ಷಣಾ ಸಂಶೋಧನಾ ಹಾಗೂ ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನಿವೃತ್ತ ವಿಜ್ಞಾನಿ ಪ್ರಹ್ಲಾದ ರಾಮರಾವ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು' ಎಂದು ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕನ್ನಡ, ಇಂಗ್ಲಿಷ್ ಸಾಹಿತ್ಯ ಗೋಷ್ಠಿಗಳು ಎರಡೂ ದಿನ ನಡೆಯಲಿವೆ. ಲೇಖಕರಾದ ಗೋಪಾಲಕೃಷ್ಣಗಾಂಧಿ, ಅನಿತಾ ನಾಯರ್, ಮಣಿಶಂಕರ್ ಅಯ್ಯರ್, ಸ್ಟೀಫನ್ ಆಲ್ಟರ್, ಅರುಂಧತಿ ಘೋಷ್, ವಿಷ್ಣುಸೋಮ್, ಮಿತಾ ಕಪೂರ್, ಲಕ್ಷ್ಮೀಶ ತೋಳ್ಪಾಡಿ, ಅಬ್ದುಲ್ ರಶೀದ್, ವನಮಾಲಾ ವಿಶ್ವನಾಥ್, ಕೆ.ಎನ್.ಗಣೇಶಯ್ಯ ಸೇರಿದಂತೆ 104 ಸಾಹಿತಿಗಳು ಹಾಗೂ ಕಲಾವಿದರು ಪಾಲ್ಗೊಳ್ಳುವರು' ಎಂದು ತಿಳಿಸಿದರು.



'ಪುಸ್ತಕ ಬಿಡುಗಡೆ, ಪ್ರದರ್ಶನ ಮಾರಾಟ ಇರಲಿದ್ದು, ಉಚಿತ ಪ್ರವೇಶವಿದೆ' ಎಂದರು.

ಸಮೀಕ್ಷೆ ಹೆಸರಲ್ಲಿ ದಲಿತರಿಗೆ ವಂಚನೆ: ಆರ್.ಅಶೋಕ ಟೀಕೆ

ಬೆಂಗಳೂರು: 'ಪರಿಶಿಷ್ಟರ ಒಳಮೀಸಲಾತಿಗೆ ಸಂಬಂಧಿಸಿದಂತೆ ನಡೆಸುತ್ತಿರುವ ಸಮೀಕ್ಷೆ ಕಾಟಾಚಾರದ, ಬೂಟಾಟಿಕೆಯ ಸಮೀಕ್ಷೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

'ತೋರಿಕೆಯ ಜಾತಿ ಸಮೀಕ್ಷೆ ಏಕೆ ಮಾಡುತ್ತಿದ್ದೀರಿ? ಇದು ಯಾವ ಪುರುಷಾರ್ಥಕ್ಕೆ ಮತ್ತು ಯಾರ ಲಾಭಕ್ಕೆ' ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 'ಎಕ್ಸ್' ಮೂಲಕ ಪ್ರಶ್ನಿಸಿದ್ದಾರೆ.

'ಸಮೀಕ್ಷೆ ನಡೆಸಬೇಕಾದ ಸಿಬ್ಬಂದಿ ಮನೆ ಮನೆಗೆ ಹೋಗದೇ ಜನರನ್ನು ಸಂಪರ್ಕಿಸದೇ, ಕೇವಲ ಬಾಗಿಲಿಗೆ 'ಸಮೀಕ್ಷೆ ಪೂರ್ಣ' ಎನ್ನುವ ಸ್ಟಿಕರ್ ಅಂಟಿಸುತ್ತಿದ್ದಾರೆ. ಜನರ ಜಾತಿಯ ಬಗ್ಗೆ ಕೇಳದೆ, ಮಾಹಿತಿ ಸಂಗ್ರಹಿಸದೇ ನಡೆಯುತ್ತಿರುವ ಇದನ್ನು ಸಮೀಕ್ಷೆ ಎನ್ನಲು ಸಾಧ್ಯವೇ? ಇದು ಸಮೀಕ್ಷೆ ಅಲ್ಲ, ಇದು ಸರ್ಕಾರ ನಿರ್ದೇಶಿತ ಹಗರಣ' ಎಂದು ಅಶೋಕ ಹೇಳಿದ್ದಾರೆ.

'ಜಾತಿ ಗಣತಿ ಹೆಸರಿನಲ್ಲಿ ಈಗಾಗಲೇ ₹162 ಕೋಟಿ ಪೋಲು ಮಾಡಿದ್ದೀರಿ. ಈಗ ಒಳಮೀಸಲಾತಿಗಾಗಿ ಮಾಡುತ್ತಿರುವ ಸಮೀಕ್ಷೆಯ ಹೆಸರಿನಲ್ಲಿ ಇನ್ನೊಂದಿಷ್ಟು ಕೋಟಿ ಲೂಟಿ. ಇದು ಯಾವ ಸೀಮೆಯ ಸಾಮಾಜಿಕ ನ್ಯಾಯ? ಜನರ ತೆರಿಗೆ ಹಣವನ್ನು ಹಗಲು ದರೋಡೆ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ದಲಿತರಿಗೆ ಮೋಸ ಮಾಡುತ್ತಿದೆ' ಎಂದು ಹರಿಹಾಯ್ದಿದ್ದಾರೆ.

ಚಿಟಿಕೆ ಸುದ್ದಿ

ಆಟೊದಲ್ಲಿ ಪ್ರೇಮಿಗಳ ಶವ ಪತ್ತೆ

ರಂಜಿತಾ

ರಾಘವೇಂದ್ರ

ಬೆಳಗಾವಿ: ಗೋಕಾಕ ತಾಲ್ಲೂಕಿನ ಹಿರೇನಂದಿ ಗ್ರಾಮದ ಹೊರವಲಯದಲ್ಲಿ ಪ್ರೇಮಿಗಳು ಆಟೊರಿಕ್ಷಾದಲ್ಲಿ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಸಾವನ್ನಪ್ಪಿದ್ದಾರೆ.

'ಸವದತ್ತಿ ತಾಲ್ಲೂಕು ಮುನವಳ್ಳಿ ಗ್ರಾಮದ ರಾಘವೇಂದ್ರ ನಾರಾಯಣ ಜಾಧವ (28) ಮತ್ತು ರಂಜಿತಾ ಅಡಿವೆಪ್ಪ ಚೌಬಾರಿ (25) ಮೃತರು. ಇಬ್ಬರೂ ಪ್ರೀತಿಸುತ್ತಿದ್ದರು. ಈಚೆಗೆ ರಂಜಿತಾ ಅವರಿಗೆ ಬೇರೊಬ್ಬ ಹುಡುಗನ ಜೊತೆಗೆ ವಿವಾಹ ನಿಶ್ಚಿತಾರ್ಥವಾಗಿತ್ತು. ಮಂಗಳವಾರ ಬೆಳಿಗ್ಗೆ ವಿಷಯ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆಟೊ ಚಾಲಕನಾಗಿದ್ದ ರಾಘವೇಂದ್ರ, ಮನೆಯಲ್ಲಿ ಪ್ರೀತಿಯ ವಿಷಯ ತಿಳಿಸಿರಲಿಲ್ಲ. ಸೋಮವಾರ ಕೆಲಸಕ್ಕೆ ಹೋಗಿದ್ದು ಮನೆಗೆ ಮರಳಿರಲಿಲ್ಲ. ಪೊಲೀಸರಿಂದಲೇ ವಿಷಯ ಗೊತ್ತಾಗಿದೆ' ಎಂದು ರಾಘವೇಂದ್ರ ಅವರ ಸಹೋದರ ಸೋಮನಾಥ ತಿಳಿಸಿದರು.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ • ನಿತ್ಯ ಸರಾಸರಿ ಸಾವಿರ ಜನರ ಭೇಟಿ

ಹೃದಯ ತಪಾಸಣೆಗೆ ಯುವಜನರ ದಾಂಗುಡಿ

• ಆರ್. ಜಿತೇಂದ್ರ

ಮುಖ್ಯಾಂಶಗಳು

- ಹಾಸನ ಸರಣಿ ಹೃದಯಾಘಾತದಿಂದ ಆತಂಕ
- ಭೇಟಿ ನೀಡುವವರಲ್ಲಿ ಯುವಜನರ ಸಂಖ್ಯೆ ಗಣನೀಯ ಏರಿಕೆ
- ಈ ವರ್ಷ ಜೂನ್‌ವರೆಗೆ ಒಂದು ಲಕ್ಷ ಮಂದಿ ಭೇಟಿ

ಮೈಸೂರು: ಹಾಸನದಲ್ಲಿ ಹೃದಯಾಘಾತ ಪ್ರಕರಣಗಳ ಹೆಚ್ಚಳ ಜನರಲ್ಲಿ ಆತಂಕ ಮೂಡಿಸಿದ್ದು, ಇಲ್ಲಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ತಪಾಸಣೆಗೆ ಬರುವವರ ಸಂಖ್ಯೆ ದಿಢೀರ್ ದ್ವಿಗುಣಗೊಂಡಿದೆ.

ವಾರದ ಹಿಂದಷ್ಟೇ ಈ ಆಸ್ಪತ್ರೆಗೆ ನಿತ್ಯ ಹೊರರೋಗಿಗಳ ಸಂಖ್ಯೆ 600–700 ಇತ್ತು. 2–3 ದಿನಗಳಿಂದ 1000–1200 ಮಂದಿಗೆ ಏರಿಕೆಯಾಗಿದೆ. ಅದರಲ್ಲೂ ಹಾಸನ ಜಿಲ್ಲೆಯಿಂದ ಬರುವವರ ಸಂಖ್ಯೆ ಹೆಚ್ಚಾಗಿದೆ. ಯುವಜನರು ಆತಂಕದಿಂದ ಬರುತ್ತಿದ್ದಾರೆ ಎಂದು ಇಲ್ಲಿನ ವೈದ್ಯರು ಹೇಳುತ್ತಾರೆ.

ಹೊರ ರೋಗಿಗಳ ವಿಭಾಗದಲ್ಲಿ ತಪಾಸಣೆಗಾಗಿ ಮುಂಜಾನೆ 5ರಿಂದಲೇ ಜನ ಸರದಿ ಸಾಲಿನಲ್ಲಿ ಕಾಯತೊಡಗುತ್ತಿದ್ದಾರೆ. 'ಮೊದಲು ಬಂದವರ'ನ್ನು ಪರಿಗಣಿಸಿ ನಿತ್ಯ 2 ವಿಭಾಗದಲ್ಲಿ ಸೀಮಿತ ಮಂದಿಗಷ್ಟೇ ಟೋಕನ್ ನೀಡಿ ತಪಾಸಣೆ ಮಾಡಲಾಗುತ್ತಿದೆ. ಸಂಪನ್ಮೂಲ ಮತ್ತು ಸಿಬ್ಬಂದಿ ಕೊರತೆ ಕಾರಣಕ್ಕೆ ಎಲ್ಲರಿಗೂ ಸಕಾಲಕ್ಕೆ ಸೇವೆ ಸಾಧ್ಯವಾಗುತ್ತಿಲ್ಲ.

ಪ್ರಜಾವಾಣಿ ವಿಶೇಷ

ಜಿಲ್ಲೆಯೊಂದಿಗೆ ನೆರೆಯ ಹಾಸನ, ಚಾಮರಾಜನಗರ, ಮಂಡ್ಯ, ಕೊಡಗು, ರಾಮನಗರ ಜಿಲ್ಲೆಗಳಿಂದಲೂ ರೋಗಿಗಳು ತಪಾಸಣೆ ಮತ್ತು ಚಿಕಿತ್ಸೆಗೆ ಬರುತ್ತಿದ್ದಾರೆ. ಆಸ್ಪತ್ರೆ ಆವರಣದಲ್ಲಿ ಜನಸಂದಣಿ ಸಾಮಾನ್ಯವಾಗಿದೆ.

'ಹಾಸನದ ಸುದ್ದಿ ಯುವಜನರಲ್ಲಿ ತಲ್ಲಣ ಮೂಡಿಸಿದೆ. ಚಲನಚಿತ್ರ ನಟ ಪುನೀತ್ ರಾಜಕುಮಾರ್ ಮೃತಪಟ್ಟ ಸಂದರ್ಭದಲ್ಲೂ ಕೆಲವು ತಿಂಗಳು ಹೀಗೆಯೇ ಆಗಿತ್ತು. ಆದರೆ ಹೀಗೆ ಆತಂಕದಿಂದ ತಪಾಸಣೆಗೆ ಬರುತ್ತಿರುವ ಯುವಜನರಲ್ಲಿ ಹೆಚ್ಚಿನವರಿಗೆ ಯಾವುದೇ ಸಮಸ್ಯೆ ಇಲ್ಲ. ಸಾವಿನ ಪ್ರಕರಣ ಹಾಸನದಲ್ಲಿ ಮಾತ್ರವಲ್ಲ, ಎಲ್ಲ ಕಡೆಯೂ ವರದಿ ಆಗುತ್ತಿವೆ' ಎನ್ನುತ್ತಾರೆ ಮೈಸೂರಿನ ಜಯದೇವ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಎಸ್.ಸದಾನಂದ.

'ಒತ್ತಡ, ಜೀವನಶೈಲಿ ಹಾಗೂ ಆಹಾರ ಕ್ರಮದಲ್ಲಿನ ಬದಲಾವಣೆ, ಪರಿಸರ ಮಾಲಿನ್ಯ ಹೃದ್ರೋಗ ಸಮಸ್ಯೆ ಹೆಚ್ಚಳಕ್ಕೆ ಕಾರಣ. ಪ್ರತಿಯೊಬ್ಬರು ನಿಯಮಿತವಾಗಿ ತಪಾಸಣೆಗೆ ಒಳಗಾಗಬೇಕು' ಎನ್ನುವುದು ಅವರ ಸಲಹೆ.

ಸಂಖ್ಯೆ ದ್ವಿಗುಣ: 2020ರಲ್ಲಿ ಆಸ್ಪತ್ರೆಯಲ್ಲಿ 1.17 ಲಕ್ಷ ಮಂದಿ ಹೊರರೋಗಿಗಳಾಗಿ ತಪಾಸಣೆ ಹಾಗೂ ಚಿಕಿತ್ಸೆಗೆ ಒಳಗಾಗಿದ್ದು, 2021ರಲ್ಲಿ 1.50 ಲಕ್ಷ, 2022ರಲ್ಲಿ 1.86 ಲಕ್ಷ, 2023ರಲ್ಲಿ 2.13 ಲಕ್ಷ ಹಾಗೂ 2024ರಲ್ಲಿ ಈ ಪ್ರಮಾಣವು 2.32 ಲಕ್ಷಕ್ಕೆ ಏರಿಕೆ ಆಗಿದೆ. ಈ ವರ್ಷ ಜೂನ್‌ವರೆಗೆ 1 ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ.

ಒಳರೋಗಿಗಳ ಸಂಖ್ಯೆಯೂ ಕಳೆದ ಐದು ವರ್ಷದಲ್ಲಿ ದ್ವಿಗುಣವಾಗಿದೆ. 2020ರಲ್ಲಿ 10,601 ಮಂದಿ ಆಸ್ಪತ್ರೆಗೆ ದಾಖಲಾಗಿದ್ದರೆ, 2024ರಲ್ಲಿ ಈ ಪ್ರಮಾಣವು 20,286ಕ್ಕೆ ಏರಿದೆ. ಈ ವರ್ಷವೂ ಈಗಾಗಲೇ 10 ಸಾವಿರಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದಿದ್ದಾರೆ.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ

ಆಸ್ಪತ್ರೆಯಲ್ಲಿ ವೈದ್ಯರ ಕೊರತೆ

'ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ 55 ವೈದ್ಯರು, 500ಕ್ಕೂ ಹೆಚ್ಚು ಸಿಬ್ಬಂದಿ ಇದ್ದಾರೆ. ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ 20ಕ್ಕೂ ಹೆಚ್ಚು ವೈದ್ಯರ ಅಗತ್ಯವಿದೆ. ಆಸ್ಪತ್ರೆಯ ಆಡಳಿತವು ಈಗಾಗಲೇ ಸರ್ಕಾರಕ್ಕೆ ನೇಮಕಾತಿ ಪ್ರಸ್ತಾವ ಸಲ್ಲಿಸಿದೆ' ಎನ್ನುತ್ತಾರೆ ಆಸ್ಪತ್ರೆಯ ವೈದ್ಯರು.

> ಹಾಸನದ ಸುದ್ದಿ ಕೇಳಿ ಕೆಲವು ದಿನದಿಂದ ಯುವಜನರು ಹೆಚ್ಚಾಗಿ ತಪಾಸಣೆಗೆ ಬರುತ್ತಿದ್ದು, ಹೊರರೋಗಿಗಳ ಸಂಖ್ಯೆಯಲ್ಲಿ ಶೇ 30–35ರಷ್ಟು ಹೆಚ್ಚಳ ಆಗಿದೆ
>
> **ಡಾ.ಕೆ.ಎಸ್. ಸದಾನಂದ** ಮೆಡಿಕಲ್ ಸೂಪರಿಂಟೆಂಡೆಂಟ್, ಜಯದೇವ ಆಸ್ಪತ್ರೆ

> ಈಚೆಗಷ್ಟೇ ವೈದ್ಯಕೀಯ ವಿದ್ಯಾರ್ಥಿಯೊಬ್ಬರು ಹೃದಯಾಘಾತದಿಂದ ಸಾವಿಗೀಡಾದ ಸುದ್ದಿ ಕೇಳಿ ಆಘಾತವಾಯಿತು. ಹೀಗಾಗಿ ಆತಂಕದಿಂದಲೇ ತಪಾಸಣೆಗೆ ಬಂದಿದ್ದೇನೆ
>
> **ಶಶಾಂಕ್** ಖಾಸಗಿ ಕಂಪನಿ ಉದ್ಯೋಗಿ

ವಿಟಿಯು: ಮೂವರಿಗೆ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಡಾ.ವಿ. ನಾರಾಯಣನ್


ಪ್ರಶಾಂತ್ ಪ್ರಕಾಶ್


ಸುಂದರ್ ರಾಜು

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ವಿಟಿಯು) 25ನೇ ವಾರ್ಷಿಕ ಘಟಿಕೋತ್ಸವ (ಭಾಗ–1) ಜುಲೈ 4ರಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ. ಮೂವರಿಗೆ ಗೌರವ ಡಾಕ್ಟರೇಟ್, 60,052 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು.

'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಅಧ್ಯಕ್ಷ ಡಾ.ವಿ. ನಾರಾಯಣನ್, ಎಕ್ಸೆಲ್ ಇಂಡಿಯಾ ಸಂಸ್ಥಾಪಕ ಪ್ರಶಾಂತ್ ಪ್ರಕಾಶ್ ಮತ್ತು ಬೆಂಗಳೂರಿನ ಏಟ್ರಿಯ ವಿಶ್ವವಿದ್ಯಾಲಯದ ಕುಲಾಧಿಪತಿ ಸಿ.ಎಸ್.ಸುಂದರ್ ರಾಜು ಅವರಿಗೆ 'ಡಾಕ್ಟರ್ ಆಫ್ ಸೈನ್ಸ್' ಪ್ರದಾನ ಮಾಡಲಾಗುವುದು' ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ ಹೇಳಿದರು.

'ಕೇಂದ್ರದ ಪ್ರಧಾನ ವೈದ್ಯಕೀಯ ಸಲಹೆಗಾರ ಪ್ರೊ.ಅಜಯ್‌ಕುಮಾರ್ ಸೂದ್, ಘಟಿಕೋತ್ಸವ ಭಾಷಣ ಮಾಡುವರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸುವರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಪಾಲ್ಗೊಳ್ಳುವರು' ಎಂದರು.

'2025–26ನೇ ಸಾಲಿನಿಂದ ಸ್ನಾತಕ ಕೋರ್ಸ್‌ಗಳ ಪಠ್ಯಕ್ರಮ ಬದಲಿಸಿದ್ದೇವೆ. ಪ್ರಸ್ತುತ ಕೈಗಾರಿಕೆಗಳು ಬಯಸುವ, ಕೌಶಲ ಆಧಾರಿತ ಪಠ್ಯಕ್ರಮ ದೇಶದಲ್ಲೇ ಮಾದರಿಯಾಗಿದೆ. ವಿವಿಧ ಕ್ಷೇತ್ರದವರ ಜೊತೆ ಚರ್ಚಿಸಿ ಇದನ್ನು ರೂಪಿಸಿದ್ದೇವೆ' ಎಂದು ಹೇಳಿದರು.

ಚಿರತೆ ಕಳೇಬರ ಪತ್ತೆ: ತನಿಖೆಗೆ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ರಾಮಾಪುರ ಮಾರ್ಟಳ್ಳಿ ಗಡಿಯಲ್ಲಿ ಚಿರತೆ ಕಳೇಬರ ಪತ್ತೆಯಾಗಿದ್ದು, ಉಗುರುಗಳಿಗಾಗಿ ಹತ್ಯೆ ನಡೆದಿದೆ ಎಂಬ ಮಾಹಿತಿ ಇದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ.

'ಹೂಗ್ಯಂ ವಲಯದಲ್ಲಿ 5 ಹುಲಿಗಳು ಅಸಹಜವಾಗಿ ಮೃತಪಟ್ಟ ದುರಂತ ಸಾರ್ವಜನಿಕವಾಗಿ ಚರ್ಚೆಗೆ ನಡೆದಿರುವ ಸಂದರ್ಭದಲ್ಲಿ 15 ದಿನದ ಹಿಂದೆ, ಕಾಲುಗಳನ್ನು ಕಡಿದ ಸ್ಥಿತಿಯಲ್ಲಿ ಚಿರತೆ ಕಳೇಬರ ಸಿಕ್ಕಿರುವ ಮಾಹಿತಿ ನಮ್ಮ ಕಚೇರಿಗೆ ಬಂದಿದೆ' ಎಂದು ಹೇಳಿದ್ದಾರೆ.

ಎಪಿಸಿಸಿಎಫ್ ನೇತೃತ್ವದ ತಂಡದಿಂದ ತನಿಖೆ ನಡೆಸಲಿದೆ. ಚಿರತೆ ಹತ್ಯೆಯ ಪ್ರಕರಣದಲ್ಲಿ ಅಧಿಕಾರಿಗಳ ಕರ್ತವ್ಯ ಲೋಪ ಕಂಡುಬಂದರೆ ತೆಗೆದುಕೊಳ್ಳಬೇಕಾದ ಕ್ರಮಗಳ ಶಿಫಾರಸು ಸಹಿತ ಏಳು ದಿನಗಳ ಒಳಗೆ ವರದಿ ಸಲ್ಲಿಸುವಂತೆ ಸಚಿವರು ತಿಳಿಸಿದ್ದಾರೆ.

ಚರಿತ್ರೆ ಸೃಷ್ಟಿಸಲಿರುವ ಕನ್ನಡ ಸಾಹಿತ್ಯ ಸಮ್ಮೇಳನ: ಸಚಿವ ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಚರಿತ್ರೆ ಸೃಷ್ಟಿಸಲಿದೆ' ಎಂದು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಡೆದ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ, ಮಾತನಾಡಿದರು.

'ಕನ್ನಡಿಗರ ಹೆಮ್ಮೆಯ ಉತ್ಸವವನ್ನು ಚಾರಿತ್ರಿಕವಾಗಿ ನಡೆಸಲು ಎಲ್ಲ ರೀತಿಯ ಸಹಕಾರ ನೀಡಲಾಗುವುದು. ಸರ್ಕಾರದ ಕಡೆಯಿಂದ ಅಗತ್ಯ ನೆರವು ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾದ ಅವರಿಗೆ ಇದೇ ವೇಳೆ ಸಾಂಕೇತಿಕವಾಗಿ ವಿಶೇಷ ಗುರುತಿನ ಚೀಟಿ ವಿತರಿಸಲಾಯಿತು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಈವರೆಗೆ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಐದು ಸಮ್ಮೇಳನಗಳು ನಡೆದಿವೆ. 68 ವರ್ಷಗಳ ನಂತರ ಬಳ್ಳಾರಿಯಲ್ಲಿ ಮತ್ತೆ ಸಮ್ಮೇಳನ ನಡೆಯುತ್ತಿದೆ. ಕಾರ್ಯಕಾರಿ ಸಮಿತಿಯು ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ' ಎಂದರು.

ಇದನ್ನು ಶ್ಲಾಘಿಸಿದ ಸಚಿವರು, 'ಬಾನು ಮುಷ್ತಾಕ್ ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಲಿರುವ ಐದನೆಯ ಮಹಿಳೆ, ಮೊದಲ ಅಲ್ಪಸಂಖ್ಯಾತ ಮಹಿಳೆ ಎನ್ನುವುದು ಸಂತೋಷದ ಸಂಗತಿ' ಎಂದು ಬಣ್ಣಿಸಿದರು.

ಬಳ್ಳಾರಿಯ ಜಿಲ್ಲಾಧಿಕಾರಿ ಪ್ರಶಾಂತ ಕುಮಾರ್ ಮಿಶ್ರಾ, ಜಿ.ಪಂ ಸಿಇಒ ಮಹಮ್ಮದ್ ಹ್ಯಾರಿಸ್ ಸುಮೇರ್, ಎಸ್‌ಪಿ ಶೋಭಾರಾಣಿ ವಿ.ಜೆ., ಕಸಾಪ ಗೌರವ ಕಾರ್ಯದರ್ಶಿ ಬಿ.ಎಂ. ಪಟೇಲ್ ಪಾಂಡು, ಎನ್.ಎಸ್.ಶ್ರೀಧರಮೂರ್ತಿ ಇದ್ದರು.

ಕಾಲ್ತುಳಿತ ದುರಂತದ ಬಳಿಕ ಎಚ್ಚೆತ್ತ ಪೊಲೀಸ್ ಇಲಾಖೆ

ದೊಡ್ಡ ಮಟ್ಟದ ಸಮಾರಂಭಗಳಿಗೆ ಎಸ್‌ಒಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಘಟನೆಯ ಬಳಿಕ ಎಚ್ಚೆತ್ತುಕೊಂಡಿರುವ ಪೊಲೀಸ್ ಇಲಾಖೆ, ಸಾರ್ವಜನಿಕ ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಣಕ್ಕಾಗಿ ಹೊಸ ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರೂಪಿಸಿದೆ.

ಬೃಹತ್ ಕಾರ್ಯಕ್ರಮಗಳು, ಸಭೆ ಹಾಗೂ ವಿಜಯೋತ್ಸವಗಳಲ್ಲಿ ಅಹಿತಕರ ಘಟನೆಗಳನ್ನು ತಡೆಯುವ ಉದ್ದೇಶದಿಂದ ಹೊಸ ಎಸ್‌ಒಪಿ ರೂಪಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಇತ್ತೀಚೆಗೆ ತಿಳಿಸಿದ್ದರು. ಹೊಸ ಎಸ್‌ಒಪಿ ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸಂಬಂಧಿಸಿದ ಅಧಿಕಾರಿಗಳಿಗೆ ರಾಜ್ಯ ಡಿಜಿ-ಐಜಿಪಿ ಡಾ. ಎಂ.ಎ.ಸಲೀಂ ಸೂಚಿಸಿದ್ದಾರೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿದ್ದು, ಜನಸಂದಣಿ ನಿರ್ವಹಣೆಗಾಗಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಎಸ್‌ಒಪಿಯಲ್ಲಿ ತಿಳಿಸಲಾಗಿದೆ.

ಹಬ್ಬಗಳು, ರ್‍ಯಾಲಿಗಳು, ಕ್ರೀಡೆಗಳು, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಜನಸಂದಣಿ ನಿರ್ವಹಣೆಗೆ ಸೂಕ್ತ ಕಾರ್ಯತಂತ್ರದ ಅಗತ್ಯವಿದೆ. ಸಾರ್ವಜನಿಕ ಸುರಕ್ಷತೆಗಾಗಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು, ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು, ಅಪಾಯಗಳನ್ನು ಕಡಿಮೆ ಮಾಡುವುದು, ಸಮನ್ವಯವನ್ನು ಹೆಚ್ಚಿಸುವುದು ಮತ್ತು ತುರ್ತು ಪರಿಸ್ಥಿತಿಗಳಿಗೆ ತ್ವರಿತ ಪ್ರತಿಕ್ರಿಯೆಯನ್ನು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ.

ಎಸ್‌ಒಪಿ ಮಾರ್ಗಸೂಚಿಯಲ್ಲೇನಿದೆ?

- ಜನಸಂದಣಿ ನಿರ್ವಹಣೆಗೆ ಪೂರ್ವ ಸಿದ್ಧತೆ, ಆಯೋಜಕರ ಜತೆ ಸಮನ್ವಯ ಹಾಗೂ ಪೊಲೀಸ್ ಬಂದೋಬಸ್ತ್‌ಗೆ ಅಗತ್ಯ ಕ್ರಮ ವಹಿಸಬೇಕು.
- ಜನಸಮೂಹದ ವರ್ತನೆ ಪರಿಶೀಲಿಸುವುದು, ನಿರ್ಗಮನ ದ್ವಾರಗಳನ್ನು ಗುರುತಿಸುವ ಮೂಲಕ ಲಭ್ಯವಿರುವ ಪರಿಕರಗಳನ್ನು ಬಳಸಿಕೊಂಡು ಸಂಭಾವ್ಯ ಅವಘಡ ತಡೆಯುವುದು.
- ಸ್ಥಳ ಸಾಮರ್ಥ್ಯದ ಮಿತಿಗಳು, ಪ್ರವೇಶ/ನಿರ್ಗಮನ ಮಾರ್ಗಗಳು, ತುರ್ತು ಸ್ಥಳಾಂತರಿಸುವ ಯೋಜನೆಗಳು ಮತ್ತು ಸಂವಹನ ಮೂಲಸೌಕರ್ಯ ಸೇರಿ ಸುರಕ್ಷತಾ ಮಾನದಂಡ ಖಚಿತಪಡಿಸಿಕೊಳ್ಳಬೇಕು.
- ಸುರಕ್ಷತಾ ಪರಿಶೀಲನೆಯಲ್ಲಿ ಸೂಕ್ತವಲ್ಲದ ಸ್ಥಳಗಳಲ್ಲಿ ಬೃಹತ್ ಕಾರ್ಯಕ್ರಮಗಳಿಗೆ ಅನುಮತಿ ನಿರಾಕರಿಸಬೇಕು.
- ಕಾರ್ಯಕ್ರಮಗಳಿಗೆ ಅಗತ್ಯ ವ್ಯವಸ್ಥೆ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಆಂಬುಲೆನ್ಸ್, ವಾಹನ ನಿಲುಗಡೆ ಪ್ರದೇಶ ಮತ್ತು ನಿಯಂತ್ರಣ ಕೊಠಡಿ ಮತ್ತಿತರ ವ್ಯವಸ್ಥೆ ಮಾಡಲು ಸೂಚಿಸುವುದು.
- ಬೆಂಕಿ, ಕಾಲ್ತುಳಿತ ಇನ್ನಿತರ ಅವಘಡಗಳ ನಿಯಂತ್ರಣಕ್ಕೆ ತುರ್ತು ಸಿದ್ಧತೆ ಮಾಡಿಕೊಳ್ಳುವುದು. ಇದಕ್ಕಾಗಿ ತರಬೇತಿ ಮತ್ತು ಅಣುಕು ಪ್ರದರ್ಶನ ಕೈಗೊಳ್ಳುವುದು.
- ಜನಸಂದಣಿ ನಿಯಂತ್ರಿಸಲು ಅಥವಾ ಚದುರಿಸಲು ಎಚ್ಚರಿಕೆ ನೀಡಿದ ನಂತರವೇ ಪೊಲೀಸ್ ಸಿಬ್ಬಂದಿ ಬಳಸಬೇಕು ಮತ್ತು ಅನಗತ್ಯವಾಗಿ ಬಂಧನಕ್ಕೆ ಮುಂದಾಗಬಾರದು.
- ಭವಿಷ್ಯದ ಸುಧಾರಣೆಗಾಗಿ, ಜನಸಂದಣಿಯ ಸಂಚಾರ, ತೆಗೆದುಕೊಂಡ ನಿರ್ಧಾರಗಳು ಮತ್ತು ನೀಡಿದ ಎಚ್ಚರಿಕೆಗಳನ್ನು ಆಡಿಯೊ/ವಿಡಿಯೊ ದಾಖಲೆಗಳ ಮೂಲಕ ದಾಖಲಿಸಬೇಕು.

ಪೊಲೀಸರಿಗೆ ಸಿಪಿಆರ್ ತರಬೇತಿ

ಕಾಲ್ತುಳಿತ ಘಟನೆ ಬಳಿಕ ಪೊಲೀಸ್ ತರಬೇತಿ ಕೈಪಿಡಿಯನ್ನು ಪರಿಷ್ಕರಿಸಲಾಗಿದ್ದು, ತರಬೇತಿ ಅವಧಿಯಲ್ಲಿಯೇ ಜನಸಂದಣಿ ನಿರ್ವಹಣೆ ಮತ್ತು ಕಾರ್ಡಿಯೊ ಪಲ್ಮನರಿ ರಿಸಸಿಟೇಶನ್ (ಸಿಪಿಆರ್) ಕುರಿತು ತರಬೇತಿ ನೀಡಲಾಗುತ್ತದೆ.

'ಜನಸಂದಣಿ ನಿಯಂತ್ರಣ ಮಾಡುವುದು ಹೇಗೆ ಎಂಬುದು ಒಂದು ವರ್ಷದಿಂದ ಪಠ್ಯಕ್ರಮದ ಭಾಗವಾಗಿತ್ತು. ಆದರೆ, ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತದ ನಂತರ, ಅದನ್ನು ಪರಿಷ್ಕರಿಸಲಾಗಿದೆ. ಸಿಪಿಆರ್ ವಿಧಾನ ಕುರಿತು ಪೊಲೀಸರಿಗೆ ತರಬೇತಿ ನೀಡಲಾಗುತ್ತಿದೆ. ಪ್ರಥಮ ಚಿಕಿತ್ಸೆ ತರಬೇತಿ ಪಡೆದಿದ್ದರೆ, ತುರ್ತು ಸಂದರ್ಭದಲ್ಲಿ ವ್ಯಕ್ತಿಯ ಜೀವ ಉಳಿಸಲು ಸಾಧ್ಯ' ಎಂದು ಪೊಲೀಸ್ ತರಬೇತಿ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ತಿಳಿಸಿದರು.

'ನಿತ್ಯ ವಿವಿಧ ಘಟನೆಗಳನ್ನು ಪೊಲೀಸರು ನೋಡುತ್ತಾರೆ. ಕಾಲ್ತುಳಿತ, ಬಾಂಬ್ ಸ್ಫೋಟ, ರಸ್ತೆ ಅಪಘಾತ ಸಂಭವಿಸಿದಾಗ ಸ್ಥಳಕ್ಕೆ ಮೊದಲು ತಲುಪುವುದು ಪೊಲೀಸ್ ಸಿಬ್ಬಂದಿ. ಅಂತಹ ಸಂದರ್ಭದಲ್ಲಿ ವೈದ್ಯಕೀಯ ತಂಡಕ್ಕಾಗಿ ಕಾಯುವ ಬದಲು ಸಿಆರ್‌ಪಿ ವಿಧಾನ ಮೂಲಕ ವ್ಯಕ್ತಿಯ ಜೀವ ಉಳಿಸಬಹುದು. ಸಿಆರ್‌ಪಿ ವಿಧಾನ ಹಾಗೂ ಪ್ರಥಮ ಚಿಕಿತ್ಸೆಯ ಜ್ಞಾನ ಹೊಂದಿರುವುದು ಅಗತ್ಯ. ಹಠಾತ್ ಹೃದಯಾಘಾತ ಸಂದರ್ಭದಲ್ಲಿ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಿಪಿಆರ್ ವಿಧಾನ ಸಹಾಯಕ' ಎಂದು ಹೇಳಿದರು.

ಮಳೆ: 30 ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಮುಂದುವರಿದಿದ್ದು, 30 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಬುಧವಾರ ಭಾರಿ ಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಕೆಲವೆಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಭಾರಿ ಮಳೆಯ ಮುನ್ಸೂಚನೆ ನೀಡಲಾದ ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಂಟೆಗೆ 35ರಿಂದ 45 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು ಮತ್ತು ಸಾಧಾರಣ ಮಳೆಯಾಗಬಹುದು ಎಂದು ಹೇಳಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಕ್ಯಾಸಲ್ ರಾಕ್‌ನಲ್ಲಿ 4 ಸೆಂ. ಮೀ. ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ವೀಕ್ಷಣಾಲಯ, ಕಲಬುರಗಿ ಜಿಲ್ಲೆಯ ಚಿಂಚೋಳಿ, ಬೀದರ್ ಮತ್ತು ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ತಲಾ 3 ಸೆಂ.ಮೀ. ಮಳೆ ದಾಖಲಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.80	35,944	35,944
ಹಾರಂಗಿ	2,859	2,851.77	3,137	1,541
ಕಬಿನಿ	2,284	2,277.33	7,137	5,000
ಹೇಮಾವತಿ	2,922	2,917.32	17,123	14,070
ಲಿಂಗನಮಕ್ಕಿ	1,819	1,785.40	12,593	6,519
ಸೂಪಾ (ಮೀ)	564	537.50	15,871.31	1,041.46
ಮಾಣಿ	595	583.31	2,098	-
ತುಂಗಭದ್ರಾ	1,633	1,624.38	33,916	2,389
ಮಲಪ್ರಭಾ	2,079.5	2,062.10	6,071	194
ಘಟಪ್ರಭಾ	2175	2,147	11,946	555
ಭದ್ರಾ *	186	163.3	9,007	3,393
ಆಲಮಟ್ಟಿ (ಮೀ)	519.6	517.16	91,346	72,446
ನಾರಾಯಣಪುರ (ಮೀ)	492.25	490.66	70,000	65,510

* ನೆಲಮಟ್ಟದಿಂದ

ನೀರು ನದಿಗೆ ಬಿಡುಗಡೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣದಲ್ಲಿ ಇಳಿಕೆ ಕಂಡು ಬಂದಿದೆ. ಸೋಮವಾರ ಸಂಜೆಯಿಂದ ನದಿಗೆ ಎರಡು ಸಾವಿರ ಕ್ಯೂಸೆಕ್‌ನಷ್ಟು ನೀರನ್ನು ಎಡದಂಡೆ ಮುಖ್ಯ ಕಾಲುವೆ ಮತ್ತು ನದಿಗೆ ಹರಿಸಲಾಗುತ್ತಿದೆ.

'ಸದ್ಯ ಕ್ರಸ್ಟ್‌ಗೇಟ್ ಎತ್ತಿ ನೀರು ಹರಿಸುವುದಿಲ್ಲ. ವಿದ್ಯುತ್ ಉತ್ಪಾದನೆಗೆ ನೀರು ಹರಿಸಿ, ಅದನ್ನು ಕಾಲುವೆಗೆ ಮತ್ತು ನದಿಗೆ ಬಿಡುವ ಅವಕಾಶ ಇದೆ. ಅದನ್ನೀಗ ಮಾಡಲಾಗುತ್ತಿದೆ' ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

ಹೊರನಡೆದ ಬಿಜೆಪಿ ಸಂಸದರು

ಭೂಸ್ವಾಧೀನ: ಸಂಸದೀಯ ಸ್ಥಾಯಿ ಸಮಿತಿ ಸಭೆಯಲ್ಲಿ ಪ್ರಕಾಶ್ ರಾಜ್ ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭೂಸ್ವಾಧೀನ ಕಾನೂನಿನ ಅನುಷ್ಠಾನದ ಕುರಿತು ಪರಿಶೀಲಿಸುತ್ತಿದ್ದ ಸಂಸದೀಯ ಸಮಿತಿಯ ಸಭೆಯು ಕೋರಂ ಕೊರತೆಯಿಂದಾಗಿ ಮಂಗಳವಾರ ಹಠಾತ್ತನೆ ಕೊನೆಗೊಂಡಿತು. ಬಹುಭಾಷಾ ನಟ ಪ್ರಕಾಶ್ ರಾಜ್ ಹಾಗೂ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರನ್ನು ಕರೆಸಿದ್ದಕ್ಕೆ ಬಿಜೆಪಿ ಸಂಸದರು ಆಕ್ಷೇಪ ವ್ಯಕ್ತಪಡಿಸಿ ಹೊರನಡೆದರು ಎಂದು ಮೂಲಗಳು ತಿಳಿಸಿವೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಭೂ ಸಂಪನ್ಮೂಲ ಇಲಾಖೆ, ಪರಿಸರ ಮತ್ತು ಬುಡಕಟ್ಟು ವ್ಯವಹಾರಗಳ ಸಚಿವಾಲಯಗಳು ಹಾಗೂ ಸ್ವಯಂಸೇವಾ ಸಂಘಟನೆ ಪದಾಧಿಕಾರಿಗಳಿಂದ 'ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ವಸತಿ ಕಾಯ್ದೆ- 2013ರ ಅನುಷ್ಠಾನ' ಕುರಿತು ವಿಚಾರಣೆ ನಡೆಸಿ ಅಭಿಪ್ರಾಯ ಪಡೆಯಲು ನಿರ್ಧರಿಸಿತ್ತು.

ಸಭೆಗೆ ಮುನ್ನವೇ, ಕಾಂಗ್ರೆಸ್‌ನ ಹಿರಿಯ ಸಂಸದ ಸಪ್ತಗಿರಿ ಉಲಾಕಾ ನೇತೃತ್ವದ ಸಮಿತಿಯ ಮುಂದೆ ಪಾಟ್ಕರ್ ಹಾಗೂ ಪ್ರಕಾಶ್ ರಾಜ್ ಹಾಜರಾಗಲು ಅವಕಾಶ ನೀಡಿರುವುದಕ್ಕೆ ಬಿಜೆಪಿ ಸಂಸದರು ಆಕ್ಷೇಪ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಸಪ್ತಗಿರಿ ಉಲಾಕಾ ಅವರಿಗೆ ಮನವಿ ಸಲ್ಲಿಸಿದ ಪ್ರಕಾಶ್ ರಾಜ್

ಮುಖ್ಯಾಂಶಗಳು
- ಮೇಧಾ ಪಾಟ್ಕರ್ ಕರೆಸಿದ್ದಕ್ಕೂ ಆಕ್ಷೇಪ
- ಸಭೆ ದಿಢೀರ್ ರದ್ದು

ಸಭೆ ಆರಂಭವಾದಾಗ, ಸ್ವಯಂಸೇವಾ ಸಂಘಟನೆಗಳ ಪದಾಧಿಕಾರಿಗಳು ಸಭೆಗೆ ಬರುತ್ತಿರುವ ಬಗ್ಗೆ ಉಲಾಕಾ ಅವರು ಮಾಹಿತಿ ನೀಡಿದರು. ಆಗ ಬಿಜೆಪಿ ಸಂಸದರು ಮತ್ತೊಮ್ಮೆ ಆಕ್ಷೇಪಣೆ ಸಲ್ಲಿಸಿದರು.

'ಗುಜರಾತ್ ಮತ್ತು ಇತರೆಡೆಗಳಲ್ಲಿ ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದ ಪಾಟ್ಕರ್ ಅವರನ್ನು ರಾಷ್ಟ್ರವಿರೋಧಿ ಮತ್ತು ಅಭಿವೃದ್ಧಿ ವಿರೋಧಿ ಎಂದು ಅವರು ಬಣ್ಣಿಸಿದರು. ಅಭಿಪ್ರಾಯ ಮಂಡಿಸಲು ಪಾಟ್ಕರ್ ಅವರಿಗೆ ಅವಕಾಶ ನೀಡಬಾರದು. ಸಮಿತಿಯು ಪಾಕಿಸ್ತಾನ ಪ್ರಧಾನಿಯನ್ನು ಆಹ್ವಾನಿಸುತ್ತದೆಯೇ' ಎಂದು ಸಂಸದರೊಬ್ಬರು ಪ್ರಶ್ನಿಸಿದರು ಎಂದು ಗೊತ್ತಾಗಿದೆ.

ಇದಕ್ಕೆ ವಿಪಕ್ಷಗಳ ಸಂಸದರು ಆಕ್ಷೇಪ ವ್ಯಕ್ತಪಡಿಸಿದರು. ಆಹ್ವಾನಿತ ವ್ಯಕ್ತಿಯ ಅಭಿಪ್ರಾಯ ಕೇಳದಿರುವುದು ಸರಿಯಲ್ಲ ಎಂದೂ ಅಭಿಪ್ರಾಯಪಟ್ಟರು. ಸಭೆ ಮುಂದುವರಿಯುತ್ತಿದ್ದಂತೆಯೇ ಬಿಜೆಪಿ ಸಂಸದರು ಹೊರ ನಡೆದರು. ಕೋರಂ ಕೊರತೆ ಇರುವ ಕಾರಣಕ್ಕೆ ಸಭೆ ಮುಂದುವರಿಯುವ ಹಾಗಿಲ್ಲ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು. ಅಗತ್ಯ ಕೋರಂ ಇಲ್ಲದೆ ಸಭೆ ಮುಂದುವರಿಸಬಾರದು ಎಂದು ಲೋಕಸಭಾಧ್ಯಕ್ಷರ ಕಚೇರಿಯಿಂದ ನಿರ್ದೇಶನ ಬಂದಿದೆ ಎಂದು ವಿರೋಧ ಪಕ್ಷಗಳ ಕೆಲವು ಸಂಸದರು ಹೇಳಿಕೊಂಡರು.

ನಾವು ಉಗ್ರರೇ: ಪ್ರಕಾಶ್ ರಾಜ್ ಪ್ರಶ್ನೆ

'ದೇವನಹಳ್ಳಿಯ ರೈತರ ಸಮಸ್ಯೆ ಬಗ್ಗೆ ಮಾತನಾಡಲು ಸಭೆಗೆ ಹೋಗಿದ್ದೆ. ಆದರೆ, ಏಕಾಏಕಿ ಸಭೆಯನ್ನು ರದ್ದುಗೊಳಿಸಲಾಯಿತು. ನಾವೇನು ಉಗ್ರರೇ ಅಥವಾ ಬಾಂಬ್ ಹಾಕಲು ಬಂದಿದ್ದೇವಾ' ಎಂದು ಪ್ರಕಾಶ್ ರಾಜ್ ಪ್ರಶ್ನಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಸಭೆಯಲ್ಲಿ ನಮ್ಮನ್ನು ಕೂರಿಸಿದರು. ಬಿಜೆಪಿ ಸಂಸದರು ಸಭೆಯಿಂದ ಹೊರ ನಡೆದರು. ಅವರಲ್ಲೇ ವಾಗ್ವಾದ ನಡೆಯಿತು. ನಮ್ಮ ಅಹವಾಲುಗಳನ್ನು ಆಲಿಸಲು ಅವರು ಸಿದ್ಧರಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಸಭೆಯಲ್ಲಿ ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಅವರೂ ಇದ್ದರು. ಏನಣ್ಣ ಇದು ಎಂದು ಅವರನ್ನು ಪ್ರಶ್ನಿಸಿದೆ. ಮಣ್ಣಿನ ಮಗ ಸುಮ್ಮನೆ ಕುಳಿತಿದ್ದರು. ನಾವು ಯಾರನ್ನು ನಂಬುವುದು' ಎಂದು ಪ್ರಶ್ನಿಸಿದರು.

'ದೇವನಹಳ್ಳಿ ರೈತರ ಸಮಸ್ಯೆ ಬಗ್ಗೆ ಮಾತನಾಡಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಮಯಾವಕಾಶ ಕೇಳಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಮನವಿ ಮಾಡುತ್ತೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ನಾಳೆಯಿಂದ ನಾನು ಕೂಡ ಪ್ರತಿಭಟನೆಯಲ್ಲಿ ಭಾಗಿಯಾಗುತ್ತೇನೆ. ಸರ್ಕಾರ ಸ್ಪಂದಿಸುವ ವರೆಗೆ ನಿರಂತರ ಹೋರಾಟ ಮಾಡುತ್ತೇವೆ' ಎಂದು ಅವರು ಹೇಳಿದರು.

'ಕೊನೆಯ ಉಸಿರು ಇರುವ ತನಕ ಹೋರಾಡುತ್ತೇನೆ'

ನವದೆಹಲಿ (ಪಿಟಿಐ): 'ನನ್ನ ಮಗನಿಗಾಗಿ ನನ್ನ ಕೊನೆಯ ಉಸಿರು ಇರುವ ತನಕ ಹೋರಾಟ ನಡೆಸುತ್ತೇನೆ. ನ್ಯಾಯಕ್ಕಾಗಿ ಈ ದೇಶದ ಎಲ್ಲ ನ್ಯಾಯಾಲಯಗಳ ಮೆಟ್ಟಿಲು ಹತ್ತಲು ಸಿದ್ಧನಿದ್ದೇನೆ. ಸುಪ್ರೀಂಕೋರ್ಟ್‌ಗೆ ಹೋಗಬೇಕಾಗಿ ಬಂದರೂ ಹೋಗುತ್ತೇನೆ' ಎಂದು ಜೆಎನ್‌ಯು ವಿದ್ಯಾರ್ಥಿ ನಜೀಬ್ ಅಹಮದ್ ಅವರ ತಾಯಿ ಫಾತಿಮಾ ನಫೀಸ್ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಮಗ್ರ ತನಿಖೆಯ ಬಳಿಕವೂ ಯಾವುದೇ ಸಾಕ್ಷ್ಯ ಸಿಗದ ಕಾರಣ ನಜೀಬ್ ಅಹಮದ್ ನಾಪತ್ತೆ ಪ್ರಕರಣವನ್ನು ಮುಕ್ತಾಯಗೊಳಿಸಲು ದೆಹಲಿ ಕೋರ್ಟ್ ಸೋಮವಾರ ಸಿಬಿಐಗೆ ಅನುಮತಿ ನೀಡಿತ್ತು.

'ನನ್ನ ಹೋರಾಟವು ನನ್ನ ಮಗನಿಗಾಗಿ ಮಾತ್ರವಲ್ಲ. ತಮ್ಮ ಮಕ್ಕಳಿಗಾಗಿ, ನ್ಯಾಯಕ್ಕಾಗಿ ಹೋರಾಡುತ್ತಿರುವ ಪ್ರತಿ ತಾಯಿಯ ಪರವಾಗಿ ನಾನು ಹೋರಾಡುತ್ತಿದ್ದೇನೆ' ಎಂದು ಅವರು ಹೇಳಿದ್ದಾರೆ.

ಕಸ್ಟಡಿ ಸಾವು ತನಿಖೆಗೆ ಹೈಕೋರ್ಟ್ ಆದೇಶ

ಚೆನ್ನೈ: ಶಿವಗಂಗಾ ಜಿಲ್ಲೆಯಲ್ಲಿ ದೇವಾಲಯದ ಕಾವಲುಗಾರನ ಮೇಲೆ 'ವಿಶೇಷ ತಂಡ'ದ ಆರು ಪೊಲೀಸರ ಗುಂಪು ನಡೆಸಿದ ಚಿತ್ರಹಿಂಸೆ ಮತ್ತು ನಂತರದ ಸಾವಿನ ಪ್ರಕರಣವನ್ನು ತಪ್ಪಾಗಿ ನಿರ್ವಹಿಸಿದ್ದಕ್ಕಾಗಿ ತಮಿಳುನಾಡು ಸರ್ಕಾರವನ್ನು ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಮಂಗಳವಾರ ತೀವ್ರವಾಗಿ ಟೀಕಿಸಿದ್ದು, ಪ್ರಕರಣದ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಚಾವಿಸನಿನಿ: ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರ ಕಛೇರಿ : ಪಾಂಡವಪುರ ವಿಭಾಗ
ದೂರವಾಣಿ ಸಂಖ್ಯೆ : 080236 – 255390, 255195 & 256458
ಇ–ಮೇಲ್ : eceppura@cescmysore.org

Chamundeshwari Electricity Supply Corporation Limited
(A Government of Karnataka Undertaking)
CESC, Executive Engineer (ELECL)
PANDAVAPURA DIVISION
Website: www.cescmysore.org
Company Identity Number(CIN): U40109KA2004SGC035177

ಸಂಖ್ಯೆ: ಕಾನಿಇಂ(ವಿ)/ಪಾಂ.ಪುರ/ಲೆಅ/ಸಲೆಅ/ಹಿಸ(ಸಿ)/2025–26/884 ದಿನಾಂಕ: 17–06–2025

"ಪ್ರಕಟಣೆ – ಅಂತಿಮ ಮರು ಕರೆ ನೋಟೀಸ್"

ವಿಷಯ : ಅನಧಿಕೃತ ಗೈರು ಹಾಜರಾತಿಯಲ್ಲಿರುವ ಶ್ರೀ ಯಲನಾಯ್ಕ ಗಿರೆಪ್ಪ ನಾಯ್ಕ, ಕಿರಿಯ ಪವರ್‌ಮ್ಯಾನ್ ರವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಬಗ್ಗೆ.

ಉಲ್ಲೇಖ : 1) ಕಾನಿಇಂ (ವಿ) ಲೆಅ/ ಪಾಂ. ಪುರ/1452–54 ದಿನಾಂಕ : 12.07.2023. 2) ಕಾನಿಇಂ (ವಿ) ಲೆಅ/ಸಲೆಅ/ ಪಾಂ. ಪುರ/886–90 ದಿನಾಂಕ : 19.06.2024. 3) ಕಾನಿಇಂ (ವಿ) ಪಾಂ. ಪುರ/ಲೆಅ/ಸಲೆಅ/ಹಿಸ(ಸಿ)/2024–25/6467–70 ದಿನಾಂಕ : 10.02.2025 4) ಕಾನಿಇಂ (ವಿ)/ಪಾಂ. ಪುರ/ಲೆಅ/ಸಲೆಅ/ಹಿಸ(ಸಿ)2025–26/551–54 ದಿನಾಂಕ : 21.05.2025.

ಶ್ರೀ ಯಲನಾಯ್ಕ ಗಿರೆಪ್ಪ ನಾಯ್ಕ, ಕಿರಿಯ ಪವರ್‌ಮ್ಯಾನ್, ಚಾವಿಸನಿನಿ, ಪಟ್ಟಣ ಶಾಖೆ, ಶ್ರೀರಂಗಪಟ್ಟಣ ಉಪ–ವಿಭಾಗ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ದಿನಾಂಕ: **07.02.2023** ರಿಂದ ಈ ದಿನದವರೆಗೆ ನಿಗಮದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ಉಲ್ಲೇಖಿತ ಪತ್ರಗಳಲ್ಲಿ ನೋಟೀಸು ಹಾಗೂ ಮರು ಕರೆ ನೋಟೀಸುಗಳನ್ನು ಜಾರಿ ಮಾಡಿದ್ದರೂ ಸಹ ಸ್ವೀಕೃತಗೊಳ್ಳದೆ ವಾಪಸ್ಸು ಬಂದಿರುತ್ತವೆ. ಅಲ್ಲದೆ ನಿಮ್ಮ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿದ್ದು, ನೀವು ವಿಚಾರಣೆಗೆ ಗೈರು ಹಾಜರಾಗಿರುತ್ತೀರಿ. ಈ ವಿಷಯದಲ್ಲಿ ಏಕ ಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು.

ನಿಗಮದ ನಿಯಮಾನುಸಾರ ನಿಮಗೆ ಅಂತಿಮವಾಗಿ ಒಂದು ಅವಕಾಶ ನೀಡಲಾಗುತ್ತಿದ್ದು, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಈ ಕೆಳ ಸಹಿದಾರರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ಇಲ್ಲವಾದಲ್ಲಿ, ನಿಮಗೆ ನಿಗಮದ ಸೇವೆಯಲ್ಲಿ ಮುಂದುವರೆಯುವ ಯಾವುದೇ ಇಚ್ಛೆ ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಿ, ಕವಿಪ್ರನಿನಿ ನೌಕರರ ಸೇವಾ (ನಡತೆ) ನಿಯಮಗಳು–1988 ರ ನಿಯಮ 33 (ಅನುಬಂಧ–ಬಿ) ರಡಿ ಉಲ್ಲೇಖಿಸಲಾದ (IV) ರಲ್ಲಿನ ನಿಯಮದನ್ವಯ ದುರ್ನಡತೆ ಎಂದು ಪರಿಗಣಿಸಿ ನಿಮ್ಮನ್ನು ನಿಗಮದ ಸೇವೆಯಿಂದ ವಜಾಗೊಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್ (ವಿ).
ಚಾವಿಸನಿನಿ. ಕಾ & ಪಾ ವಿಭಾಗ, ಪಾಂಡವಪುರ.

ವಾಸಾಸಂಇ/ಮೈಸೂರು/517/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್‌.ಟಿ.ಸಂಖ್ಯೆ: 12/2025–26 ದಿನಾಂಕ: 01.07.2025

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕೆಡಬ್ಲ್ಯೂ–1, 2 & 4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಒಂದು ಹಾಗೂ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.400.56 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.10 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 10–07–2025 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ–ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/282/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಬೆಂಗಳೂರು ಗ್ರಾಮಾಂತರ ವಿಭಾಗ, ಸಾವಕನಹಳ್ಳಿ ಗೇಟ್, ದೇವನಹಳ್ಳಿ–562110.

ಸಂಖ್ಯೆ: ಎ4/ಉಅಸಂ/ಬೆಂಗ್ರಾವಿ/ಸಿಆರ್–21/2025–26 ದಿನಾಂಕ:23.06.2025

ಪತ್ರಿಕಾ ಪ್ರಕಟಣೆ

ಈ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಸುತ್ತಮುತ್ತಲಿನ ಸಮಸ್ತ ನಾಗರಿಕರ ಗಮನಕ್ಕೆ ತರುವುದೇನೆಂದರೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಶಿಡ್ಲಘಟ್ಟದಿಂದ ಹೊಸಕೋಟೆ ಮಾರ್ಗವಾಗಿ ಆನೇಕಲ್ ಸೇರುವ ರಸ್ತೆಯ (ರಾಜ್ಯ ಹೆದ್ದಾರಿ 35) ಸರಪಳಿ 30.24 ಕಿ.ಮೀ ರಿಂದ 34.84 ಕಿ.ಮೀ ವರೆಗಿನ ರಸ್ತೆಯ ಅಗಲೀಕರಣಕ್ಕೆ ಅಡ್ಡಬರುವ ಮರಗಳನ್ನು ತೆರವಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ–ವಿಭಾಗ ಹೊಸಕೋಟೆ ಮನವಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

ಯೋಜನೆ ಹೆಸರು	ಹೊಸಕೋಟೆ ತಾಲ್ಲೂಕು, ಶಿಡ್ಲಘಟ್ಟದಿಂದ ಹೊಸಕೋಟೆ ಮಾರ್ಗವಾಗಿ ಆನೇಕಲ್ ಸೇರುವ ರಸ್ತೆಯ (ರಾಜ್ಯ ಹೆದ್ದಾರಿ 35) ಸರಪಳಿ 30.24 ಕಿ.ಮೀ ರಿಂದ 34.84 ಕಿ.ಮೀ ವರೆಗಿನ ರಸ್ತೆಯ ಅಗಲೀಕರಣ ಕಾಮಗಾರಿ.
ಏಜೆನ್ಸಿಯ ಹೆಸರು	ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ–ವಿಭಾಗ ಹೊಸಕೋಟೆ
ಮರ ತೆರವುಗೊಳಿಸುವ ಉದ್ದೇಶ	ರಸ್ತೆ ಅಗಲೀಕರಣ
ಯೋಜನಾ ಪ್ರದೇಶದಲ್ಲಿ ಅಡ್ಡ ಬರುತ್ತಿರುವ/ ತೆರವುಗೊಳಿಸ ಬೇಕಾಗಿರುವ ಮರಗಳು	56
ಆಕ್ಷೇಪಣೆ ಸಲ್ಲಿಸಲು / ಹೆಚ್ಚಿನ ಮಾಹಿತಿ ಪಡೆಯಲು (ನೇರವಾಗಿ / ಇ–ಮೇಲ್ / ಅಂಚೆ ಮುಖಾಂತರ ಈ ಕೆಳ ಸಹಿದಾರರ ಕಚೇರಿಗೆ ಸಲ್ಲಿಸಬಹುದು/ ಮಾಹಿತಿ ಪಡೆಯಬಹುದು.	ವಿಳಾಸ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ–ದೊಡ್ಡಬಳ್ಳಾಪುರ ಹೆದ್ದಾರಿ, ಸಾವಕನಹಳ್ಳಿ ಗೇಟ್, ದೇವನಹಳ್ಳಿ–562110. ಇ–ಮೇಲ್ ಐಡಿ: dcfrural@gmail.com ದೂರವಾಣಿ ಸಂಖ್ಯೆ: 080–29907088
ಆಕ್ಷೇಪಣೆಗಳನ್ನು ಸಲ್ಲಿಸಬೇಕಾದ ಅವಧಿ	ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 10 ದಿನಗಳೊಳಗಾಗಿ. ಸೂಚನೆ: ಆಕ್ಷೇಪಣೆಗಳು ಪ್ರಸ್ತಾವಿತ ಯೋಜನೆಗೆ ಮಾತ್ರ ಸಂಬಂಧಿಸಿರಬೇಕು.

ಮೇಲ್ಕಂಡ ಪ್ರದೇಶದಲ್ಲಿನ ಮರಗಳನ್ನು ತೆರವುಗೊಳಿಸುವ ಸಂಬಂಧ ಸಾರ್ವಜನಿಕರ ಆಕ್ಷೇಪಣೆ/ ಸಲಹೆಗಳಿದ್ದಲ್ಲಿ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976 ಸೆಕ್ಷನ್ 8(3) (vii) ಪ್ರಕಾರ ಸಲಹೆ–ಸೂಚನೆಗಳನ್ನು ನೀಡಲು ಆಹ್ವಾನಿಸಲಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ವಾಸಸಂಇ/ಸಿಪಿ/ಎಎಎ/1561/2025–26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ವಿಚಾರಣೆ. ಸಂಖ್ಯೆ: BESCOM/2025-26/UC/WORK_INDENT468

ಬೆವಿಕಂ ರವರು ಬೆಂಗಳೂರು ಗ್ರಾಮಾಂತರ ಕ್ಷೇತ್ರ ವಲಯ ಹೊಸಕೋಟೆ ವಿಭಾಗದ ದೇವನಹಳ್ಳಿ ಉಪ–ವಿಭಾಗ ವಿಜಯಪುರ ನಗರದಲ್ಲಿರುವ 11 ಕೆವಿ ಮೇಲ್ಮಾರ್ಗಗಳನ್ನು ಭೂಗತ ಕೇಬಲ್ (undarground cable) ಗಳಾಗಿ ಬದಲಾಯಿಸುವ ಕಾಮಗಾರಿ ನಿರ್ವಹಿಸಲು ಶೇಕಡವಾರು ಆಧಾರದ ಮೇಲೆ ಟೆಂಡರ್ ಗಳನ್ನು ಆಹ್ವಾನಿಸಿದೆ. **ಬಿಡ್ ದಾಖಲೆಗಳ ಲಭ್ಯತೆ:** 05.07.2025 ರಿಂದ. **ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ:** 07.08.2025 @ 15:00 ಗಂಟೆಗೆ. **ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:** 08.08.2025 @ 15:30 ಗಂಟೆಗೆ. **ಬಿಡ್ ಪೂರ್ವಭಾವಿ ಸಭೆ ದಿನಾಂಕ:** 23.07.2025 @ 11:00 ಗಂಟೆಗೆ. **ಸ್ಥಳ:** ಸಮ್ಮೇಳನ ಸಭಾಂಗಣ, 3ನೇ ಮಹಡಿ, ಬೆಳಕು ಭವನ, ಕಾರ್ಪೊರೇಟ್ ಕಚೇರಿ, ಬೆವಿಕಂ, ಕೆ.ಆರ್. ವೃತ್ತ, ಬೆಂಗಳೂರು–560001. ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಅಗತ್ಯ ಸಹಾಯವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) **https://kppp.karnataka.gov.in** ಮೂಲಕ ಪಡೆಯಬಹುದು. **ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ:** +91–8046010000, +91–8068948777, ಇಮೇಲ್: **support@eprochelpdesk.com**. ಆಕಾಂಕ್ಷಿ ಬಿಡ್ಡರ್‌ಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿ) ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್ಡರ್‌ಗಳು ಕೆಲಸದ ಸಮಯದಲ್ಲಿ ಕೆಪಿಪಿಯಿಂದ ಸಹಾಯ ಪಡೆಯಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು, ವಿದ್ಯುತ್, ಪ್ರಾಜೆಕ್ಟ್ಸ್, ಬೆಸ್ಕಾಂ

ಪುರಸಭಾ ಕಾರ್ಯಾಲಯ, ಸಕಲೇಶಪುರ
ದೂರವಾಣಿ ಸಂಖ್ಯೆ: 08173–244042 email: itstaff_ulb_sakleshpur@yahoo.com
Website: www.sakaleshpurtown.gov.in
ನಂ/ಮುನಿಸಿ/ಜೆ.ಇ/ಪಿಆರ್/02/2025–26 ದಿನಾಂಕ 24–06–2025

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಕಲೇಶಪುರ ಪುರಸಭೆಯಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ನಿಯಮದಂತೆ ಇ–ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಗುತ್ತಿಗೆದಾರರು http://Kppp.karnataka.gov.in ನಿಂದ ಟೆಂಡರ್ ಷರತ್ತು ಇಎಂಡಿ ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ಅನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕವನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಸಕಲೇಶಪುರ ಪುರಸಭೆಯ ತಾಂತ್ರಿಕ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕ್ರ.ಸಂ.ಇಂಡೆಂಟ್ ನಂ DMA/2025-26/SE5421/CALL-2 ಅಂದಾಜು ಮೊತ್ತ (ಲಕ್ಷಗಳಲ್ಲಿ)10.00 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 10–07–2025 ಸಂಜೆ 5.30 ಗಂಟೆಗೆ ಸೂಚನೆ:– ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://Kppp.karnataka.gov.in ಪೋರ್ಟಲ್ ನಲ್ಲಿ ನೋಡಿಕೊಳ್ಳುವುದು.

ಸಹಿ/–ಅಧ್ಯಕ್ಷರು, ಪುರಸಭೆ, ಸಕಲೇಶಪುರ
ಸಹಿ/–ಉಪಾಧ್ಯಕ್ಷರು, ಪುರಸಭೆ, ಸಕಲೇಶಪುರ
ಸಹಿ/–ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/274/ಕೆಎಸ್‌ಎಂಸಿಎ/2025–26

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು
ಸಂಖ್ಯೆ:ಆಡಳಿತ/105/2025 (ಎಫ್‌ಟಿಎಸ್‌ಸಿಗಳಿಗೆ ಮಾನವ ಸಂಪನ್ಮೂಲ)
ದಿನಾಂಕ:25.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಎಫ್‌ಟಿಎಸ್‌ಸಿ–I, ಎಫ್‌ಟಿಎಸ್‌ಸಿ–II ಮತ್ತು ಎಫ್‌ಟಿಎಸ್‌ಸಿ–III ನ್ಯಾಯಾಲಯಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇಲ್ಲಿಗೆ ಒಂದು ವರ್ಷದ ಅವಧಿಗೆ ವಿವಿಧ ಕೇಡರ್‌ಗಳ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆ ಮೂಲಕ ಪೂರೈಕೆ ಮಾಡಲು ಆಸಕ್ತಿಯುಳ್ಳ ಅರ್ಹ ಸೇವಾ ಪೂರೈಕೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **https://kppp.karnataka.gov.in/#/portal/auctions/live** ಮೂಲಕ ಪ್ರಸ್ತಾವನೆಗಳ ಕೋರಿಕೆಗಾಗಿ ಇ–ಬಿಡ್ಡಿಂಗ್ ಆಹ್ವಾನಿಸಲಾಗಿದೆ. ಮಾನವ ಸಂಪನ್ಮೂಲ ಪೂರೈಕೆ ಅವಧಿಯನ್ನು ಇನ್ನೂ ಎರಡು ವರ್ಷಗಳಿಗೆ ವಿಸ್ತರಿಸಬಹುದಾಗಿರುತ್ತದೆ. (ಒಟ್ಟು 03 ವರ್ಷಗಳು. ಪ್ರತಿ ವರ್ಷ ನವೀಕರಿಸಲಾಗುವುದು.) ವಿವರಗಳು: **ಐಟಂನ ಕೋಡ್:** ADM/105/2025/manpower/FTSC123. **ಕೇಡರ್‌ಗಳು: (1) ಟೈಪಿಸ್ಟ್‌ಗಳು: 6 ಸಂಖ್ಯೆ (2) ಅಟೆಂಡರ್: 3 ಸಂಖ್ಯೆ. ಜವಾನ: 3 ಸಂಖ್ಯೆ. ಒಟ್ಟು: 12 ಸಂಖ್ಯೆ.** ಕೆಪಿಪಿ ನೀಡಿರುವ ಟೆಂಡರ್ ಸಂಖ್ಯೆ:HCK/2025-26/SE0054 ದಿನಾಂಕ: 25.06.2025. ಟೆಂಡರ್‌ನ ಅಂದಾಜು ವೆಚ್ಚ: **ವಾರ್ಷಿಕ ರೂ.36,39,698/–.** ಇಎಂಡಿ: **ರೂ.36,400/–.** ಟೆಂಡರ್ ಪ್ರಸ್ತಾವನೆ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: **24.07.2025ರಂದು ಸಂಜೆ 5.01 ಗಂಟೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಬಿಡ್ 25.07.2025ರಂದು ಸಂಜೆ 5.02 ಗಂಟೆಗೆ.** ಆರ್ಥಿಕ ಬಿಡ್: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಬಿಡ್ ಪೂರ್ವಸಭೆ **ದಿನಾಂಕ:15.07.2025ರಂದು ಸಂಜೆ 4.30ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಕಚೇರಿ ದೂರವಾಣಿ ಸಂ:080–22939388, ಇ–ಮೇಲ್:admnbrd1@gmail.com ಸಂಪರ್ಕಿಸಿ.

ಸಹಿ/– ಮುಖ್ಯ ಆಡಳಿತಾಧಿಕಾರಿ (ಪ್ರಭಾರ),
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿ–ಸಿ.ಪಿ/1532/ಕೆಎಸ್‌ಎಂಸಿಎ/2025–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://minority.ksouportal.com / https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಪದವಿ ಶಿಕ್ಷಣದಿಂದ ವಂಚಿತರಾಗಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ದೂರ ಶಿಕ್ಷಣ ಮಾದರಿಯಲ್ಲಿ ಪದವಿ/ ಸ್ನಾತಕೋತ್ತರ ಪದವಿ/ ಡಿಪ್ಲೋಮಾ/ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಮೇಲ್ಕಂಡ ಜಾಲತಾಣಗಳ ಮೂಲಕ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ

https://minority.ksouportal.com (ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪೋರ್ಟಲ್)
https://dom.karnataka.gov.in (ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು)

ಆನ್‌ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ: **01.07.2025.**
ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **25.08.2025.**

ವಿದ್ಯಾರ್ಥಿಯು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಾಲತಾಣ (https://dom.karnataka.gov.in) ದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಡ್ಮಿಷನ್ ಲಿಂಕ್ (https://minority.ksouportal.com) ಮೂಲಕ ಅರ್ಜಿ ಸಲ್ಲಿಸಬಹುದು.
ಅಥವ
ವಿದ್ಯಾರ್ಥಿಯು ನೇರವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಡ್ಮಿಷನ್ ಲಿಂಕ್ (https://minority.ksouportal.com) ಮೂಲಕ ಅರ್ಜಿ ಸಲ್ಲಿಸಬಹುದು.
ಅಥವ
ವಿದ್ಯಾರ್ಥಿಯು ಖುದ್ದಾಗಿ ಅರ್ಜಿ ಸಲ್ಲಿಸಲು ಅಗತ್ಯ ದಾಖಲೆಗಳೊಂದಿಗೆ ನೇರವಾಗಿ ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿ, ಮೈಸೂರು ಅಥವಾ ತಮ್ಮ ಜಿಲ್ಲೆಯ ಹತ್ತಿರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಿಗೆ ಭೇಟಿ ನೀಡಬಹುದು ಅಥವ ಪ್ರಾದೇಶಿಕ ಕೇಂದ್ರ, ಹಜ್ ಕಛೇರಿ, ಬೆಂಗಳೂರನ್ನು ಸಂಪರ್ಕಿಸಬಹುದು.

ಅರ್ಹತೆಗಳು
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಎಲ್ಲಾ ಮೂಲಗಳಿಂದ ವಿದ್ಯಾರ್ಥಿಯ/ಪೋಷಕರ ಕುಟುಂಬದ ವಾರ್ಷಿಕ ಆದಾಯವು ರೂ. 8.00 ಲಕ್ಷಗಳನ್ನು ಮೀರಬಾರದು.

ಉಚಿತ ಶಿಕ್ಷಣ

ವಿಶೇಷ ಸೂಚನೆ
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯು.ಜಿ. ಸಿ. ಯ ಡೆಬ್ ಅನುಮೋದನೆಯೊಂದಿಗೆ ನಡೆಸುವ **ಸ್ನಾತಕ ಪೂರ್ವ ಡಿಪ್ಲೋಮಾ ಕಾರ್ಯಕ್ರಮಗಳು ಮತ್ತು ಸ್ನಾತಕ ಪೂರ್ವ ಸರ್ಟಿಫಿಕೇಟ್ ಕಾರ್ಯಕ್ರಮಗಳಿಗೆ** ಕರ್ನಾಟಕ ಸರ್ಕಾರದ ಪಿ.ಯು.ಸಿ ಅಥವ 10+2 ತರಗತಿಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳನ್ನು ವಿವಿಯ ನಿಯಮಾನುಸಾರ ಪ್ರವೇಶಾತಿಗೆ ಪರಿಗಣಿಸಲಾಗುವುದು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ಪದವಿ ಹಾಗೂ ಸರ್ಟಿಫಿಕೇಟ್ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದ ವಿದ್ಯಾರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು ಪದವಿ ಪೂರ್ವ ಶಿಕ್ಷಣವನ್ನು ಕಡ್ಡಾಯವಾಗಿ ಪಡೆದಿರುವ ವಿದ್ಯಾರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗುವುದು.
- ಸದರಿ ಯೋಜನೆಯ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳು, ಕರಾಮುವಿ ಸುತ್ತೋಲೆಗಳು ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯವು ಹೊರಡಿಸುವ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.
- **ಅಲ್ಪಸಂಖ್ಯಾತರ ನಿರ್ದೇಶನಾಲಯವು ಆಯಾ ಸಾಲಿನ ಪ್ರವೇಶಾತಿ ಹಾಗೂ ಪರೀಕ್ಷಾ (ವಾರ್ಷಿಕ/ಸೆಮಿಸ್ಟರ್‌ಗಳು) ಶುಲ್ಕವನ್ನು ಉಚಿತವಾಗಿ ಪಾವತಿಸಲಾಗುವುದು.**

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ **https://dom.karnataka.gov.in** ಕ್ಕೆ ಭೇಟಿ ನೀಡಬಹುದಾಗಿದೆ. **ಸಹಾಯವಾಣಿ ಸಂಖ್ಯೆಗಳು:– 9900667916/ 827779990/ 9945366062/ 9113512565/ 9611418726/ 9900509959/ 9035395137**
ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಛೇರಿ ಅಥವ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು (MIC) ಸಂಪರ್ಕಿಸಿ.

ದಿನಾಂಕ : 01.07.2025
ಸ್ಥಳ : ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/1552/25–26

OFFICE OF THE CHIEF ELECTORAL OFFICER KARNATAKA
Nirvachana Nilaya, Sheshadri Road, Bengaluru-560 001.
No. DPAR/10 RUPPs (Chuvebha) 2025 Date:27.06.2025

SHOW CAUSE NOTICE

Whereas, the registration of an Association/Body of individual citizens of India as a political party is governed by the provisions of Section 29A of the Representation of the People Act, 1951; and

Whereas, the purpose of registration of an association as a political party with the Election Commission under the aforesaid Section 29A is stated in that Section itself, i.e. to avail of the provisions of that part for the purposes of the Representation of the People Act, 1951, which means participation in elections conducted by the Commission under the said Act; and

Whereas, the below mentioned Registered **Unrecognized Political Parties** were registered as a political party under the said Section 29A, on an application made by the party under the said Section; and

Whereas, the current address of the said Political Party is not known; and Whereas, as per the records of the Commission, the said party did not set up any candidate at any of the elections held, either to the House of the People or to any State Legislative Assembly or bye-elections for the last 06 years since 2019; and

Whereas, in view of the above, it is self-evident that the said party has ceased to function as a political party for the purposes of the aforesaid Section 29A; and Whereas, in the above circumstances, the Commission, in exercise of its powers under Article 324 of the Constitution of India and Section 29A of the Representation of the People Act, 1951, proposes to delist the below mentioned **Registered Unrecognized Political Parties** from the list of registered parties and

Whereas, before taking action as proposed above, the Commission has decided to provide to the said party an opportunity of making a representation/showing cause, if any, as to why the proposed action may not be taken;

Now, therefore, the below mentioned Registered Unrecognized Political Parties are called upon to make a written representation to the undersigned in this behalf if it so desires. The representation, if any, should be duly accompanied by an affidavit from the President or General Secretary of the party, and all supporting documents on which the party proposes to rely, and should reach the undersigned latest by **18.07.2025.**

It is also stated that the date of hearing for the party has been scheduled on **18.07.2025.** Such hearing should mandatorily be attended by the President / General Secretary/ Head of the Party. If no reply is received from the party by the aforesaid date, it will be presumed that the party has nothing to say in the matter and the Commission will pass appropriate orders without any further reference to the party.

By Order
Sd/-
Manoj Kumar Meena, IAS
Chief Electoral Officer, Karnataka

To
The President/ General Secretary,
1. Ambedkar Janatha Party, No. 57/1, Savimana Enterprises, Badrappa Layout, Kodigehalli, Nagashettyhalli, Main Road, Bangalore-560092, Karnataka
2. Bharatiya Dr. B.R. Ambedkar Janata Party, No.18, 12th Cross, MTS Layout, Kengeri Upanagara, Bangalore- 560060, Karnataka
3. Bharatiya Praja Paksha, No.374/A, I-Floor, I-Block, I-Cross, Ravindranath Tagoor Nagar (R.T.Nagar), Bangalore-560032, Karnataka
4. Jana Swarajya Party, H.O. 83/A, 3rd Ward, Kalamma Bazar, Sandur-583119, Karnataka
5. Kalyana Kranthi Party, #57, 2nd Floor, 3rd Main Adithyanagar, 8th Phase, JP Nagar, Bengaluru-560062, Karnataka
6. Karnataka Praja Vikas Party, No. 15, Sampangiramaiah Layout, Sidedahalli, Yashwantpur Hobli, Nagasandra Post, Bengaluru North Taluk, Bengaluru District-560073, Karnataka
7. Karnataka Swarajya Party, No. 2082, Chidambar Krupa, Sai Nagar, Raibag, Dist-Belgaum-591317, Karnataka
8. Mahila Pradhana Paksha, 1261, 16th Main, 20th Cross, A Block, Sahakara Nagara, Bangalore-560092, Karnataka.
9. Namma Congress, No.98, Varthur Main Road, Bangalore East, Bangalore 560087, Karnataka
10. Prajaa Raita Raajya Paksha, H. No. 937, Manjunatha Nagar, Kengeri Road, Tavarakere, Bengaluru South-562130, Karnataka
11. Rakshaka Sena, No 604, Vayunanda Layout, Hebbal, Kempapura, Bengaluru-560024, Karnataka
12. Samajwadi Janata Party (Karnataka), Room No.21, 2nd Floor, Hameed Shah Complex No.2, Cubbonpet, Main Road, Behind Ulsoor Gate Police Station, Bangalore-560002, Karnataka
13. Samanya Janatha Party (Loktantrik), No. 17, House No. 29, Basavana Durga (Koramma Camp), Gangavathi, Koppal District 583227, Karnataka
14. Vichara Jagruthi Congress Paksha, Door No. 275 of Hebbalu Village and Post, Davangere Taluk & District, Karnataka

DIPR/CP/JA/1535/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೊಮ್ಮನಹಳ್ಳಿ ಯೋಜನೆ ವಿಭಾಗ, ಹೆಚ್.ಎಸ್.ಆರ್. ಬಡಾವಣೆ, ಬೆಂ.ಅ.ಪ್ರಾ. ಸಂಕೀರ್ಣ, ಬೊಮ್ಮನಹಳ್ಳಿ, ಬೆಂಗಳೂರು–560 102.
ಸಂಖ್ಯೆ:ಬೃಬೆಂಮಪಾ/ಕಾಪಾಅ/ಬೊಯೋವಿ/ಟೆಂಡರ್–08/2025–26 ದಿನಾಂಕ:30.06.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಏಕ ಲಕೋಟೆ ಮತ್ತು ದ್ವಿಲಕೋಟೆ ಟೆಂಡರ್)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಹೆಚ್‌ಎಸ್‌ಆರ್ ಬಡಾವಣೆ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು–102 ಇವರು, ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1.	ಬೊಮ್ಮನಹಳ್ಳಿ ಕ್ಷೇತ್ರದ ವಾರ್ಡ್ ಸಂಖ್ಯೆ 175 ನ್ಯಾನಪ್ಪನಹಳ್ಳಿ ಬಂಡೆಯಲ್ಲಿ ಆಟದ ಮೈದಾನ ಸುಧಾರಣೆ ಮಾಡುವುದು. **ಅಂದಾಜು ಮೊತ್ತ ₹.325.00 ಲಕ್ಷಗಳು ಇಎಂಡಿ: ₹.4,87,000/–**
2.	ಬೊಮ್ಮನಹಳ್ಳಿ ಕ್ಷೇತ್ರದ ಬಿಟಿಎಂ ಬಡಾವಣೆ 4ನೇ ಹಂತದಲ್ಲಿ ಆಟದ ಮೈದಾನ ಸುಧಾರಣೆ ಮಾಡುವುದು. **ಅಂದಾಜು ಮೊತ್ತ ₹.305.00 ಲಕ್ಷಗಳು ಇಎಂಡಿ: ₹.4,57,000/–**
3.	ಬೊಮ್ಮನಹಳ್ಳಿ ಕ್ಷೇತ್ರದ ವಾರ್ಡ್ ಸಂಖ್ಯೆ 175 ಸ್ವಚ್ಛ ಭಾರತ ಆಟದ ಮೈದಾನ ಸುಧಾರಣೆ ಮಾಡುವುದು. **ಅಂದಾಜು ಮೊತ್ತ ₹.270.00 ಲಕ್ಷಗಳು ಇಎಂಡಿ: ₹.4,05,000/–**
4.	ಬೊಮ್ಮನಹಳ್ಳಿ ಕ್ಷೇತ್ರ ಬೃ.ಬೆಂ.ಮ.ಪಾಲಿಕೆ, ಬೊಮ್ಮನಹಳ್ಳಿ ವಲಯದಲ್ಲಿ ಈಜುಕೊಳ ನಿರ್ಮಾಣದ ಬಾಕಿ ಉಳಿಕೆ ಕಾಮಗಾರಿಗಳನ್ನು ಮಾಡುವುದು. **ಅಂದಾಜು ಮೊತ್ತ ₹.500.00 ಲಕ್ಷಗಳು ಇಎಂಡಿ: ₹.7,50,000/–**
5.	ಬೊಮ್ಮನಹಳ್ಳಿ ವಿಭಾಗದಲ್ಲಿ ಚಿತಾಗಾರಗಳು ಮತ್ತು ಸ್ಮಶಾನವನ್ನು ದುರಸ್ತಿ ಮತ್ತು ನಿರ್ವಹಣೆ ಮಾಡುವುದು. (ಪರಿಶಿಷ್ಟ ಜಾತಿ) **ಅಂದಾಜು ಮೊತ್ತ ₹.70.00 ಲಕ್ಷಗಳು ಇಎಂಡಿ: ₹.70,000/–**
6.	ವಾರ್ಡ್ ಸಂಖ್ಯೆ 174 ಹೆಚ್‌ಎಸ್‌ಆರ್ ಅಭಿವೃದ್ಧಿ ಕಾಮಗಾರಿಗಳಡಿಯಲ್ಲಿ ಸರ್ಕಾರಿ ಪ್ರೌಢಶಾಲೆ (ಪರಿಶಿಷ್ಟ ಜಾತಿ) **ಅಂದಾಜು ಮೊತ್ತ ₹.10.00 ಲಕ್ಷಗಳು ಇಎಂಡಿ: ₹.25,000/–**

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: **10.07.2025**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸುವುದು. (2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **10.07.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **14.07.2025**ರ ಬೆಳಿಗ್ಗೆ **11:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ **18.07.2025**ರ ಸಂಜೆ **4:00** ಗಂಟೆಗೆ ಅಥವಾ ಮುಂಚಿತವಾಗಿ. (5) ಟೆಂಡರನ್ನು ದಿನಾಂಕ **19.07.2025**ರ ಸಂಜೆ **4:30** ಗಂಟೆಯಿಂದ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೊಮ್ಮನಹಳ್ಳಿ ಯೋಜನೆ ವಿಭಾಗ

ವಿನಿಮಯ ದರ | ಪೌಂಡ್ 117.80 | ಯುರೊ 101.04

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,517
ಇಂದಿನ ಅಂತ್ಯ:	25,541
ದಿನದ ಕನಿಷ್ಠ:	25,501
	24

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹620
	12 ಕ್ಕೆ	₹80
ಮೈಸೂರು:	100 ಕ್ಕೆ	₹625

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹312-538
ದ್ವಿತಳಿ (ಬಿ.ವಿ)	₹385-702

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (--)
ಸೋಯಾ (ರಿಫೈನ್ಡ್)	₹1190 (--)
ಸೂರ್ಯಕಾಂತಿ (ರಿಫೈನ್ಡ್)	₹1340 (--)
ಪಾಮೋಲಿನ್	₹1,160 (--)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ಮುಂಬೈ ಧಾರಣೆ (ಶೇಂಗಾ)

01-07-2025	
ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	7800-7900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (--)
ಒಂದು ವಾರದ ಡೆಲಿವರಿ	1385 (--)
ಪಾಮ್ ವಾರದ ಡೆಲಿವರಿ	1158 (--)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (--)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,000 (--)
ಬೆಳ್ಳಿ ಕೆ.ಜಿಗೆ	1,07,000 (--)

ಹಿಂದಿನ ದಿನದ ಧಾರಣೆ ಲಭ್ಯವಿಲ್ಲ

₹1.84 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಜೂನ್ ತಿಂಗಳ ವರಮಾನ ಸಂಗ್ರಹ ಮೇ ತಿಂಗಳಿಗಿಂತ ಕಡಿಮೆ

ನವದೆಹಲಿ (ಪಿಟಿಐ): ಜೂನ್ ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ₹1.84 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಇದು ಹಿಂದಿನ ವರ್ಷದ ಜೂನ್ ತಿಂಗಳಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಶೇಕಡ 6.2ರಷ್ಟು ಹೆಚ್ಚು.

ಹೀಗಿದ್ದರೂ, ಏಪ್ರಿಲ್ ಮತ್ತು ಮೇ ತಿಂಗಳ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ಜೂನ್ ತಿಂಗಳ ವರಮಾನ ಸಂಗ್ರಹ ಕಡಿಮೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಜಿಎಸ್‌ಟಿ ಮೂಲಕ ಕ್ರಮವಾಗಿ ₹2.37 ಲಕ್ಷ ಕೋಟಿ ಹಾಗೂ ₹2.01 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು.

ಜೂನ್ ತಿಂಗಳಲ್ಲಿ ದೇಶಿ ವಹಿವಾಟುಗಳ ಮೂಲಕ ಸಂಗ್ರಹವಾದ ಜಿಎಸ್‌ಟಿ ವರಮಾನ ₹1.38 ಲಕ್ಷ ಕೋಟಿ ಆಗಿದೆ. ಆಮದು ವಹಿವಾಟು ಮೂಲಕ ಸಂಗ್ರಹವಾದ ಜಿಎಸ್‌ಟಿ ವರಮಾನವು ₹45,690 ಕೋಟಿ.

ಜೂನ್‌ನಲ್ಲಿ ಜಿಎಸ್‌ಟಿ ಮರುಪಾವತಿಗಳ ಮೊತ್ತದಲ್ಲಿ ಶೇ 28.4ರಷ್ಟು ಹೆಚ್ಚಳ ಆಗಿದ್ದು, ₹25,491 ಕೋಟಿಗೆ ತಲುಪಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.59 ಲಕ್ಷ ಕೋಟಿ ಆಗಿದೆ.

ದೊಡ್ಡ ರಾಜ್ಯಗಳಾದ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕ, ರಾಜಸ್ಥಾನ ಮತ್ತು ತಮಿಳುನಾಡಿನಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಶೇ 4ರಿಂದ ಶೇ 8ರವರೆಗೆ ಏರಿಕೆ ಆಗಿದೆ. ಇದೇ ಅವಧಿಯಲ್ಲಿ ಉತ್ತರ ಪ್ರದೇಶ, ಪಂಜಾಬ್ ಮತ್ತು ಗುಜರಾತ್‌ನಲ್ಲಿ ವರಮಾನ ಸಂಗ್ರಹ ಪ್ರಮಾಣದಲ್ಲಿ ಶೇ 1ರಿಂದ ಶೇ 4ರವರೆಗೆ ಇಳಿಕೆ ಆಗಿದೆ.

ಸತತ ಎರಡು ತಿಂಗಳುಗಳಲ್ಲಿ ಜಿಎಸ್‌ಟಿ ವರಮಾನ ಸಂಗ್ರಹವು ₹2 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಇತ್ತು. ಈಗ ಅದು ಜೂನ್ ತಿಂಗಳಲ್ಲಿ ₹1.84 ಲಕ್ಷ ಕೋಟಿ ಆಗಿರುವುದು ತುಸು ಕಡಿಮೆ ಅನಿಸುತ್ತದೆ ಎಂದು ತೆರಿಗೆ ತಜ್ಞ ವಿವೇಕ್ ಜಲನ್ ಹೇಳಿದ್ದಾರೆ.

‘ವಹಿವಾಟು ಸುಲಲಿತಗೊಳಿಸಲು ಗಮನ’

ನವದೆಹಲಿ (ಪಿಟಿಐ): ಜಿಎಸ್‌ಟಿ ವ್ಯವಸ್ಥೆಯ ಗಮನವು ಇನ್ನು ಮುಂದೆ, ಉದ್ಯಮ ವಹಿವಾಟು ಸುಲಲಿತಗೊಳಿಸುವತ್ತ ಹಾಗೂ ತೆರಿಗೆ ಪಾವತಿಯನ್ನು ಬಲಪಡಿಸುವತ್ತ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದು ಎಂಟು ವರ್ಷಗಳು ತುಂಬಿರುವ ಹೊತ್ತಿನಲ್ಲಿ ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದೆ. ಆರ್ಥಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಕೂಡ ಮುಂದಿನ ದಿನಗಳಲ್ಲಿ ಆದ್ಯತೆ ಪಡೆಯಲಿದೆ ಎಂದು ಅದು ಹೇಳಿದೆ. 2017ರ ಜುಲೈ 1ರಿಂದ ಜಿಎಸ್‌ಟಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಕ್ವಾಲಿಟಿ ಇಡ್ಲಿ ಸಾಂಬಾರ್ ಪುಡಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕರಿತ ಆಹಾರ ಕ್ಷೇತ್ರದ ಪ್ರಮುಖ ಕಂಪನಿಗಳ ಪೈಕಿ ಒಂದಾಗಿರುವ ಕ್ವಾಲಿಟಿ ಫುಡ್ಸ್, ಇಡ್ಲಿ ಮತ್ತು ಅನ್ನಕ್ಕೆ ಪ್ರತ್ಯೇಕವಾದ ಸಾಂಬಾರ್ ಪುಡಿ ಬಿಡುಗಡೆ ಮಾಡಿದೆ.

‘ಇಡ್ಲಿ ಜೊತೆ ಬಳಸುವ ಸಾಂಬಾರ್ ಸಿದ್ಧಪಡಿಸಲು ಪ್ರತ್ಯೇಕ ಪುಡಿಯು ಮಾರುಕಟ್ಟೆಯಲ್ಲಿ ಲಭ್ಯವಿರಲಿಲ್ಲ. ಆದರೆ, ಇಡ್ಲಿಗೆ ಪ್ರತ್ಯೇಕ ಸಾಂಬಾರ್ ಬೇಕು ಎಂಬುದನ್ನು ಗ್ರಾಹಕ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿತ್ತು. ಹೀಗಾಗಿ, ಇದೇ ಮೊದಲ ಬಾರಿಗೆ ಎರಡು ವಿಭಿನ್ನ ಸಾಂಬಾರ್ ಮಸಾಲೆಗಳನ್ನು ಸಿದ್ಧಪಡಿಸಿ, ಬಿಡುಗಡೆ ಮಾಡಲಾಗಿದೆ’ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

‘ಅಡುಗೆ ಮಾಂತ್ರಿಕ ಎಂದೇ ಖ್ಯಾತರಾಗಿರುವ ಸಿಹಿಕಹಿ ಚಂದ್ರು ಅವರು ನಮ್ಮ ರಾಯಭಾರಿ ಆಗಿದ್ದಾರೆ’ ಎಂದು ಕ್ವಾಲಿಟಿ ಫುಡ್ಸ್ ಹೇಳಿದೆ.

ಅಡಿಗಾಸ್‌ನಿಂದ ಮಾನಸ ಸರೋವರ ಯಾತ್ರೆ

ಬೆಂಗಳೂರು: ಕೈಲಾಸ ಪರ್ವತ, ಮಾನಸ ಸರೋವರ ಯಾತ್ರೆಯು ಪುನಾರಂಭ ಆಗಿದ್ದು, ಅಡಿಗಾಸ್ ಯಾತ್ರಾ ಕಂಪನಿಯು ಆಗಸ್ಟ್ 11, 21 ಹಾಗೂ 31ರಂದು ಈ ಯಾತ್ರೆಗೆ ಗುಂಪುಗಳನ್ನು ಕರೆದೊಯ್ಯಲಿದೆ. ಇದಕ್ಕೆ ಬುಕಿಂಗ್ ಶುರುವಾಗಿದೆ ಎಂದು ಕಂಪನಿ ತಿಳಿಸಿದೆ.

13 ವರ್ಷ ಮೇಲ್ಪಟ್ಟ, 70 ವರ್ಷಕ್ಕಿಂತ ಕಡಿಮೆ ವಯಸ್ಸಾದ, ಆರು ತಿಂಗಳ ವಾಯಿದೆಯ ಪಾಸ್‌ಪೋರ್ಟ್ ಹೊಂದಿರುವ ಭಾರತೀಯ ಪ್ರಜೆಗಳು ಈ ಯಾತ್ರೆಯಲ್ಲಿ ಭಾಗಿಯಾಗಬಹುದು.

70 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ವಿಮಾನದ ಮೂಲಕ ಕೈಲಾಸ ಪರ್ವತ ಹಾಗೂ ಮಾನಸ ಸರೋವರ ತೋರಿಸುವ ವ್ಯವಸ್ಥೆಯೂ ಇದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 94494 78944, 70222 59008 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು. ಅಥವಾ www.adigasyatra.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಮನೆ ಬೆಲೆ ಶೇ 6ರಷ್ಟು ಏರಿಕೆಯಾಗುವ ನಿರೀಕ್ಷೆ

ನವದೆಹಲಿ (ಪಿಟಿಐ): ಮಧ್ಯಮಾವಧಿಯಲ್ಲಿ ಮನೆಗಳ ಬೆಲೆಯು ಸರಾಸರಿ ಶೇಕಡ 4ರಿಂದ ಶೇ 6ರವರೆಗೆ ಹೆಚ್ಚಳ ಕಾಣುವ ನಿರೀಕ್ಷೆ ಇದೆ ಎಂದು ಕ್ರಿಸಿಲ್ ರೇಟಿಂಗ್ಸ್ ಹೇಳಿದೆ.

ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಮನೆಗಳ ಬೆಲೆಯು ಎರಡು ಅಂಕಿಗಳ ಪ್ರಮಾಣದಲ್ಲಿ ಬೆಳವಣಿಗೆ ಕಂಡಿತ್ತು.

‘ಮನೆಗಳನ್ನು ಮಾರಾಟ ಮಾಡುವ ರಿಯಲ್ ಎಸ್ಟೇಟ್ ಡೆವಲಪರ್‌ಗಳು ಈ ಆರ್ಥಿಕ ವರ್ಷದಲ್ಲಿ ಹಾಗೂ ಮುಂದಿನ ಆರ್ಥಿಕ ವರ್ಷದಲ್ಲಿ ಮಾರಾಟ ಪ್ರಮಾಣದಲ್ಲಿ ಸ್ಥಿರವಾದ ಏರಿಕೆಯನ್ನು ಕಾಣಲಿದ್ದಾರೆ’ ಎಂದು ಕ್ರಿಸಿಲ್ ಹೇಳಿದೆ.

ಆದರೆ ಬೇಡಿಕೆಗಿಂತಲೂ ಪೂರೈಕೆಯು ಹೆಚ್ಚಿನ ಪ್ರಮಾಣದಲ್ಲಿ ಇರುವ ನಿರೀಕ್ಷೆ ಇದೆ. ಹೀಗಾಗಿ, ರಿಯಲ್ ಎಸ್ಟೇಟ್ ಡೆವಲಪರ್‌ಗಳ ಬಳಿ ಮಾರಾಟವಾಗದೆ ಉಳಿದಿರುವ ಮನೆಗಳ ಸಂಖ್ಯೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮತ್ತು ಮುಂದಿನ ಆರ್ಥಿಕ ವರ್ಷದಲ್ಲಿ ಹೆಚ್ಚಳ ಕಾಣುವ ಸಾಧ್ಯತೆ ಇದೆ ಎಂದು ಅದು ಹೇಳಿದೆ.

ಕ್ರಿಸಿಲ್ ಸಂಸ್ಥೆಯು 75 ರಿಯಲ್ ಎಸ್ಟೇಟ್ ಕಂಪನಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಈ ಅಂದಾಜು ಮಾಡಿದೆ.

ಅಡಿಕೆ ಧಾರಣೆ

ಸಾಗರ			
ಬಿಳೆಗೋಟು	19700-24270		
ಚಾಲಿ	32699-36311		
ಕೋಕ	9000-17999		
ಕೆಂಪುಗೋಟು	22989-25699		
ರಾಶಿ	36999-52699		
ಸಿಪ್ಪೆಗೋಟು	18,599-18599		
ಶಿವಮೊಗ್ಗ			
ಬೆಟ್ಟೆ	48800-60,672		
ಗೊರಬಲು	17099-30669		
ರಾಶಿ	46199-56809		
ಸರಕು	50340-99240		
ಸಿದ್ದಾಪುರ			
ಬಿಳೆಗೋಟು	23599-30279		
ಚಾಲಿ	34359-41599		
ಕೋಕ	16299-22299		
ಕೆಂಪುಗೋಟು	20019-22899		
ರಾಶಿ	39099-45298		
ತಟ್ಟಿಬೆಟ್ಟೆ	29099-29419		
ಶಿರಸಿ			
ಬೆಟ್ಟೆ	28221-37099		
ಬಿಳೆಗೋಟು	22869-33098		
ಚಾಲಿ	36199-42901		
ಕೆಂಪುಗೋಟು	17578-22721		
ರಾಶಿ	41909-47109		
ಯಲ್ಲಾಪುರ			
ಬಿಳೆಗೋಟು	14899-32599		
ಚಾಲಿ	32699-42599		
ಕೋಕ	7109-23498		
ಕೆಂಪುಗೋಟು	18016-28598		
ರಾಶಿ	44290-54579		
ತಟ್ಟಿಬೆಟ್ಟೆ	30969-38798		

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೀರೇಶ್, ಊರು ತಿಳಿಸಿಲ್ಲ

• ಪ್ರಶ್ನೆ: ನಾನು ಕಳೆದ ಕೆಲವು ವರ್ಷಗಳಿಂದ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿದ್ದೇನೆ, ಇತ್ತೀಚೆಗೆ ಮೂತ್ರಪಿಂಡ ಕಸಿ ಮಾಡಿಸಿಕೊಂಡಿದ್ದೇನೆ. ನಾನು ಐ.ಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ನನಗೆ ಕಾರ್ಪೊರೇಟ್ ವಿಮೆ ಇದೆ. ಆದ್ದರಿಂದ ಕಸಿ ವೆಚ್ಚದಲ್ಲಿ ಹೆಚ್ಚಿನ ಪಾಲನ್ನು ವಿಮೆಯಿಂದ ಭರಿಸಲಾಗಿದೆ.

ನನಗಿರುವಂತಹ ದೀರ್ಘಕಾಲದ ಕಾಯಿಲೆ ಇರುವ ಇತರ ರೋಗಿಗಳು ರಿಟೇಲ್ ವಿಮೆ ಖರೀದಿಸಬಹುದೇ? ಹಾಗಿದ್ದಲ್ಲಿ ಯಾವುದು ಸೂಕ್ತ? ಈ ಬಗ್ಗೆ ನಾನು ಆನ್‌ಲೈನ್‌ನಲ್ಲಿ ಪರಿಶೀಲಿಸಿದಾಗ ಸ್ಪಷ್ಟ ಮಾಹಿತಿ ಸಿಗಲಿಲ್ಲ. ಯಾವುದೇ ವಿಮಾ ಕಂಪನಿಯು ಈ ರೀತಿಯ ಕಾಯಿಲೆಗಳಿಗೆ ವಿಮೆಯನ್ನು ಒದಗಿಸುತ್ತಿದ್ದರೆ ಪ್ರಸ್ತುತ ಅಸ್ತಿತ್ವದಲ್ಲಿರುವ ಕಾಯಿಲೆಗಳಿಗೆ ಕವರ್ ನೀಡಲಾಗುತ್ತದೆಯೇ? ಇಲ್ಲದಿದ್ದರೆ ಅದಕ್ಕಾಗಿ ಕಾಯುವ ಅವಧಿ ಎಷ್ಟು?

ಉತ್ತರ: ವಿಮಾ ಸೌಲಭ್ಯ ಅತ್ಯಂತ ಸೂಕ್ಷ್ಮ ವಿಚಾರ. ವಿಮಾ ಕಂಪನಿಗಳು ಸೇವೆಯ ಜೊತೆ ವ್ಯವಹಾರವನ್ನೂ ಮಾಡಬೇಕು. ಆದರೆ, ವಿಮೆ ಪಡೆಯುವ ವ್ಯಕ್ತಿಗೆ ತಾನು ಅಥವಾ ತನ್ನ ಕುಟುಂಬದ ಮಂದಿ ಕಾಯಿಲೆ ಬಿದ್ದರೆ, ವಿಮೆ ಒದಗಿಸುವ ಕಂಪನಿ ಕನಿಷ್ಠ ಆರ್ಥಿಕ ನೆರವು ಕೊಡಮಾಡಬಹುದೇ ಎನ್ನುವ ವಿಚಾರ ಹಾಗೂ ಭರವಸೆಯಷ್ಟೇ ಮುಖ್ಯ.

ನೀವು ಈಗಾಗಲೇ ಮೂತ್ರಪಿಂಡ ಕಸಿ ಚಿಕಿತ್ಸೆಗೆ ಒಳಗಾಗಿದ್ದೀರಿ ಹಾಗೂ ಪ್ರಸ್ತುತ ನಿಮ್ಮ ಕಂಪನಿಯವರು ಕೊಡಮಾಡುವ ವಿಮಾ ಸೌಲಭ್ಯದೊಡನೆ ಈ ಹಂತದ ನಂತರ, ನಿಮ್ಮ ಕಡೆಯಿಂದ ಕಂಪನಿಯ ಮೂಲಕ ಹೆಚ್ಚುವರಿ ಮೊತ್ತ ಪಾವತಿಸಿ ಅಗತ್ಯವಿರುವ ವಿಮಾ ಸೌಲಭ್ಯ ಪಡೆಯುವ ಅವಕಾಶ ಇದೆಯೇ ಎಂಬುದನ್ನು ನೋಡಿ. ಒಂದುವೇಳೆ ಈ ಸೌಲಭ್ಯ ಇದ್ದರೆ ಅದನ್ನು ಉಪಯೋಗಿಸಿಕೊಳ್ಳಿ. ನಿಮ್ಮ ಕಂಪನಿ ತೊರೆದ ನಂತರವೂ ಅದನ್ನು ವೈಯಕ್ತಿಕವಾಗಿ ಮುಂದುವರಿಸುವ ಅವಕಾಶ ಇದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಿ. ಇದಕ್ಕಾಗಿ, ಪ್ರಸ್ತುತ ನಿಮ್ಮ ವಿಮಾ ಕಂಪನಿ ಅಥವಾ ನೀವು ಉದ್ಯೋಗ ಮಾಡುತ್ತಿರುವ ಕಂಪನಿಯ ಸಂಬಂಧಿತ ವಿಭಾಗವನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಿ.

ಒಂದು ವೇಳೆ ಈ ಅವಕಾಶ ಇಲ್ಲದಿದ್ದಲ್ಲಿ, ನೀವು ಪ್ರತ್ಯೇಕವಾಗಿ ವಿಮಾ ಪಾಲಿಸಿ ಖರೀದಿಸುವುದು ಉತ್ತಮ. ಪ್ರತಿಯೊಂದು ಕಾಯಿಲೆಯ ಬಗ್ಗೆ ನೀವು ವಿಮೆ ಖರೀದಿಸುವ ಕಂಪನಿಯೊಡನೆ ಚರ್ಚಿಸಿ ಖಚಿತಪಡಿಸಿಕೊಳ್ಳಿ. ಇದಕ್ಕಾಗಿ, ನಿಮ್ಮ ಪ್ರಸ್ತುತ ಆರೋಗ್ಯ ಸ್ಥಿತಿಯನ್ನು ಮೊದಲೇ ತಿಳಿಸಿ. ಸಾಮಾನ್ಯ ಮಾಹಿತಿ ಆಧಾರದಲ್ಲಿ ಇದನ್ನು ಹೇಳುವುದು ಕಷ್ಟ. ನಿಮಗಿರುವ ಕಾಯಿಲೆಯನ್ನು ಸ್ಪಷ್ಟವಾಗಿ ತಿಳಿಸಿ. ಇದರಿಂದ ಭವಿಷ್ಯದಲ್ಲಿ ಕ್ಲೇಮ್ ನಿರಾಕರಣೆಯ ತೊಂದರೆ ತಪ್ಪಬಹುದು.

ಯಾವುದೇ ಪಾಲಿಸಿಯಲ್ಲಿ ಪ್ರಾಥಮಿಕ ಕಾಯುವಿಕೆ ಸಮಯ ಹಾಗೂ ದೀರ್ಘಾವಧಿ (2-4 ವರ್ಷ) ಕಾಯುವಿಕೆ ಸಮಯ ಎರಡೂ ಆಯಾ ಕಾಯಿಲೆ ಹಾಗೂ ನಿರ್ದಿಷ್ಟ ವಿಮಾ ಕಂಪನಿಗೆ ಸಂಬಂಧಿಸಿ ವ್ಯತ್ಯಾಸ ಆಗಬಹುದು. ವಿಮಾ ಪಾಲಿಸಿ ತೆಗೆದುಕೊಳ್ಳುವ ಮೊದಲು ಐಆರ್‌ಡಿಎ ಅನುಮೋದಿತ ಕಂಪನಿಗಳನ್ನು ಮಾತ್ರ ಸಂಪರ್ಕಿಸಿ ಹಾಗೂ ಪರಿಚಿತ ವಿಮಾ ಸಲಹೆಗಾರರಿಂದ ಮಾಹಿತಿ ಪಡೆದುಕೊಳ್ಳಿ.

ವ್ಯಾಸರಾಜ್, ಮೈಸೂರು

• ಪ್ರಶ್ನೆ: ನಾನು ಕಳೆದ ಮೇ ತಿಂಗಳಲ್ಲಿ ಮೈಸೂರಿನಲ್ಲಿ ಇರುವ ನನ್ನ ಮನೆಯನ್ನು ಸುಮಾರು ಎರಡು ಕೋಟಿ ರೂಪಾಯಿ ಮೌಲ್ಯಕ್ಕೆ ಮಾರಾಟ ಮಾಡಿದ್ದೇನೆ. ಈಗ ಈ ಹಣ ನನ್ನ ಉಳಿತಾಯ ಖಾತೆಯಲ್ಲಿದೆ. ನಾನು ಈ ಮೊತ್ತವನ್ನು ಕಿರು ಹಣಕಾಸು ಬ್ಯಾಂಕುಗಳಲ್ಲಿ ಹೂಡಿಕೆ ಮಾಡಲು ಅಂದಾಜಿಸಿದ್ದೇನೆ ಮತ್ತು ನಾನು ಕೆಲಸ ಮಾಡುತ್ತಿರುವ ಬೆಂಗಳೂರು ನಗರದಲ್ಲಿ ಒಂದು ನಿವೇಶನ ಅಥವಾ ಮನೆ ಖರೀದಿಸಬೇಕೆಂದಿದ್ದೇನೆ. ಬಂಡವಾಳ ತೆರಿಗೆ ವಿನಾಯಿತಿಯ ಪ್ರಯೋಜನ ಪಡೆಯಲು ನಾನು ‘ಕ್ಯಾಪಿಟಲ್ ಗೇನ್ಸ್’ ಖಾತೆಯಲ್ಲಿ ಹೂಡಿಕೆ ಮಾಡಬೇಕೇ? ಈ ವಿಷಯದಲ್ಲಿ ನಾನು ಹೇಗೆ ಮುಂದುವರಿಯಬೇಕು?

ಉತ್ತರ: ನೀವು ಮನೆ ಮಾರಾಟ ಮಾಡಿ ಗಳಿಸಿರುವ ಸಂಪೂರ್ಣ ಮೊತ್ತ ನಿಮ್ಮ ಕೈಸೇರಿದ್ದರೂ, ಅದು ತೆರಿಗೆಗೊಳಪಡುವ ಆದಾಯವಲ್ಲ. ನೀವು ಮಾರಾಟ ಮಾಡಿರುವುದು ನಿಮ್ಮ ವಾಸದ ಮನೆಯನ್ನು. ಹಾಗಾಗಿ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54ರ ಅಡಿ ತೆರಿಗೆ ಪ್ರಯೋಜನಗಳು ಲಭ್ಯ ಇವೆ. ಇದಕ್ಕೂ ಮೊದಲು, ನೀವು ತೆರಿಗೆಗೊಳಪಡುವ ನಿಮ್ಮ ನಿಜವಾದ ಮೊತ್ತ ಏನೆಂಬುದನ್ನು ಸಮೀಪದ ತೆರಿಗೆ ಸಲಹೆಗಾರರ ನೆರವಿನಿಂದ ನಿಖರಪಡಿಸಿಕೊಳ್ಳಿ. ಇದಕ್ಕಾಗಿ ನಿಮ್ಮ ಆಸ್ತಿಯ ಖರೀದಿ ಮೌಲ್ಯ ಅಥವಾ 2001ರ ಏಪ್ರಿಲ್ 1ಕ್ಕೂ ಹಿಂದೆ ಖರೀದಿಸಿದ ಆಸ್ತಿಯಾಗಿದ್ದರೆ, ಅದರ ಮಾರುಕಟ್ಟೆ ಮೌಲ್ಯ ಇತ್ಯಾದಿ ಮಾಹಿತಿಯ ಆಧಾರದಲ್ಲಿ ಲಾಭದ ಅಂಶ ಎಷ್ಟೆಂದು ಲೆಕ್ಕ ಹಾಕಿ ಅಗತ್ಯವಿರುವ ಹೂಡಿಕೆಯನ್ನು ನಿರ್ಧರಿಸಬೇಕಾಗಿರುತ್ತದೆ.

ನಿಮಗೆ ಹಣದುಬ್ಬರ ಸೂಚ್ಯಂಕದ ಆಧಾರದಲ್ಲಿ ತೆರಿಗೆ ಲೆಕ್ಕ ಹಾಕಿದರೆ, ಲಾಭದ ಮೇಲೆ ಶೇಕಡ 20ರಷ್ಟು ತೆರಿಗೆ ಹಾಗೂ ಅದನ್ನು ಪರಿಗಣಿಸದೆ ತೆರಿಗೆ ಲೆಕ್ಕ ಹಾಕಿದರೆ ಶೇಕಡ 12.5ರಷ್ಟು ತೆರಿಗೆ ಅನ್ವಯವಾಗುತ್ತದೆ. ಇವುಗಳಲ್ಲಿ ಯಾವುದು ನಿಮಗೆ ಲಾಭದಾಯಕವೋ ಅದನ್ನು ಪರಿಗಣಿಸಿ ಅಂತಹ ಲಾಭವನ್ನು ಕ್ಯಾಪಿಟಲ್ ಗೇನ್ಸ್ ಖಾತೆಯಲ್ಲಿ ಹೂಡಿಕೆ ಮಾಡಿ ಅಥವಾ ಹೊಸ ಮನೆ ಖರೀದಿಗೆ ಉಪಯೋಗಿಸಿಕೊಳ್ಳಿ. ಹೊಸ ಮನೆ ಖರೀದಿ, ಮಾರಾಟವಾದ ದಿನದಿಂದ ಎರಡು ವರ್ಷದ ಒಳಗೆ ಆಗಬೇಕು ಅಥವಾ ಮನೆ ಕಟ್ಟಿಸುವುದಿದ್ದರೆ ಮೂರು ವರ್ಷಗಳ ಸಮಯಾವಕಾಶ ಇದೆ. ಮುಂದಿನ ವರ್ಷದ ಆದಾಯ ತೆರಿಗೆ ವಿವರ ಸಲ್ಲಿಸುವ ಮೊದಲು ಕ್ಯಾಪಿಟಲ್ ಗೇನ್ಸ್ ಖಾತೆಯಲ್ಲಿ ಹಣ ಇಡಬೇಕು. ಆದರೆ, ಕೇವಲ ಹೂಡಿಕೆಗಾಗಿ ನಿವೇಶನ ಖರೀದಿಸುವುದಾದರೆ, ಅದಕ್ಕೆ ಯಾವುದೇ ತೆರಿಗೆ ವಿನಾಯಿತಿ ಇಲ್ಲ ಅಥವಾ ಅದನ್ನು ಮರುಹೂಡಿಕೆ ಎಂದು ಪರಿಗಣಿಸಲಾಗುವುದಿಲ್ಲ ಎನ್ನುವುದನ್ನು ಗಮನಿಸಿ. ಹೆಚ್ಚುವರಿ ಉಳಿಯುವ ಹಣವನ್ನು ನಿಮಗೆ ಹೆಚ್ಚಿನ ಬಡ್ಡಿ ಲಾಭ ನೀಡುವ ಅಥವಾ ಇತರ ಯಾವುದೇ ಯೋಜನೆಗಳಲ್ಲಿ ಹೂಡಿಕೆ ಮಾಡಬಹುದು.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

"ಬೆಂಗಳೂರಿನ ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಮನೆಗೆಲಸದ ಹೆಂಗಸು ಬೇಕಾಗಿದ್ದಾರೆ. ಒಬ್ಬ ಹೆಂಗಸಿಗೆ ಅಥವಾ ಗಂಡ ಮತ್ತು ಹೆಂಡತಿಗೆ ವಸತಿ ಸೌಲಭ್ಯ ನೀಡಲಾಗುವುದು. ಸಂಬಳ:15000. ಸಂಪರ್ಕಿಸಿ: 9606916280"

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Hotel

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ, ವಸತಿಯೊಂದಿಗೆ ಉತ್ತಮ ಸಂಬಳ. ಸಂಪರ್ಕಿಸಿ: 9663497356 / 8884811114

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ರೆಂಟಲ್ ಪ್ರಾಪರ್ಟೀಸ್

Accommodation Available

Commercial

GROUND FLOOR-2550 sqft, First Floor-2550 sqft, Second Floor-2550sqft, Third Floor-2550 sqft, Lift Available. SAMYAK PLY &HARDWARE, Opp Old Bustand, PB Road, Davanagere-577002. Contact-9448658255

ಇತರೆ

Medical

ಉಚಿತ ಶಿಬಿರ 7 ದಿನಗಳು ಮಾತ್ರ. ದಿನಾಂಕ 28-06-2025 ರಿಂದ 04-07-2025 ವರೆಗೆ. ಸಮಯ ಮಧ್ಯಾಹ್ನ 2:00 ರಿಂದ ಸಂಜೆ 4 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ACU ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಸನ್ಮಾನ್ ಹೋಟೆಲ್ ಹತ್ತಿರ ಶೇಷಾದ್ರಿಪುರಂ, ಬೆಂಗಳೂರು. ಮೊಬೈಲ್: 7349494852

ಪ್ರವಾಸ

Travel

ರಿಯಾಯಿತಿ ದರದಲ್ಲಿ 8/13/21 ದಿನಗಳ ಕಾಶಿ,ಗಯಾ ಪ್ರಯಾಗ್ ರಾಜ್ ಅಯೋಧ್ಯ ಪುರಿಜಗನ್ನಾಥ್ ಭುವನೇಶ್ವರ್ ಆಗ್ರಾ,ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳ ಪ್ರವಾಸಕ್ಕಾಗಿ ಜುಲೈ ತಿಂಗಳ 31ರ ಒಳಗೆ ಪೂರ್ತಿ ದರ ಪಾವತಿಸಿದವರಿಗೆ ಟ್ರಾನ್ಸ್‌ಪೋರ್ಟೇಶನಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: ಶ್ರೀಸುಧಾ ಟ್ರಾವೆಲ್ಸ್ 8088826815 9019301300

12.7.2025 ಗುಜರಾತ್ ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ: 12.7.25 ಗುಜರಾತ್ ಎರಡು ಜ್ಯೋತಿರ್ಲಿಂಗ: 29.7.25 ದೆಹಲಿ ಕಾಶಿ ಆಗ್ರಾ ಅಯೋಧ್ಯೆ; 2.8.25 ಕಾಶಿ, ಅಯೋಧ್ಯೆ, 14.8.25 ಶಿರಡಿ ಮೂರು ಜ್ಯೋತಿರ್ಲಿಂಗ 30.8.25 ಪುರಿ ಜಗನ್ನಾಥ ಕಲ್ಕತ್ತಾ ಜಾರ್ಖಂಡ್ ವೈದ್ಯನಾಥ: ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

11ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 7 ದಿನಗಳ ಲೇಲಡಾಕ್. 6 ದಿನಗಳ ಶ್ರೀಲಂಕಾ ಪ್ರವಾಸ. 18ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ. 11 ದಿನಗಳ ಕಾಂಬೋಡಿಯ ವಿಯೆಟ್ನಾಂ. 8ದಿನಗಳ ಮುಕ್ತಿನಾಥ ಪ್ರವಾಸ (ನೇಪಾಳ) 7 ದಿನಗಳ ನಾರ್ತ್ ಈಸ್ಟ್ ಸ್ಪೆಷಲ್ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
9845114560
*Conditions apply

ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಸಿಲಿಂಡರ್‌ಗೆ ₹58.50ಯಷ್ಟು ಕಡಿಮೆ ಮಾಡಲಾಗಿದೆ. ವಿಮಾನಗಳಲ್ಲಿ ಬಳಕೆ ಮಾಡುವ ಇಂಧನದ (ಎಟಿಎಫ್) ಬೆಲೆಯನ್ನು ಶೇಕಡ 7.5ರಷ್ಟು ಹೆಚ್ಚು ಮಾಡಲಾಗಿದೆ.

ಎಟಿಎಫ್ ಬೆಲೆಯನ್ನು ಮೂರು ಬಾರಿ ಕಡಿಮೆ ಮಾಡಲಾಗಿತ್ತು. ಈಗಿನ ಹೆಚ್ಚಳದ ನಂತರ ಎಟಿಎಫ್ ಬೆಲೆಯು ದೆಹಲಿಯಲ್ಲಿ ಕಿಲೋ ಲೀಟರ್‌ಗೆ ₹89,344 ಆಗಿದೆ. ಈ ಬೆಲೆ ಏರಿಕೆಯು ವಿಮಾನಯಾನ ಕಂಪನಿಗಳ ಮೇಲಿನ ಹೊರೆಯನ್ನು ಹೆಚ್ಚು ಮಾಡಲಿದೆ.

19 ಕೆ.ಜಿ. ತೂಕದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ನವದೆಹಲಿಯಲ್ಲಿ ಮಂಗಳವಾರದಿಂದ ₹1,665ಕ್ಕೆ ತಗ್ಗಿದೆ. ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಸತತ ನಾಲ್ಕನೆಯ ಬಾರಿಗೆ ಇಳಿಕೆ ಮಾಡಲಾಗಿದೆ. ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ವ್ಯತ್ಯಾಸ ಆಗಿಲ್ಲ.

ಸಂವಾದದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅಭಿಮತ

‘ಪಹಲ್ಗಾಮ್ ದಾಳಿ ಆರ್ಥಿಕ ಭಯೋತ್ಪಾದನೆ’

ಎಸ್.ಜೈಶಂಕರ್

ನ್ಯೂಯಾರ್ಕ್ (ಪಿಟಿಐ): ‘ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ಆರ್ಥಿಕ ಭಯೋತ್ಪಾದನೆ. ಕಾಶ್ಮೀರದಲ್ಲಿ ಪ್ರವಾಸೋದ್ಯಮವನ್ನು ನಾಶಪಡಿಸುವುದೇ ಅದರ ಉದ್ದೇಶವಾಗಿತ್ತು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಇಲ್ಲಿ ಪ್ರತಿಪಾದಿಸಿದರು.

ಆದರೆ, ನೆರೆಯ ಪಾಕಿಸ್ತಾನದಿಂದ ಕಾರ್ಯಾಚರಣೆ ಆಗುತ್ತಿರುವ ಭಯೋತ್ಪಾದನೆ ಹತ್ತಿಕ್ಕುವ ಕಾರ್ಯದಲ್ಲಿ ಯಾವುದೇ ರೀತಿಯ ಅಣ್ವಸ್ತ್ರ ಬೆದರಿಕೆಗೆ ಜಗ್ಗುವುದಿಲ್ಲ ಎಂದು ಭಾರತ ಈಗಾಗಲೇ ಸ್ಪಷ್ಟಪಡಿಸಿದೆ ಎಂದೂ ಹೇಳಿದರು.

‘ನ್ಯೂಸ್‌ವೀಕ್’ನ ಸಿಇಒ ದೇವ್ ಪ್ರಗದ್ ಜೊತೆಗೆ ನಡೆದ ಸಂವಾದದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ ಜೈಶಂಕರ್, ‘ಪ್ರವಾಸೋದ್ಯಮ ನಾಶಪಡಿಸುವ ಜೊತೆಗೆ ಧಾರ್ಮಿಕ ಹಿಂಸೆಗೆ ಪ್ರಚೋದನೆ ನೀಡುವ ಹುನ್ನಾರವೂ ಪಹಲ್ಗಾಮ್ ಕೃತ್ಯದ ಹಿಂದೆ ಇತ್ತು’ ಎಂದು ಹೇಳಿದರು.

ಅತಿಯಾದ ಸರಳೀಕರಣ: ‘ಚೀನಾ ಕುರಿತಂತೆ ಭಾರತ ಮತ್ತು ಅಮೆರಿಕ ನಡುವಣ ಬಾಂಧವ್ಯವನ್ನು ಕೆಲವೊಮ್ಮೆ ಅತಿಯಾಗಿ ಸರಳೀಕರಿಸಲಾಗಿದೆ. ಅನೇಕ ಸಂದರ್ಭಗಳಲ್ಲಿ ಇದು ದಾರಿ ತಪ್ಪಿಸುವಂತಿದೆ’ ಎಂದು ಜೈಶಂಕರ್ ಅಭಿಪ್ರಾಯಪಟ್ಟರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಭಾರತ ಮತ್ತು ಅಮೆರಿಕ ನಡುವಣ ಬಾಂಧವ್ಯದಲ್ಲಿ ಹಲವು ಸಂಗತಿಗಳು ಮಿಳಿತಗೊಂಡಿವೆ. ಭಾರತದ ಅತಿದೊಡ್ಡ ಸಮುದಾಯವು ಅಮೆರಿಕಕ್ಕೆ ಗಣನೀಯ ಕೊಡುಗೆ ನೀಡುತ್ತಿದೆ’ ಎಂದು ಹೇಳಿದರು.

ಆರ್ಥಿಕ ವಹಿವಾಟಿನ ವಿಷಯದಲ್ಲಿ ಭಾರತ ಮತ್ತು ಅಮೆರಿಕ ಉತ್ತಮ ಬಾಂಧವ್ಯವನ್ನು ಹೊಂದಿವೆ ಎಂದು ಪ್ರತಿಪಾದಿಸಿದರು.

ಚೀನಾದ ಜೊತೆಗಿನ ಬಾಂಧವ್ಯವನ್ನು ಚುರುಕುಗೊಳಿಸುವ ದಾರಿಗಳನ್ನು ಹುಡುಕುವುದು ಈಗ ನಮ್ಮ ಆದ್ಯತೆ. ನಮಗೆ ಅನುಕೂಲ ಆಗುವ ವಾತಾವರಣ ನಿರ್ಮಿಸಬೇಕಿದೆ’ ಎಂದು ಹೇಳಿದರು.

‘ಭಯೋತ್ಪಾದನೆ ವಿರುದ್ಧ ಒಗ್ಗಟ್ಟು ಅಗತ್ಯ’

ವಿಶ್ವಸಂಸ್ಥೆ (ಪಿಟಿಐ): ‘ಅಣ್ವಸ್ತ್ರ ಬಳಕೆ ಬ್ಲ್ಯಾಕ್‌ಮೇಲ್’ಗೆ ಜಗ್ಗಬಾರದು ಮತ್ತು ಭಯೋತ್ಪಾದಕರು ನಿರ್ಭೀತರಾಗಿ ಇರಲು ಅವಕಾಶ ನೀಡದಂತೆ ವಿಶ್ವ ಸಮುದಾಯ ಒಗ್ಗಟ್ಟು ಕಾಯ್ದುಕೊಳ್ಳಬೇಕು ಎಂದು ಭಾರತ ಕೋರಿದೆ.

‘ಪಹಲ್ಗಾಮ್ ಕೃತ್ಯಕ್ಕೆ ಪ್ರತಿಯಾಗಿ ಭಾರತ ನಡೆಸಿದ ದಾಳಿಯು ಭಯೋತ್ಪಾದನೆಯನ್ನು ನಾವು ಸಹಿಸುವುದಿಲ್ಲ ಎಂಬುದರ ಸ್ಪಷ್ಟ ಸಂದೇಶವಾಗಿತ್ತು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಇಲ್ಲಿ ಹೇಳಿದರು.

ಅಮೆರಿಕ ಪ್ರವಾಸದಲ್ಲಿರುವ ಅವರು, ವಿಶ್ವಸಂಸ್ಥೆ ಕೇಂದ್ರ ಕಚೇರಿಯಲ್ಲಿ ಆಯೋಜಿಸಲಾಗಿದ್ದ ‘ಭಯೋತ್ಪಾದನೆಗೆ ಮನುಕುಲ ತೆತ್ತ ಬೆಲೆ’ ಕುರಿತ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಪಾಕಿಸ್ತಾನ ಜುಲೈ ತಿಂಗಳಿನಿಂದ ನಿಭಾಯಿಸಲಿದ್ದು, ಇದೇ ವೇಳೆ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಪ್ರದರ್ಶನ ಆಯೋಜನೆಗೊಂಡಿದೆ.

‘ಪಹಲ್ಗಾಮ್‌ನಲ್ಲಿ ಏನಾಯಿತು ಎಂದು ನೋಡಿದ್ದೇವೆ. ಭಯೋತ್ಪಾದನೆ ಸಹಿಸಬಾರದು. ಅದರ ವಿರುದ್ಧ ಜಗತ್ತು ಒಂದುಗೂಡಬೇಕು ಎಂಬುದು ಈಗಿನ ಅಗತ್ಯವಾಗಿದೆ’ ಎಂದು ಜೈಶಂಕರ್ ಹೇಳಿದರು.

ಟ್ರಂಪ್– ನೆತನ್ಯಾಹು ಭೇಟಿ ಮುಂದಿನ ವಾರ ನಿಗದಿ

ಬೆಂಜಮಿನ್ ನೆತನ್ಯಾಹು

ಜೆರುಸಲೇಂ (ಎಪಿ): ‘ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇತರೆ ಅಧಿಕಾರಿಗಳನ್ನು ಭೇಟಿಯಾಗುವ ಸಂಬಂಧ ಮುಂದಿನ ವಾರ ವಾಷಿಂಗ್ಟನ್‌ಗೆ ತೆರಳಲಿದ್ದೇನೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ.

ಸಂಪುಟ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸುವುದಾಗಿ ತಿಳಿಸಿದ್ದಾರೆ. ಭೇಟಿಯ ಉದ್ದೇಶವನ್ನು ವಿವರವಾಗಿ ಹೇಳಲಿಲ್ಲ.

ಗಾಜಾದಲ್ಲಿ ಹಮಾಸ್ ಬಂಡುಕೋರರ ವಿರುದ್ಧ ಇಸ್ರೇಲ್ ನಡೆಸುತ್ತಿರುವ ಯುದ್ಧ ಕೊನೆಗಾಣಿಸಲು ಟ್ರಂಪ್ ಸೂಚನೆ ನೀಡಿರುವ ಬೆನ್ನಲ್ಲೇ, ನೆತನ್ಯಾಹು ಅವರ ಭೇಟಿಯು ಮಹತ್ವ ಪಡೆದುಕೊಂಡಿದೆ.

ಪ್ರಮುಖ ಕಂಪನಿಗಳ ಕಾರು ಮಾರಾಟ ಇಳಿಕೆ

ಬೆಂಗಳೂರು (ರಾಯಿಟರ್ಸ್): ಭಾರತದ ಕಾರು ತಯಾರಿಕಾ ಕಂಪನಿಗಳ ಪೈಕಿ ಮೂರು ಪ್ರಮುಖ ಕಂಪನಿಗಳ ವಾಹನ ಮಾರಾಟ ಪ್ರಮಾಣವು ಜೂನ್ ತಿಂಗಳಲ್ಲಿ ಇಳಿಕೆಯಾಗಿದೆ. ನಗರ ಪ್ರದೇಶಗಳ ಗ್ರಾಹಕರು ಕಾರು ಖರೀದಿಗೆ ಹಿಂದೇಟು ಹಾಕಿರುವುದು ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಮಾರುತಿ ಸುಜುಕಿ, ಟಾಟಾ ಮೋಟರ್ಸ್ ಮತ್ತು ಹುಂಡೈ ಇಂಡಿಯಾ ಕಂಪನಿಗಳ ವಾಹನ ಮಾರಾಟ ಪ್ರಮಾಣವು ಕ್ರಮವಾಗಿ ಶೇ 13, 15 ಮತ್ತು 12ರಷ್ಟು ಇಳಿಕೆ ಆಗಿದೆ. ಈ ಮೂರು ಕಂಪನಿಗಳು ಭಾರತದ ಕಾರು ಮಾರುಕಟ್ಟೆಯಲ್ಲಿ ಸರಿಸುಮಾರು ಶೇ 60ರಷ್ಟು ಪಾಲು ಹೊಂದಿವೆ.

‘ಹಿಂದೊಂದು ಕಾಲದಲ್ಲಿ ಎಲ್ಲರಿಗೂ ಇಷ್ಟವಾಗುತ್ತಿದ್ದ ಸಣ್ಣ ಕಾರುಗಳ ಮಾರಾಟ ಹೆಚ್ಚಳ ಕಾಣುತ್ತಿಲ್ಲ’ ಎಂದು ಮಾರುತಿ ಸುಜುಕಿ ಕಂಪನಿಯ ಹಿರಿಯ ಅಧಿಕಾರಿ ರಾಹುಲ್ ಭಾರ್ತಿ ಹೇಳಿದ್ದಾರೆ.

‘ಬೇಡಿಕೆಯು ಮುಂದೆ ಹಂತ ಹಂತವಾಗಿ ಹೆಚ್ಚಳ ಕಾಣಲಿದೆ ಎಂಬ ಆಶಾವಾದ ಕಂಪನಿಗೆ ಇದೆ’ ಎಂದು ಹುಂಡೈ ಇಂಡಿಯಾ ಕಂಪನಿಯ ಸಿಒಒ ತರುಣ್ ಗರ್ಗ್ ಹೇಳಿದ್ದಾರೆ.

2026ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರು ಮಾರಾಟ ಪ್ರಮಾಣವು ಶೇ 1ರಷ್ಟು ಮಾತ್ರ ಬೆಳವಣಿಗೆ ಕಾಣಬಹುದು ಎಂದು ಉದ್ಯಮದ ಪ್ರತಿನಿಧಿಗಳು ಅಂದಾಜಿಸಿದ್ದಾರೆ.

ಪ್ರಮುಖ ಕಾರು ತಯಾರಿಕಾ ಕಂಪನಿಯಾದ ಮಹೀಂದ್ರ ಆ್ಯಂಡ್ ಮಹೀಂದ್ರ ಎಸ್‌ಯುವಿ ಮಾರಾಟ ಪ್ರಮಾಣ ಶೇ 18ರಷ್ಟು ಹೆಚ್ಚಳ ಕಂಡಿದೆ ಎಂದು ತಿಳಿಸಿದೆ.

ಸಿಇಸಿಯಲ್ಲಿ ಹಿತಾಸಕ್ತಿ ಸಂಘರ್ಷದ ಆರೋಪ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿಯಲ್ಲಿನ (ಸಿಇಸಿ) ‘ಹಿತಾಸಕ್ತಿ ಸಂಘರ್ಷವು’ವು, ಅರಣ್ಯ ಸಂರಕ್ಷಣೆ ತಿದ್ದುಪಡಿ ಕಾಯ್ದೆ (ಎಫ್‌ಸಿಎಎ) ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿತ ತೀರ್ಪಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು 60ಕ್ಕೂ ಹೆಚ್ಚು ಮಾಜಿ ಅಧಿಕಾರಿಗಳು ಆತಂಕಪಟ್ಟಿದ್ದಾರೆ.

60ಕ್ಕೂ ಅಧಿಕ ಮಾಜಿ ನಾಗರಿಕ ಸೇವಾ ಅಧಿಕಾರಿಗಳು ಈ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರಿಗೆ ಬಹಿರಂಗ ಪತ್ರವನ್ನು ಬರೆದಿದ್ದಾರೆ. ಮಾಜಿ ಕಾರ್ಯದರ್ಶಿಗಳು, ರಾಯಭಾರಿಗಳು, ಪೊಲೀಸ್ ಇಲಾಖೆಗಳ ವರಿಷ್ಠರು, ನಿವೃತ್ತ ಅರಣ್ಯಾಧಿಕಾರಿಗಳು ಪತ್ರಕ್ಕೆ ಸಹಿ ಹಾಕಿದ್ದಾರೆ.

ಸುಪ್ರೀಂ ಕೋರ್ಟ್‌ನ ನೇಮಿಸಿರುವ ಸಿಇಸಿಯಲ್ಲಿ ಸದ್ಯ ಮೂವರು ಮಾಜಿ ಐಎಫ್‌ಎಸ್ ಅಧಿಕಾರಿಗಳು, ಪರಿಸರ ಸಚಿವಾಲಯದಲ್ಲಿ ಹಲವು ವರ್ಷ ಕಾರ್ಯನಿರ್ವಹಿಸಿದ್ದ ನಿವೃತ್ತ ವಿಜ್ಞಾನಿ ಇದ್ದಾರೆ. ವಿಷಯ ಪರಿಣತರು ಈ ಸಮಿತಿಯಲ್ಲಿ ಇಲ್ಲ. 2002ರಲ್ಲಿ ಸಿಇಸಿ ಅಸ್ತಿತ್ವಕ್ಕೆ ಬಂತು. 2023ರವರೆಗೂ ಸದಸ್ಯರ ಆಯ್ಕೆಯಲ್ಲಿ ಸಮತೋಲನ ಕಾಯ್ದುಕೊಳ್ಳಲಾಗಿತ್ತು. ಈಗ ಆ ರೀತಿ ಇಲ್ಲ ಎಂದು ಪತ್ರದಲ್ಲಿ ಆಕ್ಷೇಪಿಸಿದ್ದಾರೆ.

‘ಸಮಿತಿಯ ಇಬ್ಬರು ಅಧಿಕಾರಿಗಳು ಪರಿಸರ, ಅರಣ್ಯ ಸಚಿವಾಲಯದಲ್ಲಿ ಉನ್ನತ ಹುದ್ದೆಯಲ್ಲಿ ಇದ್ದವರು. ನೀತಿ ರಚನೆಯಲ್ಲಿ ಭಾಗಿ ಆಗಿದ್ದವರು. ಇವರು, ಸುಪ್ರೀಂ ಕೋರ್ಟ್‌ಗೆ ಸ್ವತಂತ್ರವಾದ ಅಭಿಪ್ರಾಯ ನೀಡುವ ಸಾಧ್ಯತೆಗಳಿಲ್ಲ. ಈಗಾಗಲೇ ಸರ್ಕಾರಕ್ಕೆ ನೀಡಿರುವ ಸಲಹೆಗಳಿಗಿಂತ ಭಿನ್ನವಾದದ್ದನ್ನೂ ನೀಡಲು ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಿಇಸಿಯಲ್ಲಿ ಪ್ರಸ್ತುತ ಇರುವ ಸದಸ್ಯರನ್ನು ಪರಿಗಣಿಸಿದರೆ ಹಿತಾಸಕ್ತಿ ಸಂಘರ್ಷ ಇರುವುದು ಸ್ಪಷ್ಟ. ಅರಣ್ಯ ಮತ್ತು ಪರಿಸರಕ್ಕೆ ಸಂಬಂಧಿಸಿದ ಪ್ರಮುಖ ಪ್ರಕರಣಗಳಲ್ಲಿ ಅಂತಿಮ ತೀರ್ಮಾನಕ್ಕೆ ಬರುವ ಮುನ್ನ ಸುಪ್ರೀಂ ಕೋರ್ಟ್ ಸಿಇಸಿ ವರದಿಯನ್ನು ಪರಿಗಣಿಸುತ್ತದೆ. ಈಗಿನ ಸನ್ನಿವೇಶದಲ್ಲಿ ಸಿಇಸಿ ವರದಿಗಳು ವ್ಯತಿರಿಕ್ತ ಪರಿಣಾಮ ಉಂಟುಮಾಡುವ ಆತಂಕವಿದೆ ಎಂದಿದ್ದಾರೆ.

ಇಂಥ ಪರಿಣಾಮವು ಈಗಾಗಲೇ ಮಹಾರಾಷ್ಟ್ರದ ‘ಝುಡ್ಪಿ ಅರಣ್ಯ’ ಕುರಿತ ಇತ್ತೀಚಿನ ಸುಪ್ರೀಂ ಕೋರ್ಟ್ ಆದೇಶದಲ್ಲಿ ವ್ಯಕ್ತವಾಗಿದೆ ಎಂದು ಮಾಜಿ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಈ ಕಾರಣದಿಂದ ಎಫ್‌ಸಿಎಎ ಪ್ರಶ್ನಿಸಿರುವ ಅರ್ಜಿಗಳು ಅಥವಾ ಅರಣ್ಯ, ವನ್ಯಜೀವಿ ಮತ್ತು ಪರಿಸರ ಭದ್ರತೆಗೆ ಸಂಬಂಧಿಸಿದಂತೆ ಯಾವುದೇ ಸಲಹೆಗಳನ್ನು ನೀಡಲು ಸಿಇಸಿಗೆ ಅವಕಾಶ ನೀಡಬಾರದು ಎಂದು ಮಾಜಿ ಅಧಿಕಾರಿಗಳು ಮುಖ್ಯ ನ್ಯಾಯಮೂರ್ತಿಯವರಿಗೆ ಮನವಿ ಮಾಡಿದ್ದಾರೆ.

ಹಳೆಯ ಸಹೋದ್ಯೋಗಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ

‘ಮಸ್ಕ್ ಇ.ವಿ ಸಬ್ಸಿಡಿಗೂ ಹೆಚ್ಚು ಕಳೆದುಕೊಳ್ಳಬಹುದು’

ವಾಷಿಂಗ್ಟನ್ (ಎಪಿ): ‘ತೆರಿಗೆ ಮತ್ತು ಖರ್ಚು ಮಸೂದೆ ಜಾರಿಗೊಂಡರೆ ಉದ್ಯಮಿ ಇಲಾನ್ ಮಸ್ಕ್ ಅವರು ಎಲೆಕ್ಟ್ರಿಕ್ ವಾಹನಗಳ ಸಬ್ಸಿಡಿಗಿಂತ ಹೆಚ್ಚಿನದನ್ನು ಕಳೆದುಕೊಳ್ಳುವರು’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

‘ಇಲಾನ್ ಮಸ್ಕ್ ಅವರ ಮೇಲೆಯೇ ಅಮೆರಿಕ ಸರ್ಕಾರದ ದಕ್ಷತಾ ಇಲಾಖೆಯಿಂದ (ಡಿಒಜಿಇ) ಕ್ರಮ ಜರುಗಿಸಬೇಕಾಗಬಹುದು. ಆ ಮೂಲಕ ಅವರಿಗೆ ನೀಡಿರುವ ತೆರಿಗೆ ವಿನಾಯಿತಿಗಳಿಗೆ ಕತ್ತರಿ ಹಾಕಬೇಕಾದೀತು. ಮಸ್ಕ್ ಅವರನ್ನೇ ಡಿಒಜಿಇ ನುಂಗಿಹಾಕಬಹುದು’ ಎಂದು ಫ್ಲಾರಿಡಾ ಪ್ರವಾಸಕ್ಕೆ ತೆರಳುವ ಮುನ್ನ ಶ್ವೇತಭವನದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಫೆಡರಲ್ ಆಡಳಿತದ ಖರ್ಚು, ವೆಚ್ಚಗಳನ್ನು ಕಡಿಮೆಗೊಳಿಸಲು ಟ್ರಂಪ್ ಅವರು ಡಿಒಜಿಇ ನೇತೃತ್ವವನ್ನು ಮಸ್ಕ್ ಅವರಿಗೆ ವಹಿಸಿದ್ದರು. ಮಸ್ಕ್ ಅವರು ಎಲೆಕ್ಟ್ರಿಕ್ ವಾಹನ ಕಂಪನಿ ಹಾಗೂ ಬಾಹ್ಯಾಕಾಶ ಸಂಸ್ಥೆ ‘ಸ್ಪೇಸ್ ಎಕ್ಸ್’ನ ಒಡೆತನ ಹೊಂದಿದ್ದಾರೆ. ಜತೆಗೆ, ಅಮೆರಿಕ ಸರ್ಕಾರದೊಂದಿಗೆ ಲಾಭದಾಯಕ ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ.

ಟ್ರಂಪ್ ಅವರ ತೆರಿಗೆ ಮತ್ತು ಖರ್ಚು ಮಸೂದೆಯನ್ನು ವಿರೋಧಿಸಿ ಮಸ್ಕ್ ಟೀಕೆ ಮಾಡಲು ಆರಂಭಿಸಿದ ನಂತರ ಸಾಮಾಜಿಕ ಮಾಧ್ಯಮದಲ್ಲಿ ಇಬ್ಬರೂ ಪರಸ್ಪರ ಆರೋಪ–ಪ್ರತ್ಯಾರೋಪ ಮಾಡಿದ್ದರು.

ಮಸ್ಕ್ ಗಡಿಪಾರು?

ಇಲಾನ್ ಮಸ್ಕ್

ಡೊನಾಲ್ಡ್ ಟ್ರಂಪ್

ಉದ್ಯಮಿ ಇಲಾನ್ ಮಸ್ಕ್ ಅವರನ್ನು ಗಡಿಪಾರು ಮಾಡುವ ಎಚ್ಚರಿಕೆಯನ್ನು ಕೂಡ ಡೊನಾಲ್ಡ್ ಟ್ರಂಪ್ ನೀಡಿದ್ದಾರೆ.

ಟ್ರಂಪ್ ಅವರು ‘ಟ್ರುಥ್ ಸೋಷಿಯಲ್’ನಲ್ಲಿ ಸೋಮವಾರ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ, ‘ತಮ್ಮ ಅಂಗಡಿಯನ್ನು ಮುಚ್ಚಿ ದಕ್ಷಿಣ ಆಫ್ರಿಕಾಕ್ಕೆ ಅವರು ಹಿಂದಿರುಗಬೇಕಾಗಬಹುದು’ ಎಂದು ಎಚ್ಚರಿಸಿದ್ದಾರೆ.

‘ಎಲೆಕ್ಟ್ರಿಕ್ ವಾಹನಗಳ ಬಳಕೆಯನ್ನು ಕಡ್ಡಾಯಗೊಳಿಸುವುದರ ವಿರುದ್ಧ ನಾನು ಇದ್ದುದು ಮಸ್ಕ್‌ಗೆ ತಿಳಿದಿತ್ತು. ನನ್ನ ಚುನಾವಣಾ ಪ್ರಚಾರದ ವೇಳೆಯಲ್ಲೂ ಇದನ್ನೇ ಹೇಳಿದ್ದೆ. ಎಲೆಕ್ಟ್ರಿಕ್ ಕಾರು ಒಳ್ಳೆಯದೇ. ಆದರೆ, ಅವುಗಳನ್ನೇ ಖರೀದಿಸುವಂತೆ ಒತ್ತಡ ಹೇರುವುದು ಸರಿಯಲ್ಲ’ ಎಂದಿದ್ದಾರೆ.

ಇದಕ್ಕೆ ಮತ್ತೊಂದು ಸಾಮಾಜಿಕ ಮಾಧ್ಯಮದ ಪೋಸ್ಟ್ ಮೂಲಕ ಮಸ್ಕ್ ಪ್ರತಿಕ್ರಿಯಿಸಿದ್ದು, ‘ಈ ವಿಷಯವನ್ನು ಇನ್ನಷ್ಟು ವಿಸ್ತರಿಸುತ್ತಾ ಹೋಗಲು ನನಗೂ ಹುಮ್ಮಸ್ಸು ಮೂಡುತ್ತಿದೆ. ಆದರೆ, ಸದ್ಯಕ್ಕೆ ಏನನ್ನೂ ಹೇಳುವುದಿಲ್ಲ’ ಎಂದಿದ್ದಾರೆ.

ಅಭಿಮಾನಿಗಳಿಗೆ ಗಣೇಶ್ ಫೋಟೊ ಗಿಫ್ಟ್

ಇಂದು (ಜುಲೈ 2) ನಟ ಗಣೇಶ್ ಜನ್ಮದಿನ. ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿರುವ ಕಾರಣ ಅಭಿಮಾನಿಗಳ ಜೊತೆ ಜನ್ಮದಿನವನ್ನು ಆಚರಿಸಲು ಸಾಧ್ಯವಾಗುತ್ತಿಲ್ಲ ಎಂದು ಗಣೇಶ್ ತಿಳಿಸಿದ್ದಾರೆ. ಬದಲಾಗಿ ಅಭಿಮಾನಿಗಳಿಗೆ ತಮ್ಮ ಎಕ್ಸ್‌ಕ್ಲೂಸಿವ್ ಫೋಟೊಗಳ ಗಿಫ್ಟ್ ನೀಡಿದ್ದಾರೆ ಗಣೇಶ್.

'ಕೃಷ್ಣಂ ಪ್ರಣಯ ಸಖಿ' ಬೆನ್ನಲ್ಲೇ ಒಪ್ಪಿಕೊಂಡಿದ್ದ 'ಪಿನಾಕ' ಚಿತ್ರದ ಚಿತ್ರೀಕರಣದಲ್ಲಿ ಸದ್ಯ ಗಣೇಶ್ ತೊಡಗಿಸಿಕೊಂಡಿದ್ದಾರೆ. ಬಿ.ಧನಂಜಯ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದ ಶೂಟಿಂಗ್ ಬೆಂಗಳೂರಿನ ನೆಲಮಂಗಲದ ಸಮೀಪ ನಡೆಯುತ್ತಿದೆ. ಚಿತ್ರೀಕರಣಕ್ಕಾಗಿ ಆರು ಎಕರೆ ಪ್ರದೇಶದಲ್ಲಿ ಸೆಟ್ ಹಾಕಲಾಗಿದ್ದು, 500 ವರ್ಷಗಳ ಹಿಂದಿನ ದೇವಗಿರಿ ಎಂಬ ಸಾಮ್ರಾಜ್ಯವನ್ನು ಸೃಷ್ಟಿಸಲಾಗಿದೆ. ಇದರ ಜೊತೆಗೆ ರಮೇಶ್ ಅರವಿಂದ್ ಜೊತೆಗಿನ 'ಯುವರ್ಸ್ ಸಿನ್ಸಿಯರ್ಲಿ ರಾಮ್' ಚಿತ್ರದ ಚಿತ್ರೀಕರಣದಲ್ಲೂ ಪಾಲ್ಗೊಳ್ಳುತ್ತಿದ್ದಾರೆ. ಇದರ ನಡುವೆ ಅಭಿಮಾನಿಗಳಿಗಾಗಿ ವಿಶೇಷ ಉಡುಗೊರೆ ನೀಡಿದ್ದಾರೆ. ಹವ್ಯಾಸಿ ಛಾಯಾಗ್ರಾಹಕ ಹಾಗೂ ಪ್ರಸ್ತುತ ಶಿಲ್ಪ ಗಣೇಶ್ ಅವರು ನಿರ್ಮಾಣ ಮಾಡುತ್ತಿರುವ ತುಳು ಚಿತ್ರದ ನಾಯಕ ನಿತ್ಯಪ್ರಕಾಶ್ ಬಂಟ್ವಾಳ ಅವರು ಸೆರೆ ಹಿಡಿದಿರುವ ತಮ್ಮ ಫೋಟೋಗಳನ್ನು ಹಂಚಿಕೊಂಡಿದ್ದಾರೆ.

ಅನಂತ ಕಾಲಂ ಎಂದ ಹೊಸಬರು

ಪೃಥ್ವಿರಾಜ್ ಶೆಟ್ಟಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ಅನಂತ ಕಾಲಂ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಈ ಚಿತ್ರಕ್ಕೆ ವಿಜಯ್ ಮಂಜುನಾಥ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಸಿನಿಮಾ ವಿಚಾರದಲ್ಲಿ ಒಂದಷ್ಟು ಜಾನರ್‌ಗಳು ಇವೆ. ಅದರಲ್ಲಿ ಒಂದೊಂದು ಜಾನರ್ ಒಬ್ಬೊಬ್ಬರಿಗೆ ಇಷ್ಟವಾಗುತ್ತದೆ. ಈ ಸಿನಿಮಾ ಹಾರರ್ ಎಂದು ಹೇಳಲು ಆಗುವುದಿಲ್ಲ. ಆದರೆ ಪಕ್ಕಾ ಸಸ್ಪೆನ್ಸ್, ಥ್ರಿಲ್ಲರ್. ಕನ್ನಡ ಮತ್ತು ತೆಲುಗಿನಲ್ಲಿ ಚಿತ್ರೀಕರಣ ಮಾಡುತ್ತಿದ್ದೇವೆ. ಈಗಾಗಲೇ ಅರ್ಧದಷ್ಟು ಚಿತ್ರೀಕರಣ ಮುಗಿದಿದೆ. ಮಳೆಗಾಲ ಮುಗಿದ ಬಳಿಕ ಉಳಿದ ಚಿತ್ರೀಕರಣ ಮಾಡುತ್ತೇವೆ. ನವೆಂಬರ್ ಅಥವಾ ಡಿಸೆಂಬರ್‌ಲ್ಲಿ ತೆರೆಗೆ ಬರುವ ಯೋಚನೆಯಿದೆ' ಎಂದರು ನಿರ್ದೇಶಕರು.

ಪೃಥ್ವಿರಾಜ್ ಶೆಟ್ಟಿ ಚಿತ್ರದ ನಾಯಕ. ವಿಲಿಯಂಟ್ ವಿಷನ್ ಕ್ರಿಯೇಷನ್ಸ್ ಬಂಡವಾಳ ಹೂಡುತ್ತಿದೆ. ಭುವನ್ ಶಂಕರ್ ಮತ್ತು ಸನ್‌ಕಾರ್ ಸಂಗೀತ, ಗುರುಪ್ರಸಾದ್ ನರ್ನಾಡ್ ಛಾಯಾಚಿತ್ರಗ್ರಹಣವಿದೆ. ಉಳಿದ ಕೆಲ ಪ್ರಮುಖ ಪಾತ್ರಗಳಿಗೆ ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ ಎಂದಿದೆ ಚಿತ್ರತಂಡ.

ಸೆಟ್ಟೇರಿದ ಪೈನಾ

ಮಧುಶ್ರೀ, ಚಿರಾಗ್ ಚಾಲುಕ್ಯ

ಕೌರವ ವೆಂಕಟೇಶ್ ನಿರ್ದೇಶಿಸುತ್ತಿರುವ 'ಪೈನಾ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಅವರು ಈ ಹಿಂದೆ 'ನೋ ಕೋಕೇನ್' ಎಂಬ ಚಿತ್ರವನ್ನು ನಿರ್ದೇಶಿಸಿದ್ದರು. ಕಾನಿಷ್ಕ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಆರ್.ಕನಿಷ್ಕ ಮತ್ತು ಆರ್.ವೇದಿಶ್ ಬಂಡವಾಳ ಹೂಡುತ್ತಿದ್ದಾರೆ.

ಪ್ರಿಯಾ ಹಾಸನ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಲೀಲಾ ಮೋಹನ್, ಚಿರಾಗ್ ಚಾಲುಕ್ಯ ನಾಯಕರು. ಮಧುಶ್ರೀ, ತೃಪ್ತಿ ಬಸವರಾಜು ನಾಯಕಿಯರು. ಯೋಗರಾಜ್ ಭಟ್, ರಂಗಾಯಣ ರಘು, ಸಾಧು ಕೋಕಿಲ ಮುಂತಾದವರು ಪ್ರಮುಖ ಪಾತ್ರಗಳಲ್ಲಿದ್ದಾರೆ.

'ಪೈನಾ ಎಂಬುದು ಮಗುವಿನ ಹೆಸರು. ಇದರಿಂದಲೇ ಚಿತ್ರವು ಶುರುವಾಗುತ್ತದೆ. ಹಾರರ್, ಥ್ರಿಲ್ಲರ್ ಅಂಶಗಳು ಹೆಚ್ಚಾಗಿ ಇರುವುದರಿಂದ ಸಣ್ಣ ಎಳೆ ಬಿಟ್ಟುಕೊಟ್ಟರೂ ಕಥೆಯ ಸಾರಾಂಶ ತಿಳಿಯುತ್ತದೆ. ಹೀಗಾಗಿ ಕಥೆ ಬಗ್ಗೆ ಏನೂ ಹೇಳುವುದಿಲ್ಲ. ಚಿಕ್ಕಮಗಳೂರು, ಬೆಂಗಳೂರು ಸುತ್ತಮುತ್ತ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಲು ಯೋಜನೆ ಹಾಕಿಕೊಳ್ಳಲಾಗಿದೆ' ಎಂದರು ನಿರ್ದೇಶಕರು.

ಕಲ್ಕಿ ಅಭಿಷೇಕ್ ಸಂಗೀತ, ಮುಂಜಾನೆ ಮಂಜು ಛಾಯಾಚಿತ್ರಗ್ರಹಣ, ಲೋಹಿತ್ ಸಂಕಲನವಿದೆ.

'ಜೂನಿಯರ್' ಟೀಸರ್ ರಿಲೀಸ್

ಜೆನಿಲಿಯಾ, ಕಿರೀಟಿ, ಶ್ರೀಲೀಲಾ

'ಮಾಯಾಬಜಾರ್' ಖ್ಯಾತಿಯ ನಿರ್ದೇಶಕ ರಾಧಾಕೃಷ್ಣ ರೆಡ್ಡಿ ನಿರ್ದೇಶನದ, ಕಿರೀಟಿ ನಟನೆಯ ಚೊಚ್ಚಲ ಸಿನಿಮಾ 'ಜೂನಿಯರ್' ಜುಲೈ 18ರಂದು ತೆರೆಕಾಣಲಿದೆ. ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು.

'ಲೆಟ್ಸ್ ಲಿವ್ ದಿಸ್ ಮೂಮೆಂಟ್' ಎಂಬ ಹಾಡಿನ ಮೂಲಕ ಚಿತ್ರದ ಪ್ರಚಾರ ಆರಂಭಿಸಿದ್ದ ಚಿತ್ರತಂಡ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಸುಮಾರು ಎರಡೂವರೆ ವರ್ಷಗಳ ಹಿಂದೆ ಸೆಟ್ಟೇರಿದ್ದ ಈ ಸಿನಿಮಾದ ಟೀಸರ್ ವಾರಾಹಿ ಚಲನಚಿತ್ರಂ ಯುಟ್ಯೂಬ್‌ನಲ್ಲಿ ಬಿಡುಗಡೆಯಾಗಿದೆ. ಮಾಸ್ ಜೊತೆಗೆ ಕ್ಲಾಸ್ ಅಂಶಗಳನ್ನು ಮಿಶ್ರಣ ಮಾಡಿ ಟೀಸರ್ ಕಟ್ ಮಾಡಲಾಗಿದೆ. ಭಾವನಾತ್ಮಕ ದೃಶ್ಯಗಳು, ಪ್ರೀತಿ ಹಾಗೂ ಆ್ಯಕ್ಷನ್‌ನ ಅಂಶಗಳು ಟೀಸರ್‌ನಲ್ಲಿದೆ. ಕಿರೀಟಿ ಡ್ಯಾನ್ಸ್, ಫೈಟ್, ಡೈಲಾಗ್ ಹೊಡೆಯುತ್ತಾ ಎಂಟ್ರಿ ಕೊಟ್ಟಿದ್ದಾರೆ. ಈ ಸಿನಿಮಾದಲ್ಲಿ ಕಿರೀಟಿ ಜೊತೆಗೆ ಕ್ರೇಜಿಸ್ಟಾರ್ ರವಿಚಂದ್ರನ್, ಜೆನಿಲಿಯಾ ಡಿಸೋಜಾ, ಶ್ರೀಲೀಲಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಸಿನಿಮಾ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ರಿಲೀಸ್ ಆಗಲಿದೆ. ದಕ್ಷಿಣ ಭಾರತದ ಖ್ಯಾತ ನಿರ್ಮಾಣ ಸಂಸ್ಥೆ ವಾರಾಹಿ ಫಿಲ್ಮಂ ಪ್ರೊಡಕ್ಷನ್ ಈ ಚಿತ್ರಕ್ಕೆ ಬಂಡವಾಳ ಹೂಡಿದೆ. ಖ್ಯಾತ ಸಂಗೀತ ನಿರ್ದೇಶಕ ದೇವಿಶ್ರೀ ಪ್ರಸಾದ್ ಸಂಗೀತ, 'ಬಾಹುಬಲಿ' ಸಿನಿಮಾ ಖ್ಯಾತಿಯ ಕೆ.ಕೆ.ಸೆಂಥಿಲ್ ಕುಮಾರ್ ಛಾಯಾಚಿತ್ರಗ್ರಹಣ, ಪೀಟರ್ ಹೆನ್ ಸಾಹಸ ನಿರ್ದೇಶನ ಚಿತ್ರಕ್ಕಿದೆ.

2 ವರ್ಷದಲ್ಲಿ 3.5 ಕೋಟಿ ಉದ್ಯೋಗ ಸೃಷ್ಟಿ

ಉದ್ಯೋಗ ಆಧಾರಿತ ಪ್ರೋತ್ಸಾಹಧನ ಯೋಜನೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನೌಕರರ ಭವಿಷ್ಯ ನಿಧಿ ಸಂಘಟನೆ (ಇಪಿಎಫ್‌ಒ) ನಡೆಸುವ ಸಾಮಾಜಿಕ ಭದ್ರತಾ ಯೋಜನೆಗಳ ಮೂಲಕ ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗ ಸೃಷ್ಟಿಸಲು ₹99,446 ಕೋಟಿ ಮೊತ್ತದ ಉದ್ಯೋಗ ಆಧಾರಿತ ಪ್ರೋತ್ಸಾಹಧನ ಯೋಜನೆಗೆ (ಇಎಲ್‌ಐ) ಕೇಂದ್ರ ಸಚಿವ ಸಂಪುಟ ಮಂಗಳವಾರ ಅನುಮೋದನೆ ನೀಡಿದೆ.

'ಈ ಯೋಜನೆಯು ಎಲ್ಲ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿ, ಉದ್ಯೋಗಾರ್ಹತೆ ಮತ್ತು ಸಾಮಾಜಿಕ ಭದ್ರತೆ ಹೆಚ್ಚಿಸಲಿದೆ. ತಯಾರಿಕಾ ವಲಯ ಮತ್ತು ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರಿಗೆ ಪ್ರೋತ್ಸಾಹಧನ ನೀಡಲು ಈ ಯೋಜನೆ ಹೆಚ್ಚಿನ ಗಮನ ಹರಿಸಲಿದೆ. ಈ ಯೋಜನೆಯು ಉದ್ಯೋಗ ಸೃಷ್ಟಿ ಹೆಚ್ಚಿಸಲು ಉದ್ಯೋಗಿಗಳಿಗೆ ಮತ್ತು ಉದ್ಯೋಗದಾತರಿಗೆ ಪ್ರೋತ್ಸಾಹಧನ ಒದಗಿಸಲಿದೆ' ಎಂದು ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರು ಎರಡು ಕಂತುಗಳಲ್ಲಿ ಗರಿಷ್ಠ ₹15,000 ವರೆಗೆ ಒಂದು ತಿಂಗಳ ವೇತನ ಪಡೆಯಲಿದ್ದಾರೆ. ಹೆಚ್ಚುವರಿ ಉದ್ಯೋಗ ಸೃಷ್ಟಿಸಲು ಉದ್ಯೋಗದಾತರಿಗೆ ಎರಡು ವರ್ಷಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದರು.

'2024–25ರ ಕೇಂದ್ರ ಬಜೆಟ್‌ನಲ್ಲಿ 4.1 ಕೋಟಿ ಯುವಜನರಿಗೆ ಉದ್ಯೋಗ, ಕೌಶಲ ಮತ್ತು ಇತರ ಅವಕಾಶಗಳನ್ನು ಒದಗಿಸಲು ₹2 ಲಕ್ಷ ಕೋಟಿ ಅನುದಾನದೊಂದಿಗೆ ಈ ಪ್ರೋತ್ಸಾಹಧನ ಯೋಜನೆ ಘೋಷಿಸಲಾಗಿತ್ತು' ಎಂದರು.

'ಇಎಲ್‌ಐ ಯೋಜನೆಯಡಿ ಪ್ರೋತ್ಸಾಹಧನ ಪಡೆಯುವವರಲ್ಲಿ 1.92 ಕೋಟಿ ಫಲಾನುಭವಿಗಳು ಮೊದಲ ಬಾರಿಗೆ ಉದ್ಯೋಗಕ್ಕೆ ಸೇರಿದವರಾಗಿರುತ್ತಾರೆ. 2025ರ ಆಗಸ್ಟ್ 1ರಿಂದ 2027ರ ಜುಲೈ 31ರ ನಡುವೆ ಸೃಷ್ಟಿಯಾಗುವ ಉದ್ಯೋಗಗಳಿಗೆ ಈ ಯೋಜನೆಯ ಲಾಭ ಸಿಗಲಿದೆ' ಎಂದರು.

'ಈ ಯೋಜನೆಯು ಎರಡು ಭಾಗಗಳನ್ನು ಒಳಗೊಂಡಿದೆ. ಮೊದಲ ಭಾಗವು ಮೊದಲ ಬಾರಿಗೆ ಕೆಲಸಕ್ಕೆ ಸೇರಿದವರ ಮೇಲೆ ಗಮನ ಕೇಂದ್ರೀಕರಿಸಿದರೆ, ಎರಡನೇ ಭಾಗವು ಉದ್ಯೋಗದಾತರ ಮೇಲೆ ಗಮನ ಹರಿಸಲಿದೆ' ಎಂದು ಅವರು ತಿಳಿಸಿದರು.

'ಭಾಗ ಎ: ಇಪಿಎಫ್‌ಒನಲ್ಲಿ ನೋಂದಾಯಿತರಾದ ಮೊದಲ ಬಾರಿಯ ಉದ್ಯೋಗಿಗಳನ್ನು ಗುರಿಯಾಗಿಸಿಕೊಂಡಿದೆ. ಇದರ ಅಡಿಯಲ್ಲಿ ಗರಿಷ್ಠ ₹15,000 ಗಳವರೆಗೆ ಒಂದು ತಿಂಗಳ ಇಪಿಎಫ್ ವೇತನವನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ. ₹1 ಲಕ್ಷವರೆಗಿನ ವೇತನ ಹೊಂದಿರುವ ಉದ್ಯೋಗಿಗಳು ಇದಕ್ಕೆ ಅರ್ಹರು. ಮೊದಲ ಕಂತನ್ನು 6 ತಿಂಗಳ ಸೇವೆಯ ನಂತರ ಮತ್ತು 2ನೇ ಕಂತನ್ನು 12 ತಿಂಗಳ ಸೇವೆಯ ನಂತರ ಪಾವತಿಸಲಾಗುತ್ತದೆ. ಉಳಿತಾಯ ಮನೋಭಾವ ಉತ್ತೇಜಿಸಲು, ಪ್ರೋತ್ಸಾಹಧನದ ಒಂದು ಭಾಗವನ್ನು ಠೇವಣಿ ಖಾತೆಯಲ್ಲಿ ನಿಗದಿತ ಅವಧಿಗೆ ಇಡಲಾಗುತ್ತದೆ' ಎಂದು ಅವರು ವಿವರ ನೀಡಿದರು.

'ಭಾಗ-ಬಿ: ಈ ಭಾಗವು ಎಲ್ಲ ಕ್ಷೇತ್ರಗಳಲ್ಲಿ ಹೆಚ್ಚುವರಿ ಉದ್ಯೋಗ ಸೃಷ್ಟಿಯತ್ತ ಗಮನ ಹರಿಸುತ್ತದೆಯಾದರೂ ತಯಾರಿಕಾ ವಲಯದ ಮೇಲೆ ವಿಶೇಷವಾಗಿ ಗಮನ ಕೇಂದ್ರೀಕರಿಸುತ್ತದೆ. ಗರಿಷ್ಠ ₹1 ಲಕ್ಷವರೆಗಿನ ವೇತನ ಹೊಂದಿರುವ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಉದ್ಯೋಗದಾತರು ಈ ಪ್ರೋತ್ಸಾಹಧನ ಪಡೆಯುತ್ತಾರೆ. ಕನಿಷ್ಠ ಆರು ತಿಂಗಳವರೆಗೆ ಉದ್ಯೋಗ ಹೊಂದಿರುವ ಪ್ರತಿ ಹೆಚ್ಚುವರಿ ಉದ್ಯೋಗಿಗೆ ಸರ್ಕಾರವು ತಿಂಗಳಿಗೆ ₹3,000 ಪ್ರೋತ್ಸಾಹಧನ ನೀಡಲಿದೆ. ಇದನ್ನು ಎರಡು ವರ್ಷಗಳ ವರೆಗೆ ನೀಡಲಾಗುತ್ತದೆ. ತಯಾರಿಕಾ ವಲಯಕ್ಕೆ ಪ್ರೋತ್ಸಾಹಧನವನ್ನು 3 ಮತ್ತು 4ನೇ ವರ್ಷಗಳಿಗೂ ವಿಸ್ತರಿಸಲಾಗುವುದು. ಇದರಿಂದ 2.6 ಕೋಟಿ ಹೆಚ್ಚುವರಿ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ' ಎಂದರು.

ಮುಖ್ಯಾಂಶಗಳು

- ತಯಾರಿಕಾ ವಲಯಕ್ಕೆ ಉತ್ತೇಜನ
- ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರಿಗೆ ಪ್ರೋತ್ಸಾಹಧನ
- ಉಳಿತಾಯ ಮನೋಭಾವ ಉತ್ತೇಜನಕ್ಕೆ ಕ್ರಮ

ಸಂಶೋಧನೆ ಉತ್ತೇಜನಕ್ಕೆ ₹1 ಲಕ್ಷ ಕೋಟಿ

ಅಶ್ವಿನಿ ವೈಷ್ಣವ್

ಸಂಶೋಧನೆಯಲ್ಲಿ ಖಾಸಗಿ ವಲಯದ ಹೂಡಿಕೆ ಉತ್ತೇಜಿಸಲು ₹1 ಲಕ್ಷ ಕೋಟಿ ನಿಧಿಯ ಸಂಶೋಧನಾ ಅಭಿವೃದ್ಧಿ ಮತ್ತು ಆವಿಷ್ಕಾರ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ದೇಶದಲ್ಲಿ ಸಂಶೋಧನೆ ಮತ್ತು ಆವಿಷ್ಕಾರಕ್ಕೆ ಹೊಸ ಚೈತನ್ಯ ನೀಡಲು ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

ಸಂಶೋಧನೆ, ಅಭಿವೃದ್ಧಿ ಮತ್ತು ಆವಿಷ್ಕಾರಗಳಲ್ಲಿ ಖಾಸಗಿ ವಲಯದ ಹೂಡಿಕೆ ಉತ್ತೇಜಿಸಲು ಕಡಿಮೆ ಅಥವಾ ಶೂನ್ಯ ಬಡ್ಡಿದರಗಳಲ್ಲಿ ದೀರ್ಘಾವಧಿಯ ಹಣಕಾಸು ಅಥವಾ ಮರುಹಣಕಾಸು ಒದಗಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದರು.

ಆರೋಪಿಯ ದೇಹದಲ್ಲಿ ಗಾಯ

ಅತ್ಯಾಚಾರ: ಪ್ರಮುಖ ಆರೋಪಿ ಕೆಲಸದಿಂದ ಉಚ್ಚಾಟನೆ

ಕೋಲ್ಕತ್ತ (ಪಿಟಿಐ): ಕಾನೂನು ಕಾಲೇಜು ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿರುವ ಪ್ರಮುಖ ಆರೋಪಿ ಮನೋಜೀತ್ ಮಿಶ್ರಾನ ದೇಹದಲ್ಲಿ ಗಾಯಗಳು ಇರುವುದು ವೈದ್ಯಕೀಯ ಪರೀಕ್ಷೆ ವೇಳೆ ಕಂಡುಬಂದಿದೆ ಎಂದು ಪೊಲೀಸ್ ಮೂಲಗಳು ಮಂಗಳವಾರ ತಿಳಿಸಿವೆ.

'ಉಗುರಿನಿಂದ ಪರಚಿದಾಗ ಆಗಿರುವ ಗಾಯ ಆರೋಪಿಯ ದೇಹದಲ್ಲಿ ಕಂಡುಬಂದಿದೆ. ಯಾರಾದರೂ ಹೋರಾಟ ನಡೆಸಿದಾಗ ಅಥವಾ ಪ್ರತಿರೋಧ ಒಡ್ಡಿದಾಗ ಇಂತಹ ಗಾಯ ಉಂಟಾಗುತ್ತದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯು ಪ್ರತಿರೋಧ ಒಡ್ಡಿರುವುದನ್ನು ಗಾಯದ ಗುರುತುಗಳು ಸೂಚಿಸುತ್ತವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆರೋಪಿ ಮನೋಜೀತ್, ಅಪರಾಧ ಕೃತ್ಯ ನಡೆದ ಮರುದಿನ ಬೆಳಿಗ್ಗೆ ದಕ್ಷಿಣ ಕೋಲ್ಕತ್ತ ಕಾನೂನು ಕಾಲೇಜಿನ ಉಪ ಪ್ರಾಂಶುಪಾಲರಾದ ನಯನಾ ಚಟರ್ಜಿ ಅವರೊಂದಿಗೆ ಸಂಭಾಷಣೆ ನಡೆಸಿರುವುದು ಸಿಡಿಆರ್ ಪರಿಶೀಲನೆ ವೇಳೆ ಕಂಡುಬಂದಿದೆ.

ಕೆಲಸದಿಂದ ಉಚ್ಚಾಟನೆ: ಪ್ರಮುಖ ಆರೋಪಿ ಮಿಶ್ರಾನನ್ನು ದಕ್ಷಿಣ ಕೋಲ್ಕತ್ತ ಕಾನೂನು ಕಾಲೇಜು ಆಡಳಿತ ಮಂಡಳಿ, ಕೆಲಸದಿಂದ ಉಚ್ಚಾಟಿಸಿದೆ. ಇತರ ಇಬ್ಬರು ಆರೋಪಿಗಳನ್ನೂ ಕಾಲೇಜಿನಿಂದ ಹೊರಹಾಕಲಾಗಿದೆ.

ಮನೋಜೀತ್, ಆಡಳಿತ ಮಂಡಳಿಯ ಈ ಹಿಂದಿನ ಶಿಫಾರಸಿನಂತೆ ಕಾಲೇಜಿನಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ. ಮಿಶ್ರಾ ಮತ್ತು ಇತರ ಇಬ್ಬರು ಆರೋಪಿಗಳಾದ ಪ್ರಮಿತ್ ಮುಖರ್ಜಿ ಹಾಗೂ ಝೈದ್ ಅಹ್ಮದ್ ಪೊಲೀಸ್ ಕಸ್ಟಡಿಯಲ್ಲಿದ್ದಾರೆ.

ಸಾಮೂಹಿಕ ಅತ್ಯಾಚಾರ ಘಟನೆ ಖಂಡಿಸಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳು ಕೋಲ್ಕತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಕ್ಷಮೆಯಾಚಿಸಿದ ಮದನ್ ಮಿತ್ರಾ

ಸಾಮೂಹಿಕ ಅತ್ಯಾಚಾರ ಪ್ರಕರಣದ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಟಿಎಂಸಿ ಶಾಸಕ ಮದನ್ ಮಿತ್ರಾ ಅವರು ಪಕ್ಷದ ನಾಯಕತ್ವದ ಕ್ಷಮೆಯಾಚಿಸಿದ್ದಾರೆ. 'ವಿದ್ಯಾರ್ಥಿನಿಯು ಒಬ್ಬಂಟಿಯಾಗಿ ಕಾಲೇಜಿಗೆ ಹೋಗದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಅಲ್ಲಿಗೆ ಹೋಗುವಾಗ ಸ್ನೇಹಿತರನ್ನು ಕರೆದೊಯ್ಯಬೇಕಿತ್ತು' ಎಂದು ಮಿತ್ರಾ ಹೇಳಿದ್ದರು.

ಹೇಳಿಕೆ ವಿವಾದಕ್ಕೆ ಕಾರಣವಾಗುತ್ತಿದ್ದಂತೆಯೇ ಪಕ್ಷವು ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿ 3 ದಿನಗಳೊಳಗೆ ಉತ್ತರಿಸುವಂತೆ ಸೂಚಿಸಿತ್ತು.

ಬಿಜೆಪಿ: 6 ರಾಜ್ಯಗಳಿಗೆ ಹೊಸ ಅಧ್ಯಕ್ಷರ ಆಯ್ಕೆ

ನವದೆಹಲಿ (ಪಿಟಿಐ): ಪಕ್ಷದ ತೆಲಂಗಾಣ, ಆಂಧ್ರಪ್ರದೇಶ, ಉತ್ತರಾಖಂಡ, ಮಹಾರಾಷ್ಟ್ರ, ಹಿಮಾಚಲ ಪ್ರದೇಶ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ಘಟಕಗಳ ನೂತನ ಅಧ್ಯಕ್ಷರನ್ನು ಬಿಜೆಪಿ ಮಂಗಳವಾರ ಆಯ್ಕೆ ಮಾಡಿದೆ.

ಇದರೊಂದಿಗೆ ಬಿಜೆಪಿಯ 37 ರಾಜ್ಯ ಘಟಕಗಳ ಪೈಕಿ 22 ಘಟಕಗಳ ಅಧ್ಯಕ್ಷರ ಆಯ್ಕೆ ಪೂರ್ಣಗೊಂಡಂತಾಗಿದೆ. ಕನಿಷ್ಠ 19 ರಾಜ್ಯ ಘಟಕಗಳ ಅಧ್ಯಕ್ಷರ ಆಯ್ಕೆ ಮುಗಿದ ಬಳಿಕವೇ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಾರಂಭವಾಗುತ್ತದೆ. ಈಗ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಆರಂಭಕ್ಕೆ ದಾರಿ ಸುಗಮವಾಗಿದೆ.

ಮಾಜಿ ಸಚಿವ ರವೀಂದ್ರ ಚವಾಣ್ ಅವರನ್ನು ಮಹಾರಾಷ್ಟ್ರ ಘಟಕದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ವೀಕ್ಷಕರಾಗಿದ್ದ ಕೇಂದ್ರ ಸಚಿವ ಕಿರಣ್ ರಿಜಿಜು ಅವರು ಸಭೆಯ ಬಳಿಕ ಈ ಕುರಿತು ಮುಂಬೈನಲ್ಲಿ ಘೋಷಣೆ ಮಾಡಿದರು.

ಮಹೇಂದ್ರ ಭಟ್

ಉತ್ತರಾಖಂಡ ಘಟಕದ ಅಧ್ಯಕ್ಷರಾಗಿ ರಾಜ್ಯಸಭಾ ಸದಸ್ಯ ಮಹೇಂದ್ರ ಭಟ್ ಪುನರಾಯ್ಕೆಗೊಂಡಿದ್ದಾರೆ. 25 ವರ್ಷಗಳಲ್ಲಿ, ರಾಜ್ಯ ಘಟಕದ ಅಧ್ಯಕ್ಷರಾಗಿ ಸತತವಾಗಿ ಆಯ್ಕೆಗೊಂಡಿರುವ ಏಕೈಕ ನಾಯಕ ಎಂಬ ಹೆಗ್ಗಳಿಕೆಗೆ ಭಟ್ ಪಾತ್ರರಾಗಿದ್ದಾರೆ.

ಆಂಧ್ರಪ್ರದೇಶ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಹಿರಿಯ ನಾಯಕ ಪಿ.ವಿ.ಎನ್.ಮಾಧವ ಅವರು ಆಯ್ಕೆಯಾಗಿದ್ದು, ಅಮರಾವತಿಯಲ್ಲಿ ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಚುನಾವಣೆಯ ವೀಕ್ಷಕರಾಗಿದ್ದ ಪಕ್ಷದ ಹಿರಿಯ ನಾಯಕ ಹಾಗೂ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ.ಮೋಹನ್ ಅವರು ಮಾಧವ ಅವರ ಆಯ್ಕೆಯನ್ನು ಘೋಷಿಸಿದರು.

ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎನ್.ರಾಮಚಂದ್ರ ರಾವ್ ಅವರು ಪಕ್ಷದ ತೆಲಂಗಾಣ ಘಟಕದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಹೈದರಾಬಾದ್‌ನಲ್ಲಿ ನಡೆದ ಸಭೆ ಬಳಿಕ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ರಾವ್ ಅವರ ಆಯ್ಕೆಯನ್ನು ಘೋಷಿಸಿದರು.

ಹಿಮಾಚಲ ಪ್ರದೇಶ ಘಟಕದ ಅಧ್ಯಕ್ಷರಾಗಿ ರಾಜೀವ್ ಬಿಂದಲ್, ಅಂಡಮಾನ್ ಮತ್ತು ನಿಕೋಬಾರ್ ಘಟಕದ ಅಧ್ಯಕ್ಷರಾಗಿ ಅನಿಲ್ ತಿವಾರಿ ಆಯ್ಕೆಯಾಗಿದ್ದಾರೆ.

'ನೆಲಸಿದ ಕ್ಷೇತ್ರದಲ್ಲಷ್ಟೇ ನೋಂದಣಿ'

ನವದೆಹಲಿ (ಪಿಟಿಐ): 'ಅರ್ಹ ನಾಗರಿಕರು ಸಾಮಾನ್ಯ ನಿವಾಸಿಗಳಾಗಿದ್ದರೆ ತಾವು ನೆಲಸಿದ ಕ್ಷೇತ್ರದಲ್ಲಿ ಮಾತ್ರ ಮತದಾರರ ಪಟ್ಟಿಯಲ್ಲಿ ಸ್ವಯಂ ನೋಂದಣಿ ಮಾಡಿಸಿಕೊಳ್ಳಬೇಕೇ ಹೊರತು ಸ್ವಂತ ಮನೆಯಿರುವ ಜಾಗದಲ್ಲಿ ಅಲ್ಲ' ಎಂದು ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್ ತಿಳಿಸಿದ್ದಾರೆ.

ಈ ವರ್ಷಾಂತ್ಯದಲ್ಲಿ ಬಿಹಾರ ವಿಧಾನಸಭಾ ಚುನಾವಣೆ ನಡೆಯಲಿದ್ದು, ಚುನಾವಣಾ ಆಯೋಗವು ಮತದಾರರ ಪಟ್ಟಿಯ 'ವಿಶೇಷ ಪರಿಶೀಲನಾ' ಕಾರ್ಯದಲ್ಲಿ ತೊಡಗಿರುವ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

ಮಲ್ಲೇಶ್ವರ ಸ್ಫೋಟ: ಶಂಕಿತ ಉಗ್ರ ಸೆರೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿ ಎದುರು 2013ರಲ್ಲಿ ನಡೆದ ಬಾಂಬ್ ಸ್ಫೋಟ ಸೇರಿದಂತೆ ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ನಡೆದ ಹಲವು ಸ್ಫೋಟ ಪ್ರಕರಣಗಳಲ್ಲಿ ಭಾಗಿಯಾಗಿ, 30 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಶಂಕಿತ ಉಗ್ರ ನಗೂರ್ ಅಬೂಬಕರ್ ಸಿದ್ದಿಕ್‌ನನ್ನು ತಮಿಳುನಾಡು ಪೊಲೀಸರು ಬಂಧಿಸಿದ್ದಾರೆ.

ಖಚಿತ ಮಾಹಿತಿ ಆಧರಿಸಿ ತಮಿಳುನಾಡು ವಿಶೇಷ ಪೊಲೀಸ್ ತಂಡವು ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯಲ್ಲಿ ಸಿದ್ದಿಕ್‌ನನ್ನು ವಶಕ್ಕೆ ಪಡೆದಿದೆ. ಈತನ ಸಹಚರ ತಿರುನೆಲ್ವೇಲಿ ಮಹಮದ್ ಅಲಿ ಎಂಬಾತನನ್ನೂ ಬಂಧಿಸಲಾಗಿದೆ.

2011ರಲ್ಲಿ ಬಿಜೆಪಿ ಮುಖಂಡ ಎಲ್.ಕೆ ಅಡ್ವಾಣಿ ಅವರ ರಥಯಾತ್ರೆ ಮಧುರೈ ಮೂಲಕ ಸಾಗುವಾಗ, ರಥಯಾತ್ರೆ ಮಾರ್ಗದಲ್ಲಿ ಬಾಂಬ್ ಇರಿಸಿ ಸ್ಫೋಟಕ್ಕೆ ಸಂಚು ರೂಪಿಸಿದ ಆರೋಪ, 1995ರಲ್ಲಿ ಚೆನ್ನೈನ ಹಿಂದು ಮುನ್ನಣಿ ಕಚೇರಿ ಎದುರು ನಡೆದ ಸ್ಫೋಟ, 1999ರಲ್ಲಿ ಚೆನ್ನೈನ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಸೇರಿದಂತೆ 7 ಕಡೆ ಬಾಂಬ್ ಇರಿಸಿದ ಪ್ರಕರಣದಲ್ಲಿ ಸಿದ್ದಿಕ್ ಪ್ರಮುಖ ಆರೋಪಿಯಾಗಿದ್ದಾನೆ.

2013ರ ಏಪ್ರಿಲ್ 17ರಂದು ಮಲ್ಲೇಶ್ವರದಲ್ಲಿ ನಡೆದ ಸ್ಫೋಟದಲ್ಲಿ 16 ಮಂದಿ ಗಾಯಗೊಂಡಿದ್ದರು. 1998ರ ಕೊಯಮತ್ತೂರು ರ‍್ಯಾಲಿಯ ಸ್ಫೋಟದಲ್ಲೂ ಸಿದ್ದಿಕ್ ಪಾತ್ರ ಇದೆ ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಶಿವಕಾಶಿ ಪಟಾಕಿ ತಯಾರಿಕಾ ಘಟಕದಲ್ಲಿ ಸ್ಫೋಟ: 8 ಸಾವು

ಸ್ಫೋಟ ಸಂಭವಿಸಿದ ಸ್ಥಳದಲ್ಲಿ ಅಗ್ನಿಶಾಮಕ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿದರು

ವಿರುಧುನಗರ/ತಮಿಳುನಾಡು (ಪಿಟಿಐ): ಶಿವಕಾಶಿಯ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಮಂಗಳವಾರ ಬೆಳಿಗ್ಗೆ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ 8 ಮಂದಿ ಮೃತಪಟ್ಟು, ಅನೇಕರು ಗಾಯಗೊಂಡಿದ್ದಾರೆ.

ಆರ್. ರಾಮಲಿಂಗಂ, ಸಿ.ಚೆಲ್ಲಪಾಂಡಿಯನ್, ಕೆ.ಲಕ್ಷ್ಮಿ, ಆರ್.ರಾಮಮೂರ್ತಿ, ಆರ್. ಪುಣ್ಯಮೂರ್ತಿ, ಕೆ. ರಾಮಜಯಂ, ಎಂ. ನಾಗಪಾಂಡಿ ಮತ್ತು ಜಿ. ವೀರಮಣಿ ಮೃತಪಟ್ಟವರು.

ಕಾರ್ಮಿಕರು ಘಟಕದಲ್ಲಿ ಕೆಲಸ ಮಾಡುತ್ತಿದ್ದಾಗ ದಿಢೀರ್ ಸ್ಫೋಟ ಸಂಭವಿಸಿದೆ. ಕಟ್ಟಡದಿಂದ ಎದ್ದ ದಟ್ಟ ಹೊಗೆ ಬಹು ದೂರದವರೆಗೆ ಕಾಣಿಸುತ್ತಿತ್ತು. ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆಯಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ತಲಾ ₹4 ಲಕ್ಷ, ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹1 ಲಕ್ಷ ಮತ್ತು ಇತರೆ ಗಾಯಾಳುಗಳಿಗೆ ₹50 ಸಾವಿರ ಪರಿಹಾರವನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಘೋಷಿಸಿದ್ದಾರೆ. ಪಟಾಕಿ ತಯಾರಿಕಾ ಘಟಕವು, ಶಿವಕಾಶಿ ಸಮೀಪದ ಚಿನ್ನಕಮನಪಟ್ಟಿಯಲ್ಲಿದ್ದು, ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಎರಡೇ ವರ್ಷದಲ್ಲಿ 97 ಸಾವಿರ ಮಂದಿಗೆ ಶಿಕ್ಷೆ

ಲಖನೌ (ಪಿಟಿಐ): 'ಕ್ರಿಮಿನಲ್ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಉತ್ತರಪ್ರದೇಶ ಸರ್ಕಾರ ಜಾರಿಗೊಳಿಸಿದ 'ಆಪರೇಷನ್ ಕನ್ವಿಕ್ಷನ್' ಅಭಿಯಾನದ ಅಡಿಯಲ್ಲಿ ಕಳೆದೆರಡು ವರ್ಷಗಳಲ್ಲಿ 97 ಸಾವಿರ ಮಂದಿಗಳನ್ನು ಅಪರಾಧಿಗಳು ಎಂದು ಘೋಷಿಸಿ, ಶಿಕ್ಷೆಗೆ ಗುರಿಪಡಿಸಲಾಗಿದೆ' ಎಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ, ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಯುವ ವೇಳೆ ವಿಶೇಷ ವಕೀಲರನ್ನು ನೇಮಿಸಿ, ತ್ವರಿತವಾಗಿ ಪೂರಕ ಸಾಕ್ಷ್ಯಗಳನ್ನು ಒದಗಿಸಿ, ಅಪರಾಧಿಗಳಿಗೆ ಗರಿಷ್ಠ ಶಿಕ್ಷೆಗೆ ಒಳಪಡಿಸಲು ಸರ್ಕಾರ ಈ ಅಭಿಯಾನದಡಿಯಲ್ಲಿ ನಿರ್ಧಾರ ಕೈಗೊಂಡಿತ್ತು. '2023ರ ಜುಲೈ 1ರಂದು ಆರಂಭಿಸಿದ 'ಆಪರೇಷನ್ ಕನ್ವಿಕ್ಷನ್' ಅಭಿಯಾನವು ಈ ವರ್ಷದ ಜೂನ್ ಮಧ್ಯಭಾಗದವರೆಗೆ 97,158 ಮಂದಿಗೆ ಶಿಕ್ಷೆ ವಿಧಿಸಲು ಕಾರಣವಾಗಿದೆ' ಎಂದು ಪ್ರಾಸಿಕ್ಯೂಷನ್ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ದೀಪೇಶ್ ಜುನೇಜಾ ತಿಳಿಸಿದ್ದಾರೆ.

'1,14,029 ಪ್ರಕರಣಗಳನ್ನು ಗುರುತಿಸಿ, 74,388 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. 68 ಅಪರಾಧಿಗಳಿಗೆ ಗಲ್ಲು ಶಿಕ್ಷೆ, 8,172 ಮಂದಿ ಜೀವಾವಧಿ ಶಿಕ್ಷೆ, 1,453 ಮಂದಿಗೆ 20 ವರ್ಷ ಜೈಲು ಹಾಗೂ 87,465 ಮಂದಿ 20 ವರ್ಷದವರೆಗೂ ಶಿಕ್ಷೆಗೆ ಗುರಿಯಾಗಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಮಣಿಪುರದಲ್ಲಿ ಮೂವರು ಬಂಡುಕೋರರ ಸೆರೆ

ಇಂಫಾಲ್ (ಪಿಟಿಐ): ಮಣಿಪುರದ ಪೂರ್ವ ಇಂಫಾಲ್ ಮತ್ತು ತೌಬಾಲ್ ಜಿಲ್ಲೆಗಳಲ್ಲಿ ಸುಲಿಗೆ ಸೇರಿದಂತೆ ಹಲವು ಆರೋಪಗಳನ್ನು ಎದುರಿಸುತ್ತಿದ್ದ ವಿವಿಧ ನಿಷೇಧಿತ ಸಂಘಟನೆಗಳ ಮೂವರು ಬಂಡುಕೋರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್(ಪಿ), ಕಂಗ್ಲೀಪಾಕ್ ಕಮ್ಯುನಿಸ್ಟ್ ಪಾರ್ಟಿ ಮತ್ತು ಪ್ರಿಪಕ್(ಪ್ರೊ) ಸಂಘಟನೆಗಳ ಮೂವರನ್ನು ಭೂವಿವಾದ, ಮಹಿಳೆಯರ ಮೇಲೆ ದೌರ್ಜನ್ಯ, ಹಣಕಾಸು ವಂಚನೆ, ಅಪಹರಣ, ಬಂಡುಕೋರರ ನೇಮಕ ಹೀಗೆ ಹಲವು ಆರೋಪಗಳ ಅಡಿಯಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಎರಡು ವರ್ಷದ ಹಿಂದೆ ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಆರಂಭವಾದ ದಿನದಿಂದ ಈವರೆಗೆ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿ ಹಲವರನ್ನು ವಶಕ್ಕೆ ಪಡೆದಿವೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಗಡಿಪಾರಾದರೂ ದೆಹಲಿಯಲ್ಲೇ ಉಳಿದ 6 ಮಂದಿ ಬಂಧನ

ನವದೆಹಲಿ (ಪಿಟಿಐ): ಭಾರತದಿಂದ ಗಡಿಪಾರಾಗಿ ತಿಂಗಳೊಳಗೆ ಅಕ್ರಮವಾಗಿ ಭಾರತದೊಳಕ್ಕೆ ನುಸುಳಿ ಬಂದಿರುವ ಆರೋಪಡಿ ಲಿಂಗತ್ವ ಅಲ್ಪಸಂಖ್ಯಾತೆಯೂ ಸೇರಿದಂತೆ ಆರು ಮಂದಿ ಬಾಂಗ್ಲಾದೇಶಿಯರನ್ನು ಪೊಲೀಸರು ಬಂಧಿಸಿದ್ದಾರೆ.

300 ಮಂದಿ ಅಕ್ರಮ ವಲಸಿಗರನ್ನು ಹಿಂಡನ್ ವಾಯುನೆಲೆಯಿಂದ ವಿಮಾನದ ಮೂಲಕ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಗಿತ್ತು. ಇವರೊಂದಿಗಿದ್ದ ಲಿಂಗತ್ವ ಅಲ್ಪಸಂಖ್ಯಾತೆ ಸುಹಾನ್ ಖಾನ್ (30) ಸೇರಿದಂತೆ ಆರು ಮಂದಿ ಪುನಃ ವಾಯವ್ಯ ದೆಹಲಿಯಲ್ಲಿ ಕಾಣಿಸಿಕೊಂಡಿದ್ದರು. ಜೂನ್ 30ರಂದು ಅವರನ್ನು ಬಂಧಿಸಲಾಯಿತು ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಸುಹಾನ್ ಖಾನ್ ಅವರನ್ನು ಹಿಂಡನ್ ವಾಯುಲೆಯಿಂದ ಅಗರ್ತಲಾಗೆ ವಿಮಾನದ ಮೂಲಕ ಕಳುಹಿಸಲಾಗಿತ್ತು. ಅಲ್ಲಿಂದ ಬಾಂಗ್ಲಾದೇಶಕ್ಕೆ ಕಳುಹಿಸಬೇಕಿತ್ತು. ಆದರೆ, ಸುಹಾನ್ ಖಾನ್ ಸೇರಿದಂತೆ ಆರು ಮಂದಿ ರೈಲಿನಲ್ಲಿ ದಹಲಿಗೆ ಮರಳಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಆರು ಸ್ಟೀಲ್ ಬಾಂಬ್ ಪತ್ತೆ

ಕಣ್ಣೂರು (ಕೇರಳ) (ಪಿಟಿಐ): ಜಿಲ್ಲೆಯ ಕೂತುಪರಂಬ ಎಂಬಲ್ಲಿ ಪ್ಲಾಸ್ಟಿಕ್ ಚೀಲವೊಂದರಲ್ಲಿ ಸುತ್ತಿ ಇಡಲಾಗಿದ್ದ 6 ಸ್ಟೀಲ್ ಬಾಂಬ್‌ಗಳನ್ನು ಕೇರಳ ಪೊಲೀಸರು ಪತ್ತೆ ಹಚ್ಚಿದ್ದಾರೆ. ಖಚಿತ ಮಾಹಿತಿ ಮೇರೆಗೆ ಪೊಲೀಸರು ಈ ಪ್ರದೇಶದಲ್ಲಿ ಶೋಧ ಕಾರ್ಯ ನಡೆಸಿದಾಗ ಬಾಂಬ್ ಪತ್ತೆಯಾಗಿವೆ. ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬಾಂಬ್‌ಗಳನ್ನು ನಿಷ್ಕ್ರಿಯಗೊಳಿಸಿದರು ಎಂದು ಮೂಲಗಳು ತಿಳಿಸಿವೆ.

ಗೋ ಹತ್ಯೆ ಆರೋಪ 133 ಮಂದಿ ಬಂಧನ

ಗುವಾಹಟಿ (ಪಿಟಿಐ): ಅಕ್ರಮವಾಗಿ ಗೋ ಹತ್ಯೆ ಮತ್ತು ಗೋಮಾಂಸ ಮಾರಾಟ ಮಾಡಿದ ಆರೋಪದಡಿ ಅಸ್ಸಾಂನಲ್ಲಿ ಮಂಗಳವಾರ 133 ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಗೋ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆಯಾಗುತ್ತಿರುವ ಬಗ್ಗೆ ಹಲವು ಘಟನೆಗಳು ವರದಿಯಾದ ಕಾರಣ ಸ್ವಯಂಪ್ರೇರಿತವಾಗಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಐಜಿಪಿ ಅಖಿಲೇಶ್ ಕುಮಾರ್ ಸಿಂಗ್ ಅವರು ತಿಳಿಸಿದ್ದಾರೆ.

'ರಾಜ್ಯದಾದ್ಯಂತ 112 ಹೋಟೆಲ್‌ಗಳ ಮೇಲೆ ದಾಳಿ ನಡೆಸಲಾಗಿದೆ. ಕಾರ್ಯಾಚರಣೆ ಮುಂದುವರಿಯಲಿದೆ' ಎಂದು ತಿಳಿಸಿದ್ದಾರೆ. ಗೋಮಾಂಸ ಸೇವನೆಗೆ ಅಸ್ಸಾಂನಲ್ಲಿ ನಿರ್ಬಂಧವಿಲ್ಲ. ಆದರೆ 2021ರ ಗೋಸಂರಕ್ಷಣಾ ಕಾಯ್ದೆಯ ಅನ್ವಯ ಗೋ ಹತ್ಯೆ ಹಾಗೂ ಹಿಂದೂ, ಜೈನ ಮತ್ತು ಸಿಖ್ ಧರ್ಮದವರು ಬಹುಸಂಖ್ಯಾತರಾಗಿರುವ ಪ್ರದೇಶಗಳಲ್ಲಿ ಮತ್ತು ದೇವಾಲಯಗಳ 5 ಕಿ.ಮೀ ವ್ಯಾಪ್ತಿಯಲ್ಲಿ ಗೋಮಾಂಸ ಮಾರಾಟಕ್ಕೆ ನಿಷೇಧ ಹೇರಲಾಗಿದೆ.

ಭಾರತಕ್ಕೆ ಮತ್ತೊಂದು ಸತ್ವಪರೀಕ್ಷೆ

ಎಜ್‌ಬಾಸ್ಟನ್‌ನಲ್ಲಿ ಎರಡನೇ ಟೆಸ್ಟ್ ಇಂದಿನಿಂದ • ಆತ್ಮವಿಶ್ವಾಸದಲ್ಲಿ ಇಂಗ್ಲೆಂಡ್

• ಸಿದ್ಧಿ ಕಿರಣ್

ಎಜ್‌ಬಾಸ್ಟನ್: ಗೆಲ್ಲುವುದನ್ನೇ ಹವ್ಯಾಸ ಮಾಡಿಕೊಂಡಂತೆ ಇದ್ದ ಭಾರತ ತಂಡ ಈಗ ಸೋಲಿನಲ್ಲೂ ಹಾಗೆಯೇ ಸಾಗುತ್ತಿದೆ. ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಸೋಲು ಇದಕ್ಕೆ ಕನ್ನಡಿ. ಪಂದ್ಯದ ಹೆಚ್ಚಿನ ಅವಧಿಯಲ್ಲಿ ಮೇಲುಗೈ ಸಾಧಿಸಿದ್ದ ಭಾರತ, ಕೊನೆಯಲ್ಲಿ ಎಡವಟ್ಟು ಮಾಡಿಕೊಂಡಿತು. ಧೈರ್ಯದಿಂದ ಆಡಿದ ಇಂಗ್ಲೆಂಡ್‌ಗೆ ಮಣಿಯಿತು.

ಶುಭಮನ್ ಗಿಲ್ ಅವರ ಸಾರಥ್ಯದ ಯುವ ತಂಡಕ್ಕೆ ಇದು ಮೊದಲ ಪರೀಕ್ಷೆಯಾಗಿತ್ತು. ಆ್ಯಂಡರ್ಸನ್– ತೆಂಡೂಲ್ಕರ್ ಟ್ರೋಫಿಯಲ್ಲಿ ಇನ್ನೂ ನಾಲ್ಕು ಟೆಸ್ಟ್‌ಗಳು ಬಾಕಿಯಿವೆ. ಇವುಗಳಲ್ಲಿ ಎರಡನೇ ಪಂದ್ಯ ಬುಧವಾರ ಎಜ್‌ಬಾಸ್ಟನ್‌ನಲ್ಲಿ ಆರಂಭವಾಗಲಿದೆ.

ಮೂವರು ದಿಗ್ಗಜರ– ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ಆರ್.ಅಶ್ವಿನ್– ನಿವೃತ್ತಿಯಿಂದ ತಂಡ ಪರಿವರ್ತನೆಯ ಹಾದಿಯಲ್ಲಿದೆ. ಇಂಥ ಸಂದರ್ಭದಲ್ಲಿ ಎಡವಟ್ಟುಗಳಾಗುವುದು ಸಹಜ. ಅದರಲ್ಲೂ ಇಂಗ್ಲೆಂಡ್‌ನಂಥ ಪರಿಸ್ಥಿತಿಯಲ್ಲಿ ಅನುಭವಿ ವೃತ್ತಿಪರ ತಂಡಗಳೂ ಮೈಮರೆಯುವಂತಿಲ್ಲ.

ಮುಖ್ಯಾಂಶಗಳು

- ಅಗ್ರಮಾನ್ಯ ವೇಗಿ ಜಸ್‌ಪ್ರೀತ್ ಬೂಮ್ರಾ ಆಡುವ ಬಗ್ಗೆ ಅನುಮಾನ
- ಇಬ್ಬರು ಸ್ಪಿನ್ನರ್‌ಗಳಿಗೆ ಅವಕಾಶ ಸಾಧ್ಯತೆ
- ಎಜ್‌ಬಾಸ್ಟನ್‌ನಲ್ಲಿ ಆಡಿದ ಏಳು ಪಂದ್ಯಗಳಲ್ಲಿ ಸೋತಿರುವ ಭಾರತ

ಮುಖ್ಯ ಕೋಚ್ ಗೌತಮ್ ಗಂಭೀರ್ ಅವಧಿಯಲ್ಲಿ ತಂಡ ಸತತವಾಗಿ ಸೋಲು ಕಾಣುತ್ತಿದೆ. ಅವರು ಈಗಿನ ಹುದ್ದೆ ವಹಿಸಿಕೊಂಡ ನಂತರ ಆಡಿದ 11 ಟೆಸ್ಟ್‌ಗಳಲ್ಲಿ ತಂಡ ಏಳರಲ್ಲಿ ಸೋತು, ಮೂರು ಗೆದ್ದು, ಒಂದು ಡ್ರಾ ಮಾಡಿಕೊಂಡಿದೆ. ಈ ಗೆಲುವು ಬಂದಿದ್ದು ಬಾಂಗ್ಲಾದೇಶ ತಂಡದ ಎದುರು. ನಂತರ ನ್ಯೂಜಿಲೆಂಡ್ ಎದುರು 0–3 ವೈಟ್‌ವಾಷ್ ಅನುಭವಿಸಬೇಕಾಯಿತು. ಅದೂ ತವರಿನಲ್ಲಿ, ಜೊತೆಗೆ ಪೂರ್ಣಪ್ರಮಾಣದ ತಂಡ ಆಡಿದ್ದಾಗ.

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕನಾಗಿ, ನಂತರ ಕೋಚ್ ಆಗಿ ಯಶಸ್ಸು ಕಂಡಿದ್ದ ಗಂಭೀರ್ ಅವರು ಟೀಮ್ ಇಂಡಿಯಾದ ಹೊಣೆ ಹೊತ್ತಾಗ ನಿರೀಕ್ಷೆಗಳು ಗರಿಗೆದರಿದ್ದವು. ಆದರೆ ಈಗ ಅವರ ನಿರ್ವಹಣೆ ಪರಾಮರ್ಶೆಗೆ ಒಳಗಾಗುತ್ತಿದೆ. ಗಂಭೀರ್ ಮುಂದಿನ ಕೆಲವು ವಾರಗಳಲ್ಲಿ ಇನ್ನಷ್ಟು ಕಠಿಣ ಪರೀಕ್ಷೆ ಎದುರಿಸಬೇಕಾಗುತ್ತದೆ.

ಲೀಡ್ಸ್ ಟೆಸ್ಟ್ ಹಿನ್ನಡೆಯ ನಂತರ ಅವರು ಮತ್ತು ಗಿಲ್ ಯಾವ ರೀತಿಯ ಸಂಯೋಜನೆಯೊಡನೆ ಕಣಕ್ಕಿಳಿಯುತ್ತಾರೆ ಎಂಬುದರಿಂದ ಈ ಪರೀಕ್ಷೆ ಆರಂಭವಾಗಲಿದೆ. ಜಸ್‌ಪ್ರೀತ್ ಬೂಮ್ರಾ ಆಡುವರೇ, ಇಲ್ಲವೇ ಎಂಬುದನ್ನು ತಂಡದ ಚಿಂತಕರ ಚಾವಡಿ ಖಚಿತಪಡಿಸಿಲ್ಲ. ಆದರೆ 'ನೆಟ್ಸ್'ನಲ್ಲಿ (ತಾಲೀಮು ವೇಳೆ) ಕಂಡಹಾಗೆ, ಈ ಮುಂಚೂಣಿ ಬೌಲರ್‌ಗೆ ವಿಶ್ರಾಂತಿ ನೀಡುವ ಸಾಧ್ಯತೆಯಿದ್ದು, ಆಕಾಶ್ ದೀಪ್ ಅವರಿಗೆ ಅವಕಾಶ ಸಿಗಬಹುದು. ಹೀಗಾದಲ್ಲಿ ಮೊಹಮ್ಮದ್ ಸಿರಾಜ್ ಅವರ ಮೇಲೆ ಹೆಚ್ಚಿನ ಒತ್ತಡ ಬೀಳಲಿದೆ. ಪ್ರಸಿದ್ಧ ಕೃಷ್ಣ ಮತ್ತು ಆಕಾಶ್ ಅವರು ಈ ಮಟ್ಟದಲ್ಲಿ ಅನನುಭವಿಗಳು.

ಭಾರತ ಇಬ್ಬರು ಸ್ಪಿನ್ನರ್‌ಗಳೊಡನೆ ಕಣಕ್ಕಿಳಿಯುವ ಸಾಧ್ಯತೆಯೂ ಇದೆ. ಎರಡನೇ ಸ್ಪಿನ್ನರ್ ಕುಲದೀಪ್ ಯಾದವ್ ಆಗುತ್ತಾರೆಯೇ ಅಥವಾ ಬ್ಯಾಟಿಂಗ್‌ಗೆ ಬಲ ನೀಡಬಲ್ಲ ವಾಷಿಂಗ್ಟನ್ ಸುಂದರ್ ಆಗುತ್ತಾರೆಯೇ ಎಂಬುದನ್ನು ಕಾದು ನೋಡಬೇಕಾಗಿದೆ. ಇದು ಪಿಚ್ ಮತ್ತು ಹವಾಮಾನದ ಪರಿಸ್ಥಿತಿಯನ್ನು ಅವಲಂಬಿಸಿದೆ.

ಭಾರತ– ಇಂಗ್ಲೆಂಡ್ ತಂಡಗಳ ಬಲಾಬಲ

	ಪಂದ್ಯ	ಭಾರತಕ್ಕೆ ಜಯ	ಡ್ರಾ	ಇಂಗ್ಲೆಂಡ್‌ಗೆ ಜಯ
ಇಂಗ್ಲೆಂಡ್ ನೆಲದಲ್ಲಿ	68	9	22	37
ಕೊನೆಯ 14 ಪಂದ್ಯ	14	3	1	10
ಬರ್ಮಿಂಗ್‌ಹ್ಯಾಮ್‌ನಲ್ಲಿ	8	0	1	7

ಗಿಲ್ ಯುವ ನಾಯಕನಾಗಿರುವ ಕಾರಣ ಪ್ರಮುಖ ನಿರ್ಧಾರಗಳನ್ನು ಗಂಭೀರ್ ಕೈಗೊಳ್ಳಲಿದ್ದು, ಅವರು ಸೂಕ್ತ ಸಂಯೋಜನೆ ರೂಪಿಸಿಕೊಳ್ಳಬೇಕಾಗಿದೆ. ಮತ್ತೊಂದು ಸೋಲು ಭಾರತವನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಬಹುದು. ಜೊತೆಗೆ ಗಂಭೀರ್ ಮತ್ತಷ್ಟು ವಿಮರ್ಶೆಗೆ ಗುರಿಯಾಗಬಹುದು.

ಇದೆಲ್ಲದರ ಜೊತೆಗೆ ಭಾರತಕ್ಕೆ ಎಜ್‌ಬಾಸ್ಟನ್ ಸ್ಮರಣೀಯ ತಾಣವೂ ಅಲ್ಲ. ಇಲ್ಲಿ ಆಡಿದ ಪಂದ್ಯಗಳಲ್ಲಿ ಭಾರತ ಏಳು ಸೋತಿದ್ದು, ಒಂದು ಪಂದ್ಯ ಡ್ರಾ ಆಗಿದೆ.

ಇನ್ನೊಂದು ಕಡೆ ಇಂಗ್ಲೆಂಡ್ ತುಂಬು ವಿಶ್ವಾಸದಿಂದ ಇದೆ. ವೇಗದ ಬ್ಯಾಟಿಂಗ್‌ನಿಂದ ಟೆಸ್ಟ್ ಕ್ರಿಕೆಟ್‌ಗೆ ಹೊಸ ವ್ಯಾಖ್ಯಾನ ಬರೆದ ತಂಡ ಇದು. ಲೀಡ್ಸ್‌ನಲ್ಲಿ ಹಿನ್ನಡೆಯಿಂದ ಅದು ಗೆಲುವು ಕಸಿದ ರೀತಿ ಅಮೋಘವಾಗಿತ್ತು. ಅಂತಿಮ ದಿನ ದೊಡ್ಡ ಮೊತ್ತವನ್ನು ಬೆನ್ನಟ್ಟಿದ ರೀತಿ 'ಬಾಝ್‌ಬಾಲ್' ಕ್ರಿಕೆಟ್ ಶೈಲಿಗೆ ಅದು ಸೂಕ್ತವೆಂಬುದನ್ನು ನಿರೂಪಿಸಿತು.

ಯಾವುದೇ ಬದಲಾವಣೆ ಮಾಡದೇ 11ರ ಬಳಗವನ್ನು ಎರಡು ದಿನ ಮೊದಲೇ ಪ್ರಕಟಿಸಿರುವುದು ಅದರ ವಿಶ್ವಾಸಕ್ಕೆ ಕನ್ನಡಿ. ಗೊಂದಲದಲ್ಲಿ ಇರುವ ಭಾರತ ತಂಡದ ಗಾಯದ ಮೇಲೆ ಉಪ್ಪು ಸವರಲು ಯತ್ನಿಸಲಿದೆ.

ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಕೋಚ್ ಗೌತಮ್ ಗಂಭೀರ್ ಜೊತೆಗೆ ಸಮಾಲೋಚನೆ ನಡೆಸಿದರು —ಎಕ್ಸ್ ಚಿತ್ರ

ಭಾರತ VS ಇಂಗ್ಲೆಂಡ್
ಇಂದು ಮಧ್ಯಾಹ್ನ 2:30 ರಿಂದ
SONY SPORTS TEN 1 — ENGLISH
SONY SPORTS TEN 3 — HINDI
SONY SPORTS TEN 5 — ENGLISH

ಏಷ್ಯನ್ ಟಿಟಿ ದಿವ್ಯಾಂಶಿಗೆ ಚಿನ್ನ

ತಾಷ್ಕೆಂಟ್ (ಉಜ್ಬೇಕಿಸ್ತಾನ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ದಿವ್ಯಾಂಶಿ ಭೌಮಿಕ್ ಅವರು ಇಲ್ಲಿ ನಡೆದ ಏಷ್ಯನ್ ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ 15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದರು. 36 ವರ್ಷಗಳಲ್ಲಿ ಈ ಪ್ರಶಸ್ತಿ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಮಹಾರಾಷ್ಟ್ರದ 14 ವರ್ಷ ವಯಸ್ಸಿನ ದಿವ್ಯಾಂಶಿ ಫೈನಲ್ ಹಣಾಹಣಿಯಲ್ಲಿ 4-2 ಗೇಮ್‌ಗಳಿಂದ ಚೀನಾದ ಝು ಕಿಹಿ ಅವರನ್ನು ಸೋಲಿಸಿದರು. ಪ್ರಶಸ್ತಿಯ ಹಾದಿಯಲ್ಲಿ ಭಾರತದ ಆಟಗಾರ್ತಿಯು ಚೀನಾದ ಮೂವರು ಆಟಗಾರ್ತಿಯರನ್ನು ಹಿಮ್ಮೆಟ್ಟಿಸಿದರು.

ಎರಡನೇ ಶ್ರೇಯಾಂಕ ಪಡೆದಿದ್ದ ದಿವ್ಯಾಂಶಿ ಅವರು ಈ ಗೆಲುವಿನೊಂದಿಗೆ ವಿಶ್ವ ಯುವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದರು. ಕಳೆದ ಏಪ್ರಿಲ್‌ನಲ್ಲಿ ನಡೆದ ಮಹಾರಾಷ್ಟ್ರದ ಟೇಬಲ್ ಟೆನಿಸ್ ಸೂಪರ್ ಲೀಗ್ (ಟಿಟಿಎಸ್‌ಎಲ್) ನಲ್ಲಿ ಅವರು ಅತ್ಯುತ್ತಮ ಆಟಗಾರ್ತಿ ಹೊರಹೊಮ್ಮಿದ್ದರು.

ತಾಷ್ಕೆಂಟ್‌ನಲ್ಲಿ ಭಾರತವು ಒಂದು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಂದಿಗೆ ತನ್ನ ಅಭಿಯಾನವನ್ನು ಕೊನೆಗೊಳಿಸಿತು.

ಬ್ಯಾಸ್ಕೆಟ್‌ಬಾಲ್: ಕೋಲಾರ ಜಿಲ್ಲಾ ತಂಡಕ್ಕೆ ಗೆಲುವು

ಬೆಂಗಳೂರು: ಅನಿಲ್ ಹಾಗೂ ತಿಲಕ್ ಅವರ ಆಟದ ಬಲದಿಂದ ಕೋಲಾರ ಜಿಲ್ಲಾ ತಂಡವು ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಸಿ' ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 61–51ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಲೀಗ್ ಹಂತದ ಪಂದ್ಯದಲ್ಲಿ ಮೊದಲಾರ್ಧದಲ್ಲಿ ಹತ್ತು ಅಂಕಗಳಿಂದ (22–32) ಹಿನ್ನಡೆಯಲ್ಲಿದ್ದ ಕೋಲಾರ ತಂಡವು ನಂತರದಲ್ಲಿ ಪಾರಮ್ಯ ಮೆರೆಯಿತು. ಅನಿಲ್ 27 ಹಾಗೂ ತಿಲಕ್ 10 ಅಂಕ ಗಳಿಸಿದರು.

ಫಲಿತಾಂಶಗಳು: ಎಚ್‌ಬಿಆರ್ ಬಿ.ಸಿ ತಂಡವು 71–67ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಮೈಸೂರು ಜಿಲ್ಲೆ ಬಿ 64–57ರಿಂದ ಧಾರವಾಡ ಜಿಲ್ಲೆ ಎ ವಿರುದ್ಧ; ಚಿಕ್ಕಮಗಳೂರು ಜಿಲ್ಲೆ 85–76ರಿಂದ ಕೋಲಾರ ಜಿಲ್ಲೆ ವಿರುದ್ಧ; ಹಾಸನ ಜಿಲ್ಲೆ 69–48ರಿಂದ ಧಾರವಾಡ ಜಿಲ್ಲೆ ಬಿ ವಿರುದ್ಧ; ಯಲಹಂಕ ನ್ಯೂ ಟೌನ್ ಬಿ.ಸಿ ತಂಡವು 61–50ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಎಂಇಜಿ & ಸೆಂಟರ್ ತಂಡವು 71–36ರಿಂದ ಹಾಸನ ಜಿಲ್ಲೆ ವಿರುದ್ಧ; ಮೈಸೂರು ಜಿಲ್ಲೆ ಬಿ ತಂಡವು 68–54ರಿಂದ ಸಿನ್‌ಸಿನಾಟೀಸ್ ಬಿ.ಸಿ ವಿರುದ್ಧ; ಕೋಲಾರ ಜಿಲ್ಲಾ ತಂಡವು 61–51ರಿಂದ ಮೌಂಟ್ಸ್ ಕ್ಲಬ್ ವಿರುದ್ಧ ಹಾಗೂ ಡಿಆರ್‌ಡಿಒ ತಂಡವು 64–46ರಿಂದ ಧಾರವಾಡ ಜಿಲ್ಲೆ ಬಿ ವಿರುದ್ಧ ಜಯ ಸಾಧಿಸಿದವು.

ಉಮ್ರಾವ್ ಜಾನ್ ಮತ್ತೆ ವೈಭವೋಪೇತವಾಗಿ ಥಿಯೇಟರ್‌ಗಳಲ್ಲಿ ಮರು ಬಿಡುಗಡೆಯಾಗುತ್ತಿದೆ!

ಕ್ರೀಡಾನೀತಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತವನ್ನು ಜಾಗತಿಕ ಕ್ರೀಡಾ ಶಕ್ತಿಕೇಂದ್ರವನ್ನಾಗಿ ರೂಪಿಸುವ ಗುರಿಹೊಂದಿರುವ ರಾಷ್ಟ್ರೀಯ ಕ್ರೀಡಾ ನೀತಿಗೆ ಕೇಂದ್ರ ಸಚಿವ ಸಂಪುಟ ಸಭೆ ಮಂಗಳವಾರ ಅನುಮೋದನೆ ನೀಡಿತು.

ಈ ಹಿಂದೆ 2001ರಲ್ಲಿ ಕ್ರೀಡಾನೀತಿ ರೂಪಿಸಲಾಗಿತ್ತು. ಹೊಸ ನೀತಿಯು 2036ರ ಒಲಿಂಪಿಕ್ ಕ್ರೀಡೆಗಳು ಸೇರಿದಂತೆ ಪ್ರಮುಖ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತವನ್ನು ಪ್ರಬಲ ಶಕ್ತಿಯನ್ನಾಗಿ ರೂಪಿಸುವ ಮಾರ್ಗಸೂಚಿ ಹೊಂದಿದೆ.

ಕೇಂದ್ರ ಸಚಿವಾಲಯಗಳು, ನೀತಿ ಆಯೋಗ, ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು, ಕ್ರೀಡಾಪಟುಗಳು, ವಿಷಯತಜ್ಞರು ಮತ್ತು ಭಾಗೀದಾರರ ಜೊತೆ ಸಮಾಲೋಚಿಸಿದ ನಂತರ ಕ್ರೀಡಾನೀತಿಯನ್ನು ರೂಪಿಸಲಾಗಿದೆ.

'ನಾವು ಹಿಂದಿನ 10 ವರ್ಷಗಳ ಅನುಭವ ಬಳಸಿಕೊಂಡಿದ್ದು, ಹೊಸ ನೀತಿಯು ಕ್ರೀಡೆಗಳ ಸಬಲೀಕರಣದ ಗುರಿಹೊಂದಿದೆ. ಭಾರತವನ್ನು 2047ರ ಒಳಗೆ ಜಗತ್ತಿನ ಐದು ಅಗ್ರ ರಾಷ್ಟ್ರಗಳಲ್ಲಿ ಒಂದಾಗಿಸುವ ಉದ್ದೇಶವನ್ನು ಹೊಂದಿ' ಎಂದು ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಜಾಗತಿಕ ಕ್ರೀಡಾ ವೇದಿಕೆಗಳಲ್ಲಿ ಶ್ರೇಷ್ಠತೆ, ಆರ್ಥಿಕ ಅಭಿವೃದ್ಧಿಗೆ ಕ್ರೀಡೆಗಳನ್ನು ಬಳಸಿಕೊಳ್ಳುವಿಕೆ, ಸಾಮಾಜಿಕ ಅಭಿವೃದ್ಧಿಯಲ್ಲಿ ಕ್ರೀಡೆಗಳ ಒಳಗೊಳ್ಳುವಿಕೆ, ಕ್ರೀಡೆಯನ್ನು ರಾಷ್ಟ್ರೀಯ ಆಂದೋಲನವಾಗಿ ಮಾಡುವುದು, 2020ರ ಎನ್‌ಇಪಿಗೆ ಅನುಗುಣವಾಗಿ ಕ್ರೀಡೆಯನ್ನು ಬೆಳೆಸುವುದು – ಇವು ಹೊಸ ಕ್ರೀಡಾನೀತಿಯ ಪ್ರಮುಖ ಅಂಶಗಳಾಗಿವೆ.

ಈ ನೀತಿಯನ್ನು 'ಪರಿವರ್ತನೆಯ ಹೆಜ್ಜೆ' ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಬಣ್ಣಿಸಿದ್ದಾರೆ. 'ಈ ಮೈಲಿಗಲ್ಲು ಯೋಜನೆ ಕ್ರೀಡಾ ಸಂಸ್ಕೃತಿಯನ್ನು ತಳಮಟ್ಟದಲ್ಲಿ ಉತ್ತೇಜಿಸಲು, ಅಥ್ಲೀಟುಗಳ ಅಭಿವೃದ್ಧಿಗೆ ಬೆಂಬಲ ನೀಡಲು ಮತ್ತು ಜಾಗತಿಕ ಕ್ರೀಡಾ ಕ್ಷೇತ್ರದಲ್ಲಿ ದೇಶವನ್ನು ಪ್ರಬಲ ಶಕ್ತಿಯನ್ನಾಗಿ ರೂಪಿಸಲು ದೂರದೃಷ್ಟಿಯ ಕಾರ್ಯತಂತ್ರ ಹೊಂದಿದೆ' ಎಂದಿದ್ದಾರೆ.

ಗೋವಾದತ್ತ ಕರ್ನಾಟಕದ ಕೌಶಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಮಧ್ಯಮವೇಗಿ ವಾಸುಕಿ ಕೌಶಿಕ್ ಅವರು ಕರ್ನಾಟಕ ಕ್ರಿಕೆಟ್ ತಂಡವನ್ನು ತೊರೆದು ಗೋವಾ ಬಳಗದಲ್ಲಿ ಸೇರ್ಪಡೆಯಾಗಲು ನಿರ್ಧರಿಸಿದ್ದಾರೆ.

ದೇಶಿ ಟೂರ್ನಿಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಪ್ರಮುಖ ಬೌಲರ್ ಆಗಿದ್ದ 32 ವರ್ಷದ ಕೌಶಿಕ್ ಹೋದ ವರ್ಷದ ರಣಜಿ ಋತುವಿನಲ್ಲಿ ಪ್ರಮುಖ ಬೌಲರ್‌ಗಳ ಗೈರು ಹಾಜರಿಯಲ್ಲಿ ತಂಡದ ಬೌಲಿಂಗ್ ಸಾರಥ್ಯವನ್ನು ಸಮರ್ಥವಾಗಿ ನಿಭಾಯಿಸಿದ್ದರು. ಅಲ್ಲದೇ ಕಳೆದ ಋತುವಿನಲ್ಲಿ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಆ ಟೂರ್ನಿಯಲ್ಲಿ ಅವರು ಒಟ್ಟು 18 ವಿಕೆಟ್ ಗಳಿಸಿದ್ದರು. ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರ್ ಆಗಿದ್ದರು. ತಮಿಳುನಾಡು ತಂಡದ ವರುಣ್ ಚಕ್ರವರ್ತಿ ಅವರು ಕೂಡ 18 ವಿಕೆಟ್ ಪಡೆದಿದ್ದರು. ಪಂಜಾಬ್ ವೇಗಿ ಅರ್ಷದೀಪ್ ಸಿಂಗ್ (20) ಅಗ್ರಸ್ಥಾನ ಪಡೆದಿದ್ದರು.

'ನನ್ನ ಮನವಿಗೆ ಸ್ಪಂದಿಸಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ನಿರಾಕ್ಷೇಪಣಾ ಪತ್ರವನ್ನು ನೀಡಿದೆ. ಇನ್ನೊಂದು ವರ್ಷವಾದರೂ ಕರ್ನಾಟಕದಲ್ಲಿ ಆಡುವಂತೆ ಪದಾಧಿಕಾರಿಗಳು ಸಲಹೆ ನೀಡಿದರು. ಆದರೆ, ಇನ್ನು ಮುಂದೆ ಭಾರತ ತಂಡಕ್ಕೆ ಆಡುವ ಅವಕಾಶ ಸಿಗುವುದು ಕಷ್ಟ. ಇನ್ನೆರಡು, ಮೂರು ವರ್ಷ ಬಿಟ್ಟರೆ ಬೇರೆ ರಾಜ್ಯಗಳ ತಂಡಗಳಿಂದಲೂ ಸ್ಪಂದನೆ ಸಿಗುವುದಿಲ್ಲ. ಆದ್ದರಿಂದ ನಾನು ಗೋವಾಕ್ಕೆ ತೆರಳಲು ನಿರ್ಧರಿಸಿದೆ. ದೇಶಿ ಕ್ರಿಕೆಟ್‌ನಲ್ಲಿ ಆದಷ್ಟು ಹೆಚ್ಚು ವರ್ಷಗಳ ಕಾಲ ಆಡುವ ಗುರಿ ನನ್ನದು' ಎಂದು ಕೌಶಿಕ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕರ್ನಾಟಕ ತಂಡದಲ್ಲಿ ಆಡುವಾಗ ರಣಜಿ ಟ್ರೋಫಿ ಜಯಿಸಲು ಸಾಧ್ಯವಾಗಲಿಲ್ಲ ಎಂಬ ಬೇಸರ ಇದೆ. ಒಂದು ಬಾರಿ ಸೆಮಿಫೈನಲ್ ವರೆಗೂ ತಂಡ ಬಂದಿತ್ತು. ಆದರೆ ಕನಸು ಕೈಗೂಡಿರಲಿಲ್ಲ. ಅದನ್ನು ಬಿಟ್ಟರೆ ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಪ್ರಮುಖ ಬಿಸಿಸಿಐ ಟ್ರೋಫಿ ಜಯದಲ್ಲಿ ಭಾಗಿಯಾಗಿದ್ದೆ ಎನ್ನುವ ತೃಪ್ತಿ ಇದೆ' ಎಂದೂ ಕೌಶಿಕ್ ಹೇಳಿದರು.

ಚಿಟಿಕೆ ಸುದ್ದಿ

ವಿಶ್ವ ಜೂನಿಯರ್ ಈಜು: ರಾಜ್ಯದ ಐವರ ಆಯ್ಕೆ

ಬೆಂಗಳೂರು: ಕರ್ನಾಟಕದ ದರ್ಶನ್ ಎಸ್., ದಕ್ಷಣ್ ಎಸ್., ದಿನಿಧಿ ದೇಸಿಂಗು, ವಿಹಿತಾ ನಯನಾ ಲೋಕನಾಥನ್ ಮತ್ತು ರುಜುಲಾ ಎಸ್. ಅವರು ರುಮೇನಿಯಾದ ಒಟೊಪೆನಿಯಲ್ಲಿ ಆಗಸ್ಟ್ 19 ರಿಂದ 24ರವರೆಗೆ ನಡೆಯಲಿರುವ ವಿಶ್ವ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ ಎಂದು ಭಾರತ ಈಜು ಫೆಡರೇಷನ್ ಮಂಗಳವಾರ ಪ್ರಕಟಿಸಿದೆ.

ಇತ್ತೀಚೆಗೆ ಭುವನೇಶ್ವರದಲ್ಲಿ ನಡೆದ 78ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿನ ಪ್ರದರ್ಶನದ ಆಧಾರದಲ್ಲಿ ಈ ಈಜುಪಟುಗಳನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ.

ದಕ್ಷಿಣ ಆಫ್ರಿಕಾಕ್ಕೆ ಭಾರಿ ಗೆಲುವು

ಬುಲಾವಯೊ, ಜಿಂಬಾಬ್ವೆ (ಎಎಫ್‌ಪಿ): ವೇಗದ ಬೌಲರ್ ಕಾರ್ಬಿನ್ ಬಾಷ್ (43ಕ್ಕೆ5) ಅವರ ಅಮೋಘ ಬೌಲಿಂಗ್ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡ, ಕ್ವೀನ್ಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಜಿಂಬಾಬ್ವೆ ತಂಡದ ಮೇಲೆ 328 ರನ್‌ಗಳ ಭಾರಿ ಜಯಪಡೆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 9ಕ್ಕೆ418 ಡಿಕ್ಲೇರ್ಡ್, ಜಿಂಬಾಬ್ವೆ: 251; ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 369; ಜಿಂಬಾಬ್ವೆ: 66.2 ಓವರುಗಳಲ್ಲಿ 208 (ಕ್ರೇಗ್ ಇರ್ವಿನ್ 49, ವೆಲಿಂಗ್ಟನ್ ಮಸಕದ್ಜ 57; ಕೋಡಿ ಯೂಸುಫ್ 22ಕ್ಕೆ3, ಕಾರ್ಬಿನ್ ಬಾಷ್ 43ಕ್ಕೆ5).

ಭಾರತ ಎ ತಂಡಕ್ಕೆ ಸಂಜಯ್ ಸಾರಥ್ಯ

ನವದೆಹಲಿ (ಪಿಟಿಐ): ಡಿಫೆಂಡರ್ ಸಂಜಯ್ ಅವರು ಜುಲೈ 8ರಿಂದ ಆರಂಭವಾಗುವ ಯುರೋಪ್ ಪ್ರವಾಸದಲ್ಲಿ ಭಾರತ ಎ ಹಾಕಿ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತ ಎ ತಂಡವು ಫ್ರಾನ್ಸ್, ಐರ್ಲೆಂಡ್ ಹಾಗೂ ನೆದರ್ಲೆಂಡ್ಸ್ ವಿರುದ್ಧ ತಲಾ ಎರಡು ಹಾಗೂ ಇಂಗ್ಲೆಂಡ್, ಬೆಲ್ಜಿಯಂ ವಿರುದ್ಧ ತಲಾ ಒಂದು ಪಂದ್ಯ ಆಡಲಿದೆ.

20 ಮಂದಿಯ ಪುರುಷರ ಎ ತಂಡವನ್ನು ಹಾಕಿ ಇಂಡಿಯಾ ಮಂಗಳವಾರ ಪ್ರಕಟಿಸಿದೆ.

ತಂಡ ಇಂತಿದೆ: ಗೋಲ್‌ಕೀಪರ್ಸ್: ಪವನ್, ಎಚ್.ಎಸ್.ಮೋಹಿತ್. ಡಿಫೆಂಡರ್ಸ್: ಪ್ರತಾಪ್ ಲಾಕ್ರಾ, ವರುಣ್ ಕುಮಾರ್, ಅಮನ್‌ದೀಪ್ ಲಾಕ್ರಾ, ಪ್ರಮೋದ್, ಸಂಜಯ್(ನಾಯಕ). ಮಿಡ್‌ಫೀಲ್ಡರ್ಸ್: ಪೂವಣ್ಣ ಸಿ.ಬಿ., ಮೊಹಮ್ಮದ್ ರಹೀಲ್ ಮೌಸೀನ್, ಎಂ. ರವಿಚಂದ್ರ ಸಿಂಗ್(ಉಪನಾಯಕ), ವಿಷ್ಣುಕಾಂತ್ ಸಿಂಗ್, ಪಾರ್ದೀಪ್ ಸಿಂಗ್, ರಾಜಿಂದರ್ ಸಿಂಗ್. ಫಾರ್ವರ್ಡ್ಸ್: ಅಂಗದ್ಬೀರ್ ಸಿಂಗ್, ಬೋಬಿ ಸಿಂಗ್ ಧಾಮಿ, ಮಣಿಂದರ್ ಸಿಂಗ್, ವೆಂಕಟೇಶ್ ಕೆ., ಆದಿತ್ಯ ಅರ್ಜುನ್ ಎಲ್., ಸೆಲ್ವನ್ ಕಾರ್ತಿ, ಉತ್ತಮ್ ಸಿಂಗ್.

ಮತ್ತಷ್ಟು ಶ್ರೇಯಾಂಕಿತರಿಗೆ ಆಘಾತ • ಸಿನ್ನರ್, ಟೇಲರ್ ಶುಭಾರಂಭ

ಪೆಗುಲಾ, ಕ್ವಿನ್ವೆನ್, ಜ್ವೆರೆವ್ ನಿರ್ಗಮನ

ಲಂಡನ್ (ಎಪಿ/ಎಎಫ್‌ಪಿ): ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಮತ್ತಷ್ಟು ಶ್ರೇಯಾಂಕಿತ ಆಟಗಾರರು ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಜೆಸ್ಸಿಕಾ ಪೆಗುಲಾ ಮತ್ತು ಐದನೇ ಶ್ರೇಯಾಂಕದ ಝೆಂಗ್ ಕ್ವಿನ್ವೆನ್ ಮಂಗಳವಾರ ಗಂಟುಮೂಟೆ ಕಟ್ಟಿದರು.

ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೆವ್ ಮತ್ತು ಏಳನೇ ಶ್ರೇಯಾಂಕದ ಲೊರೆಂಜೊ ಮುಸೆಟ್ಟಿ ಆರಂಭಿಕ ಸುತ್ತು ದಾಟಲು ವಿಫಲವಾದರು. ಡೆನ್ಮಾರ್ಕ್‌ನ ಹೋಲ್ಗರ್ ರೂನ್ (ಎಂಟನೇ ಶ್ರೇಯಾಂಕ) ಮತ್ತು ರಷ್ಯಾದ ಡೇನಿಯಲ್ ಮೆಡ್ವೆಡೇವ್ (ಒಂಬತ್ತನೇ) ಅವರು ಮೊದಲ ದಿನವೇ ನಿರ್ಗಮಿಸಿದ್ದರು.

ವಿಶ್ವದ ಅಗ್ರಮಾನ್ಯ ಆಟಗಾರ, ಇಟಲಿಯ ಯಾನಿಕ್ ಸಿನ್ನರ್ ನಿರಾಯಾಸವಾಗಿ ಎರಡನೇ ಸುತ್ತು ಪ್ರವೇಶಿಸಿದರೆ, ಐದನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಐದು ಸೆಟ್‌ಗಳ ಹೋರಾಟದಲ್ಲಿ ಪ್ರಯಾಸದ ಗೆಲುವು ಸಾಧಿಸಿದರು.

ಇಟಲಿಯ ಎಲಿಸಬೆಟ್ಟಾ ಕೊಕಿಯಾರೆಟ್ಟೊ 6-2, 6-3ರಿಂದ ಅಮೆರಿಕದ ಪೆಗುಲಾ ಅವರನ್ನು ಮಣಿಸಿದರು. 116ನೇ ರ‍್ಯಾಂಕ್‌ನ ಎಲಿಸಬೆಟ್ಟಾ 58 ನಿಮಿಷದಲ್ಲಿ ಗೆಲುವು ಸಾಧಿಸಿದರು.



ಗೆಲುವಿನ ಸಂಭ್ರಮದಲ್ಲಿ ಇಟಲಿಯ ಯಾನಿಕ್ ಸಿನ್ನರ್ (ಎಡ), ಎಲಿಸಬೆಟ್ಟಾ ಕೊಕಿಯಾರೆಟ್ಟೊ ಎಪಿ:ಪಿಟಿಐ /ಎಎಫ್‌ಪಿ ಚಿತ್ರ

ಪೆಗುಲಾ ಐದು ವರ್ಷಗಳಲ್ಲಿ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಮೊದಲ ಸುತ್ತಿನಲ್ಲೇ ಹೊರಬಿದ್ದರು.

81ನೇ ಕ್ರಮಾಂಕದ ಕ್ಯಾಥರಿನಾ ಸಿನಿಯಕೋವಾ 7-5, 4-6, 6-1ರಿಂದ ಒಲಿಂಪಿಕ್ ಚಾಂಪಿಯನ್ ಝೆಂಗ್ ಅವರನ್ನು ಹಿಮ್ಮೆಟ್ಟಿಸಿದರು. 2 ಗಂಟೆ 25 ನಿಮಿಷ ನಡೆದ ಹಣಾಹಣಿಯಲ್ಲಿ ಝೆಕ್ ರಿಪಬ್ಲಿಕ್‌ನ ಕ್ಯಾಥರಿನಾ ಮೇಲುಗೈ ಸಾಧಿಸಿದರು.

ಜ್ವೆರೆವ್‌ಗೆ ಆಘಾತ: ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್ 7-6 (7/3), 6-7 (8/10), 6-3, 6-7 (5/7), 6-4ರಿಂದ ಜರ್ಮನಿಯ ಜ್ವೆರೆವ್ ಅವರಿಗೆ ಆಘಾತ ನೀಡಿದರು.

28 ವರ್ಷ ವಯಸ್ಸಿನ ಜ್ವೆರೆವ್, 2019ರ ನಂತರ ಮೊದಲ ಬಾರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆರಂಭಿಕ ಸುತ್ತಿನಲ್ಲಿ ಹೊರಬಿದ್ದಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಸತತ ಒಂಬತ್ತನೇ ಬಾರಿ ಸ್ಪರ್ಧಿಸಿದ್ದ ಜ್ವೆರೆವ್ ಅವರಿಗೆ ಈತನಕ ನಾಲ್ಕನೇ ಸುತ್ತನ್ನು ದಾಟಲು ಸಾಧ್ಯವಾಗಿಲ್ಲ.

ಮುಸೆಟ್ಟಿ ನಿರ್ಗಮನ: ಜಾರ್ಜಿಯಾದ ಕ್ವಾಲಿಫೈಯರ್ ಆಟಗಾರ ನಿಕೋಲಸ್ ಬಸಿಲಾಶ್ವಿಲಿ 6-2, 4-6, 7-5, 6-1ರಿಂದ ಇಟಲಿಯ ಮುಸೆಟ್ಟಿ ಅವರಿಗೆ ಆಘಾತ ನೀಡಿದರು.

ಸಿನ್ನರ್ ಶುಭಾರಂಭ: ಇಟಲಿಯ ತಾರೆ ಸಿನ್ನರ್ ನೇರ ಸೆಟ್‌ಗಳ ಗೆಲುವಿನೊಂದಿಗೆ ಶುಭಾರಂಭ ಮಾಡಿದರು. 23 ವರ್ಷ ವಯಸ್ಸಿನ ಅವರು 6-4, 6-3, 6-0 ರಿಂದ ಸ್ವದೇಶದ ಲುಕಾ ನಾರ್ಡಿ ವಿರುದ್ಧ ಗೆದ್ದರು.

ಕಳೆದ ಆರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಮೂರು ಪ್ರಶಸ್ತಿ ಗೆದ್ದಿರುವ ಇಟಲಿಯ ಆಟಗಾರ, ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಚೊಚ್ಚಲ ಪ್ರಶಸ್ತಿ ಎದುರು ನೋಡುತ್ತಿದ್ದಾರೆ. 2023ರಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದು ಈವರೆಗಿನ ಉತ್ತಮ ಸಾಧನೆಯಾಗಿದೆ.

ಅಮೆರಿಕದ ಟೇಲರ್ 6-7 (6/8), 6-7 (8/10), 6-4, 7-6 (8/6), 6-4ರಿಂದ ಫ್ರಾನ್ಸ್‌ನ ಜಿಯೋವಾನಿ ಎಂಪೆಟ್ಶಿ ಪೆರಿಕಾರ್ಡ್ ವಿರುದ್ಧ; 11ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ (ಆಸ್ಟ್ರೇಲಿಯಾ) 6-2, 6-2, 7-6 (7/2) ರಿಂದ ರಾಬರ್ಟೊ ಕಾರ್ಬಲ್ಲೆಸ್ ಬೇನಾ (ಸ್ಪೇನ್) ವಿರುದ್ಧ ಗೆಲುವು ಸಾಧಿಸಿದರು.

ನೀರಜ್ ಕ್ಲಾಸಿಕ್ ಜಾವೆಲಿನ್ ಥ್ರೋ: ಭರದ ಸಿದ್ಧತೆ

ಬೆಂಗಳೂರು: ಇದೇ 5ರಂದು ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಥ್ರೋ ಸ್ಪರ್ಧೆಯು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಈ ಕೂಟಕ್ಕೆ ಸಿದ್ಧತೆಗಳು ಭರದಿಂದ ನಡೆಯುತ್ತಿವೆ.

'ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಆಸನ ಸಾಮರ್ಥ್ಯ 18 ಸಾವಿರ ಇದೆ. ಸದ್ಯ 15 ಸಾವಿರ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಮಾರಾಟಕ್ಕೆ ಇಟ್ಟಿದ್ದು, ಹೆಚ್ಚಿನ ಬೇಡಿಕೆ ಬಂದರೆ ಉಳಿದ ಟಿಕೆಟ್‌ಗಳನ್ನೂ ಮಾರಾಟಕ್ಕಿಡಲಾಗುವುದು' ಎಂದು ಆಯೋಜಕರು ಹೇಳಿದರು.

ಕಂಠೀರವ ಕ್ರೀಡಾಂಗಣದಲ್ಲಿ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಮುಂಜಾಗ್ರತೆ ವಹಿಸಲಾಗುವುದು. ಕ್ರೀಡಾಂಗಣದಲ್ಲಿ ಸಿವಿಲ್ ಕಾಮಗಾರಿಗಳು ನಡೆಯುತ್ತಿರುವುದರಿಂದ, ಕ್ರೀಡಾಪಟುಗಳು 400 ಮೀ. ಟ್ರ್ಯಾಕ್ ಬಳಸದಂತೆ ಜುಲೈ 6ರವರೆಗೆ ನಿರ್ಬಂಧ ಹೇರಲಾಗಿದೆ ಎಂದೂ ಮಾಹಿತಿ ನೀಡಿದರು.

ಗೃಹ ಸಚಿವ ಜಿ. ಪರಮೇಶ್ವರ, ಕೆಒಎ ಅಧ್ಯಕ್ಷ ಕೆ. ಗೋವಿಂದರಾಜ್, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್, ಪಶ್ಚಿಮ ವಲಯದ ಜಂಟಿ ಪೊಲೀಸ್ ಕಮಿಷನರ್ ವಂಶಿಕೃಷ್ಣ ಅವರು ಕಂಠೀರವ ಕ್ರೀಡಾಂಗಣಕ್ಕೆ ಭೇಟಿ ನೀಡಿ, ಸಿದ್ಧತೆಯನ್ನು ಪರಿಶೀಲಿಸಿದರು. ಆಯೋಜಕರಿಂದ ಕಾರ್ಯಕ್ರಮದ ಸಮಗ್ರ ಮಾಹಿತಿ ಕಲೆಹಾಕಿದರು. ಡಬಲ್ ಒಲಿಂಪಿಕ್ಸ್ ಪದಕ ವಿಜೇತ ನೀರಜ್ ಚೋಪ್ರಾ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಆಶ್ರಯದಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಆ್ಯಂಡರ್ಸನ್ ಗೈರು

ಎರಡು ಬಾರಿಯ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ ಅವರು ಪಾದದ ಗಾಯದಿಂದ ಬಳಲುತ್ತಿದ್ದು, ಸ್ಪರ್ಧೆಯಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ. ಇದು ಜಾವೆಲಿನ್ ಪ್ರೇಮಿಗಳಿಗೆ ನಿರಾಸೆಯನ್ನುಂಟು ಮಾಡಿದೆ. ಪೀಟರ್ಸ್ ಅವರ ಬದಲಿಗೆ ಪೋಲೆಂಡ್‌ನ ಸಿಪ್ರಿಯಾನ್ ರಿಗ್ಲೋಡ್ ಸ್ಪರ್ಧಿಸಲಿದ್ದಾರೆ ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಗಸ್ಟ್‌ನಲ್ಲಿ ಟಿ20 ಲೀಗ್ ಆಯೋಜನೆಗೆ ಸಿದ್ಧತೆ • ಬೆಂಗಳೂರಿನಲ್ಲಿಯೇ ಎಲ್ಲ ಪಂದ್ಯಗಳು

ಮಹಾರಾಜ ಟ್ರೋಫಿ ಟೂರ್ನಿಗಿಲ್ಲ ಪ್ರೇಕ್ಷಕರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಆಗಸ್ಟ್ ತಿಂಗಳಲ್ಲಿ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಈ ವರ್ಷದ ಆಯೋಜನೆಗೆ ಸಿದ್ಧತೆಗಳು ಆರಂಭವಾಗಿವೆ. ಆದರೆ ಈ ಬಾರಿ ಟೂರ್ನಿಯ ಪಂದ್ಯಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶ ನಿರ್ಬಂಧಿಸುವ ಸಾಧ್ಯತೆ ಇದೆ.

ಸೋಮವಾರ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಫ್ರ್ಯಾಂಚೈಸಿಗಳ ಮಾಲೀಕರು, ಪ್ರತಿನಿಧಿಗಳು ಹಾಗೂ ಕೆಎಸ್‌ಸಿಎ ಪದಾಧಿಕಾರಿಗಳು ಭಾಗವಹಿಸಿದ್ದರು.

'ಸಭೆಯಲ್ಲಿ ಮಹಾರಾಜ ಟ್ರೋಫಿ ಆಯೋಜನೆಯ ಕುರಿತು ಚರ್ಚೆ ನಡೆಯಿತು. ಗ್ರಾಮಾಂತರ ಭಾಗಗಳ ಯುವ ಪ್ರತಿಭಾವಂತ ಆಟಗಾರರಿಗೆ ಪ್ರೋತ್ಸಾಹ ನೀಡಲು ಇದು ಉತ್ತಮ ಟೂರ್ನಿಯಾಗಿದೆ. ಈ ವರ್ಷವೂ ಆಗಸ್ಟ್‌ನಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಜುಲೈ 15ರಂದು ಆಟಗಾರರ ಹರಾಜು ಪ್ರಕ್ರಿಯೆ ನಡೆಯಲಿದೆ. ಹುಬ್ಬಳ್ಳಿ, ಮೈಸೂರು ನಗರಗಳಲ್ಲಿ ಮಳೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿರುವುದರಿಂದ ಟೂರ್ನಿಯ ಎಲ್ಲ ಪಂದ್ಯಗಳನ್ನೂ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಸುವ ಸಾಧ್ಯತೆ ಇದೆ. ಪಂದ್ಯ ವೀಕ್ಷಣೆಗೆ ಪ್ರೇಕ್ಷಕರಿಗೆ ಪ್ರವೇಶ ನೀಡುವ ಸಾಧ್ಯತೆ ಇಲ್ಲ. ಅದಕ್ಕಾಗಿ ಪೊಲೀಸ್ ಇಲಾಖೆಯಿಂದ ಅನುಮತಿ ಕೋರಿದ್ದೇವೆ. ಒಂದೊಮ್ಮೆ ಅನುಮತಿ ಸಿಕ್ಕರೂ ಸೀಮಿತ ಸಂಖ್ಯೆಯ ಪ್ರೇಕ್ಷಕರಿಗೆ ಮಾತ್ರ ಅವಕಾಶ ನೀಡಲಾಗುವುದು. ಪೊಲೀಸರಿಂದ ಹಸಿರು ನಿಶಾನೆ ಸಿಗದಿದ್ದರೆ ಪ್ರೇಕ್ಷಕರಿಗೆ ಅವಕಾಶ ನೀಡುವುದಿಲ್ಲ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಹೋದ ವರ್ಷ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಮಹಾರಾಜ ಟ್ರೋಫಿ ಪಂದ್ಯ ಪ್ರಜಾವಾಣಿ ಸಂಗ್ರಹದಿಂದ

ಈಚೆಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಸಂಭ್ರಮಾಚರಣೆಯ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. ಅದರಲ್ಲಿ 11 ಅಭಿಮಾನಿಗಳು ಮೃತಪಟ್ಟಿದ್ದರು. ಹಲವರು ಗಾಯಗೊಂಡಿದ್ದರು.

ಈ ಸಲವೂ ಆರು ತಂಡಗಳು ಟೂರ್ನಿಯಲ್ಲಿ ಆಡಲಿವೆ. ಹೋದ ವರ್ಷ ಮೈಸೂರು ವಾರಿಯರ್ಸ್ ಚಾಂಪಿಯನ್ ಮತ್ತು ಬೆಂಗಳೂರು ಬ್ಲಾಸ್ಟರ್ಸ್ ರನ್ನರ್ಸ್ ಅಪ್ ಆಗಿದ್ದವು.

'ಈ ಸಲ ಪ್ರತಿ ತಂಡಕ್ಕೂ ನಾಲ್ವರು ಆಟಗಾರರನ್ನು ರಿಟೇನ್ ಮಾಡಿಕೊಳ್ಳಲು ಅವಕಾಶ ನೀಡುವ ನಿರೀಕ್ಷೆ ಇದೆ' ಎಂದೂ ಮೂಲಗಳು ತಿಳಿಸಿವೆ.

ಟೂರ್ನಿಯ ಆಯೋಜನೆ ಕುರಿತು ಪ್ರತಿಕ್ರಿಯೆಗಾಗಿ 'ಪ್ರಜಾವಾಣಿ'ಯು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿತು. ಆದರೆ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.